ಬುಧವಾರ, ಮೇ 22, 2024 | ಬೆಂಗಳೂರು | ₹ 7.00 | ಸಂಪುಟ 77 | ಸಂಚಿಕೆ 142 | ಪುಟ 16
www.prajavani.net
prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ತಂತ್ರಜ್ಞಾನ
ಮದ್ಯ ತಯಾರಿಕೆಯಲ್ಲಿ ಬಳಸುವ ಯೀಸ್ಟ್ ಈಗ ನೀರನ್ನು ಶುದ್ಧೀಕರಿಸುವುದಂತೆ



ಆಳ-ಅಗಲ
ನ್ಯಾಯಾಂಗದಲ್ಲಿದ್ದವರು ಅಧಿಕಾರ ಸ್ಥಾನಕ್ಕೇರಿದಾಗ...

ಪ್ರವಾಸೋದ್ಯಮ ಅಭಿವೃದ್ಧಿ ಸೂಚ್ಯಂಕ ಬಿಡುಗಡೆ
ಭಾರತಕ್ಕೆ 39ನೇ ಸ್ಥಾನ 12

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
73,953	22,529	₹76500 (ಬೆಂಗಳೂರು)	₹95,000 (ಬೆಂಗಳೂರು)	83.31

ರಾಮೇಶ್ವರಂ ಕೆಫೆ ಸ್ಫೋಟ: ಬೆಂಗಳೂರು, ಹುಬ್ಬಳ್ಳಿ ಸೇರಿದಂತೆ 11 ಸ್ಥಳಗಳಲ್ಲಿ ಏಕಕಾಲಕ್ಕೆ ಪರಿಶೀಲನೆ

ಎನ್ಐಎ ದಾಳಿ: ಮೂವರ ವಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ 'ದಿ ರಾಮೇಶ್ವರಂ ಕೆಫೆ'ಯಲ್ಲಿ ಮಾರ್ಚ್ 1ರಂದು ನಡೆದಿದ್ದ ಬಾಂಬ್ ಸ್ಫೋಟ ಪ್ರಕರಣದ ತನಿಖೆ ಚುರುಕುಗೊಳಿಸಿರುವ ರಾಷ್ಟ್ರೀಯ ತನಿಖಾ ದಳದ (ಎನ್ಐಎ) ಅಧಿಕಾರಿಗಳು ನಾಲ್ಕು ರಾಜ್ಯಗಳ 11 ಸ್ಥಳಗಳಲ್ಲಿ ಮಂಗಳವಾರ ಮುಂಜಾನೆ ಏಕಕಾಲಕ್ಕೆ ದಾಳಿ ನಡೆಸಿ ಪರಿಶೀಲಿಸಿದರು.

ಕೆಫೆ ಬಾಂಬ್ ಸ್ಫೋಟ ಪ್ರಕರಣದಲ್ಲಿ ಬಂಧಿತರಾಗಿರುವ ಶಂಕಿತರಾದ ಮುಸಾವೀರ್ ಹುಸೇನ್ ಶಾಜೀದ್ ಹಾಗೂ ಅಬ್ದುಲ್ ಮಥೀನ್ ಅಹ್ಮದ್ ತಾಹಾಗೆ ಹಣಕಾಸು ನೆರವು ಹಾಗೂ ಬಾಂಬ್ ಸ್ಫೋಟಕ್ಕೆ ಸಹಕಾರ ನೀಡಿದ್ದ ಸುಳಿವು ಆಧರಿಸಿ ಈ ದಾಳಿ ನಡೆಸಲಾಗಿದೆ ಎಂದು ಮೂಲಗಳು ಹೇಳಿವೆ.

ಕರ್ನಾಟಕ, ತಮಿಳುನಾಡು, ತೆಲಂಗಾಣ ಹಾಗೂ ಆಂಧ್ರಪ್ರದೇಶದ ಕೆಲವು ಸ್ಥಳಗಳಲ್ಲಿ ಎನ್ಐಎ ಅಧಿಕಾರಿಗಳು ಪರಿಶೀಲನೆ ನಡೆಸಿ, ಮಹತ್ವದ ದಾಖಲೆಗಳನ್ನು ಜಪ್ತಿ ಮಾಡಿದ್ದಾರೆ.

ನಗರದ ಬನಶಂಕರಿ ಹಾಗೂ ಕುಮಾರಸ್ವಾಮಿ ಲೇಔಟ್ ಠಾಣಾ ವ್ಯಾಪ್ತಿಯ ಮನೆಯೊಂದರಲ್ಲಿ ಪರಿಶೀಲಿಸಲಾಗಿದೆ. ಬೆಂಗಳೂರಿನ ಡಾ.ಸಬೀಲ್ ಅಹಮದ್ ಅಲಿಯಾಸ್ ಮೋಟು ಡಾಕ್ಟರ್ ಎಂಬಾತನನ್ನು ವಶಕ್ಕೆ ಪಡೆಯಲಾಗಿದೆ. ಶೋಯಿಬ್ ಮಿರ್ಜಾ ಹಾಗೂ ಆತನ ಸಹೋದರ ಅಜೀಜ್ ಅಹಮದ್ ಮಿರ್ಜಾನನ್ನು ಹುಬ್ಬಳ್ಳಿಯಲ್ಲಿ ವಶಕ್ಕೆ ಪಡೆಯಲಾಗಿದೆ.

2012ರಲ್ಲಿ ಬೆಂಗಳೂರು, ಹುಬ್ಬಳ್ಳಿಯಲ್ಲಿ ವಿಧ್ವಂಸಕ ಕೃತ್ಯ ಎಸಗಲು ಸಂಚು ರೂಪಿಸಿದ್ದ ಪ್ರಕರಣ ಸಂಬಂಧ ಆರೋಪಿಯಾಗಿದ್ದ ಸಬೀಲ್ ಅಹಮದ್ ವಿದೇಶಕ್ಕೆ ಪರಾರಿಯಾಗಿದ್ದ. 2020ರಲ್ಲಿ ಅಫಘಾನಿಸ್ತಾನದಿಂದ ಸಬೀಲ್‌ನನ್ನು ಗಡಿಪಾರು ಮಾಡಲಾಗಿತ್ತು. ದೇಶಕ್ಕೆ ವಾಪಸ್ ಬಂದ ಮೇಲೆ ಆತನನ್ನು ಬಂಧಿಸಲಾಗಿತ್ತು. ಜಾಮೀನು ಮೇಲೆ ಬಿಡುಗಡೆಗೊಂಡಿದ್ದ. ಈ ಪ್ರಕರಣವು ನ್ಯಾಯಾಲಯದಲ್ಲಿ ವಿಚಾರಣೆ ಹಂತದಲ್ಲಿದೆ.

ನಗರದ ಬ್ರೂಕ್‌ಫೀಲ್ಡ್‌ನ ಐಟಿಪಿಎಲ್ ರಸ್ತೆ ರಾಮೇಶ್ವರಂ ಕೆಫೆಯಲ್ಲಿ ಮಾರ್ಚ್ 1ರ ಮಧ್ಯಾಹ್ನ 12.30ರ ಸುಮಾರಿಗೆ ಬಾಂಬ್ ಸ್ಫೋಟ ನಡೆದಿತ್ತು. ಊಟಕ್ಕೆ ಬಂದಿದ್ದ ಗ್ರಾಹಕರು ಗಾಯಗೊಂಡಿದ್ದರು. ಸ್ಥಳೀಯ ಪೊಲೀಸರು ತನಿಖೆ ನಡೆಸಿದ ನಂತರ, ಪ್ರಕರಣವನ್ನು ಎನ್ಐಎಗೆ ವರ್ಗಾವಣೆ ಮಾಡಲಾಗಿತ್ತು. ಮುಸಾವೀರ್ ಹುಸೇನ್ ಶಾಜೀದ್ ಹಾಗೂ ಅಬ್ದುಲ್ ಮಥೀನ್ ಅಹ್ಮದ್ ತಾಹಾ ಎಂಬುವರನ್ನು ಕೋಲ್ಕತ್ತದಲ್ಲಿ ಕೃತ್ಯ ನಡೆದ 43 ದಿನಗಳ ಬಳಿಕ ಎನ್ಐಎ ಅಧಿಕಾರಿಗಳು ಬಂಧಿಸಿದ್ದರು. ಇಬ್ಬರು ಶಂಕಿತರು ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿ ತಾಲ್ಲೂಕಿನವರು.

'2012ರಲ್ಲಿ ಲಷ್ಕರ್–ಎ–ತಯಬಾ ಸಂಘಟನೆಯೊಂದಿಗೆ ಸೇರಿ ಬೆಂಗಳೂರು, ಹುಬ್ಬಳ್ಳಿಯಲ್ಲಿ ವಿಧ್ವಂಸಕ ಕೃತ್ಯ ನಡೆಸಲು ಸಂಚು ರೂಪಿಸಿದ್ದ ಆರೋಪಿಗಳು ಹಾಗೂ ದಿ ರಾಮೇಶ್ವರಂ ಕೆಫೆ ಬಾಂಬ್ ಸ್ಫೋಟ ಪ್ರಕರಣದಲ್ಲಿ ಬಂಧಿತರಾಗಿರುವ ಶಂಕಿತರೊಂದಿಗೆ ನಂಟು ಹೊಂದಿದ್ದವರು ನೆಲಸಿರುವ 11 ಸ್ಥಳಗಳಲ್ಲಿ ಮಗಳವಾರ ದಾಳಿ ನಡೆಸಿ ಪರಿಶೀಲಿಸಲಾಗಿದೆ. ದಾಳಿ ವೇಳೆ ದೊರೆತ ಎಲ್ಲ ದಾಖಲೆಗಳು, ಕಂಪ್ಯೂಟರ್, ಮೊಬೈಲ್ ಹಾಗೂ ಲ್ಯಾಪ್‌ಟಾಪ್‌ಗಳನ್ನು ಜಪ್ತಿ ಮಾಡಿಕೊಳ್ಳಲಾಗಿದೆ' ಎಂದು ಮೂಲಗಳು ಹೇಳಿವೆ.

ಭದ್ರತೆ ಹೆಚ್ಚಳ: ಉದ್ದೇಶ ವಿಫಲ

ವೈಟ್‌ಫೀಲ್ಡ್ ಭಾಗದಲ್ಲಿ ದುಷ್ಕೃತ್ಯ ಎಸಗಲು ಮುಸಾವೀರ್ ಹುಸೇನ್ ಶಾಜೀದ್ ಹಾಗೂ ಅಬ್ದುಲ್ ಮಥೀನ್ ಅಹ್ಮದ್ ತಾಹಾ ಸಂಚು ರೂಪಿಸಿದ್ದರು. ಅಲ್ಲಿ ಕೃತ್ಯ ಎಸಗಿದರೆ ಜಾಗತಿಕ ಮಟ್ಟದಲ್ಲಿ ಹೆಸರು ಮಾಡಬಹುದು ಹಾಗೂ ಉಗ್ರ ಸಂಘಟನೆಗಳ ಒಲವು ಗಳಿಸಬಹುದೆಂದು ಯೋಜನೆ ರೂಪಿಸಿದ್ದರು. ಆ ಭಾಗದಲ್ಲಿ ಭದ್ರತೆ ಹೆಚ್ಚಿದ್ದರಿಂದ ಶಂಕಿತರ ಉದ್ದೇಶ ವಿಫಲವಾಗಿತ್ತು. ನಂತರ, ರಾಮೇಶ್ವರಂ ಕೆಫೆಗೆ ಬಾಂಬ್ ಇಟ್ಟಿದ್ದರು ಎಂದು ಮೂಲಗಳು ಹೇಳಿವೆ.

ಕೊಯಮತ್ತೂರಿನ ಆಸ್ಪತ್ರೆ ಮೇಲೆ ದಾಳಿ

'ಕೊಯಮತ್ತೂರಿನ ಆಸ್ಪತ್ರೆಯೊಂದರ ಮೇಲೂ ಎನ್ಐಎ ದಾಳಿ ನಡೆಸಿದೆ. ಅಲ್ಲಿನ ವೈದ್ಯರಿಬ್ಬರು ಬಂಧಿತರಿಗೆ ಹಣಕಾಸು ನೆರವು ನೀಡಿದ್ದರು. ಬಾಂಬ್ ಸ್ಫೋಟಿಸುವ, ಬಾಂಬ್ ಇರಿಸುವ ಸ್ಥಳದ ಬಗ್ಗೆ ನಿರ್ದೇಶನ ನೀಡುತ್ತಿದ್ದರು. ಖಚಿತ ಮಾಹಿತಿ ಆಧರಿಸಿ ದಾಳಿ ನಡೆಸಲಾಗಿದೆ. ಆ ಇಬ್ಬರು ವೈದ್ಯರನ್ನು ಸದ್ಯಕ್ಕೆ ವಶಕ್ಕೆ ಪಡೆದಿಲ್ಲ' ಎಂದು ಮೂಲಗಳು ತಿಳಿಸಿವೆ.

ಆಂಧ್ರಪ್ರದೇಶದಲ್ಲೂ ಇಬ್ಬರು ವಶಕ್ಕೆ



ನವದೆಹಲಿ/ಹೈದರಾಬಾದ್ (ಪಿಟಿಐ): 'ರಾಮೇಶ್ವರಂ ಕೆಫೆ'ಯಲ್ಲಿನ ಸ್ಫೋಟಕ್ಕೆ ಸಂಬಂಧಿಸಿದಂತೆ ಆಂಧ್ರಪ್ರದೇಶ, ತೆಲಂಗಾಣದಲ್ಲಿ ಇಬ್ಬರನ್ನು ಎನ್ಐಎ ಸಿಬ್ಬಂದಿ ವಶಕ್ಕೆ ಪಡೆದಿದ್ದಾರೆ.

ಆಂಧ್ರಪ್ರದೇಶದ ಅನಂತಪುರಂ ಜಿಲ್ಲೆ ರಾಯದುರ್ಗಂನ ಮನೆಯಿಂದ ಬೆಂಗಳೂರು ಮೂಲದ ಟೆಕಿ ಸೋಹೆಲ್, ತೆಲಂಗಾಣದ ವಿಕಾರಾಬಾದ್‌ನಲ್ಲಿ ಪುಣೆ ಮೂಲದ, 50 ವರ್ಷ ವಯಸ್ಸಿನ ಉದ್ಯಮಿಯನ್ನು ವಶಕ್ಕೆ ಪಡೆಯಲಾಗಿದೆ.

ಸೋಹೆಲ್ ಬೆಂಗಳೂರಿನಲ್ಲಿ ಸಾಫ್ಟ್‌ವೇರ್ ಎಂಜಿನಿಯರ್ ಆಗಿ ಕೆಲಸ ಮಾಡುತ್ತಿದ್ದಾನೆ. ಮೂಲಗಳ ಪ್ರಕಾರ, ಆತನ ಖಾತೆಗಳಲ್ಲಿ ದೊಡ್ಡ ಮೊತ್ತ ಠೇವಣಿಯಾಗಿರುವ ಕುರಿತು ಪ್ರಶ್ನಿಸಲಾಗಿದೆ.



ಮುಳುಗಿದ ಸೇತುವೆ ಹಾವೇರಿ ಜಿಲ್ಲೆಯ ಶಿಗ್ಗಾವಿ ತಾಲ್ಲೂಕಿನ ಮುನವಳ್ಳಿ ಸಮೀಪದ ದೊಡ್ಡಹಳ್ಳದಲ್ಲಿ ಮಂಗಳವಾರ ಮಳೆ ನೀರು ಸೇತುವೆ ಮೇಲೆ ಹರಿದ ಕಾರಣ ಕೆಲ ಹೊತ್ತು ವಾಹನಗಳು ಸಂಚರಿಸಲಿಲ್ಲ ಪ್ರಜಾವಾಣಿ ಚಿತ್ರ

ನೇತ್ರಾವತಿ ನದಿಯಲ್ಲೂ ಶುರುವಾಯಿತು ನೀರಿನ ಹರಿವು

ಮಳೆ: ತುಂಬಿದ ಕೆರೆ–ಕಟ್ಟೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ವಿವಿಧೆಡೆ ಕಳೆದ ನಾಲ್ಕೈದು ದಿನಗಳಿಂದ ಸುರಿಯುತ್ತಿರುವ ಮಳೆ ಮಂಗಳವಾರವೂ ಮುಂದುವರಿದಿದೆ. ಕೆಲವು ಜಿಲ್ಲೆಗಳಲ್ಲಿ ಭರ್ಜರಿ ಮಳೆ ಆಗಿದೆ.

ತುಮಕೂರು ಜಿಲ್ಲೆಯ ವಿವಿಧೆಡೆ ಸೋಮವಾರ ರಾತ್ರಿ ಹಲವು ಕಡೆ ಉತ್ತಮ ಮಳೆಯಾಗಿದೆ. ನಿರಂತರವಾಗಿ ಸುರಿಯುತ್ತಿರುವ ಮಳೆಯಿಂದ ತೋವಿನಕೆರೆ, ತುರುವೇಕೆರೆ, ಮಧುಗಿರಿ, ಹುಳಿಯಾರು ಭಾಗಗಳ ಕೆಲವು ಕಡೆಗಳಲ್ಲಿ ಹಳ್ಳ,ಕೊಳ್ಳಗಳು ತುಂಬಿ ಹರಿದವು.

ದಕ್ಷಿಣ ಕನ್ನಡ, ಚಿಕ್ಕಮಗಳೂರು ಜಿಲ್ಲೆಗಳಲ್ಲಿ ಉತ್ತಮ ಮಳೆಯಾಗಿದ್ದು ನೇತ್ರಾವತಿ ನದಿಯಲ್ಲಿ ನೀರಿನ ಹರಿವು ಶುರುವಾಗಿದೆ. ಹೀಗಾಗಿ ಮಂಗಳೂರು ನಗರಕ್ಕೆ ಎದುರಾಗಿದ್ದ ಕುಡಿಯುವ ನೀರಿನ ಕೊರತೆಯ ಆತಂಕ ನಿವಾರಣೆಯಾದಂತಾಗಿದೆ.

ಚಿಕ್ಕಮಗಳೂರು ಜಿಲ್ಲೆಯಲ್ಲಿ ಕೆರೆ–ಕಟ್ಟೆಗಳು ತುಂಬಿ ಹರಿಯುತ್ತಿವೆ. ತರೀಕೆರೆ, ಕಡೂರು ಅಜ್ಜಂಪುರ ತಾಲ್ಲೂಕಿನಲ್ಲಿ ಹಲವು ಕೆರೆಗಳು ತುಂಬಿವೆ. ಜಿಲ್ಲೆಯಾದ್ಯಂತ ಸೋಮವಾರ ರಾತ್ರಿಯೂ ಮಳೆ ಅಬ್ಬರಿಸಿದೆ. ತರೀಕೆರೆ ತಾಲ್ಲೂಕಿನ ಉಡೇವಾ ಗ್ರಾಮದ ಊರ ಮುಂದಿನ ಕೆರೆ ತುಂಬಿದ್ದು, ಗ್ರಾಮಸ್ಥರು ಬಾಗಿನ ಅರ್ಪಿಸಿದರು.

ಕಡೂರು ತಾಲ್ಲೂಕಿನ ಗೌಡನಕಟ್ಟೆ ಗ್ರಾಮದ ಕೆರೆ ಒಂದೇ ದಿನದ ಮಳೆಗೆ ತುಂಬಿದ್ದು, ಕೆರೆ ಏರಿ ಒಡೆದು ನೀರು ಪೋಲಾಗುತ್ತಿದೆ. ಇನ್ನೊಂದೆಡೆ ಬರಿದಾಗಿದ್ದ ಸೀಗೆಹಡ್ಲು ಗ್ರಾಮದ ಕೆರೆ ಸೋಮವಾರ ರಾತ್ರಿ ಸುರಿದ ಮಳೆಗೆ ತುಂಬಿಕೊಂಡಿದೆ.

ವಿಜಯನಗರ ಮತ್ತು ಬಳ್ಳಾರಿ ಜಿಲ್ಲೆಯ ಕೆಲವೆಡೆ ಉತ್ತಮ ಮಳೆಯಾಗಿದೆ. ವಿಜಯನಗರ ಜಿಲ್ಲೆಯ ಕೂಡ್ಲಿಗಿ ತಾಲ್ಲೂಕು ಕಾನಹೊಸಹಳ್ಳಿ ಹೋಬಳಿ ಯಂಬಳಿ-ಆಲೂರು ಮಧ್ಯದ ರಸ್ತೆ ಮಳೆ ನೀರಿನಿಂದ ಕೊಚ್ಚಿ ಹೋಗಿದೆ. ಕೂಡ್ಲಿಗಿ ಹೊರವಲಯದಲ್ಲಿನ ಉಜ್ಜಯಿನಿಗೆ ಸಂಪರ್ಕ ಕಲ್ಪಿಸುವ ರಸ್ತೆ ಕುಸಿದು, ಸಂಚಾರಕ್ಕೆ ಅಡಚಣೆಯಾಗಿದೆ.

ಮೈಸೂರು ಭಾಗದ ಮೈಸೂರು, ಕೊಡಗು, ಹಾಸನ ಮತ್ತು ಚಾಮರಾಜನಗರ ಜಿಲ್ಲೆಯಲ್ಲಿ ಸೋಮವಾರ ರಾತ್ರಿ ಮತ್ತು ಮಂಗಳವಾರ ಗುಡುಗು–ಸಿಡಿಲಿನಿಂದ ಕೂಡಿದ ಬಿರುಸಿನ ಮಳೆಯಾಗಿದೆ.

ಮಧ್ಯ ಕರ್ನಾಟಕದ ದಾವಣಗೆರೆ ಮತ್ತು ಚಿತ್ರದುರ್ಗ ಜಿಲ್ಲೆಗಳಲ್ಲಿ ವರುಣನ ಅರ್ಭಟ ಮುಂದುವರಿದಿದೆ. ವೇದಾವತಿ ನದಿ ಪಾತ್ರದಲ್ಲಿ ಉತ್ತಮ ಮಳೆ ಸುರಿದಿದ್ದು, ವಾಣಿ ವಿಲಾಸ ಸಾಗರ ಜಲಾಶಯಕ್ಕೆ 5,680 ಕ್ಯೂಸೆಕ್ ನೀರು ಹರಿದುಬರುತ್ತಿದೆ. ಶಿವಮೊಗ್ಗ ಜಿಲ್ಲೆಯಲ್ಲಿ ಸೋಮವಾರ ರಾತ್ರಿ ಹಾಗೂ ಮಂಗಳವಾರ ಮಳೆ ಸುರಿದಿದೆ.

ಸಿಡಿಲು ಬಡಿದು ಸಾವು

ಚಿತ್ರದುರ್ಗ ಜಿಲ್ಲೆಯಲ್ಲಿ ಸಿಡಿಲು ಬಡಿದು ಮಹಿಳೆ ಸೇರಿ ಇಬ್ಬರು ಮೃತಪಟ್ಟಿದ್ದಾರೆ. ಮೊಳಕಾಲ್ಮುರು ತಾಲ್ಲೂಕಿನ ಮೇಲಿನಕಣಿವೆ ಗ್ರಾಮದ ರೈತ ನಿಂಗರಾಜ್ (25) ಮಂಗಳವಾರ ಮಧ್ಯಾಹ್ನ ಜಮೀನಿನಲ್ಲಿ ಕೆಲಸ ಮಾಡುತ್ತಿದ್ದಾಗ ಸಿಡಿಲು ಬಡಿದು ಮೃತಪಟ್ಟಿದ್ದಾರೆ. ನಾಯಕನಹಟ್ಟಿ ಹೋಬಳಿಯ ರೇಖಲಗೆರೆ ಗ್ರಾಮದ ಕೆರೆಯ ಸಮೀಪ ಇದ್ದಿಲು ತಯಾರಿಸುವ ಕೆಲಸಕ್ಕೆ ಬಂದಿದ್ದ ಮಹಾರಾಷ್ಟ್ರದ ರಾಯಗಡ ಜಿಲ್ಲೆಯ ಲಕ್ಷ್ಮಿ (58) ಸಿಡಿಲು ಬಡಿದು ಸೋಮವಾರ ಮಧ್ಯರಾತ್ರಿ ಮೃತಪಟ್ಟಿದ್ದಾರೆ.

ಪುತ್ತೂರು ವರದಿ(ದಕ್ಷಿಣ ಕನ್ನಡ): ಮನೆಯ ಸಮೀಪ ಕೆಲಸ ಮಾಡುತ್ತಿದ್ದ ವೇಳೆ ಸಿಡಿಲು ಬಡಿದು ಕೂಲಿ ಕಾರ್ಮಿಕರೊಬ್ಬರು ಸೋಮವಾರ ಸಂಜೆ ಸಾವಿಗೀಡಾಗಿದ್ದಾರೆ. ಪುತ್ತೂರು ತಾಲ್ಲೂಕಿನ ಒಳಮೊಗ್ರು ಗ್ರಾಮದ ಕಲ್ಲಡ್ಕ ಪಲ್ಲತ್ತಾರು ನಿವಾಸಿ ಪಿ.ಬಾಬು (55) ಮೃತಪಟ್ಟವರು.

ಒಳಪುಟಗಳಲ್ಲಿ

ಬಿಕ್ಕುತ್ತಿವೆ ತೋಟದ ಮನೆಗಳು

• ಸಂಧ್ಯಾ ಹೆಗಡೆ

ಹಾಸನ: ಲೈಂಗಿಕ ವಿಕೃತಿಗೆ ಸಾಕ್ಷಿಯಾಗಿರುವ ಹೊಳೆನರಸೀಪುರದ ತೆಂಗಿನ ತೋಟಗಳ ನಡುವಿನ ಮನೆಗಳು, ಹಾಸನದಲ್ಲಿ ಸಂಸದರು ಬಳಕೆ ಮಾಡುತ್ತಿದ್ದ ವಸತಿಗೃಹದ ಗೋಡೆಗಳು ಈಗ ಸಂತ್ರಸ್ತೆಯರನ್ನು ನೆನೆದು ಬಿಕ್ಕುತ್ತಿವೆ...



ಕಾಮದ ಅಮಲಿಗೆ ತಮ್ಮ ಊರ ಸುತ್ತಲಿನ ತೋಟದ ಮನೆಗಳು, ಮಾಜಿ ಪ್ರಧಾನಿಗೆ ಗೌರವಾರ್ಥ ನೀಡಿದ್ದ ಹಾಸನದ ಸಂಸದರ ವಸತಿ ಗೃಹ ಬಳಕೆಯಾಗುತ್ತಿತ್ತು ಎಂಬ ಸಂಗತಿಯನ್ನು ತಿಳಿದು ಜಿಲ್ಲೆಯ ಜನರು ಬೆಚ್ಚಿ ಬಿದ್ದಿದ್ದಾರೆ. ಮೊದಲೇ ತಿಳಿದಿದ್ದರೆ ಬಲಿಪಶುಗಳಾಗುತ್ತಿರುವ ಅನೇಕ ಹೆಣ್ಣು ಜೀವಗಳ ರಕ್ಷಣೆ ಮಾಡಬಹುದಿತ್ತು ಎಂಬ ಅಪರಾಧಿ ಭಾವ ಪಕ್ಷದ ಕಾರ್ಯಕರ್ತರು, ಪ್ರಜ್ಞಾವಂತರನ್ನು ಕಾಡುತ್ತಿದೆ.

'ನಾವೆಲ್ಲ ಎತ್ತಿ ಆಡಿಸಿದ ಮಗು ಅವನು, ಅಧಿಕಾರದ ಮದ ಆತನನ್ನು ವಿಕೃತ ಕಾಮಿಯಾಗಿ ರೂಪಿಸಬಹುದೆಂದು ಅರೆಕ್ಷಣವೂ ಯೋಚಿಸಿರಲಿಲ್ಲ. ಗೋಮುಖ ವ್ಯಾಘ್ರ ಎನ್ನದೆ ಇನ್ನೇನು ಹೇಳಲಿ. ಆತ ಇಷ್ಟೊಂದು ವಿಕೃತನಾಗಿದ್ದ ಎಂಬುದನ್ನು ಯಾವೊಬ್ಬ ಹೆಣ್ಣು ಮಗಳು ಹೇಳಿಕೊಂಡಿದ್ದರೂ, ನಾನು ಈ ಮೊದಲೇ ಅವನ ತಾಯಿಯನ್ನು ಎಚ್ಚರಿಸುತ್ತಿದ್ದೆ' ಎನ್ನುವಾಗ ಹೊಳೆನರಸೀಪುರದ ಜೆಡಿಎಸ್ ಕಾರ್ಯಕರ್ತೆಯ ಕಣ್ಣಂಚಿನಲ್ಲಿ ನೀರು ಜಿನುಗಿತ್ತು. ಮತ್ತೆ ಅವರ ಬಾಯಿಂದ ಮಾತೇ ಹೊರಡಲಿಲ್ಲ.

ನಮಗೂ ಅಚ್ಚರಿ: 'ದೇವರಾಜೇಗೌಡರು ಆರು ತಿಂಗಳ ಹಿಂದೆ ಸಿ.ಡಿ ಬಿಡುಗಡೆ ಮಾಡುವುದಾಗಿ ಹೇಳಿದಾಗ ಇದು ಬರೀ ಬಾಯ್ಮಾತೆಂದು ಸುಮ್ಮನಾಗಿದ್ದೆವು. ಹಿಂದೆಯೂ ಇಂತಹ ಘಟನೆಗಳು ನಡೆದಿದ್ದವು ಎಂದು ಕೇಳಿದ್ದೆವು. ಆಗ ಮೊಬೈಲ್ ಫೋನ್‌ಗಳು, ಪೆನ್‌ಡ್ರೈವ್‌ಗಳು ಹುಟ್ಟಿರಲಿಲ್ಲ. ಇಲ್ಲದಿದ್ದರೆ, ದಶಕಗಳ ಹಿಂದೆಯೇ ಇಂತಹ ವಿಕೃತ ಕಾಮದ ಪೆನ್‌ಡ್ರೈವ್ ಸದ್ದು ಮಾಡುತ್ತಿತ್ತು' ಎಂದು ಒಗಟಾಗಿ ಹೇಳುತ್ತ ಮಾತಿಗಿಳಿದರು ಹೊಳೆನರಸೀಪುರದ ವಕೀಲರೊಬ್ಬರು.

'ಮನೆಗೆಲಸದವರು, ಅಡುಗೆಯವರು, ರಸ್ತೆ ಬದಿ ಸಣ್ಣಪುಟ್ಟ ವ್ಯಾಪಾರ ಮಾಡಿಕೊಂಡಿರುವವರು ಆಗ ಬಲಿಪಶುಗಳಾಗಿದ್ದರು. ಈಗ ಪಾತ್ರ ಬದಲಾಗಿದೆ ಅಷ್ಟೆ. ಶ್ರೀಮಂತ ಮನೆತನದ ಮಹಿಳೆಯರು, ಕೆಲವು ಮಹಿಳಾ ಅಧಿಕಾರಿಗಳು, ಜನಪ್ರತಿನಿಧಿಗಳು ಬಲಿಯಾಗಿದ್ದಾರೆ. ಆಗ ದುಡಿದು ತಿನ್ನುವವರಿಗೆ ಅಷ್ಟಿಷ್ಟು ಕಾಸು ಅವರ ಧ್ವನಿ ಅಡಗಿಸುತ್ತಿತ್ತು. ಈಗ ಆಸ್ತಿ, ಮನೆ, ಹಣ ಅವರನ್ನು ತೆಪ್ಪಗಾಗಿಸಿದೆ.

7ನೇ ಪುಟ ನೋಡಿ

ಮೌನಕ್ಕೆ ಶರಣಾದ ಕಾರ್ಯಕರ್ತೆಯರು

ಜಿಲ್ಲೆಯಲ್ಲಿ ಜೆಡಿಎಸ್ ಕಾರ್ಯಕರ್ತೆಯರು ಎಂದು ಗರ್ವದಿಂದ ಹೇಳಿಕೊಳ್ಳುತ್ತಿದ್ದವರು ಪೆನ್‌ಡ್ರೈವ್ ಹಂಚಿಕೆ ಪ್ರಕರಣದ ನಂತರ ತಲೆಯೆತ್ತಿ ಓಡಾಡಲಾರದಷ್ಟು ಮುದುಡಿದ್ದಾರೆ.

ಮನೆಯಲ್ಲಿ ನಾಲ್ಕು ಗೋಡೆಗಳ ನಡುವೆ ಬಂದಿಯಾಗಿರುವ ಕಾರ್ಯಕರ್ತೆಯರ ಮನದ ಮಾತು ಆಲಿಸಲು 'ಪ್ರಜಾವಾಣಿ' ತಂಡ ಭೇಟಿ ನೀಡಿದಾಗ, 'ದಯವಿಟ್ಟು ನಮ್ಮನ್ನು ಕಲಕಬೇಡಿ, ಹಳದಿ ಕನ್ನಡಕ ತೊಟ್ಟವರ ನೋಟ, ಸಾಮಾಜಿಕ ಜಾಲತಾಣಗಳ ಟ್ರೋಲ್, ನಿತ್ಯ ನಮ್ಮನ್ನು ಇರಿದು ಕೊಲ್ಲುತ್ತಿವೆ' ಎಂದವರೇ ಹಲವರು.

7ನೇ ಪುಟ ನೋಡಿ

ಚಿನಕುರುಳಿ

ಪ್ರಕಾಶ್ ಶೆಟ್ಟಿ



ದ್ವಿತೀಯ ಪಿಯು : ಶೇ 35.25 ತೇರ್ಗಡೆ


ಪ್ರಜಾವಾಣಿ ವಾರ್ತೆ

ಬೆಂಗಳೂರು: ದ್ವಿತೀಯ ಪಿಯು ಪರೀಕ್ಷೆ–2 ಬರೆದಿದ್ದ 1.48 ಲಕ್ಷ ವಿದ್ಯಾರ್ಥಿಗಳಲ್ಲಿ 52,505 ವಿದ್ಯಾರ್ಥಿಗಳು ತೇರ್ಗಡೆಯಾಗಿದ್ದಾರೆ. ಒಟ್ಟಾರೆ ಶೇ 35.25 ಫಲಿತಾಂಶ ಲಭಿಸಿದೆ.

ಮೊದಲ ಪರೀಕ್ಷೆಯಲ್ಲಿ ಅನುತ್ತೀರ್ಣರಾಗಿದ್ದ ಹಾಗೂ ಕಡಿಮೆ ಅಂಕದ ಕಾರಣಕ್ಕಾಗಿ ಫಲಿತಾಂಶ ಉತ್ತಮಪಡಿಸಿಕೊಳ್ಳಲು 1.49 ಲಕ್ಷ ವಿದ್ಯಾರ್ಥಿಗಳು 2ನೇ ಪರೀಕ್ಷೆಗೆ ಹೆಸರು ನೋಂದಾಯಿಸಿಕೊಂಡಿದ್ದರು. ಪರೀಕ್ಷೆ ಬರೆದವರಲ್ಲಿ ವಿಜ್ಞಾನ ವಿಭಾಗದ ವಿದ್ಯಾರ್ಥಿಗಳೇ ಹೆಚ್ಚಿನ ಸಂಖ್ಯೆಯಲ್ಲಿ (ಶೇ 56.16) ತೇರ್ಗಡೆಯಾಗಿದ್ದಾರೆ. ವಾಣಿಜ್ಯ, ಕಲಾ ವಿಭಾಗದ ವಿದ್ಯಾರ್ಥಿಗಳು ಕ್ರಮವಾಗಿ ಶೇ 22.06 ಹಾಗೂ ಶೇ 22.24ರಷ್ಟು ತೇರ್ಗಡೆಯಾಗಿದ್ದಾರೆ.

ಮೊದಲ ಪರೀಕ್ಷೆಯಲ್ಲಿ ಕನ್ನಡದಲ್ಲಿ 24 ಅಂಕ ಪಡೆದಿದ್ದ ಬೆಂಗಳೂರಿನ ವಿದ್ಯಾಶ್ರೀಗೆ ಈ ಬಾರಿ 75 ಅಂಕಗಳು ಬಂದಿವೆ. ಒಟ್ಟಾರೆ 51 ಹೆಚ್ಚುವರಿ ಅಂಕಗಳನ್ನು ಪಡೆದಿದ್ದಾರೆ. ಇಂಗ್ಲಿಷ್ ಭಾಷಾ ವಿಷಯದಲ್ಲಿ ಚಿಕ್ಕಬಳ್ಳಾಪುರದ ಎಂ.ಎಸ್. ಗೀತಾ 63 ಅಂಕ (ಹೆಚ್ಚುವರಿ 37), ಇತಿಹಾಸದಲ್ಲಿ ಕಲಬುರಗಿಯ ಸಚಿನ್ 78 ಅಂಕ (ಹೆಚ್ಚುವರಿ 46) ಪಡೆದಿದ್ದಾರೆ. ವಿಜ್ಞಾನ ವಿಷಯಗಳಲ್ಲಿ ಹಲವು ವಿದ್ಯಾರ್ಥಿಗಳು 35ರಿಂದ 45ರವರೆಗೆ ಹೆಚ್ಚುವರಿ ಅಂಕಗಳನ್ನು ಪಡೆದಿದ್ದಾರೆ.

ಗಂಗೋಪಾಧ್ಯಾಯ ಪ್ರಚಾರಕ್ಕೆ ನಿರ್ಬಂಧ



ಕೋಲ್ಕತ್ತ (ಪಿಟಿಐ): ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ವಿರುದ್ಧ ಆಕ್ಷೇಪಾರ್ಹ ಹೇಳಿಕೆ ನೀಡಿದ ಬಿಜೆಪಿ ಅಭ್ಯರ್ಥಿ ಅಭಿಜಿತ್ ಗಂಗೋಪಾಧ್ಯಾಯ ಅವರು 24 ಗಂಟೆ ಪ್ರಚಾರ ನಡೆಸದಂತೆ ಚುನಾವಣಾ ಆಯೋಗ ಮಂಗಳವಾರ ನಿರ್ಬಂಧ ವಿಧಿಸಿದೆ.

ಕಲ್ಕತ್ತಾ ಹೈಕೋರ್ಟ್‌ನ ಮಾಜಿ ನ್ಯಾಯಮೂರ್ತಿ ಆಗಿರುವ ಗಂಗೋಪಾಧ್ಯಾಯ ಅವರು ಪಶ್ಚಿಮ ಬಂಗಾಳದ ತಾಮ್ಲುಕ್ ಲೋಕಸಭಾ ಕ್ಷೇತ್ರದಿಂದ ಕಣಕ್ಕಿಳಿದಿದ್ದಾರೆ.

ಮೇ 15 ರಂದು ಅವರು ಹಲ್ದಿಯಾದಲ್ಲಿ ಚುನಾವಣಾ ಪ್ರಚಾರ ಸಭೆಯಲ್ಲಿ ಮಮತಾ ವಿರುದ್ಧ ಆಕ್ಷೇಪಾರ್ಹ ಮಾತುಗಳನ್ನು ಆಡಿದ್ದಾರೆ ಎಂದು ಟಿಎಂಸಿಯು ದೂರು ನೀಡಿತ್ತು. ಈ ಸಂಬಂಧ ಆಯೋಗವು ಅವರಿಗೆ ಶೋಕಾಸ್ ನೋಟಿಸ್ ಕಳುಹಿಸಿತ್ತು.

ಒಂದೆಡೆ ಬರಗಾಲ, ಇನ್ನೊಂದೆಡೆ ರಾಜ್ಯ ಸರ್ಕಾರದಿಂದ ಸಿಗದ ಸ್ಪಂದನೆ

ಸಿಗದ ಪ್ರೋತ್ಸಾಹಧನ: ಹೈನುಗಾರಿಕೆಗೆ ಹಿನ್ನಡೆ

• ಬಸವರಾಜ ಹವಾಲ್ದಾರ

ಬಾಗಲಕೋಟೆ: ಕರ್ನಾಟಕ ಸಹಕಾರಿ ಹಾಲು ಉತ್ಪಾದಕರ ಮಹಾಮಂಡಳ ವ್ಯಾಪ್ತಿಯ ಒಕ್ಕೂಟಗಳಿಗೆ ಪೂರೈಕೆ ಮಾಡಿದ ಹಾಲು ಉತ್ಪಾದಕರಿಗೆ ₹703 ಕೋಟಿ ಪ್ರೋತ್ಸಾಹ ಧನವನ್ನು (ಪ್ರಮುಖ ಒಕ್ಕೂಟಗಳಿಗೆ ₹618 ಕೋಟಿ) ರಾಜ್ಯ ಸರ್ಕಾರ ಬಾಕಿ ಉಳಿಸಿಕೊಂಡಿದೆ. ಬರದಿಂದ ಈಗಾಗಲೇ ಸಂಕಷ್ಟದ ಸುಳಿಯಲ್ಲಿ ಸಿಲುಕಿರುವ ರೈತರಿಗೆ ಬಾಕಿ ಹಣ ಸಿಗದಿರುವುದು ಇನ್ನಷ್ಟು ಆತಂಕ ಮೂಡಿಸಿದೆ.

ಒಕ್ಕೂಟಗಳಿಗೆ ರೈತರು ಪೂರೈಸುವ ಪ್ರತಿ ಲೀಟರ್ ಹಾಲಿಗೆ ರಾಜ್ಯ ಸರ್ಕಾರ ₹5 ಪ್ರೋತ್ಸಾಹ ಧನ ನೀಡುತ್ತದೆ. ಎರಡು ಅಥವಾ ಮೂರು ತಿಂಗಳಿಗೊಮ್ಮೆ ಪ್ರೋತ್ಸಾಹ ಧನ ಬಿಡುಗಡೆ ಆಗುತ್ತಿತ್ತು. ಈ ಸಲ 8 ತಿಂಗಳಾದರೂ ಬಿಡುಗಡೆ ಆಗಿಲ್ಲ.


ರಾಜ್ಯದಲ್ಲಿ ನಿತ್ಯ 26 ಲಕ್ಷಕ್ಕೂ ಹೆಚ್ಚು ರೈತರ 16 ಒಕ್ಕೂಟಗಳ ಮೂಲಕ 85 ಲಕ್ಷ ಲೀಟರ್ ಹಾಲು ಸಂಗ್ರಹವಾಗುತ್ತದೆ. ಪ್ರತಿ ಲೀಟರ್‌ಗೆ ₹5 ರಂತೆ, ನಿತ್ಯ ₹4.25 ಕೋಟಿ ಪ್ರೋತ್ಸಾಹ ಧನ ರೈತರಿಗೆ ಸಿಗಬೇಕು. ಪರಿಶಿಷ್ಟ ಜಾತಿ ಮತ್ತು ಪಂಗಡದ ಹಾಲು ಉತ್ಪಾದಕರಿಗೆ ಫೆಬ್ರುವರಿವರೆಗೆ ಹಣ ಪಾವತಿಯಾಗಿದೆ. ಉಳಿದವರಿಗೆ ಸೆಪ್ಟೆಂಬರ್ ತಿಂಗಳಿನಿಂದ ಬಾಕಿ ಇದೆ.

ರಾಜ್ಯದಲ್ಲಿ ಬರ ತೀವ್ರವಾಗಿದ್ದು, ರೈತರಿಗೆ ಬೆಳೆ ಬೆಳೆಯಲು ಆಗಿಲ್ಲ. ನದಿ, ಕೆರೆ, ಕುಂಟೆ, ಕೊಳವೆಬಾವಿ ಮತ್ತು ಜಲಮೂಲಗಳು ಬತ್ತಿದ್ದು, ಪರಿಸ್ಥಿತಿ ಇನ್ನಷ್ಟು ಬಿಗಡಾಯಿಸಿದೆ. ಬಹುತೇಕ ಕಡೆ ರೈತರು ದಿಕ್ಕು ತೋಚದ ಸ್ಥಿತಿಯಲ್ಲಿದ್ದಾರೆ. ಉಪ ಉತ್ಪನ್ನದ ರೂಪದಲ್ಲಿ ರೈತರು ಒಂದೆರಡು ಎಮ್ಮೆ, ಆಕಳು ಸಾಕಿಕೊಂಡು ಬದುಕು ಕಟ್ಟಿಕೊಂಡಿದ್ದಾರೆ. ಅಂಥವು ಲಕ್ಷಾಂತರ ಕುಟುಂಬಗಳಿವೆ. ಆ ಕುಟುಂಬಗಳಿಗೆ ಪ್ರೋತ್ಸಾಹ ಧನ ಸಿಗದ ಕಾರಣ ಅತಂತ್ರ ಪರಿಸ್ಥಿತಿ ನಿರ್ಮಾಣಗೊಂಡಿದೆ. ಆರ್ಥಿಕ ಸಮಸ್ಯೆ ತಾರಕಕ್ಕೇರಿದೆ. ಬರ ಕಾರಣ ಮೇವು ಸಿಗುತ್ತಿಲ್ಲ. ಜೊತೆಗೆ ಇಂಡಿ (ಪೌಷ್ಟಿಕ ಆಹಾರ), ಮೇವಿನ ಬೆಲೆ ಹೆಚ್ಚಾಗಿದೆ. ಇದಕ್ಕೆ ಪೂರಕವಾಗಿ ಹಾಲು ಉತ್ಪಾದನೆಯ ವೆಚ್ಚವೂ ದುಪ್ಪಟ್ಟಾಗಿದೆ.

'ಹಾಲು ಒಕ್ಕೂಟ ನೀಡುವ ದರದಿಂದ ಹೈನುಗಾರಿಕೆ ಮಾಡಲು ಆಗದು. ರಾಜ್ಯ ಸರ್ಕಾರದ ಪ್ರೋತ್ಸಾಹ ಧನದಿಂದ ಹೈನುಗಾರಿಕೆ ಮುಂದುವರಿಸಿದ್ದೆವು. ಈಗ ಪ್ರೋತ್ಸಾಹ ಧನ ಸಿಗದ ಕಾರಣ ತೊಂದರೆಯಾಗಿದೆ. ಮೇವಿಲ್ಲದ ಕಾಲದಲ್ಲಿ ಎಮ್ಮೆ, ಹಸು ಸಾಕುವುದು ಕಷ್ಟವಾಗಿದೆ. ನಮ್ಮ ಪರಿಸ್ಥಿತಿ ಅರ್ಥ ಮಾಡಿಕೊಂಡು, ಸರ್ಕಾರ ನೆರವಿಗೆ ಮುಂದಾಗಬೇಕು' ಎಂದು ಬಾಗಲಕೋಟೆ ರೈತ ಕೆ. ಪ್ರಕಾಶ ಅಳಲು ತೋಡಿಕೊಂಡರು.

'ಪ್ರತಿ ಬಾರಿ ಮೂರು ತಿಂಗಳಿಗೊಮ್ಮೆ ಪ್ರೋತ್ಸಾಹ ಧನ ಬರುತ್ತಿತ್ತು. ಸರ್ಕಾರವೇ ರೈತರ ಖಾತೆಗಳಿಗೆ ನೇರವಾಗಿ ಜಮಾ ಮಾಡುತ್ತಿ ತ್ತು. ಈ ಬಾರಿ ಸೆಪ್ಟೆಂಬರ್ ತಿಂಗಳಿನಿಂದ ಬಂದಿಲ್ಲ. ಸರ್ಕಾರ ಶೀಘ್ರವೇ ಬಿಡುಗಡೆ ಮಾಡಲಿದೆ' ಎಂದು ವಿಜಯಪುರ ಮತ್ತು ಬಾಗಲಕೋಟೆ ಜಿಲ್ಲಾ ಸಹಕಾರ ಹಾಲು ಉತ್ಪಾದಕರ ಸಂಘಗಳ ಒಕ್ಕೂಟದ ವ್ಯವಸ್ಥಾಪಕ ನಿರ್ದೇಶಕ ಪೀರಾ ನಾಯಕ ತಿಳಿಸಿದರು.

11ನೇ ಪುಟ ನೋಡಿ



ಜಾನುವಾರುಗಳ ಮಾರಾಟಕ್ಕೂ ಹಿನ್ನಡೆ

ಬಾಗಲಕೋಟೆ: ಬರ ಇರುವುದರಿಂದ ರೈತರ ಬಳಿ ಮೇವಿಲ್ಲ. ಎಮ್ಮೆ, ಹಸು ಸೇರಿ ಜಾನುವಾರುಗಳ ಮಾರಾಟಕ್ಕೆ ರೈತರು ಮುಂದಾದರೂ ಖರೀದಿದಾರರಿಲ್ಲ. ಎಮ್ಮೆ, ಹಸುಗಳ ಸಾಕಣೆ ವೆಚ್ಚ ಹೆಚ್ಚಾಗಿದೆ. ಹಣ ನೀಡಿದರೂ ಮೇವು ಸಿಗುತ್ತಿಲ್ಲ. ಅವುಗಳ ಸಾಕಣೆಯಿಂದ ಲಾಭವೂ ಆಗುತ್ತಿಲ್ಲ. ಕೃಷಿಯ ಜತೆಗೆ ಹೈನುಗಾರಿಕೆಯೂ ನಷ್ಟದ ಹೊರೆಯನ್ನು ಹೆಚ್ಚಿಸುತ್ತಿದೆ ಎಂದು ರೈತರು ಆತಂಕ ವ್ಯಕ್ತಪಡಿಸಿದರು.

ಸ್ಪಾ ಮೇಲೆ ದಾಳಿ: 7 ಯುವತಿಯರ ರಕ್ಷಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಇಂದಿರಾನಗರದ 12ನೇ ಮುಖ್ಯರಸ್ತೆಯಲ್ಲಿರುವ ಬೆರ್ರಿ ಸ್ಪಾದ ಮೇಲೆ ದಾಳಿ ನಡೆಸಿದ ಇಂದಿರಾನಗರ ಠಾಣೆ ಪೊಲೀಸರು, ವಿದೇಶಿ ಹಾಗೂ ಹೊರ ರಾಜ್ಯದ ಏಳು ಯುವತಿಯರನ್ನು ರಕ್ಷಿಸಿ ಒಬ್ಬ ಆರೋಪಿಯನ್ನು ಬಂಧಿಸಿದ್ದಾರೆ.

ಅಸ್ಸಾಂನ ಸಂತನುಧಾರ್ ಬಂಧಿತ ಆರೋಪಿ. ಸ್ಪಾ ಮಾಲೀಕ ಸುರೇಶ್ ತಲೆಮರೆಸಿಕೊಂಡಿದ್ದಾನೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಕ್ರಾಸ್ ಮಸಾಜ್, ಬಾಡಿ ಟು ಬಾಡಿ ಮಸಾಜ್, ಹ್ಯಾಪಿ ಎಂಡಿಂಗ್ ಹೆಸರಿನಲ್ಲಿ ಮಸಾಜ್ ಮಾಡುವುದಾಗಿ ಸ್ಪಾ ಗ್ರಾಹಕರನ್ನು ಆಕರ್ಷಿಸುತ್ತಿತ್ತು. ಹೊರ ರಾಜ್ಯದಿಂದ ಯುವತಿಯರನ್ನು ಕರೆತಂದು, ವೇಶ್ಯಾವಾಟಿಕೆ ದಂಧೆ ನಡೆಸಲಾಗುತ್ತಿತ್ತು. ರಕ್ಷಿಸಿದ ಸಂತ್ರಸ್ತೆಯರನ್ನು ಅವರ ಕುಟುಂಬದವರಿಗೆ ಒಪ್ಪಿಸಲಾಗಿದೆ ಎಂದು ಹೇಳಿದರು.

ನೈಋತ್ಯ ರೈಲ್ವೆ

ಇ–ಟೆಂಡರು ಸೂಚನೆ ಸಂ.: SnT_CableMeggering_SBCDiv, ದಿನಾಂಕ: 17.05.2024

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗೆ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಕಾಮಗಾರಿಯ ವಿವರ	ಅಂದಾಜು ಮೌಲ್ಯ
ನೈಋತ್ಯ ರೈಲ್ವೆಯ ಬೆಂಗಳೂರು ವಿಭಾಗದಲ್ಲಿ ಎರಡು ವರ್ಷಗಳ ಅವಧಿಗೆ ವಾರ್ಷಿಕ ಕೇಬಲ್ ಮೆಗ್ಗರಿಂಗ್ ಚಟುವಟಿಕೆಯ ಹೊರ ಗುತ್ತಿಗೆ ಕಾರ್ಯಗಳು.	ರೂ. 1,79,70,456/-

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 10.06.2024, 11:00 ಗಂಟೆಯವರೆಗೆ

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ

ವರಿಷ್ಠ ವಿಭಾಗೀಯ ಸಿಗ್ನಲ್ & ದೂರಸಂಪರ್ಕ ಇಂಜಿನಿಯರ್ ಬೆಂಗಳೂರು

PUB/102/AAD/PRB/SWR/2024-25

South Western Railway - SWR | SWRRLY | SWRRLY

ನೈಋತ್ಯ ರೈಲ್ವೆ

ಟೆಂಡರ್ ಪ್ರಕಟಣೆ ಸಂ. ಸಿಎಒ/ಸಿಎನ್/ಬಿಎನ್‌ಸಿ/ಇಪಿಸಿ/006/2024
ದಿನಾಂಕ : 14–05–2024

ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಸಹಿದಾರರು ಕೆಳಕಂಡ ಕೆಲಸಕ್ಕಾಗಿ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕಾಮಗಾರಿಯ ಹೆಸರು	ಅಂದಾಜು ಮೌಲ್ಯ
ತುಮಕೂರು – ರಾಯದುರ್ಗಂ ಹೊಸ ಮಾರ್ಗ ಯೋಜನೆಯಲ್ಲಿ ಮಡಕಶಿರ (ಒಳಗೊಂಡಂತೆ) ಮತ್ತು ಪಾವಗಡ (ಹೊರತುಪಡಿಸಿ) ನಡುವೆ ವಿದ್ಯುದೀಕರಣ, ಸಿವಿಲ್ ಕಾಮಗಾರಿಗಳು, ಸಿಗ್ನಲ್ ಮತ್ತು ಟೆಲಿಕಮ್ಯುನಿಕೇಶನ್ ಕಾಮಗಾರಿಗಳು ಮತ್ತು ವಿದ್ಯುತ್ ಸಾಮಾನ್ಯ ಸೇವೆಗಳಿಗಾಗಿ ಚೈನೇಜ್ 84/000 ಮತ್ತು ಚೈನೇಜ್ 106/000 ನಡುವೆ ಹೊಸ ಬಿಜಿ ಮಾರ್ಗದ ನಿರ್ಮಾಣಕ್ಕಾಗಿ ಇಂಜಿನಿಯರಿಂಗ್, ಪ್ರೊಕ್ಯೂರ್‌ಮೆಂಟ್ ಮತ್ತು ಕನ್‌ಸ್ಟ್ರಕ್ಷನ್ (ಇಪಿಸಿ) (ಟೆಂಡರ್ ಉಲ್ಲೇಖ ಸಂ.: ಟಿಕೆ–ಆರ್‌ಡಿಜಿ–ಇಪಿಸಿ–01)	ರೂ. 265,92,23,992/–

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : 11–09–2024 ರಂದು 15:00 ಗಂಟೆಯವರೆಗೆ

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ

ಉಪ ಮುಖ್ಯ ಇಂಜಿನಿಯರ್ / ನಿರ್ಮಾಣ / ಕಾಮಗಾರಿಗಳು ಬೆಂಗಳೂರು ದಂಡು

ಪಿಯುಬಿ/89/ಎಎಎಸ್/ಪಿಆರ್‌ಬಿ/ಎಸ್‌ಡಬ್ಲ್ಯುಆರ್/2024–25

South Western Railway - SWR | SWRRLY | SWRRLY

ಡೆಪ್ಯೂಟಿ ಇನ್‌ಸ್ಪೆಕ್ಟರ್ ಜನರಲ್ ರವರ ಕಚೇರಿ

ಸೆಕ್ಟರ್ ಹೆಡ್ ಕ್ವಾರ್ಟರ್ (ಬೆಂಗಳೂರು), ಐ.ಟಿ.ಬಿ. ಪೊಲೀಸ್ ಫೋರ್ಸ್
ಗೃಹ ವ್ಯವಹಾರಗಳ ಸಚಿವಾಲಯ, ಭಾರತ ಸರ್ಕಾರ
ಸುಂದ್ರಹಳ್ಳಿ ಗ್ರಾಮ, ಜಂಗಮಕೋಟೆ ಅಂಚೆ, ಶಿಡ್ಲಘಟ್ಟ ತಾಲ್ಲೂಕು
ಚಿಕ್ಕಬಳ್ಳಾಪುರ ಜಿಲ್ಲೆ, ಕರ್ನಾಟಕ, ಪಿನ್–562102

ಹರಾಜು ಪ್ರಕಟಣೆ

ಸೆಕ್ಟರ್ ಹೆಡ್ ಕ್ವಾರ್ಟರ್ (ಬೆಂಗಳೂರು) ಇಲ್ಲಿನ ಹಾನಿಗೊಂಡಿರುವ ಕಂಪ್ಯೂಟರ್, ಮಾನಿಟರ್ ಮತ್ತು ಇನ್ನಿತರ ವಿವಿಧ ಉಪಕರಣಗಳನ್ನು ಸುಂದ್ರಹಳ್ಳಿ ಗ್ರಾಮ, ಜಂಗಮಕೋಟೆ ಅಂಚೆ, ಶಿಡ್ಲಘಟ್ಟ ತಾಲ್ಲೂಕು, ಚಿಕ್ಕಬಳ್ಳಾಪುರ ಜಿಲ್ಲೆ, ಕರ್ನಾಟಕ, ಪಿನ್–562102 ವಿಳಾಸದಲ್ಲಿ ದಿನಾಂಕ 20.06.2024 ರಂದು ಸಾರ್ವಜನಿಕ ಹರಾಜು ಮುಖಾಂತರ ವಿಲೇವಾರಿ ಮಾಡಲಾಗುತ್ತದೆ.

ಎ) ಕ್ಷೇತ್ರದೊಳಗೆ 0930 ಗಂಟೆಯ ನಂತರ ಪ್ರವೇಶ ನಿರ್ಬಂಧ ಇರುವುದರಿಂದಾಗಿ, ಆಸಕ್ತಿಯುಳ್ಳ ಬಿಡ್‌ದಾರರು ಹರಾಜಿನಲ್ಲಿ ಪಾಲ್ಗೊಳ್ಳಲು ನಿಗದಿತ ಸಮಯಕ್ಕೆ ಮುಂಚಿತವಾಗಿಯೇ ಹಾಜರಾಗತಕ್ಕದ್ದು. ಸದರಿ ಉಪಕರಣಗಳ ಹರಾಜಿನಲ್ಲಿ ಪಾಲ್ಗೊಳ್ಳುವ ಬಿಡ್‌ದಾರರು, ತಲಾ ಉಪಕರಣಕ್ಕೆ ರೂ. 1,000/–(ರೂಪಾಯಿ ಒಂದು ಸಾವಿರ ಮಾತ್ರ) ಭದ್ರತಾ ಠೇವಣಿ ಪಾವತಿಸತಕ್ಕದ್ದು.

ಬಿ) ಯಶಸ್ವಿ ಬಿಡ್‌ದಾರರನ್ನು ಹೊರತುಪಡಿಸಿ, ಇನ್ನುಳಿದ ಎಲ್ಲಾ ಬಿಡ್‌ದಾರರ ಭದ್ರತಾ ಠೇವಣಿಯನ್ನು ಹರಾಜು ಪೂರ್ಣಗೊಂಡ ತಕ್ಷಣವೇ ಹಿಂದಿರುಗಿಸಲಾಗುತ್ತದೆ.

ಸಿ) ಗರಿಷ್ಠ ಬಿಡ್ ಕೂಗಿದ ಬಿಡ್‌ದಾರರು ಬಿಡ್‌ನ ಸಂಪೂರ್ಣ ಮೊತ್ತವನ್ನು ಹಾಗೂ ಬೆಂಗಳೂರಿನಲ್ಲಿ (ಕರ್ನಾಟಕ) ಅನ್ವಯವಾಗುವ ಮಾರಾಟ ತೆರಿಗೆ ಮೊತ್ತವನ್ನು ಪಾವತಿಸಬೇಕು. ಮಾರಾಟ ತೆರಿಗೆಯನ್ನು ಕಡ್ಡಾಯವಾಗಿ, ಬೆಂಗಳೂರಿನ ಮಾರಾಟ ತೆರಿಗೆ ಕಚೇರಿಯಲ್ಲಿಯೇ ಪಾವತಿಸತಕ್ಕದ್ದು. ಗರಿಷ್ಠ ಬಿಡ್ ಕೂಗಿದವರ ಬಿಡ್‌ನ್ನು ಸ್ವೀಕರಿಸಲಾಗುತ್ತದೆ ಮತ್ತು ಅವರ ಪರವಾಗಿ ಹರಾಜನ್ನು ಇತ್ಯರ್ಥಗೊಳಿಸಲಾಗುತ್ತದೆ ಹಾಗೂ ಯಶಸ್ವಿ ಬಿಡ್‌ದಾರರು 24 ಗಂಟೆಯೊಳಗೆ ಹರಾಜು ಪದಾರ್ಥಗಳನ್ನು ತೆಗೆದುಕೊಂಡು ಹೋಗತಕ್ಕದ್ದು.

ಡಿ) ಯಾವುದೇ ಕಾರಣ ನೀಡದೆಯೇ, ಯಾವುದೇ ಸಮಯದಲ್ಲಾದರೂ ಸದರಿ ಹರಾಜು ಪ್ರಕ್ರಿಯೆ ರದ್ದುಪಡಿಸುವ ಎಲ್ಲಾ ಹಕ್ಕುಗಳನ್ನು ಡೆಪ್ಯೂಟಿ ಇನ್‌ಸ್ಪೆಕ್ಟರ್ ಜನರಲ್, ಎಸ್‌ಎಚ್‌ಕ್ಯೂ (ಬೆಂಗಳೂರು), ಐಟಿಬಿ ಪೊಲೀಸ್ ಫೋರ್ಸ್ ಇವರು ಕಾಯ್ದಿರಿಸಿಕೊಂಡಿರುತ್ತಾರೆ.

ಇ) ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆಗಳು: 8630127130, 8979075735


ಸಹಿ/– ಕ್ವಾರ್ಟರ್ ಮಾಸ್ಟರ್
ಎಸ್‌ಎಚ್‌ಕ್ಯೂ (ಬೆಂಗಳೂರು), ಐಟಿಬಿ ಪೊಲೀಸ್

CBC-19112/11/0061/2425

ಉಪ್ಪಾರಪೇಟೆ ಪೊಲೀಸರ ಕಾರ್ಯಾಚರಣೆ • ಆರೋಪಿಗಳಲ್ಲಿ ಒಬ್ಬನು ಬಾಲಕ

₹22 ಲಕ್ಷ ಮೌಲ್ಯದ 176 ಮೊಬೈಲ್ ಜಪ್ತಿ

ಪ್ರಜಾವಾಣಿ ವಾರ್ತೆ



ನಾಗನೂರಿ ಕುಮಾರ್



ಪರಶುರಾಮ್

ಬೆಂಗಳೂರು: ಬಿಎಂಟಿಸಿ ಬಸ್ ಪ್ರಯಾಣಿಕರ ಗಮನ ಬೇರೆಡೆ ಸೆಳೆದು ಮೊಬೈಲ್ ಕಳವು ಮಾಡುತ್ತಿದ್ದ ಆಂಧ್ರಪ್ರದೇಶದ ಮೂವರು ಆರೋಪಿಗಳನ್ನು ಉಪ್ಪಾರಪೇಟೆ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಆಂಧ್ರಪ್ರದೇಶದ ಕರ್ನೂಲ್ ಜಿಲ್ಲೆಯ ನಾಗನೂರಿ ಕುಮಾರ್(23) ಮತ್ತು ಅನಂತಪುರ ಜಿಲ್ಲೆಯ ಪರಶುರಾಮ್ ಅಲಿಯಾಸ್ ಅಭಿ(21) ಹಾಗೂ ಮತ್ತೊಬ್ಬ ಬಾಲಕನನ್ನು ಬಂಧಿಸಲಾಗಿದೆ. ಬಾಲಕನನ್ನು ಬಾಲಮಂದಿರಿಕ್ಕೆ ಕಳುಹಿಸಲಾಗಿದೆ ಎಂದು ಪೊಲೀಸರು ಹೇಳಿದರು.

'ಆರೋಪಿಗಳಿಂದ, ₹22.40 ಲಕ್ಷದ 176 ಮೊಬೈಲ್‌ಗಳು ಮತ್ತು ಒಂದು ಕಾರು ಜಪ್ತಿ ಮಾಡಿಕೊಳ್ಳಲಾಗಿದೆ' ಎಂದು ಪೊಲೀಸರು ಹೇಳಿದರು.

ಆಂಧ್ರಪ್ರದೇಶದಿಂದ ಕಾರಿನಲ್ಲಿ ನಗರದ ಹೊರವಲಯಕ್ಕೆ ಆರೋಪಿಗಳು ಬರುತ್ತಿದ್ದರು. ಬಳಿಕ, ಬಿಎಂಟಿಸಿ ಬಸ್‌ಗಳಲ್ಲಿ ಪ್ರಯಾಣಿಕರ ಸೋಗಿನಲ್ಲಿ ಪ್ರಯಾಣಿಸುತ್ತಿದ್ದರು. ಪ್ರಯಾಣಿಕರ ಗಮನ ಬೇರೆಡೆ ಸೆಳೆದು ಪ್ರಯಾಣಿಕರ ಜೇಬಿನಲ್ಲಿದ್ದ ಮೊಬೈಲ್ ಕದ್ದು ಪರಾರಿ ಆಗುತ್ತಿದ್ದರು. ಕೃತ್ಯ ಎಸಗಲು ಮೆಜೆಸ್ಟಿಕ್ ಹಾಗೂ ಹೆಚ್ಚು ಪ್ರಯಾಣಿಕರು ಇರುವ ನಿಲ್ದಾಣಗಳನ್ನೇ ಆಯ್ಕೆ ಮಾಡಿಕೊಳ್ಳುತ್ತಿದ್ದರು ಎಂದು ಪೊಲೀಸರು ಹೇಳಿದರು.

ಕಡಿಮೆ ಬೆಲೆಗೆ ಮಾರಾಟ: 'ಬಂಧಿತರು ಕಳವು ಮೊಬೈಲ್‌ಗಳನ್ನು ಆಂಧ್ರಪ್ರದೇಶಕ್ಕೆ ಕೊಂಡೊಯ್ದು ಅಲ್ಲಿ ಫ್ಲ್ಯಾಶ್ ಮಾಡಿಸಿ ಕಡಿಮೆ ಮೊತ್ತಕ್ಕೆ ಮಾರಾಟ ಮಾಡುತ್ತಿದ್ದರು' ಎಂದು ಪೊಲೀಸರು ಹೇಳಿದರು.

ಇತ್ತೀಚೆಗೆ ಶಿವಮೊಗ್ಗದಿಂದ ರೈಲಿನಲ್ಲಿ ಬಂದಿದ್ದ ವ್ಯಕ್ತಿಯೊಬ್ಬರು ಸಂಗೊಳ್ಳಿ ರಾಯಣ್ಣ ನಿಲ್ದಾಣದಲ್ಲಿ ಇಳಿದಿದ್ದರು. ಅಲ್ಲಿಂದ ಮೆಜೆಸ್ಟಿಕ್‌ಗೆ ಬಂದಿದ್ದರು. ಅಲ್ಲಿಂದ ಬಿಎಂಟಿಸಿ ಬಸ್‌ನಲ್ಲಿ ಪ್ರಯಾಣಿಸುತ್ತಿದ್ದಾಗ ಅವರ ಮೊಬೈಲ್ ಕಳ್ಳತನ ಮಾಡಲಾಗಿತ್ತು. ಅವರು ನೀಡಿದ ದೂರು ಆಧರಿಸಿ ಕಾರ್ಯಾಚರಣೆ ನಡೆಸಿ ಆರೋಪಿಗಳನ್ನು ಬಂಧಿಸಲಾಗಿದೆ ಎಂದು ಪೊಲೀಸರು ಹೇಳಿದರು.

ಕಳ್ಳರ ಸುಳಿವು ನೀಡಿದ 'ಆ್ಯಪ್'

ಬೆಂಗಳೂರು: ಪಾದಚಾರಿಗಳು ಹಾಗೂ ಉದ್ಯಾನಗಳಲ್ಲಿ ವಾಯುವಿಹಾರ ಮಾಡುತ್ತಿದ್ದವರನ್ನು ಅಡ್ಡಗಟ್ಟಿ ಮೊಬೈಲ್ ಸುಲಿಗೆ ಮಾಡುತ್ತಿದ್ದ ಇಬ್ಬರು ಹಾಗೂ ಆರೋಪಿಗಳಿಂದ ಮೊಬೈಲ್ ಖರೀದಿಸುತ್ತಿದ್ದ ಮೂವರು ಸೇರಿ ಐವರು ಆರೋಪಿಗಳನ್ನು ಚಂದ್ರಾ ಲೇಔಟ್ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಮೊಬೈಲ್ ಸುಲಿಗೆ ಮಾಡುತ್ತಿದ್ದ ಪೀಣ್ಯದ ಪಾರ್ವತಿನಗರ ನಿವಾಸಿ ಮಹಮ್ಮದ್ ಫಾರೂಕ್(36) ಮತ್ತು ಜಗಜೀವನ್‌ರಾಂ ನಗರ ನಿವಾಸಿ ಸೈಯದ್ ಫರ್ವೀಜ್(25) ಹಾಗೂ ಕಳವು ಮೊಬೈಲ್ ಖರೀದಿಸುತ್ತಿದ್ದ ಸುಧಾಮನಗರದ ನಿವಾಸಿ ರೆಹಮಾನ್(31), ಸೈಯದ್ ಜಮೀರ್(26), ಸೈಯದ್ ಹಾಷಿಮ್(46) ಬಂಧಿತರು.

ಆರೋಪಿಗಳಿಂದ ₹6.31 ಲಕ್ಷ ಮೌಲ್ಯದ 32 ಮೊಬೈಲ್ ಜಪ್ತಿ ಮಾಡಿಕೊಳ್ಳಲಾಗಿದೆ ಎಂದು ಪೊಲೀಸರು ಹೇಳಿದರು.

'ಆ್ಯಪ್' ನೀಡಿದ ಸುಳಿವು: ಮೊಬೈಲ್ ಸುಲಿಗೆ ಸಂಬಂಧ ಹರ್ಷ ಎಂಬುವರು ಏ.24ರಂದು ಚಂದ್ರಾ ಲೇಔಟ್ ಪೊಲೀಸ್ ಠಾಣೆಗೆ ದೂರು ನೀಡಿದ್ದರು. ಹರ್ಷ ಅವರ ಮೊಬೈಲ್‌ನಲ್ಲಿದ್ದ 'ಫೈಂಡ್ ಮೈ ಡಿವೈಸ್' ಆ್ಯಪ್‌ನಿಂದ ಮೊಬೈಲ್ ಲೋಕೇಷನ್ ಪತ್ತೆ ಆಗಿತ್ತು. ಅದನ್ನು ಆಧರಿಸಿ, ಕಾರ್ಯಾಚರಣೆ ನಡೆಸಿದಾಗ ಮೊಬೈಲ್ ಶಾಂತಿನಗರದ ಸುಧಾಮನಗರದಲ್ಲಿ ರೆಹಮಾನ್ ಅಂಗಡಿಯಲ್ಲಿ ಇರುವುದು ಪತ್ತೆಯಾಗಿತ್ತು. ಅಷ್ಟರಲ್ಲಿ ಆರೋಪಿ ಐ-ಫೋನ್‌ನ ಬಿಡಿಭಾಗಗಳನ್ನು ಬೇರ್ಪಡಿಸಿದ್ದ. ಮದರ್ ಬೋರ್ಡ್ ಅನ್ನು ತನ್ನ ಕಡೆ ಇಟ್ಟುಕೊಂಡು, ಅದರ ಡಿಸ್‌ಪ್ಲೇ ಅನ್ನು ಸೈಯದ್ ಜಮೀರ್‌ಗೆ ಹಾಗೂ ಬ್ಯಾಕ್‌ಕೇಸ್, ಬ್ಯಾಟರಿಯನ್ನು ಸೈಯದ್ ಹಾಷಿಮ್‌ಗೆ ಮಾರಾಟ ಮಾಡಿದ್ದ. ಅವರನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿದಾಗ, ಮೊಬೈಲ್ ಸುಲಿಗೆಕೋರರ ಕುರಿತು ಮಾಹಿತಿ ನೀಡಿದ್ದರು. ಅದಾದ ಮೇಲೆ ಮಹಮ್ಮದ್ ಫಾರೂಕ್ ಹಾಗೂ ಫರ್ವೇಜ್‌ನನ್ನು ಬಂಧಿಸಲಾಯಿತು ಎಂದು ಪೊಲೀಸರು ಹೇಳಿದರು.

ಆರೋಪಿಗಳ ಬಂಧನದಿಂದ ಠಾಣೆಯಲ್ಲಿ ದಾಖಲಾಗಿದ್ದ 3 ಮೊಬೈಲ್ ಸುಲಿಗೆ ಪ್ರಕರಣಗಳು ಪತ್ತೆಯಾಗಿವೆ. ಆರೋಪಿಗಳ ಪೈಕಿ ಮೊಹಮ್ಮದ್ ಫಾರೂಕ್, ಸೈಯದ್ ಪರ್ವೇಜ್ ಅವರು ಏ.23ರಂದು ನಾಗರಭಾವಿಯ ಸುವರ್ಣ ಲೇಔಟ್‌ನ ಪಾರ್ಕ್ ಬಳಿ ಹರ್ಷ ಅವರ ಐ-ಫೋನ್ 14 ಪ್ರೊ ಮೊಬೈಲ್ ಸುಲಿಗೆ ಮಾಡಿದ್ದರು. ಮಹಮ್ಮದ್ ಫಾರೂಕ್ ಮೊಬೈಲ್, ಲ್ಯಾಪ್‌ಟಾಪ್, ಸಿ.ಸಿ.ಟಿ.ವಿ. ಕ್ಯಾಮೆರಾ ರಿಪೇರಿ ಕೆಲಸ ಮಾಡುತ್ತಿದ್ದ. ಸೈಯದ್ ಪರ್ವೇಜ್ ಜೆ.ಸಿ.ರಸ್ತೆಯಲ್ಲಿ ಕಾರ್ ರಿಪೇರಿ ಕೆಲಸ ಮಾಡಿಕೊಂಡಿದ್ದ. ಉಳಿದ ಮೂವರು ಆರೋಪಿಗಳು ಮೊಬೈಲ್ ರಿಪೇರಿ ಅಂಗಡಿ ಇಟ್ಟುಕೊಂಡಿದ್ದರು ಎಂದು ಪೊಲೀಸರು ಹೇಳಿದರು.

ಅಪರಾಧ ಸುದ್ದಿ

ನಕಲಿ ಕೀ ಬಳಸಿ ಚಿನ್ನಾಭರಣ ಕಳವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಕಲಿ ಕೀ ಮಾಡಿಸಿಕೊಂಡು ಮಾಲೀಕರ ಮನೆಯಲ್ಲಿ ಚಿನ್ನಾಭರಣ ಹಾಗೂ ನಗದು ಕಳವು ಮಾಡಿದ್ದ ಬಾಡಿಗೆದಾರನನ್ನು ಮಹದೇವಪುರ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಎ.ನಾರಾಯಣಪುರದ ಸೆಲ್ವರಾಜ್(56) ಬಂಧಿತ ಆರೋಪಿ. ಆರೋಪಿಯಿಂದ ₹4.30 ಲಕ್ಷ ಮೌಲ್ಯದ ಚಿನ್ನಾಭರಣ ಹಾಗೂ ₹72 ಸಾವಿರ ನಗದು ಜಪ್ತಿ ಮಾಡಿಕೊಳ್ಳಲಾಗಿದೆ ಎಂದು ಪೊಲೀಸರು ಹೇಳಿದರು.

'ಎ.ನಾರಾಯಣಪುರದಲ್ಲಿ ಮಾಲೀಕರಾದ ಅಲವೇಲು ನೆಲೆಸಿದ್ದರು. ಅವರ ಮನೆಯಿಂದ 100 ಮೀಟರ್ ದೂರದಲ್ಲಿ ಖಾಲಿ ಜಾಗವಿತ್ತು. ಅಲ್ಲಿ ನಾಲ್ಕು ಶೆಡ್ ನಿರ್ಮಿಸಿ ಬಾಡಿಗೆಗೆ ನೀಡಿದ್ದರು. ಆರೋಪಿ ಒಂದು ಶೆಡ್‌ನಲ್ಲಿ ನೆಲೆಸಿದ್ದ. ಬಾಡಿಗೆ ನೀಡುವಾಗ ಮನೆ ಮಾಲೀಕರು ಕೀ ಇಡುವ ಸ್ಥಳ ನೋಡಿಕೊಂಡಿದ್ದ. ಕೀ ಕೊಂಡೊಯ್ದು ನಕಲಿ ಮಾಡಿಸಿಕೊಂಡಿದ್ದ. ಮನೆಯ ಮಾಲೀಕರು ಮೇ 7ರಂದು ತಮಿಳುನಾಡಿನ ದೇವಸ್ಥಾನಕ್ಕೆ ಹೋಗಿದ್ದರು. ಅಂದು ನಕಲಿ ಕೀ ಬಳಸಿ ಕಳ್ಳತನ ಮಾಡಿದ್ದ' ಎಂದು ಪೊಲೀಸರು ಹೇಳಿದರು.

'ದೇವಸ್ಥಾನದಿಂದ ಮೇ 9ರಂದು ಅಲವೇಲು ಅವರು ವಾಪಸ್ ಬಂದಿದ್ದರು. ಮೇ 15ರಂದು ಬೀರು ತೆರೆದು ನೋಡಿದಾಗ ಚಿನ್ನಾಭರಣ, ನಗದು ಇರಲಿಲ್ಲ. ಅವರು ನೀಡಿದ ದೂರು ಆಧರಿಸಿ ಆರೋಪಿಯನ್ನು ಬಂಧಿಸಲಾಯಿತು' ಎಂದು ಹೇಳಿದರು.

ಆರೋಪಿ ಆಟೊ ಚಾಲಕನಾಗಿ ಕೆಲಸ ಮಾಡುತ್ತಿದ್ದ.

ಪ್ರಭುದ್ಯಾ ಸಾವು: ಕೊಲೆ ಪ್ರಕರಣ ದಾಖಲು

ಬೆಂಗಳೂರು: ಬೃಂದಾವನ ಲೇಔಟ್‌ನಲ್ಲಿ ಬಿಬಿಎ ವಿದ್ಯಾರ್ಥಿನಿ ಪ್ರಭುದ್ಯಾ(20) ಅನುಮಾನಾಸ್ಪದವಾಗಿ ಸಾವು ಪ್ರಕರಣದ ತನಿಖೆ ನಡೆಸುತ್ತಿರುವ ಸುಬ್ರಹ್ಮಣ್ಯಪುರ ಠಾಣೆ ಪೊಲೀಸರು ಈಗ ಕೊಲೆ ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಆಕೆಯ ತಾಯಿ ಕೆ.ಆರ್.ಸೌಮ್ಯಾ ಅವರು ನೀಡಿದ್ದ ದೂರು ಆಧರಿಸಿ ಕೊಲೆ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಳ್ಳಲಾಗಿದೆ ಎಂದು ಪೊಲೀಸರು ತಿಳಿಸಿದರು.

ಮೇ 15ರಂದು ಸಂಜೆ ಮನೆಯ ಬಾತ್‌ರೂಂನಲ್ಲಿ ಕತ್ತು ಮತ್ತು ಕೈ ಕೊಯ್ದ ಸ್ಥಿತಿಯಲ್ಲಿ ವಿದ್ಯಾರ್ಥಿನಿಯ ಮೃತದೇಹ ಪತ್ತೆಯಾಗಿತ್ತು.

25 ಲ್ಯಾಪ್‌ಟಾಪ್ ಜಪ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿದ್ಯಾರ್ಥಿಗಳು ವಾಸವಿದ್ದ ಪಿಜಿಗಳಿಗೆ ನುಗ್ಗಿ ಲ್ಯಾಪ್‌ಟಾಪ್ ಕಳವು ಮಾಡುತ್ತಿದ್ದ ಆಂಧ್ರಪ್ರದೇಶದ ಆರೋಪಿಯನ್ನು ಕುಮಾರಸ್ವಾಮಿ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಆಂಧ್ರಪ್ರದೇಶದ ಚಿತ್ತೂರು ಜಿಲ್ಲೆಯ ಕುಮಾರ್(29) ಬಂಧಿತ ಆರೋಪಿ. ಬಂಧಿತ ಆರೋಪಿಯಿಂದ 25 ಲ್ಯಾಪ್‌ಟಾಪ್ ಜಪ್ತಿ ಮಾಡಿಕೊಳ್ಳಲಾಗಿದೆ ಎಂದು ಪೊಲೀಸರು ಹೇಳಿದರು.

ಠಾಣಾ ವ್ಯಾಪ್ತಿಯ ದಯಾನಂದ ಸಾಗರ್ ಕಾಲೇಜು ರಸ್ತೆಯಲ್ಲಿರುವ ಮನೆಯಲ್ಲಿ ಆರೋಪಿ ಲ್ಯಾಪ್‌ಟಾಪ್ ಕಳವು ಮಾಡಿದ್ದ. ಈ ಸಂಬಂಧ ದೂರು ದಾಖಲಿಸಿಕೊಂಡಿದ್ದ ಪೊಲೀಸರು ಕಾರ್ಯಾಚರಣೆ ನಡೆಸಿ ಆರೋಪಿಯನ್ನು ಬಂಧಿಸಿದ್ದಾರೆ. ಆರೋಪಿಯ ಬಂಧನದಿಂದ ನಗರದ ವಿವಿಧ ಐದು ಠಾಣೆಗಳಲ್ಲಿ ದಾಖಲಾಗಿದ್ದ 17 ಲ್ಯಾಪ್‌ಟಾಪ್ ಕಳವು ಪ್ರಕರಣಗಳು ಪತ್ತೆಯಾಗಿವೆ. ಅಲ್ಲದೆ, ಈತನ ವಿರುದ್ಧ 2021ರಲ್ಲಿ ಎಚ್‌ಎಸ್‌ಆರ್ ಲೇಔಟ್ ಠಾಣೆಯಲ್ಲಿ ಡಕಾಯಿತಿ ಪ್ರಕರಣ ದಾಖಲಾಗಿರುವುದು ತನಿಖೆಯಿಂದ ಗೊತ್ತಾಗಿದೆ ಎಂದು ಪೊಲೀಸರು ಹೇಳಿದರು.

ಚೆನ್ನೈನಲ್ಲಿ ಮಾರಾಟ: ಆರೋಪಿಯ ವಿಚಾರಣೆ ವೇಳೆ ಬೆಂಗಳೂರಿನಲ್ಲಿ ಕಳವು ಮಾಡಿದ ಲ್ಯಾಪ್‌ಟಾಪ್‌ಗಳನ್ನು ಚೆನ್ನೈನ ಶಂಕರ್‌ಪುರದಲ್ಲಿರುವ ವ್ಯಕ್ತಿಯೊಬ್ಬನಿಗೆ ಮಾರಾಟ ಮಾಡಿದ್ದ. ಆತನ ವಶದಿಂದ 25 ಲ್ಯಾಪ್‌ಟಾಪ್ ವಶಕ್ಕೆ ಪಡೆಯಲಾಗಿದೆ ಎಂದು ಪೊಲೀಸರು ಹೇಳಿದರು.

AXISCADES

AXISCADES Technologies Limited

CIN : L72200KA1990PLC084435

Regd. Office : Block C, Second Floor, Kirloskar Business Park, Bengaluru - 560024, Karnataka, India
Website: www.axiscades.com | Email: info@axiscades.com | Tel : +91 80 4193 9000 | Fax : +91 80 4193 9099

Statement of Audited Consolidated Financial Results for the Quarter and Year Ended March 31, 2024

(₹ in Lacs)

Particulars	Quarter Ended			Year Ended	
	31 Mar. 2024 Audited (Refer Note 6)	31 Dec. 2023 (Unaudited)	31 Mar. 2023 Audited (Refer Note 6)	31 Mar. 2024 Audited	31 Mar. 2023 Audited
Total income	26,127.07	23,386.60	22,707.00	96,505.78	82,758.05
EBITDA*	3,233.10	2,923.98	4,399.69	13,035.27	13,754.78
Finance Costs	1,251.36	1,210.43	1,413.50	5,636.79	3,589.98
Depriciation and amortisation expense	951.91	849.32	670.82	3,379.12	2,651.83
Net Profit for the period (before tax, Exceptional and/or Extraordinary items)	1,592.25	1,102.85	2,698.42	5,302.41	8,910.55
Share in Net Loss of Associate	(0.30)	-	-	(0.30)	(4.41)
Exceptional Items, Net	-	-	-	-	(6,803.74)
Net Profit / (Loss) for the period before tax (after Exceptional and /or Extraordinary items)	1,591.95	1,102.85	2,698.42	5,302.11	2,102.40
Net Profit / (Loss) for the period after tax (after Exceptional and /or Extraordinary items)	898.88	753.91	1,604.32	3,340.94	(479.82)
Total Comprehensive Income for the period [Comprising Profit/(Loss) for the period (after tax) and Other Comprehensive Income (after tax)]	988.69	718.17	1,720.94	3,477.25	32.21
Equity Share Capital	2,098.94	1,924.38	1,911.50	2,098.94	1,911.50
Reserves (Excluding Revaluation Reserve as shown in the Audited Balance Sheet of the previous year	-	-	-	56,437.17	31,895.57
Earnings Per Share (of Rs. 5/- each) (For continuing and discontinued operations) -					
1. Basic:	2.11	1.93	4.17	8.40	(1.37)
2. Diluted:	1.95	1.75	3.81	7.74	(1.37)

1. In terms of Regulation 33 of the SEBI (Listing Obligations and Disclosure Requirements) Regulations 2015, the aforesaid Statement of audited consolidated financial results for the quarter and year ended March 31, 2024 of AXISCADES Technologies Limited (the "Holding Company" or the "Company") and its subsidiaries (the Holding Company and its subsidiaries together hereinafter referred to as "the Group") and its associate has been reviewed by the Audit Committee and approved by the Board of Directors at their meeting held on May 20, 2024. The aforesaid audited consolidated financial results for the quarter and year ended March 31, 2024 have been audited by the statutory auditors of the Company.
2. The audited consolidated financial results have been prepared in accordance with the recognition and measurement principles laid down in the applicable Indian Accounting Standards ("Ind AS") as prescribed under Section 133 of the Companies Act, 2013, as amended, read with relevant rules issued thereunder and in terms of Regulation 33 of the SEBI (Listing Obligations and Disclosure Requirements) Regulations, 2015, as amended from time to time.
3. During the quarter and year ended March 31, 2024, the Company has issued 3,323,262 equity shares of ₹ 5 each by way of Qualified Institutions Placement ('QIP') at an issue price of ₹ 662 per share (including securities premium of ₹ 657 per share) aggregating ₹ 21,999.99 lakhs. The net proceeds of ₹ 12,001.82 lakhs has been utilised towards repayment / prepayment, in full or in part, of certain outstanding borrowings availed by the Company and for general corporate purposes. The unutilised funds from QIP amounting to ₹ 8,345.58 lakhs has been placed in fixed deposits with banks and ₹ 1.17 lakhs in bank balances with monitoring agency as at March 31, 2024. In accordance with Ind AS 32, the issue costs that are directly attributable to the above transaction have been recognised in equity.
4. The previous period / year figures have been regrouped / rearranged wherever necessary to conform with the current period presentation.
5. Additional information on Standalone Financial Results is as follows:

(₹ in Lacs)

Particulars	Quarter Ended			Year Ended	
	31 Mar. 2024 Audited (Refer Note 6)	31 Dec. 2023 (Unaudited)	31 Mar. 2023 Audited (Refer Note 6)	31 Mar. 2024 Audited	31 Mar. 2023 Audited
Total Revenue (including other income)	10,105.03	9,248.70	7,907.25	35,786.27	28,469.98
EBITDA*	1,642.14	1,494.63	113.49	5,750.02	4,079.85
Profit / (Loss) before tax	436.40	54.26	(1,483.82)	(616.91)	(1,866.02)
Profit / (Loss) after tax	355.96	54.26	(1,458.71)	(396.81)	(1,982.87)
Total Comprehensive Income / (Loss)	492.83	3.86	(1,347.39)	(434.58)	(2,001.54)

* Excluding other income.

6. The figures of the last quarter ended March 31, 2024 and March 31, 2023 are the balancing figures between audited figures in respect of the full financial year up to March 31, 2024 and March 31, 2023 and the published unaudited year-to-date figures up to December 31, 2023 and December 31, 2022, being the date of the end of the third quarter of the respective financial year, which were subjected to limited review.
7. The above audited consolidated financial results of the Group are available on the Company's website (www.axiscades.com) and also on the website of BSE (www.bseindia.com) and NSE (www.nseindia.com), where the shares of the Company are listed.

For AXISCADES Technologies Limited
Sd/-
Arun Krishnamurthi
CEO and Managing Director

Place : Bengaluru
Dated : May 20, 2024

ತೆರಿಗೆ ಪಾವತಿಸದ ಆಸ್ತಿಗಳು 'ಅಟ್ಯಾಚ್'; ದಾಖಲೆಗಳಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಹೆಸರು

ಬಿಬಿಎಂಪಿ 'ಋಣಭಾರ'ಕ್ಕೆ 15 ಸಾವಿರ ಆಸ್ತಿ

• ಆರ್. ಮಂಜುನಾಥ್

ಬೆಂಗಳೂರು: ಸುಮಾರು ₹234 ಕೋಟಿ ಆಸ್ತಿ ತೆರಿಗೆ ಬಾಕಿ ಉಳಿಸಿಕೊಂಡಿರುವ 15 ಸಾವಿರ ಆಸ್ತಿಗಳ ದಾಖಲೆಗಳಲ್ಲಿ ಬಿಬಿಎಂಪಿ ಹೆಸರು ಸೇರಿಕೊಳ್ಳಲಿದ್ದು, ಮಾಲೀಕರು ಪಾಲಿಕೆಯ 'ಋಣಭಾರ'ಕ್ಕೆ ಸೇರಿಕೊಳ್ಳಲಿದ್ದಾರೆ.

ತೆರಿಗೆ ಬಾಕಿ ಉಳಿಸಿಕೊಂಡಿರುವ ಆಸ್ತಿಗಳ ಮಾಹಿತಿಯನ್ನು ಉಪ ನೋಂದಣಾಧಿಕಾರಿ ಕಚೇರಿಗಳಿಗೆ ಬಿಬಿಎಂಪಿ ಕಳುಹಿಸಿದ್ದು, ಆಸ್ತಿಗಳನ್ನು 'ಅಟ್ಯಾಚ್' (ಋಣಭಾರ) ಮಾಡಿಕೊಳ್ಳುವ ಪ್ರಕ್ರಿಯೆ ನಡೆಸುವಂತೆ ಪತ್ರ ಬರೆದು ಮನವಿ ಸಲ್ಲಿಸಿದೆ.

ಉಪ ನೋಂದಣಾಧಿಕಾರಿ ಕಚೇರಿಯಲ್ಲಿನ ಆಸ್ತಿ ದಾಖಲೆಗಳಲ್ಲಿ ಬಿಬಿಎಂಪಿಯ 'ಋಣಭಾರ' ಎಂಬುದು ದಾಖಲಾಗುತ್ತದೆ. ಆಸ್ತಿಯ ಋಣಭಾರ ಪ್ರಮಾಣಪತ್ರವನ್ನು (ಇಸಿ) ತೆಗೆದುಕೊಂಡ ಸಂದರ್ಭದಲ್ಲಿ ಅದರಲ್ಲಿ ಬಿಬಿಎಂಪಿ ಹೆಸರಿರುತ್ತದೆ. ಹೀಗಾಗಿ, ಆಸ್ತಿ ಮಾರಾಟ, ಸಾಲ ಪಡೆಯುವುದೂ ಸೇರಿದಂತೆ ಯಾವುದೇ ರೀತಿಯ ವ್ಯವಹಾರ ಮಾಡಲು ಸಾಧ್ಯವಾಗುವುದಿಲ್ಲ. ಅಷ್ಟೇ ಅಲ್ಲದೆ, ತೆರಿಗೆಯ ಮೊತ್ತ ಮತ್ತಷ್ಟು ಹೆಚ್ಚಾಗುತ್ತಾ ಹೋದರೆ, ಬಿಬಿಎಂಪಿ ಆಸ್ತಿಯನ್ನು ಮುಟ್ಟುಗೋಲು ಹಾಕಿಕೊಳ್ಳಬಹುದಾಗಿದೆ.

ಅತಿ ಹೆಚ್ಚು ಆಸ್ತಿ ತೆರಿಗೆ ಬಾಕಿ ಉಳಿಸಿಕೊಂಡವರಿಗೆ ನೋಟಿಸ್ ಜಾರಿ ಮಾಡಿ ಬೀಗ ಹಾಕುವ ಪ್ರಕ್ರಿಯೆಯನ್ನೂ ಬಿಬಿಎಂಪಿ ನಡೆಸಿತ್ತು. ಇಷ್ಟಾದರೂ ಆಸ್ತಿ ತೆರಿಗೆ ಪಾವತಿಸಿಲ್ಲ. ಹೀಗಾಗಿ, ಅಂತಹ ಮಾಲೀಕರಿಗೆ ಕಾನೂನಿನಂತೆ ಫಾರ್ಮ್ 13 ಜಾರಿ ಮಾಡಿ, ಉಪ ನೋಂದಣಾಧಿಕಾರಿ ಕಚೇರಿಯ ದಾಖಲೆಗಳಲ್ಲಿ ಬಿಬಿಎಂಪಿ ಹೆಸರನ್ನು ಸೇರಿಸುವ 'ಅಟ್ಯಾಚ್' ಪ್ರಕ್ರಿಯೆ ಆರಂಭಿಸಲಾಗಿದೆ' ಎಂದು ಬಿಬಿಎಂಪಿ ಕಂದಾಯ ವಿಭಾಗದ ವಿಶೇಷ ಆಯುಕ್ತ ಮುನೀಶ್ ಮೌದ್ಗಿಲ್ ಅವರು 'ಪ್ರಜಾವಾಣಿ'ಗೆ ತಿಳಿಸಿದರು.

ವಲಯವಾರು ಆಸ್ತಿ ಸಂಗ್ರಹ

ವಲಯ	2023-2024	2024-2025	ಶೇಕಡ	ಈ ವರ್ಷದ ಗುರಿ	ನಿತ್ಯ ಸಂಗ್ರಹದ ಗುರಿ
	ಮೇ 20ರವರೆಗೆ ಸಂಗ್ರಹ (₹ಕೋಟಿಗಳಲ್ಲಿ)			(₹ಕೋಟಿಗಳಲ್ಲಿ)	
ಮಹದೇವಪುರ	482.96	205.81	14.55	1414.16	3.84
ಪೂರ್ವ	348.28	184.53	21.14	872.71	2.18
ದಕ್ಷಿಣ	291.47	165.57	23.12	716.22	1.75
ಪಶ್ಚಿಮ	201.54	107.75	19.13	563.15	1.45
ಬೊಮ್ಮನಹಳ್ಳಿ	176.93	107.43	18.77	572.29	1.48
ಆರ್.ಆರ್. ನಗರ	110.44	64.68	16.41	394.09	1.05
ಯಲಹಂಕ	151.95	64.68	13.20	490.04	1.35
ದಾಸರಹಳ್ಳಿ	49.97	31.97	17.07	187.34	0.49
ಒಟ್ಟು	1813.54	932.42	17.90	5210.00	13.59

ವರ್ಷವಾರು ಆಸ್ತಿ ಸಂಗ್ರಹ

	2024–25	2023–24	2022–23
ಸಂಗ್ರಹ	₹932.42 ಕೋಟಿ– 2024–25ನೇ ಸಾಲಿನ ಸಂಗ್ರಹ (ಮೇ 20ರವರೆಗೆ)	₹3900.92 ಕೋಟಿ– 2023–24ನೇ ಸಾಲಿನ ಒಟ್ಟು ಸಂಗ್ರಹ	₹3334.13 ಕೋಟಿ– 2022–23ನೇ ಸಾಲಿನ ಒಟ್ಟು ಸಂಗ್ರಹ
ಗುರಿ ಕೋಟಿಗಳಲ್ಲಿ	₹5210	₹4516	₹4189.78
ಸಾಧನೆ	18.82% ಸಾಧನೆ (ಮೇ 20ರವರೆಗೆ)	85.53% ಸಾಧನೆ	75.16% ಸಾಧನೆ

ನಿತ್ಯದ ಗುರಿ ₹13.59 ಕೋಟಿ

ಆಸ್ತಿ ತೆರಿಗೆ ಸಂಗ್ರಹ ಕಡಿಮೆಯಾಗುತ್ತಿರುವುದರಿಂದ ಕಂದಾಯ ಸಿಬ್ಬಂದಿಗೆ ನಿತ್ಯದ ಗುರಿ ನಿಗದಿ ಮಾಡಲಾಗಿದೆ. ಎಂಟು ವಲಯಗಳಲ್ಲಿ ನಿತ್ಯವೂ ₹13.59 ಕೋಟಿ ಸಂಗ್ರಹ ಮಾಡಬೇಕೆಂದು ತಾಕೀತು ಮಾಡಲಾಗಿದೆ.

ಕಳೆದ ಏಳು ದಿನಗಳಲ್ಲಿ ಎಂಟೂ ವಲಯಗಳಿಂದ ₹18.82 ಕೋಟಿ ಮಾತ್ರ ಆಸ್ತಿ ತೆರಿಗೆ ಸಂಗ್ರಹವಾಗಿರುವುದರಿಂದ, ನಿತ್ಯದ ಗುರಿಯನ್ನು ಮೇ 21ರಿಂದ ನೀಡಲಾಗಿದೆ. ಈ ವರ್ಷದ ಆಸ್ತಿ ತೆರಿಗೆ ಸಂಗ್ರಹದ ಗುರಿಯಲ್ಲಿ ಇನ್ನೂ ₹4,277 ಕೋಟಿ ಸಂಗ್ರಹವಾಗಬೇಕಿದೆ.

ತೆರಿಗೆ ಸಂಗ್ರಹ ಕುಸಿತ: ಕಳೆದ ಆರ್ಥಿಕ ವರ್ಷದಲ್ಲಿ ದಾಖಲೆಯ ಆಸ್ತಿ ತೆರಿಗೆ ಸಂಗ್ರಹಿಸಿದ್ದ ಬಿಬಿಎಂಪಿ, ಈ ವರ್ಷದ ಆರ್ಥಿಕ ವರ್ಷದಲ್ಲಿ ಎರಡು ತಿಂಗಳು ಮುಗಿಯುತ್ತಿದ್ದರೂ ಶೇ 17.90ರಷ್ಟು ಮಾತ್ರ ಸಾಧನೆ ಮಾಡಿದೆ.

ಲೋಕಸಭೆ ಚುನಾವಣೆಯ ಹಿನ್ನೆಲೆಯಲ್ಲಿ, ಈ ವರ್ಷ ಆಸ್ತಿ ತೆರಿಗೆ ಪಾವತಿಗೆ ಬಡ್ಡಿರಹಿತ ಹಾಗೂ ಶೇ 5ರಷ್ಟು ರಿಯಾಯಿತಿಯನ್ನು ಜುಲೈ ಅಂತ್ಯದವರೆಗೆ ವಿಸ್ತರಿಸಲಾಗಿದೆ. ಮೇ 20ರವರೆಗೆ ₹932 ಕೋಟಿ ಮಾತ್ರ ಪಾವತಿಯಾಗಿದೆ. ಕಳೆದ ಆರ್ಥಿಕ ವರ್ಷದ ಮೇ 20ವರೆಗೆ ₹1,813 ಕೋಟಿ ಸಂಗ್ರಹವಾಗಿತ್ತು.

'ಆಸ್ತಿ ತೆರಿಗೆ ಬಾಕಿ ಉಳಿಸಿಕೊಂಡಿರುವ ಎಲ್ಲ ಮಾಲೀಕರಿಗೆ ಬಿಬಿಎಂಪಿ ಕಂದಾಯ ವಿಭಾಗದಿಂದ ನೋಟಿಸ್ ಜಾರಿಯಾಗಿದೆ. ಎಸ್ಎಂಎಸ್, ಐವಿಆರ್ಎಸ್ ಕರೆಗಳ ಮೂಲಕವೂ ಆಸ್ತಿ ತೆರಿಗೆ ಪಾವತಿಸುವಂತೆ ಆಗಾಗ್ಗೆ ಮನವಿ ಮಾಡಿಕೊಳ್ಳಲಾಗುತ್ತಿದೆ. ಇಷ್ಟಾದ ಮೇಲೂ ಆಸ್ತಿ ತೆರಿಗೆ ಬಾಕಿ ಉಳಿಸಿಕೊಂಡವರ ಮೇಲೆ ಕಠಿಣ ಕ್ರಮ ಕೈಗೊಳ್ಳಲಾಗುತ್ತದೆ' ಎಂದು ಮುನೀಶ್ ಮೌದ್ಗಿಲ್ ತಿಳಿಸಿದರು.

ಮಾವು–ಹಲಸು ಮೇಳಕ್ಕೆ ಚಾಲನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ತೋಟದ ಬೆಳೆಗಾರರ ಸಹಕಾರಿ ಮಾರಾಟ ಮತ್ತು ಸಂಸ್ಕರಣ ಸಂಘದ (ಹಾಪ್‌ಕಾಮ್ಸ್) ವತಿಯಿಂದ 'ಮಾವು ಹಾಗೂ ಹಲಸು ಮಾರಾಟ ಮೇಳ'ಕ್ಕೆ ನಗರದ ಹಡ್ಸನ್ ವೃತ್ತದ ಮಾರಾಟ ಮಳಿಗೆಯಲ್ಲಿ ಮಂಗಳವಾರ ಚಾಲನೆ ನೀಡಲಾಯಿತು.

ಹಾಪ್‌ಕಾಮ್ಸ್‌ನಲ್ಲಿ ಮಾರಾಟವಾಗುವ ಮಾವಿನ ಹಣ್ಣನ್ನು ನೈಸರ್ಗಿಕವಾಗಿ ಮಾಗಿಸಲಾಗುತ್ತದೆ. ರಾಸಾಯನಿಕ ಮುಕ್ತ ಮಾವಿನ ಹಣ್ಣನ್ನು ಗ್ರಾಹಕರಿಗೆ ತಲುಪಿಸುವ ಉದ್ದೇಶದಿಂದ ಮೇಳವನ್ನು ಪ್ರತಿ ವರ್ಷ ಆಯೋಜಿಸಲಾಗುತ್ತಿದೆ. ಹಾಪ್‌ಕಾಮ್ಸ್‌ನ ಎಲ್ಲಾ ಮಾರಾಟ ಮಳಿಗೆಗಳಲ್ಲಿ ಮೇಳ ಆರಂಭವಾಗಿದೆ.

ನಮ್ಮ ಸಂಸ್ಥೆಯು 500 ಟನ್ ಮಾವು 100 ಟನ್ ಹಲಸಿನ ವಹಿವಾಟು ನಡೆಸುವ ಗುರಿ ಹೊಂದಿದೆ. ಮೇಳವು ಇದೇ 21ರಿಂದ 31ರವರೆಗೆ ನಡೆಯಲಿದ್ದು, ಎಲ್ಲಾ ತಳಿಯ ಮಾವಿನ ಮತ್ತು ಹಲಸಿನ ಹಣ್ಣುಗಳನ್ನು ಶೇ 5 ರಿಂದ 10ರಷ್ಟು ರಿಯಾಯಿತಿ ದರದಲ್ಲಿ ಮಾರಾಟ ಮಾಡಲಾಗುತ್ತಿದೆ' ಎಂದು ಹಾಪ್‌ಕಾಮ್ಸ್ ಅಧ್ಯಕ್ಷ ಎನ್. ಗೋಪಾಲಕೃಷ್ಣ ಮಾಹಿತಿ ನೀಡಿದರು.

'ರಾಜ್ಯದಲ್ಲಿ 1.49 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಮಾವು ಬೆಳೆಯಲಾಗುತ್ತದೆ. ಕೋಲಾರ, ರಾಮನಗರ, ತುಮಕೂರು ಜಿಲ್ಲೆಗಳಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಬೆಳೆಯಲಾಗುತ್ತದೆ. ರಾಜ್ಯದಲ್ಲಿ ಪ್ರಮುಖವಾಗಿ ಬಾದಾಮಿ, ಸೆಂಧೂರ, ನೀಲಂ, ತೋತಾಪುರಿ, ಮಲ್ಲಿಕಾ, ರಸಪುರಿ ತಳಿಗಳನ್ನು ಬೆಳೆಯಲಾಗುತ್ತದೆ' ಎಂದು ತೋಟಗಾರಿಕೆ ಇಲಾಖೆ ಹೆಚ್ಚುವರಿ ನಿರ್ದೇಶಕ ಪರಮಶಿವ ಮೂರ್ತಿ ತಿಳಿಸಿದರು.

ಮಾವಿನ ಹಣ್ಣಿನ ಬೆಲೆ

ತಳಿ	ಮೇಳದ ದರ
(ಒಂದು ಕೆ.ಜಿ.ಗೆ ₹ ಗಳಲ್ಲಿ)	
ತೋತಾಪುರಿ	54
ಬಾದಾಮಿ	140
ಬಾದಾಮಿ (ಆಲ್ಫಾನ್ಸೊ 3 ಕೆ.ಜಿ ಬಾಕ್ಸ್‌ಗೆ)	480
ರಸಪೂರಿ	108
ಸೆಂದೂರ	70
ಬೈಗನ್‌ಪಲ್ಲಿ	99
ಮಲ್ಲಿಕಾ	140
ದಶೇರಿ	140
ಕೇಸರ್	140
ಮಲಗೋವ	225
ಕಾಲಪಾಡು	162
ಇಮಾಮ್ ಪಸಂದ್	256
ಹಲಸಿನ ಹಣ್ಣು	₹32 (ಪ್ರತಿ ಕೆ.ಜಿ.ಗೆ)

ಲ್ಯಾಪ್ರೊಸ್ಕೋಪಿ ಶಸ್ತ್ರಚಿಕಿತ್ಸೆ ವಿಧಾನ ಕೈಗೊಂಡ ವೈದ್ಯರು

4.5 ಕೆ.ಜಿ. ಫೈಬ್ರಾಯ್ಡ್ ತೆಗೆದ ವೈದ್ಯರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಲ್ಯಾಪ್ರೊಸ್ಕೋಪಿ ಶಸ್ತ್ರಚಿಕಿತ್ಸೆ ವಿಧಾನದ ಮೂಲಕ ಇಲ್ಲಿನ ಆಸ್ಟರ್ ಆರ್‌ವಿ ಆಸ್ಪತ್ರೆಯ ವೈದ್ಯರು 42 ವರ್ಷದ ಮಹಿಳೆಯ ಗರ್ಭಾಶಯದಲ್ಲಿ ಬೆಳೆದಿದ್ದ 4.5 ಕೆ.ಜಿ. ತೂಕದ ನಾರುಗಡ್ಡೆಯನ್ನು (ಫೈಬ್ರಾಯ್ಡ್) ಹೊರತೆಗೆಯುವಲ್ಲಿ ಯಶಸ್ವಿ ಆಗಿದ್ದಾರೆ.

ಮಹಿಳೆಗೆ ಯಾವುದೇ ರೋಗಲಕ್ಷಣಗಳು ಗೋಚರಿಸಿರಲಿಲ್ಲ. ವೈದ್ಯರು ಸ್ಕ್ಯಾನ್ ಮಾಡಿದಾಗ 12 ಸೆಂ.ಮೀ. ಉದ್ದದ ನಾರುಗಡ್ಡೆ ಗೋಚರಿಸಿತ್ತು. ಉದರ ಭಾಗದಲ್ಲಿ 3 ಸೆಂ.ಮೀ. ಮಾತ್ರ ಕತ್ತರಿಸಿ, ನಾರುಗಡ್ಡೆಯನ್ನು ಹೊರತೆಗೆಯಲಾಗಿದೆ. ಆಸ್ಪತ್ರೆಯ ಲ್ಯಾಪ್ರೊಸ್ಕೋಪಿ ತಜ್ಞ ಡಾ. ಸುನೀಲ್ ಈಶ್ವರ್ ನೇತೃತ್ವದ ವೈದ್ಯರ ತಂಡವು 5 ಗಂಟೆಗಳ ಅವಧಿಯಲ್ಲಿ ಈ ಶಸ್ತ್ರಚಿಕಿತ್ಸೆ ನಡೆಸಿದೆ.

'ಈ ಪ್ರಕರಣದಲ್ಲಿ ಶಸ್ತ್ರಚಿಕಿತ್ಸೆ ಸವಾಲಿನಿಂದ ಕೂಡಿತ್ತು. ಗರ್ಭಾಶಯಕ್ಕೆ ರಕ್ತ ಪೂರೈಸುವ ಹೊಟ್ಟೆ ಭಾಗದಲ್ಲಿನ ಸಾಮಾನ್ಯ ರಕ್ತನಾಳಗಳನ್ನು ಪತ್ತೆಹಚ್ಚಿ, ಜಾಗರೂಕತೆಯಿಂದ ಶಸ್ತ್ರಚಿಕಿತ್ಸೆ ನಡೆಸಲಾಯಿತು. ಸಂತಾನೋತ್ಪತ್ತಿ ವಯಸ್ಸಿನ ಶೇ 20ರಿಂದ ಶೇ 30 ಮಹಿಳೆಯರಲ್ಲಿ ನಾರುಗಡ್ಡೆಗಳು ಕಂಡುಬರುತ್ತವೆ. ಆದರೂ, ಗರ್ಭಾಶಯದಲ್ಲಿ ಅಂತಹ ದೊಡ್ಡ ನಾರುಗಡ್ಡೆ ಕಂಡುಬರುವುದು ಅಪರೂಪ' ಎಂದು ಡಾ. ಸುನೀಲ್ ಈಶ್ವರ್ ಅವರು ಮಾಹಿತಿ ನೀಡಿದರು.

'ನಾರುಗಡ್ಡೆ ತೆಗೆದುಹಾಕಲು ಸಾಮಾನ್ಯವಾಗಿ 8 ಸೆಂ.ಮೀ. ಕತ್ತರಿಸುವ ಅಗತ್ಯವಿರುತ್ತದೆ. ಆದರೆ, ಲ್ಯಾಪ್ರೊಸ್ಕೋಪಿ ವಿಧಾನದಲ್ಲಿ 3 ಸೆಂ.ಮೀ. ಕತ್ತರಿಸಬೇಕಾಗುತ್ತದೆ. ಶಸ್ತ್ರಚಿಕಿತ್ಸೆ ಆದ 48 ಗಂಟೆಗಳಲ್ಲಿ ರೋಗಿ ಚೇತರಿಸಿಕೊಂಡು ಮನೆಗೆ ತೆರಳಿದ್ದಾರೆ' ಎಂದು ಹೇಳಿದ್ದಾರೆ.



ಲ್ಯಾಪ್ರೊಸ್ಕೋಪಿ ಶಸ್ತ್ರಚಿಕಿತ್ಸೆ ಮೂಲಕ ಗರ್ಭಾಶಯದಲ್ಲಿ ಬೆಳೆದಿದ್ದ ನಾರುಗಡ್ಡೆಯನ್ನು ಹೊರತೆಗೆದ ವೈದ್ಯರ ತಂಡ

ಕ್ಯಾನ್ಸರ್: ಸಿಎಆರ್‌ಟಿ ಸೆಲ್ ಥೆರಪಿ ಯಶಸ್ವಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಲಿಂಫೋಮಾದಿಂದ (ರಕ್ತ ಕ್ಯಾನ್ಸರ್) ಬಳಲುತ್ತಿದ್ದ 42 ವರ್ಷದ ವ್ಯಕ್ತಿಗೆ ಇಲ್ಲಿನ ನಾರಾಯಣ ಹೆಲ್ತ್ ಸಿಟಿ ವೈದ್ಯರು ದೇಶೀಯವಾಗಿ ಅಭಿವೃದ್ಧಿಪಡಿಸಲಾದ 'ಸಿಎಆರ್‌ಟಿ ಸೆಲ್ ಥೆರಪಿ' ನೀಡಿದ್ದು, ವ್ಯಕ್ತಿ ಈಗ ಚೇತರಿಸಿಕೊಂಡಿದ್ದಾನೆ.



ಮಂಗಳವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಆಸ್ಪತ್ರೆಯ ರಕ್ತ ವಿಜ್ಞಾನ ವಿಭಾಗದ ಹಿರಿಯ ಸಲಹೆಗಾರ ಡಾ. ಶರತ್ ದಾಮೋದರ್, 'ಹಮ್ಜಾ ಖಾನ್ ಅವರಿಗೆ 2020ರಲ್ಲಿ ರಕ್ತದ ಕ್ಯಾನ್ಸರ್ ಪತ್ತೆಯಾಗಿತ್ತು. ಆ ವೇಳೆ ಅವರಿಗೆ ಹಲವು ಸುತ್ತುಗಳ ಕಿಮೊಥೆರಪಿ ನೀಡಲಾಗಿತ್ತು. 2022ರ ಫೆಬ್ರುವರಿಯಲ್ಲಿ ಅವರಿಗೆ ಕ್ಯಾನ್ಸರ್ ಮರುಕಳಿಸಿತ್ತು. ಈ ನಡುವೆ ಅವರು ಕೊರೊನಾ ಸೋಂಕಿತರಾಗಿ, ಇನ್ನಷ್ಟು ಅಸ್ವಸ್ಥರಾಗಿದ್ದರು. ಆಗ ಅವರಿಗೆ ಕಿಮೊಥೆರಪಿ ಹಾಗೂ ಕಾಂಡಕೋಶ ಕಸಿ ಚೇತರಿಕೆಗೆ ಸಹಕಾರಿಯಾಗಲಿಲ್ಲ. ಇದರಿಂದಾಗಿ 'ಸಿಎಆರ್‌ಟಿ ಸೆಲ್ ಥೆರಪಿ' ನೀಡಲಾಯಿತು.

ನಾಲ್ಕನೆ ಹಂತದ ಕ್ಯಾನ್ಸರ್ ಎದುರಿಸುತ್ತಿದ್ದ ಅವರು ಚಿಕಿತ್ಸೆಯಿಂದಾಗಿ ಚೇತರಿಸಿಕೊಂಡಿದ್ದಾರೆ. ಲಿಂಫೋಮಾದಂತಹ ಕ್ಯಾನ್ಸರ್‌ಗಳಿಗೆ ಈ ಥೆರಪಿ ಪರಿಣಾಮಕಾರಿಯಾಗಿದೆ' ಎಂದು ಹೇಳಿದರು.

ನೀರಿನ ತೊಟ್ಟಿಗೆ ಬಿದ್ದು ಮಗು ಸಾವು

ಪ್ರಜಾವಾಣಿ ವಾರ್ತೆ

ಕೆ.ಆರ್.ಪುರ: ಸಮೀಪದ ದೇವಸಂದ್ರದಲ್ಲಿ ಆಟವಾಡುತ್ತಿದ್ದ ನಾಲ್ಕು ವರ್ಷದ ಮಗುವೊಂದು ಆಯತಪ್ಪಿ ನೀರಿನ ತೊಟ್ಟಿಗೆ ಬಿದ್ದು ಮೃತಪಟ್ಟಿದೆ.



ಸುಬೀನಾ ಖಾಡ್ಕ

ಸುಬೀನಾ ಖಾಡ್ಕ(4) ಮೃತಪಟ್ಟ ಮಗು.

'ನೇಪಾಳದಿಂದ ನಗರಕ್ಕೆ 4 ವರ್ಷಗಳ ಹಿಂದೆ ಯೋಗಿಮಾನ್ ಬಹದ್ದೂರ್ ಖಾಡ್ಕಾ ದಂಪತಿ ಬಂದಿದ್ದರು. ದಂಪತಿ ದೇವಸಂದ್ರದಲ್ಲಿ ಬಾಡಿಗೆ ಮನೆ ಪಡೆದು ನೆಲೆಸಿದ್ದರು. ಸೋಮವಾರ ಯೋಗಿಮಾನ್ ಬಹದ್ದೂರ್ ಕೂಲಿ ಕೆಲಸಕ್ಕೆ ತೆರಳಿದ್ದರು. ತಾಯಿ ಮನೆಯಲ್ಲೇ ಇದ್ದರು. ಸಂಜೆ 5.45ರ ಸುಮಾರಿಗೆ ತಾಯಿ ಮಗುವನ್ನು ಮನೆಯಲ್ಲೇ ಬಿಟ್ಟು ಅಂಗಡಿಗೆ ತೆರಳಿದ್ದರು. ಆಗ ಮಗು ಮನೆಯ ಹಿಂಭಾಗದಲ್ಲಿ ತೆರೆದಿದ್ದ ನೀರಿನ ಸಂಪ್‌ಗೆ ಬಿದ್ದು ಮೃತಪಟ್ಟಿದೆ' ಎಂದು ಪೊಲೀಸರು ಹೇಳಿದರು.

'ಹತ್ತು ನಿಮಿಷಗಳ ಬಳಿಕ ತಾಯಿ ಮನೆಗೆ ಬಂದಾಗ ಮಗು ಕಾಣಿಸಿರಲಿಲ್ಲ. ಹುಡುಕಾಟ ನಡೆಸಿದ್ದಾರೆ. ನೀರಿನ ಸಂಪು ಪರಿಶೀಲಿಸಿದಾಗ ಮಗುವಿನ ಮೃತದೇಹ ತೇಲುತ್ತಿತ್ತು' ಎಂದು ಪೊಲೀಸರು ಹೇಳಿದರು. ನೀರಿನ ತೊಟ್ಟಿಯನ್ನು ಸರಿಯಾಗಿ ಮುಚ್ಚದಿರುವುದೆ ಘಟನೆಗೆ ಕಾರಣ ಎನ್ನಲಾಗಿದೆ ಎಂದು ಪೊಲೀಸರು ಹೇಳಿದರು. ಕೆ.ಆರ್.ಪುರ ಠಾಣೆಯಲ್ಲಿ ಪೊಲೀಸರು ದಾಖಲಾಗಿದೆ.

ಮಳೆ ಬಂತು... ಪೀಕಲಾಟ ಶುರುವಾಯಿತು





1. ನೀರಿನಲ್ಲಿ ದ್ವಿಚಕ್ರ ವಾಹನ ಸವಾರನೊಬ್ಬ ಸಂಚರಿಸಿದ ದೃಶ್ಯ ಮಂಗಳವಾರ ಕಂಡುಬಂದಿತು.

2. ಬೆಂಗಳೂರಿನಲ್ಲಿ ಒಂದು ವಾರದಿಂದ ಸುರಿಯುತ್ತಿರುವ ಮಳೆಯಿಂದ ರಸ್ತೆಗಳಲ್ಲಿ ಗುಂಡಿಗಳ ದರ್ಶನವಾಗುತ್ತಿದ್ದು ಮಳೆ ನೀರು ಸಂಗ್ರಹಗೊಳ್ಳುತ್ತಿದೆ. ಈ ರೀತಿ ಪುಷ್ಪಗಿರಿನಗರ ಮುಖ್ಯರಸ್ತೆಯಲ್ಲಿ ಸಂಗ್ರಹಗೊಂಡಿರುವ ನೀರಿನಲ್ಲಿ ವಾಹನ ಸವಾರು ಮತ್ತು ಶಾಲಾ ವಿದ್ಯಾರ್ಥಿಗಳು ಹರಸಾಹಸಪಟ್ಟು ಸಂಚರಿಸುತ್ತಿದ್ದಾರೆ. – ಪ್ರಜಾವಾಣಿ ಚಿತ್ರ/ರಂಜು ಪಿ

ನಿಧನ ವಾರ್ತೆ

ಎನ್.ಎಸ್.ರಾಮಮೂರ್ತಿ



ರಾಮಮೂರ್ತಿ

ನೆಲಮಂಗಲ: ನಿವೃತ್ತ ಆರೋಗ್ಯ ಅಧಿಕಾರಿ, ತಾಲ್ಲೂಕು ಬ್ರಾಹ್ಮಣ ಸಭಾದ ಮಾಜಿ ಉಪಾಧ್ಯಕ್ಷ ಹಾಗೂ ಕಾರ್ಯದರ್ಶಿ ಎನ್.ಎಸ್.ರಾಮಮೂರ್ತಿ(74) ಸೋಮವಾರ ನಿಧನರಾಗಿದ್ದಾರೆ.

ಮಂಗಳವಾರ ಮಧ್ಯಾಹ್ನ ಉರುವಲು ಚಿತಾಗಾರದಲ್ಲಿ ಅಂತ್ಯಸಂಸ್ಕಾರ ನಡೆಯಿತು.

ಆರ್.ಜಗದೀಶ್ ಪ್ರಸಾದ್




ಜಗದೀಶ್ ಪ್ರಸಾದ್

ಬೆಂಗಳೂರು: ನಿವೃತ್ತ ಕೆಎಎಸ್ ಅಧಿಕಾರಿ ಆರ್. ಜಗದೀಶ್ ಪ್ರಸಾದ್ (66) ಅವರು ನಗರದ ಖಾಸಗಿ ಆಸ್ಪತ್ರೆಯಲ್ಲಿ ಮಂಗಳವಾರ ಸಂಜೆ ನಿಧನರಾದರು.

ವಾಣಿಜ್ಯ ತೆರಿಗೆ ಇಲಾಖೆಯಲ್ಲಿ ಹೆಚ್ಚುವರಿ ಆಯುಕ್ತರಾಗಿ ನಿವೃತ್ತರಾಗಿದ್ದ ಅವರು ಕರ್ನಾಟಕ ರಾಜ್ಯ ಈಡಿಗ ನೌಕರರ ಸಂಘದ ಸಂಸ್ಥಾಪಕ ಅಧ್ಯಕ್ಷರಾಗಿಯೂ ಸೇವೆ ಸಲ್ಲಿಸಿದ್ದರು. ಕಳೆದ ಕೆಲ ದಿನಗಳಿಂದ ಅನಾರೋಗ್ಯದಿಂದ ಬಳಲುತ್ತಿದ್ದರು.

ಮೃತರಿಗೆ ಪತ್ನಿ ಹಾಗೂ ಮೂವರು ಪುತ್ರಿಯರು ಇದ್ದಾರೆ. ದೇವಯ್ಯ ಪಾರ್ಕ್ ಬಳಿ ಇರುವ ಅವರ ಮನೆಯಲ್ಲಿ ಪಾರ್ಥಿವ ಶರೀರದ ಅಂತಿಮ ದರ್ಶನಕ್ಕೆ ಅವಕಾಶ ಕಲ್ಪಿಸಲಾಗಿದೆ. ಮೃತರ ಅಂತ್ಯಕ್ರಿಯೆ ಬುಧವಾರ ಮಧ್ಯಾಹ್ನ ನೆರವೇರಲಿದೆ ಎಂದು ಕುಟುಂಬ ಮೂಲಗಳು ತಿಳಿಸಿವೆ.
ಸಂಪರ್ಕ ಸಂಖ್ಯೆ: 98459 17169

ನಂಜುಂಡಯ್ಯ



ನಂಜುಂಡಯ್ಯ

ಬೆಂಗಳೂರು: ನಗರದ ಎಂ.ಎಸ್. ರಾಮಯ್ಯ ಎನ್‌ಕ್ಲೇವ್ ನಿವಾಸಿ ವಿ. ನಂಜುಂಡಯ್ಯ (78) ಮಂಗಳವಾರ ನಿಧನರಾದರು.

ಇವರು ಕೆಜಿಎಫ್‌ನಲ್ಲಿರುವ ಬಿಇಎಂಎಲ್‌ನ ನಿವೃತ್ತ ನೌಕರರು. ಮೃತರಿಗೆ ಪತ್ನಿ ಮತ್ತು ಮಕ್ಕಳಾದ ಶ್ರೀನಿವಾಸ್ ಮತ್ತು ನರಸಿಂಹಮೂರ್ತಿ ಇದ್ದಾರೆ. ಅಂತ್ಯಕ್ರಿಯೆ ಮಂಗಳವಾರ ಮಧ್ಯಾಹ್ನ 4 ಗಂಟೆಗೆ ಹೆಸರಘಟ್ಟ ರಸ್ತೆಯಲ್ಲಿರುವ ಬಿಬಿಎಂಪಿ ವಿದ್ಯುತ್ ಚಿತಾಗಾರದಲ್ಲಿ ನಡೆಯಿತು ಎಂದು ಕುಟುಂಬದ ಸದಸ್ಯರು ತಿಳಿಸಿದ್ದಾರೆ.

ಹಿರಿಯಣ್ಣ ಸ್ವಾಮಿ



ಹಿರಿಯಣ್ಣ ಸ್ವಾಮಿ

ಬೆಂಗಳೂರು: ವಿಪ್ರ ಸಮುದಾಯದ ಮುಖಂಡ ಹಾಗೂ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ಉಪಾಧ್ಯಕ್ಷರಾದ ಹೂ.ನಾ. ಹಿರಿಯಣ್ಣ ಸ್ವಾಮಿ(81) ನಿಧನರಾಗಿದ್ದಾರೆ.

ಅವರಿಗೆ ಪತ್ನಿ ಹಾಗೂ ಇಬ್ಬರು ಮಕ್ಕಳು ಇದ್ದಾರೆ. ಸೋಮವಾರ ಅವರು ನಿಧನರಾಗಿದ್ದು, ಬನಶಂಕರಿ ಚಿತಾಗಾರದಲ್ಲಿ ಮಂಗಳವಾರ ಅಂತ್ಯಸಂಸ್ಕಾರ ನಡೆಸಲಾಯಿತು.

ಅವರು ಐದು ದಶಕಗಳಿಂದ ವಿವಿಧ ಸಂಘ ಸಂಸ್ಥೆಗಳ ಪದಾಧಿಕಾರಿಯಾಗಿ, ಬ್ರಾಹ್ಮಣ ಸಮಾಜದ ಸಂಘಟನೆ ಹಾಗೂ ಶ್ರೇಯೋಭಿವೃದ್ಧಿಗೆ ಶ್ರಮಿಸಿದ್ದರು.

ಹರವೆ ಪಿ.ನಾಗರಾಜ್



ಹರವೆ ಪಿ.ನಾಗರಾಜ್

ಬೆಂಗಳೂರು: ನಗರದ ಮಾಗಡಿ ರಸ್ತೆಯ ಬೃಂದಾವನ ಬಡಾವಣೆಯ ನಿವಾಸಿ ಹರವೆ ಪಿ.ನಾಗರಾಜ್(65) ಅವರು ಹೃದಯಾಘಾತದಿಂದ ಮಂಗಳವಾರ ನಿಧನರಾದರು.

ಮೃತರಿಗೆ ಪತ್ನಿ, ಒಬ್ಬ ಪುತ್ರ ಇದ್ದಾರೆ. ಮೃತರ ಅಂತ್ಯಕ್ರಿಯೆ ಮಾಗಡಿ ರಸ್ತೆಯ (ನೈಸ್ ರಸ್ತೆ ಸಮೀಪ) ಕನ್ನಹಳ್ಳಿ ರುದ್ರಭೂಮಿಯಲ್ಲಿ ಬುಧವಾರ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ನಗರದಲ್ಲಿ ಇಂದು

ಬೆಳಗೆರೆ ಕೃಷ್ಣಶಾಸ್ತ್ರೀ ಅವರ 109ನೇ ಜನ್ಮದಿನಾಚರಣೆ, 'ಮರೆಯಲಾದೀತೆ?' ಪುಸ್ತಕ ಬಿಡುಗಡೆ: ಲಲಿತಾ ಬೆಳಗೆರೆ, ಸಂಸ್ಮರಣಾ ನುಡಿ: ವಿದ್ಯಾ ಭರತನಹಳ್ಳಿ, ಅಧ್ಯಕ್ಷತೆ: ಎಸ್. ರಾಮಕೃಷ್ಣ, ಉಪಸ್ಥಿತಿ: ಕರ್ಣ ಬೆಳಗೆರೆ, ಭಾವನಾ ಬೆಳಗೆರೆ, ಆಯೋಜನೆ: ಶಾರದಾ ಮಂದಿರ, ಅಭಿನವ, ಸ್ಥಳ: 'ಹಾಯ್ ಬೆಂಗಳೂರು' ಕಚೇರಿ, ಕದಿರೇನಹಳ್ಳಿ, ಪೆಟ್ರೋಲ್ ಬಂಕ್ ಬಳಿ, ಪದ್ಮನಾಭನಗರ, ಬೆಳಿಗ್ಗೆ 11.30

ವನಿತಾ–ಮಹಿಳಾ ಸದ್ಗುಣಗಳ ವಿಚಾರಸಂಕಿರಣ: ಅತಿಥಿಗಳು: ಮಾಳವಿಕಾ ಅವಿನಾಶ್, ಮಂಗಳಾ ನರಸಿಂಹನ್, ಉಷಾ ಆರ್.ಕೆ., ಸ್ಥಳ: ಸೇವಾ ಸದನ, ಮಲ್ಲೇಶ್ವರ ಸಂಜೆ 5.15

ಕಂಚನಾ ರತ್ನಾ ಅವರ 'ಮರ್‌ಮರ್ಸ್ ಆ್ಯಂಡ್ ಮರ್‌ಮರೇಷನ್ಸ್' ಕಲಾಕೃತಿಗಳ ಏಕವ್ಯಕ್ತಿ ಪ್ರದರ್ಶನ: ಉದ್ಘಾಟನೆ: ಚಿರಂಜೀವಿ ಸಿಂಘ್, ಸ್ಥಳ: ಕರ್ನಾಟಕ ಚಿತ್ರಕಲಾ ಪರಿಷತ್ತು, ಕುಮಾರಕೃಪಾ ರಸ್ತೆ, ಸಂಜೆ 5.30

ಅನ್ನಪೂರ್ಣಾಂಬ ಸಮೇತ ನಗರೇಶ್ವರಸ್ವಾಮಿ ಬ್ರಹ್ಮರಥೋತ್ಸವ: ಬೆಳಿಗ್ಗೆ 7ಕ್ಕೆ ಮೂಲ ದೇವರುಗಳಿಗೆ ಪಂಚಾಮೃತ ಅಭಿಷೇಕ, 8ಕ್ಕೆ ಭೂಪ್ರಾರ್ಥನಾ ಪುರಸ್ಸರ ಕಲಶಸ್ಥಾಪನೆ, ಗಣಪತಿ, ನವಗ್ರಹ, ಮೃತ್ಯುಂಜಯ, ಸುಬ್ರಹ್ಮಣ್ಯ, ವೀರಭದ್ರ, ಪರಿವಾರ ದೇವತಾ ಸಹಿತ ಮಹಾರುದ್ರ ಹೋಮ, ಪೂರ್ಣಾಹುತಿ, ಮಂಗಳಾರತಿ, ಮಧ್ಯಾಹ್ನ 3ಕ್ಕೆ ಗಿರಿಜಾ ಕಲ್ಯಾಣೋತ್ಸವ, 6ಕ್ಕೆ ಅಡ್ಡಪಲ್ಲಕ್ಕಿ ಉತ್ಸವ, 6.30ಕ್ಕೆ ಪುಷ್ಪಯಾಗ, 7.30ಕ್ಕೆ ದಾಸೋಹ, ಆಯೋಜನೆ: ಬಿ.ಎ.ಎಸ್.ವಿ. ನಗರ್ತ ಸಮಿತಿ, ಸ್ಥಳ: ನಗರೇಶ್ವರಸ್ವಾಮಿ ದೇವಸ್ಥಾನದ ಆವರಣ, ನಗರ್ತಪೇಟೆ

ಪ್ರಸನ್ನ ವೆಂಕಟರಮಣಸ್ವಾಮಿ ರಥೋತ್ಸವ: ಶೇಷವಾಹನೋತ್ಸವ, ಆಯೋಜನೆ: ಹಿಂದೂ ಧಾರ್ಮಿಕ ದತ್ತಿ ಇಲಾಖೆ, ಸ್ಥಳ: ಪ್ರಸನ್ನ ವೆಂಕಟರಮಣಸ್ವಾಮಿ ದೇವಸ್ಥಾನ, ಕೋಟೆ; ಸಂಜೆ 7ರಿಂದ

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ–ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ.
nagaradalli_indu@prajavani.co.in

ಇನ್‌ಸ್ಪೆಕ್ಟರ್‌ಗೆ ಕೊಲೆ ಬೆದರಿಕೆ: ತನಿಖೆ ಸಿಸಿಬಿಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಇನ್‌ಸ್ಪೆಕ್ಟರ್ ಹಾಗೂ ಎಸಿಪಿಗೆ ಕಾನ್‌ಸ್ಟೆಬಲ್ ಒಬ್ಬರು ಕೊಲೆ ಬೆದರಿಕೆ ಹಾಕಿದ್ದ ಪ್ರಕರಣದ ತನಿಖೆಯನ್ನು ನಗರ ಪೊಲೀಸರು ಕಮಿಷನರ್ ಬಿ.ದಯಾನಂದ ಅವರು ಸಿಸಿಬಿಗೆ ವರ್ಗಾವಣೆ ಮಾಡಿ ಆದೇಶಿಸಿದ್ದಾರೆ.

ಕರ್ತವ್ಯಲೋಪ ಎಸಗಿದ್ದ ಆರೋಪದಲ್ಲಿ ಅಮಾನತಿಗೆ ಶಿಫಾರಸು ಮಾಡಿದ ಇನ್‌ಸ್ಪೆಕ್ಟರ್ ಹಾಗೂ ಎಸಿಪಿಗೆ ಕಾನ್‌ಸ್ಟೆಬಲ್ ಒಬ್ಬರು ಚಾಕುವಿನಿಂದ ಇರಿದು ಕೊಲೆ ಮಾಡುವುದಾಗಿ ಬೆದರಿಕೆ ಹಾಕಿದ್ದರು.

ಬಾಣಸವಾಡಿ ಠಾಣೆ ವ್ಯಾಪ್ತಿಯಲ್ಲಿ ರೌಡಿಶೀಟರ್ ಕಾರ್ತಿಕೇಯನ್ ಎಂಬಾತನ ಹತ್ಯೆ ನಡೆದಿತ್ತು. ಹತ್ಯೆಗೆ ಹಳೇ ದ್ವೇಷವೇ ಕಾರಣ ಎಂಬುದು ತನಿಖೆಯಿಂದ ಗೊತ್ತಾಗಿತ್ತು. ಹತ್ಯೆಯಾದ ವ್ಯಕ್ತಿಗೂ, ಆರೋಪಿಗಳಿಗೂ ಹಳೇ ದ್ವೇಷವಿದೆ ಎಂಬ ಮಾಹಿತಿ ಠಾಣೆಯ ಕ್ರೈಂ ಸಿಬ್ಬಂದಿ ಮೊದಲೇ ಗೊತ್ತಿದ್ದರೂ, ಹಿರಿಯ ಅಧಿಕಾರಿಗಳ ಗಮನಕ್ಕೆ ತಂದಿರಲಿಲ್ಲ.

ಈ ಸಂಬಂಧ ಇನ್‌ಸ್ಪೆಕ್ಟರ್ ಹಾಗೂ ಎಸಿಪಿ ಶಿಫಾರಸಿನ ಮೇರೆಗೆ ಠಾಣೆಯ ನಾಲ್ವರು ಕಾನ್‌ಸ್ಟೆಬಲ್‌ಗಳನ್ನು ಪೂರ್ವ ವಿಭಾಗದ ಡಿಸಿಪಿ ಅಮಾನತು ಪಡಿಸಿದ್ದರು. ಈ ವಿಚಾರ ತಿಳಿದ ಒಬ್ಬ ಕಾನ್‌ಸ್ಟೆಬಲ್, ಪಿಐ ಮತ್ತು ಎಸಿಪಿಗೆ ಕರೆ ಮಾಡಿ ಚಾಕುವಿನಿಂದ ಇರಿದು ಕೊಲೆ ಮಾಡುವುದಾಗಿ ಬೆದರಿಕೆ ಹಾಕಿದ್ದರು. ಅದರಿಂದ ವಿಚಲಿತಗೊಂಡ ಪಿಐ ಮತ್ತು ಎಸಿಪಿ ಶಿಫಾರಸು ಪತ್ರ ವಾಪಸ್ ಪಡೆದುಕೊಂಡಿದ್ದರು. ಅಲ್ಲದೇ, ಕಾನ್‌ಸ್ಟೆಬಲ್‌ನನ್ನು 1 ತಿಂಗಳ ಕಡ್ಡಾಯ ರಜೆ ಮೇಲೆ ಕಳುಹಿಸಲಾಗಿತ್ತು. ಇದೇ ಪ್ರಕರಣದ ತನಿಖೆಯನ್ನು ಸಿಸಿಬಿ ವರ್ಗಾವಣೆ ಮಾಡಲಾಗಿದೆ.

'ಈಸ್ಟರ್ನ್ ಧನಿಯಾ ಪುಡಿ ಬಳಕೆ ಅಸುರಕ್ಷಿತ'

ಪ್ರಜಾವಾಣಿ ವಾರ್ತೆ

ಮಡಿಕೇರಿ: 'ಈಸ್ಟರ್ನ್ ಧನಿಯಾ ಪುಡಿಯ 250 ಗ್ರಾಂ ತೂಕದ 'ಕೆ24D08A' ಸಂಖ್ಯೆಯ ಧನಿಯಾ ಪುಡಿಯು ಅಸುರಕ್ಷಿತವಾಗಿದ್ದು, ಅದನ್ನು ಸಾರ್ವಜನಿಕರು ಬಳಸಬಾರದು' ಎಂದು ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಪ್ರಾಧಿಕಾರದ ಅಂಕಿತ ಅಧಿಕಾರಿ ಡಾ.ಇ.ಅನಿಲ್ ಧಾವನ್ ಎಚ್ಚರಿಕೆ ನೀಡಿದ್ದಾರೆ.

'ಈ ಪ್ಯಾಕೆಟ್‌ನ ಮೇಲೆ 2024ರ ಏಪ್ರಿಲ್ 8ರಂದು ತಯಾರಾಗಿರುವ ಹಾಗೂ 2025ರ ಏಪ್ರಿಲ್ 7ರಂದು ಅದರ ಅವಧಿ ಮುಗಿಯುವ ದಿನಾಂಕ ಇದೆ. ಈ ಸಂಖ್ಯೆಯ ಪ್ಯಾಕೆಟ್‌ನಲ್ಲಿರುವ ಪುಡಿಗಳನ್ನು ಇಲಾಖೆಯ ಸರ್ವೇಕ್ಷಣಾ ಆಂದೋಲನದ ನಿಮಿತ್ತ ವಿರಾಜಪೇಟೆ ವ್ಯಾಪ್ತಿಯಲ್ಲಿ ಸಂಗ್ರಹಿಸಿ ಎನ್‌ಎಬಿಎಲ್ ಪ್ರಯೋಗಾಲಯಕ್ಕೆ ಕಳುಹಿಸಿಕೊಡಲಾಗಿತ್ತು. ಅಲ್ಲಿಂದ ಅದು ಅಸುರಕ್ಷಿತ ಎಂಬ ವರದಿ ಬಂದಿದೆ ಎಂದು ತಿಳಿಸಿದ್ದಾರೆ.

ಸಾರ್ವಜನಿಕರು ಈ ಸಂಖ್ಯೆ ಇರುವ ಪ್ಯಾಕೆಟ್‌ಗಳನ್ನು ಖರೀದಿಸಬಾರದು. ಖರೀದಿಸಿದ್ದರೆ ಅಂಗಡಿಗಳಿಗೆ ವಾಪಸ್ ನೀಡಬೇಕು' ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕವಿತಾ ವಿರುದ್ಧ ದೋಷಾರೋಪ ಪಟ್ಟಿ ಆದೇಶ ಕಾಯ್ದಿರಿಸಿದ ಕೋರ್ಟ್

ನವದೆಹಲಿ (ಪಿಟಿಐ): ಅಬಕಾರಿ ನೀತಿಗೆ ಸಂಬಂಧಿಸಿದ ಹಣದ ಅಕ್ರಮ ವರ್ಗಾವಣೆ ಪ್ರಕರಣದಲ್ಲಿ ಬಿಆರ್‌ಎಸ್ ಪಕ್ಷದ ನಾಯಕಿ ಕೆ. ಕವಿತಾ ಅವರ ವಿರುದ್ಧ ಜಾರಿ ನಿರ್ದೇಶನಾಲಯ (ಇ.ಡಿ) ಸಲ್ಲಿಸಿರುವ ಪೂರಕ ದೋಷಾರೋಪಪಟ್ಟಿಯನ್ನು ಗುರುತಿಸಬೇಕೇ ಎಂಬ ಬಗ್ಗೆ ಇ.ಡಿ ಮತ್ತು ಸಿಬಿಐ ಪ್ರಕರಣಗಳ ವಿಶೇಷ ನ್ಯಾಯಾಲಯವು ಮೇ 31ರಂದು ಆದೇಶ ಹೊರಡಿಸುವ ಸಾಧ್ಯತೆ ಇದೆ.



FARNAZ

ಪ್ರಜಾವಾಣಿ ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

JOB OPPORTUNITIES

Teachers/ Professors

ST. JOSEPH Skill Academy, Bangalore, Immediately Requires, Instructors for Refrigeration & AC, Computers, Electricals & Career Counselor. Email:- directorsjcc@gmail.com. Contact:- 9740523475.

Jyoti Nivas College Autonomous
Koramangala Bengaluru -560 095
Ph: 25530137 Fax: 25533886
www.jyotinivas.org

REQUIRES

Assistant Professors in Computer Science, Zoology, Psychology, Commence and Management
Qualification: PG first Class with NET / KSET. Preferred Ph.D from a reputed University.
Eligible Candidates walk in for interview with your Curriculum Vitae/ Original Documents on the following date / time

Interview	Date	Time
Computer Science	28.05.2024	10.00 am to 12.30 noon
Psychology	28.05.2024	2.00 pm to 4.30pm
Commerce and Management	29.05.2024	10.00 am to 12.30 noon
Zoology	29.05.2024	2.00 pm to 4.30 pm

Non-Teaching Staff:
1. Accounts Assistant: MBA / M.Com Finance, Computer knowledge with Tally and Taxation.
2. Data Operator : BCA / BSc Computer Science

Apply to the Principal:
Jyoti Nivas College Autonomous
info@jyotinivas.org

JANATHA EDUCATION SOCIETY (R) Est. 1972
Dr.Rajkumar Road, 2nd Stage, Rajajinagar, Bengaluru-55
Phone: 080 - 23371952 /6366733434

Applications are Invited

VIVEKANANDA INSTITUTE OF TECHNOLOGY
- **PROFESSOR:** Dept. of CS /E&C/IS/AIML
- **ASSOCIATE PROFESSOR:** Dept. of CS/E&C/IS/ AIML
- **ASSISTANT PROFESSOR:** CS /E&C/I&S/ AIML
  Qualification – As per AICTE norms.
- **Physical Education Director:** M.PEd, 2-5 years' exp - 2 posts
- **Lady Warden:** Any degree with 2-5 years' exp, proficient in Kannada, English and Hindi – 2 Posts

VIVEKANANDA INSTITUTE OF MANAGEMENT
- **Assistant Professor:** BCA Dept. - MCA /M.Sc/ BE in CS with 0-5 years' exp - 2 posts
- **Assistant Professor - MBA Dept.** - Masters in Finance & Accounts with 0-5 years' exp -2 posts
- **Lab Assistant:** BCA with 1-3 years' exp -2 posts

VIVEKANANDA PU COLLEGE FOR WOMEN
LECTURER:
- **Economics** MA, B.Ed in Economics with 3 yrs. exp
- **Commerce** M.Com B.Ed with 3 yrs. exp
- **Kannada** MA, B.Ed in Kannada with 3 yrs. exp
- **Mathematics** M.Sc. B.Ed. Mathematics with 3 year exp

VIVEKANANDA PU COLLEGE –RAJAJINAGARA
LECTURER: FULL TIME
- **Computer Science:** MCA /M.Sc/ BE in CS with min 1-3 yrs exp
- **Biology:** M.Sc, B.Ed in Biology with 3-4 yrs exp
- **English:** MA. B.Ed in English with min 3-4 yrs exp.

LECTURER: PART TIME
- **Commerce:** M.Com. B. Ed with min 3-4 yrs exp
- **English:** MA. B.Ed in English with min 3-4 yrs exp.
- **Economics:** MA. B.Ed in Economics with min 3-4 yrs exp

VIVEKANANDA PUBLIC SCHOOL, KUMBALAGODU
- **Primary Hindi Teacher:** Any Degree with Hindi, D.Ed
- **Music & Dance Teacher:** Senior Bharatanatyam

Eligible candidates may send their BIODATA along with 2 passport size photos through registered post or in person to the Hon. Secretary to reach him within 10 days or email to jobs@jes-edu.in.

Sri.H.C.Balakrishna, President — Sri H.G.Balagopal, Hon..Secretary

WAYANAMAC EDUCATION TRUST®
DON BOSCO INSTITUTE OF TECHNOLOGY
(Approved by AICTE, Affiliated to VTU, Belagavi, NBA & NAAC Accredited)
KUMBALAGODU, MYSORE ROAD, BANGALORE – 560074.
Ph. : 080 - 28437028 / 29 / 30. Website: www.dbit.co.in

We are looking for talented, competent, qualified faculty & professionals for the following positions:
Professors, Associate Professors & Assistant Professors
In following disciplines:
- Artificial Intelligence & Machine Learning
- Artificial Intelligence & Data Science
- Computer Science & Engineering
- Electronics & Communication Engineering
- Information Science & Engineering
- Electrical & Electronics Engineering
- MBA
- Mathematics, Physics, Chemistry

NON - TEACHING STAFF
- Senior Accounts Officer
- Accounts Assistant
- Office Superintendent
- Asst. Librarian
- Placement Executive
- Stenographer
- Drivers (Car & Bus)
- Lab Instructors - CS/IS/ECE/EE
- Office Assistant / Exam Section
- Superintendent Exam Section
- System Administrator
- Computer Programmer
- Warden - Boys / Girls Hostel

- The institution provides professional work environment and ample opportunities for career development
- Eligible candidates can E-mail their profile with all relevant details to recruitment@dbit.co.in.
- Salary commensurate with Qualification & Experience
- Candidates with 10-15 years of Industry/Research experience shall be considered for the position of Adjunct faculty.
- Eligible candidates may forward their profile copies of testimonials and passport size photo to the Principal by post/courier only.

Principal

Marketing & Sales

Farmgate Agro Milch Pvt. Ltd.
Dist. Chittoor, AP
Farmgate Agro Milch Pvt Ltd. is a Delhi based 50 yrs old Company. One of the largest pvt. sector in South India with Milk & Milk Products Factory in AP near Karnataka border For the expansion of its Sales in North, East, West & South Zones in Bangalore City. Eligible candidates from the respective zones are invited for the following positions.
Area Sales Managers-4: Any graduate with Min. 5 yrs experiance in milk sales.
Sales Executives- 24 Nos. Any Graduate with Min.3 yrs of experiance in Milk Sales.
Candidates are requested to walk in at the following address on 25-05-24.
Hotel Dr.Rajkumar International, #109, 6th Cross Road, Gandhinagar, Bengalore- 560 009
Contact No: 95732 29977 HR Manager

SIDDAGANGA SREE SHIVAKUMARA SWAMIJI VIDYAPEETHA TRUST #1,1st Stage,2nd Phase, chandra layout, Bengaluru-560072. Ph: 080-23397600, invites application for Siddaganga Public School, chandra layout 1)English Teacher- BA/MA, B.Ed. 2)Hindi Teacher- BA/MA.B.Ed. (3)Drawing Teacher- BFA/MFA 4)Office Assistant-Any degree with Tally ERP-9 & computer knowledge 5)Maintenance Asst.- ITI Candidates can also apply. Diploma in Automobile or Mechanical Engineering preferred. SSK PU/Degree College: Lecturer in Computer Science- MCA or M.Sc. B.Ed. (Computer Science) Interview date will be intimated. Interested candidates may send their resume, service & salary certificates & Testimonials to the Mail: sskvptrust.2001 @gmail.com/ personally submit the above details to Trust office on or before 31/05/2024 between 9am to 4pm.

FLORENCE HIGH_SCHOOL, Viviani Road, Richards Town, Bangalore-560005 and THE BEST HIGH SCHOOL, HBR Layout, V'Block, Bangalore-43 REQUIRES LADY TEACHERS, TRAINED GRADUATES, POST-GRADUATES WITH 5'years experience to teach SCIENCE, ENGLISH, SOCIAL SCIENCE, COMPUTERS and PHYSICAL EDUCATION for PRIMARY and HIGH SCHOOL. Salary according to merit. Apply/ walk-in/ Contact Principal 10:00AM to 3:00PM. Phone: 9845583297/ 8904474400 slflorence@yahoo.co.in

WANTED ENGLISH MEDIUM TRAINED GRADUATES to teach English/ Social Science/ Maths/ Science for High School and Primary/ N.T.T Trained/ Computer Science Graduates. Age limit- not above 40 years. Salary with P.F and E.S.I Facilities. Contact in person- Secretary, Deccan Educational Society®, No.95, 3'd Cross, Srirampuram, Bengaluru-21 (Near Sampige Theatre, Malleswaram) Mobile: 7094390262

Dr. B.R. Ambedkar College of Law
No.2, Seva Ashram, 5th Main Road, Srirampura, Bengaluru-560021
Affiliated to Karnataka State Law University
Recoginsed by Govt. of Karnataka
Approved by Bar Council of India
No.of Posts: 5 - Full time
Qualification: LL.M
Designation: **Asst. Professor**
Freshers also can apply
Contact : **Prof.Karthika Ramamurthy,** Principal
7829956616
8867744654

TEACHERS WANTED To Teach all Subjects for English Medium high School and LKG to 7th Std. Qualification: any degree, D.Ed/ B.Ed, C.PEd/ B.PEd, with good fluency in English. Contact immediately. NBN Vidyamandira, Weaves Colony, Bannerugatta Road. Phone:- 9341247744.

Sir. M. Visvesvaraya College
#60, Konena Agrahara, HAL, Bengaluru-17
Immediately Required
Lecturers for English, Kannada, Chemistry
Qualification: BA, B.Sc, B.Ed.
Ph: 9449445953
E-mail: m.vishweshwaraiah@gmail.com

SREE SENIOR Homes requires a Lady Sales Manager for their H.O. in Manipal Centre, Off MG Road, Bangalore. Experience: 10 years, Age: 40+ years Good communication skills with fluency in English and Kannada. Salary commensurate with qualification and experience. Send your resume to admin@sreeseniorhomes.in

Multiple Vacancy

ST COURIER PVT LTD/ FRANCH EXPRESS COURIER PVT LTD BANGALORE, Want the following candidates. 1. FIELD EXECUTIVE- 10 Nos. 2. ZONAL MANAGERS–04 Nos. 3. Van & Two-Wheeler. DELIVE RY BOYS- 25. 4. HUB ASST- 08 Nos. 5. CUSTOMER SERVICE EXECUTIVE- 05 Nos. 6. ASST MANAGER MARKETING- 05 Nos. Also Required FRANCHISEE/ AGENCY all over Bangalore & Karnataka. Attractive Salary & Incentive. Please forward your Resume to: career@stcourier.com, recruitment@stcourier.com Contact Ph. 8792969360, 9740928526, 7019026123

WANTED: HEAD MASTER/ MISTRESS, TEACHERS: English & for all subjects, Physical training, administrative skills preferred for S.S.K. Convent and English High School. Apply with photograph to: S.S.K. Sangha, 2, K.V. Temple Street, Near Balepet Circle, Bengaluru-53. Phone: 8867002323, 9341332200. E-Mail: ssksangha@gmail.com

New Millennium School
Horamavu Agara, Bangalore- 560043
[Affiliated to CISCE New Delhi]
Application for the following positions from suitably qualified and experienced full time Teachers.
Biology- Middle & Senior School
Kannada- Middle & Senior School.
History & Civics- Middle & Senior School
Librarian, Dance, Music.
Send your CV to: newmillenniumschool@gmail.com
Walk in interview between 8 am to 12.30 pm on a working day.
Contact: 8660541421 7892839366
Visit: www.newmillenniumschool.com

PERUMAL VIDHYA Nikethan Little Flower High School No. 47, 2nd Cross, Saibabanagar, Bangalore- 21 Mail Id: pvnlittleflower1987@gmail.com Contact: 080- 23126330 Wanted Maths & Science Lady Teachers for Higher Primary & High School Apply Immediately

TEACHERS WANTED for Kannada Medium CBZ: B.Sc, B.Ed, Physical Education: B.P.Ed. For English Medium: Computer Science- BCA/ B.Sc (CS), Drawing: BVA/ BFA and MVA/ MFA, Physical Education- B.P.Ed. Principal: Loyala High School, Bannerghatta Road, Bangalore-76. 9538730271. Email: loyolablr@gmail.com

HERITAGE PUBLIC SCHOOL Srinidhi Layout, J.P.Nagar 8th Phase Konanakunte Bengaluru-62. Requires: High School Co-Ordinator, English and Social Teachers for Middle School, PE Teachers, Kindergarten Co Ordinator and Teachers. Attractive Salary Graduates can also apply.Call: 080-26322111 9901733776.

WANTED TRAINED and Experienced HIGH SCHOOL TEACHERS For ENGLISH MATHEMATICS. PHYSICAL EDUCATION, COMPUTER SCIENCE. K.R.L.S. ENGLISH HIGH SCHOOL, DOMLUR LAYOUT, Bangalore-71. Phone:25350421. krlsschools@gmail.com

REQUIRED EXPERIENCED Female Academic Supervisor having 5 years experience as a teacher. Contact Max Muller Public School, Mahalakshmi Layout, B'lore-96. Ph: 23376049/50. E.mail- maxmullerpublicschool .mlayout@gmail.com

REQUIRED TRAINED & Exp Lady Teachers For Nursery, Primary & High School For All Subjects(P.E. Male) Hebbal Kempapura. Contact: 9008981637 svsres21@gmail.com

WANTED ENGLISH MEDIUM Experienced Masters to coach Maths/ Science/ English/ Social Science for VIII and IX Standard Timings 6.00 p.m to 9.00 p.m. Part –time Art & Craft/ Yoga/ Carnatic/ Instrumental music. Age limit: 30- 45 years. Contact in person between 5.00 p.m to 6.00 p.m (Monday to Friday)- Deccan Educational Society®, No. 95, 3'd Cross, Srirampuram. Bengaluru-21 (Near Sampige Theatre, Malleswaram) Mobile: 7094390262

WANTED FRESHER/ Experience Teachers/ Assistant Head Master/ Academic Co-ordinators English/ Science/ Maths/ Social Science/ Hindi/ Computer Teachers/ Computer Data Entry Operator. Salary Rs. 20000 to 35000/- PM ESI, PF, Attender Rs. 15000/- per month. Walk-In Interview All Working Days Between 10.30 AM To 4.00 PM MATHA'S INTERNATIONAL SCHOOLICSE Affiliation Code KA470, Matha's English High School ® State Syllabus English Medium #55/2B, 11th K.M. Hosur Main Road, Garuve Bhavi Palya, Bommanahalli Post, Bangalore-560068 M: 9449814917/ 8277258609

MORNING STAR School Ramachandrapuram, Rajajinagar Entrance Bangalore Require B.Sc/ M.Sc. B.Ed (Science) B.A/ MA. B.Ed (English, Social) Lady Teachers Contact: 9845018480

OPPORTUNITY OF CAREER & INCOME FOR RETIRED OFFICIALS BANKERS TEACHERS HOMEMAKERS ENTREPRENEURS, CA's, PROFESSIONALS CALL: 8095301555

NEW ST. JOSEPH'S ENGLISH PRIMARY & HIGH SCHOOL, BTM 2nd Stage, Bangalore-76. Required Qualified LADY TEACHERS to handle Science, Maths & Physical Education. CALL: 9900563357.

WANTED TEACHERS for High School (to teach English, Science, Maths and Hindi) Contact:- Max Muller English High School, No. 173/1, 3rd Main, H.V.R. Layout, Magadi Main Road, Bangalore-79. Ph: 23284559, 23285559. info@maxmullerhighschool.com

"WANTED LADY TEACHERS B.Sc,`B.Ed (Maths,Science) BA,`B.Ed (Kannada, English)`D.Ed. "Good Hope High School", Chinnappa Garden, Bangalore-46. Phone:080 23331008, Contact with Originals- 10am-1pm"

WANTED TEACHERS English, Hindi, Computer, Social, Maths, Kannada. SANS PUBLIC SCHOOL, Nandini Layout: 9448228407/ 8867832191

Engg/ Production Technical

ITI/ Diploma, Fresher/ Experienced required for Plating Industry. Located at Bommasandra, Bangalore. Ph: 6383971115 or mail: platingcv@gmail.com

WANTED MONTESSORI Teachers and Science for PMS High School Bettahalasur near Yelahanka Contact:- 9632329017, 9880113895

REQUIRED TEACHERS for 1. Primary Hindi,English,Coding and Computer Science 2.Smart and young Accountant. Royal Public School. Call:9035033560

WANTED TEACHERS– Mathematics, Science, English, KannadaSocial. Contact Carmel High School, Hosur Road, Bangalore. 9900872744

WANTED QUALIFIED Mathematics and Science Teacher for High School with B.Sc. B.Ed. (PCM), with a minimum of 2 years Teaching Experience for Immediate Appointment. 'The Colonel Hill English High-School' No.3 Colonel Hill Road, Shivajinagar, Bangalore-560051. Please send your resume to chehs1964@gmail.com OR Contact: 080-22868856, 8618161419

RMS INSTITUTE of Management & Science Applications are invited for the following posts. PRINCIPAL- PG in Commerce/ Management/ Science with Ph.D. 3 to 5 years of experience as Principal in Degree College is preferred. LECTURERS- for B.Com.,B.B.A and B.C.A. PG with 3-5 years of teaching experience in Degree college is preferred. ACCOUNTANT- 3-5 years. Apply immediately. Forward resume to: rmsinstitution@gmail.comor Contact: 9845900062

VIJAYA BHARATHI SCHOOL, T-Dasarahalli, Bengaluru-560057 Immediately Required LADY TEACHERS Maths for High School & Social for Primary. Contact:9481664735

Wanted

WANTED PLASTIC Injection Moulding & Pressure Diecasting Operators with ITI/ Diploma and Helpers Ladies/ Gents Required for a Private Limited Company in Prakash Nagar, Bangalore: 9448481947/ 9448376584: magraa@magraa.in

General

***SDS* KENGERI,** Bangalore. WANTED Field Executives salary:15,000/-,2 wheeler,Mobile must,all over Bangalore and Tele-callers. Contact: 9686469799

WANTED FEMALE Office Assistant- any Degree, Good Communication Skills English & Hindi for Pvt Ltd Company in Rajajinagar Contact: 9108458798/ 9845579620

WANTED EXPERIENCED Teachers for Nursery, Primary and High School (Science). Vijayanagar, Bangalore. Contact: 8431812577/ 080-23306496.

REQUIRED PERSONS experience in MOLASSES TRADE resume to kannegantik@gmail.com WhatsApp cv9844033367

WANTED TEACHERS to Teach MATHS, SOCIAL, KANNADA, COMPUTERS. Contact: ABDUL BARI'S ENGLISH HIGH SCHOOL, Haines Road, Near ColesPark. WhatsApp:9353111888

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd.
Bengaluru

OTHERS

Medical

RUNNING NEW Modern NABH Ready 50 Bed Hospital South Bangalore, Longterm Rental Partnership WhatsApp: 00447868727506

ADMISSION CORNER

ಬೆಥೆಲ್ ಇಂಡಿಯಾ ಮಿಷನ್ ಹೈಸ್ಕೂಲ್
BETHEL INDIA MISSION HIGH SCHOOL
"Heartiest Congratulation" from Management & Staff
S.S.L.C. 2023-24 BATCH STUDENTS



ADMISSIONS OPEN FOR 24-25
9036643000 / 8951143697
#200, Bethel Street, Kumbalagodu, Mysore Road, Bengaluru - 560074

BUSINESS

Business to Business

Business

HOSMAT HOSPITAL
HOSMAT HOSPITALS, intends to sell the following Medical Equipments, which are in good working conditions, the details of which are furnished below:
1. Lithotripsy Machine – Make Siemen, Modular's Variostar, year of Manufacture 2017,other components are table and Siemens Ultrasound Acuson X 300 with 1 probe
2. Brain Lab Computer Navigation Machine Vector Vision Model
3. Surgical Microscope Machine Zeiss Make - S5 Model

Interested parties can approach Mrs. Ashwini – Bio Medical Engineer on her Email Id: biomedical@hosmathospitals.com or reach out, on her Cell phone: 8660987793

BUILDERS ESSENTIAL

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

REAL ESTATE SELLING

Flat

Basavanagudi

FOR SALE 3 BHK south-east facing flat with separate pooja room, attached bath, 2 balconies, wash and closed car parking in BASAVANAGUDI. 300m from Lalbhagh metro station.Contact - 9481483926

Jayanagar

SALE 3RD Block 3 BHK Flat 3rd Floor Furnished. Recent Construction. North Face 2 Baths 2 Balconies Carpark A Katha Suit Executives, Merchants 2Cr Negotiable: 9886019240/ 080 26603673

PROPERTY CORNER

AVAILABLE LAND IN HASSAN
In Channapatna Layout, HIG Colony near District Court and Opposite to New Bus stand.
40'X60', North facing
Contact: 9108012898
Email: lvsmurthy2009@gmail.com

House

Vidyaranyapura

HOUSE SALE for 1800 sqft (Site 20x55), 1.10 Crore. Singapura, Vidyaranyapura, Bangalore. Owner Sunil: 7353353377.

PERSONAL

Change of Name

CHANGE OF NAME
I, **RAO GANESH JANARDHANA,** residing at # C-4, Police Quarters, 15th Main, Vasanthanagar, Bengaluru North, Bengaluru-560001, have changed my name to **RAO GANESH JANARDHAN** vide affidavit dated 21/05/2024 Sworn before Notary T.C.Thimmaraja, Bengaluru. Henceforth I shall be called as **RAO GANESH JANARDHAN** only

CHANGE OF NAME
I **Srilatha Ambarish,** residing at Apt.No.1084, Prestige IVY TERRACES, Kaverappa Layout, Kadubeesanahalli Doddakannelli Road, Kadubeesanahalli, Bengaluru-560103, have changed my name to **SREELATHA AMBARISH** (Ambarish as Surname) vide affidavit dated 18/05/2024 Sworn before Notary Vanajakshi.R, Bengaluru.

I, NAGENDRA Kanakagiri S/o K. Gururajachar, aged about 52 years R/of #1638/5, B-Block, 8th Main, Near UCO Bank, Sahakarnagar, P.O. Bengaluru North 560092, we have changed our son's name from Phani Aaditya Kanakagiri to Aaditya P Kanakagiri, vide affidavit dated 20/5/2024 before notary G.Dayananda Bangalore.

CHANGE OF NAME
I, **AJITH ALAN,** residing at # 201, Elson, No.3, Alfred Street, Richmond Town, Bengaluru-560025, have changed my name to **AJITH DANIEL ALAN** vide affidavit dated 03/03/2021 Sworn before Notary S.Nagaraja, Bengaluru. Henceforth I shall be called as **AJITH DANIEL ALAN** only

I, NAVEENAKUMAR HANUMANTHAPPA residing at Bengaluru-562149 have changed my name as NAVEEN KUMAR HANUMANTHAPPA vide affidavit dated 21/5/2024 before Notary K.S. Bammappanavar, Bengaluru

CHANGE OF NAME
I, SREEDEVI H M, D/o. H. Hulugappa, R/a No. 32/8, 6th 'B' Main Road, Near AET College, Doddakannalli, Bangalore-560 035. I declare that my new name **SREEDEVI H M** & as SSLC Certificate the name as **SRIDEVI H M** daughter of Hulugappa. H, both are same, vide affidavit dated 18-05-2024 Sworn before Notary H.M. Govindaraju, Bangalore.

ಮೆಜೆಸ್ಟಿಕ್ ಮೆಟ್ರೊ ನಿಲ್ದಾಣ ದಟ್ಟಣೆ ತಗ್ಗಿಸಲು ನೂತನ ದ್ವಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೆಜೆಸ್ಟಿಕ್ ಮೆಟ್ರೊ ಇಂಟರ್‌ಚೇಂಜ್ ನಿಲ್ದಾಣದಲ್ಲಿ ಪ್ರಯಾಣಿಕರ ಜನದಟ್ಟಣೆ ನಿಯಂತ್ರಣಕ್ಕಾಗಿ ಬೆಂಗಳೂರು ಮೆಟ್ರೊ ರೈಲು ನಿಗಮವು (ಬಿಎಂಆರ್‌ಸಿಎಲ್) ನೇರಳೆ ಮತ್ತು ಹಸಿರು ಮಾರ್ಗ ಬದಲಾವಣೆಗೆ ಅನುಕೂಲವಾಗುವಂತೆ ನೂತನ ದ್ವಾರವನ್ನು ಸೋಮವಾರ ತೆರೆಯಲಾಗಿದೆ.

ಕಾನ್‌ಕೋರ್ಸ್ ಮಟ್ಟದಲ್ಲಿರುವ ಈ ದ್ವಾರವು ನೇರಳೆ ಮಾರ್ಗದ ಎರಡನೇ ಪ್ಲಾಟ್‌ಫಾರ್ಮ್ ಮತ್ತು ಹಸಿರು ಮಾರ್ಗದ 3 ಹಾಗೂ 4ನೇ ಪ್ಲಾಟ್‌ಫಾರ್ಮ್ ನಡುವೆ ನೇರವಾಗಿ ಸಂಪರ್ಕ ಕಲ್ಪಿಸಲಿದೆ. ಇದರ ಪಕ್ಕದಲ್ಲಿಯೇ ಹಿಂದಿನಿಂದ ಇರುವ ಎಸ್ಕಲೇಟರ್ ಹಾಗೂ ಮೆಟ್ಟಿಲುಗಳ ಮೂಲಕವೂ ಮಾರ್ಗ ಬದಲಾವಣೆ ಮಾಡಿಕೊಳ್ಳಬಹುದು.

ಸದ್ಯ 73.81 ಕಿ.ಮೀ. ಉದ್ದದ ಮಾರ್ಗದಲ್ಲಿ ಸೇವೆ ಕಲ್ಪಿಸುತ್ತಿರುವ 'ನಮ್ಮ ಮೆಟ್ರೊ'ಗೆ ಮೆಜೆಸ್ಟಿಕ್ ಮಾತ್ರವೇ ಇಂಟರ್‌ಚೇಂಜ್ ನಿಲ್ದಾಣವಾಗಿದೆ. ಪ್ರತಿದಿನ 1 ಲಕ್ಷಕ್ಕೂ ಅಧಿಕ ಪ್ರಯಾಣಿಕರು ಇದನ್ನು ಬಳಸುತ್ತಿದ್ದಾರೆ. ಪೀಕ್ ಅವರ್‌ನಲ್ಲಿ ಇಲ್ಲಿ ವಿಪರೀತ ಜನದಟ್ಟಣೆ ಉಂಟಾಗುತ್ತಿದೆ. ಅದರಲ್ಲೂ, ನೇರಳೆ ಮತ್ತು ಹಸಿರು ಮಾರ್ಗ ಬದಲಾವಣೆ ಸಂದರ್ಭದಲ್ಲಿ ಪ್ರಯಾಣಿಕರ ನಡುವೆ ನೂಕುನುಗ್ಗಲು ಆಗುತ್ತಿದೆ. ಇದರ ನಿವಾರಣೆಗೆ ಇದೀಗ ಹೊಸದಾಗಿ ಮಾರ್ಗ ಬದಲಾವಣೆಗೆ ದ್ವಾರ ತೆರೆಯಲಾಗಿದೆ ಎಂದು ಬಿಎಂಆರ್‌ಸಿಎಲ್ ಅಧಿಕಾರಿಗಳು ತಿಳಿಸಿದ್ದಾರೆ.



ಮೆಜೆಸ್ಟಿಕ್ ಮೆಟ್ರೊ ನಿಲ್ದಾಣದಲ್ಲಿ ನೂತನವಾಗಿ ತೆರೆದಿರುವ ಮಾರ್ಗ.

ಪಿಕ್‌ಅಪ್ ಶುಲ್ಕ ನಿರ್ಧಾರ ಕೈಬಿಟ್ಟ ಪ್ರಾಧಿಕಾರ

ಬೆಂಗಳೂರು: ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ (ಬಿಐಎಎಲ್) ಪ್ರಯಾಣಿಕರ ಪಿಕಪ್ ಪಾಯಿಂಟ್ ಪ್ರವೇಶಿಸುವ ವಾಹನಗಳಿಗೆ ಶುಲ್ಕ ವಿಧಿಸುವುದಾಗಿ ಘೋಷಿಸಿದ್ದ ವಿಮಾನ ನಿಲ್ದಾಣ ಪ್ರಾಧಿಕಾರವು ತನ್ನ ನಿರ್ಧಾರದಿಂದ ಹಿಂದೆ ಸರಿದಿದೆ ಎಂದು ಮೂಲಗಳು ಖಚಿತಪಡಿಸಿವೆ.

ಟ್ಯಾಕ್ಸಿ ಚಾಲಕರು ಮತ್ತು ಪ್ರಯಾಣಿಕರ ತೀವ್ರ ವಿರೋಧಕ್ಕೆ ಮಣಿದು ಪ್ರಾಧಿಕಾರ ಈ ನಿರ್ಧಾರ ಕೈಗೊಂಡಿದೆ. ಬಿಐಎಎಲ್ ಟರ್ಮಿನಲ್ 1 ಮತ್ತು 2ರ ಆಗಮನ ದ್ವಾರದ ಬಳಿ ಪ್ರಯಾಣಿಕರನ್ನು ಹತ್ತಿಸಿಕೊಳ್ಳುವ ಖಾಸಗಿ ವಾಹನಗಳಿಗೆ ಮೊದಲ ಏಳು ನಿಮಿಷ ಉಚಿತ ಮತ್ತು ಏಳರಿಂದ 14 ನಿಮಿಷಗಳವರೆಗೆ ₹150 ಶುಲ್ಕ ವಿಧಿಸುವುದಾಗಿ ಪ್ರಾಧಿಕಾರ ತಿಳಿಸಿತ್ತು.

ವಾಣಿಜ್ಯ ವಾಹನಗಳಿಗೆ ಏಳು ನಿಮಿಷಗಳವರೆಗೆ ₹150 ಮತ್ತು 7–14 ನಿಮಿಷಗಳವರೆಗೆ ₹300 ಶುಲ್ಕ ವಿಧಿಸುವುದಾಗಿ ಹೇಳಿತ್ತು.

ರೇಸ್: ಸರ್ಕಾರಕ್ಕೆ ಹೈಕೋರ್ಟ್ ನಿರ್ದೇಶನ

ನಿಲುವು ತಿಳಿಸಲು ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬೆಂಗಳೂರು ಟರ್ಫ್ ಕ್ಲಬ್‌ನಲ್ಲಿ (ಬಿಟಿಸಿ) ಇದೇ 25 ಮತ್ತು 26ರಂದು ರೇಸ್ ಚಟುವಟಿಕೆ ನಡೆಸಲು ಷರತ್ತುಬದ್ಧ ಅನುಮತಿ ನೀಡುವ ಸಂಬಂಧ ನಿಮ್ಮ ನಿಲುವು ಏನು ಎಂಬುದನ್ನು ತಿಳಿಸಿ' ಎಂದು ಹೈಕೋರ್ಟ್, ರಾಜ್ಯ ಸರ್ಕಾರಕ್ಕೆ ಸೂಚಿಸಿದೆ.

'ಪರವಾನಗಿ ನವೀಕರಿಸಲು ಕೋರಲಾಗಿರುವ ಮನವಿಯನ್ನು ಪರಿಗಣಿಸಲು ರಾಜ್ಯ ಸರ್ಕಾರಕ್ಕೆ ನಿರ್ದೇಶಿಸಬೇಕು' ಎಂದು ಬೆಂಗಳೂರು ಟರ್ಫ್ ಕ್ಲಬ್ ಸಲ್ಲಿಸಿರುವ ರಿಟ್ ಅರ್ಜಿಯನ್ನು ರಜಾಕಾಲದ ಪೀಠದಲ್ಲಿದ್ದ ನ್ಯಾಯಮೂರ್ತಿ ಎಂ.ಜಿ.ಎಸ್ ಕಮಲ್ ಅವರಿದ್ದ ನ್ಯಾಯಪೀಠ ಮಂಗಳವಾರ ವಿಚಾರಣೆ ನಡೆಸಿ ಈ ಸಂಬಂಧ ಸರ್ಕಾರಕ್ಕೆ ನಿರ್ದೇಶಿಸಿತು.

'ರೇಸಿಂಗ್‌ಗೆ ಇದೇ 25 ಮತ್ತು 26ರಂದು ವೇಳಾಪಟ್ಟಿ ಪ್ರಕಟಿಸಲಾಗಿದೆ. ಬಹಳಷ್ಟು ಜನರ ಜೀವನೋಪಾಯ ರೇಸಿಂಗ್ ಚಟುವಟಿಕೆಯನ್ನು ಅವಲಂಬಿಸಿದೆ ಎಂದು ಅರ್ಜಿದಾರರು ಪ್ರತಿಪಾದಿಸಿದ್ದಾರೆ. ಹಾಗಾಗಿ, ಇದೇ 25 ಮತ್ತು 26 ರಂದು ರೇಸಿಂಗ್ ಚಟುವಟಿಕೆಗೆ ಷರತ್ತುಬದ್ಧ ಅನುಮತಿ ನೀಡುವ ನಿಟ್ಟಿನಲ್ಲಿ ಸರ್ಕಾರ ಕೆಲವು ಪ್ರಸ್ತಾವನೆ ಹಾಗೂ ಸೂಚನೆಗಳ ಸಹಿತ ಗುರುವಾರ (ಮೇ 23) ನ್ಯಾಯಾಲಯಕ್ಕೆ ಉತ್ತರಿಸಬೇಕು. ಯಾವ್ಯಾವ ಷರತ್ತುಗಳನ್ನು ವಿಧಿಸಬೇಕು ಎಂಬುದನ್ನು ಚರ್ಚಿಸಿ ನಿರ್ಧಾರ ತೆಗೆದುಕೊಳ್ಳಬಹುದು. ನಂತರ ಪರವಾನಗಿ ನವೀಕರಣಕ್ಕೆ ಕೋರಿರುವ ಅರ್ಜಿಯನ್ನು ಪರಿಗಣಿಸುವ ಅಥವಾ ಪರಿಗಣಿಸದೇ ಇರುವ ಬಗ್ಗೆ ತೀರ್ಮಾನಿಸಬಹುದು' ಎಂದು ನ್ಯಾಯಪೀಠ ಹೇಳಿದೆ. ವಿಚಾರಣೆಯನ್ನು ಇದೇ 23ಕ್ಕೆ ಮುಂದೂಡಲಾಗಿದೆ. ಸರ್ಕಾರದ ಪರ ಅಡ್ವೊಕೇಟ್ ಜನರಲ್ ಕೆ.ಶಶಿಕಿರಣ ಶೆಟ್ಟಿ ಹಾಜರಾಗಿದ್ದರು.

ಕೇಜ್ರಿವಾಲ್‌ಗೆ ಬೆದರಿಕೆ: ಸಿಕ್ಕ ಆರೋಪಿ ಸುಳಿವು

ನವದೆಹಲಿ (ಪಿಟಿಐ): ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರಿಗೆ ಬೆದರಿಕೆ ಹಾಕುವಂತಹ ಬರಹಗಳನ್ನು ಮೆಟ್ರೊ ರೈಲುಗಳಲ್ಲಿ ಯುವಕನೊಬ್ಬ ಬರೆಯುತ್ತಿ ರುವುದು ಸಿ.ಸಿ.ಟಿ.ವಿ. ವಿಡಿಯೊದಿಂದ ತಿಳಿದುಬಂದಿದೆ ಎಂದು ದೆಹಲಿ ಪೊಲೀಸರು ಮಂಗಳವಾರ ತಿಳಿಸಿದ್ದಾರೆ.

'ಅಂಕಿತ್ ಗೋಯೆಲ್ ಎಂಬ ಯುವಕನು ಇನ್‌ಸ್ಟಾಗ್ರಾಂ ಖಾತೆಯಲ್ಲಿ ಗೀಚುಬರಹಗಳ ಫೋಟೊಗಳನ್ನು ಹಂಚಿಕೊಂಡಿದ್ದ. ಅವನೇ ಗೀಚುಬರಹ ಬರೆದಿಬಹುದೆಂದು ಶಂಕಿಸಲಾಗಿದೆ' ಎಂದು ಪೊಲೀಸರು ಹೇಳಿದ್ದಾರೆ.

ಚಿತ್ರಾವಳಿ



ಆರ್ಟ್ ಆಫ್ ಲಿವಿಂಗ್ ಸಂಸ್ಥಾಪಕ ಶ್ರೀ ಶ್ರೀ ರವಿಶಂಕರ್ ಗುರೂಜಿ ಅವರು ವಿವಿಧ ಧಾರ್ಮಿಕ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳಲು ಇತ್ತೀಚೆಗೆ ಭಕ್ತರೊಂದಿಗೆ ಶ್ರೀಲಂಕಾಕ್ಕೆ ತೆರಳಿದ್ದಾರೆ.

ದೊಮ್ಮಲೂರು ಕ್ಲಬ್‌ಗೆ ಆಡಳಿತಾಧಿಕಾರಿ ನೇಮಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕ್ಲಬ್ ಅಧ್ಯಕ್ಷರನ್ನು ನಿಯಮಬಾಹಿರವಾಗಿ ಅಮಾನತು ಮಾಡಿ, ಅವ್ಯವಹಾರ ನಡೆಸಿದ್ದ ದೊಮ್ಮಲೂರು ಕ್ಲಬ್ ಆಡಳಿತ ಮಂಡಳಿಯನ್ನು ವಜಾ ಮಾಡಿ, ಆಡಳಿತಾಧಿಕಾರಿಯನ್ನು ಸರ್ಕಾರ ನೇಮಿಸಿದೆ.

ದೊಮ್ಮಲೂರು 2ನೇ ಹಂತದಲ್ಲಿರುವ 'ದೊಮ್ಮಲೂರು ಕ್ಲಬ್' ಆಡಳಿತ ಮಂಡಳಿ ಮೇಲಿನ 28 ಆರೋಪಗಳಲ್ಲಿ ಬಹುತೇಕವು ಸಾಬೀತಾಗಿದ್ದು, ಕ್ಲಬ್‌ಗೆ ಆಡಳಿತಾಧಿಕಾರಿ ನೇಮಿಸಬೇಕು ಎಂದು ಸಹಕಾರ ಸಂಘಗಳ ನಿಬಂಧಕರು ಪ್ರಸ್ತಾವ ಹಾಗೂ ಜಿಲ್ಲಾ ನೋಂದಣಾಧಿಕಾರಿ ಶಿಫಾರಸು ಮಾಡಿದ್ದರು.

ಕಾರ್ಯಕಾರಿ ಸಮಿತಿ ಸಭೆಗಳನ್ನು ಕರೆದಿಲ್ಲ, ಬಿಯರ್ ಪೂರೈಕೆಯಲ್ಲಿ ನಷ್ಟ, ಬಾರ್ ಅಧ್ಯಕ್ಷರಿಗೆ ಹಣ ಪಾವತಿ, ಲೆಕ್ಕಪತ್ರಗಳನ್ನು ಕಾರ್ಯಕಾರಿ ಸಮಿತಿಗೆ ನೀಡದಿರುವುದು, ಅಧ್ಯಕ್ಷ ಮತ್ತು ಕಾರ್ಯದರ್ಶಿ ನಡುವೆ ಸಮನ್ವಯ ಕೊರತೆ, ಆಡಳಿತ ಮಂಡಳಿಯಿಂದ ಹಣ ದುರುಪಯೋಗ, ನಿಯಮಬಾಹಿರವಾಗಿ ಸದಸ್ಯರ ಅಮಾನತು, ವಾರ್ಷಿಕ ಸಭೆ ನಡೆಸದಿರುವುದು, ಏಪ್ರಿಲ್ 30ಕ್ಕೇ ಆಡಳಿತ ಮಂಡಳಿ ಅವಧಿ ಮುಕ್ತಾಯಗೊಂಡಿದ್ದರೂ, ಮೇ 8ರಂದು ಸಭೆ ನಡೆಸಿ ಚುನಾವಣೆ ನಿಗದಿಪಡಿಸಿರುವುದು ನಿಯಮಬಾಹಿರವಾಗಿದ್ದು, ಈಗಿನ ಆಡಳಿತ ಮಂಡಳಿಯನ್ನು ವಜಾಗೊಳಿಸಿ, ಆಡಳಿತಾಧಿಕಾರಿ ನೇಮಿಸಿ ಸಹಕಾರ ಇಲಾಖೆ ಮೇ 21ರಂದು ಆದೇಶ ಹೊರಡಿಸಿದೆ.

ಸಹಕಾರ ಸಂಘಗಳ ಉಪ ನಿಬಂಧಕ ಬಿ.ವಿ. ಗಂಗಾಧರ ಅವರನ್ನು ದೊಮ್ಮಲೂರು ಕ್ಲಬ್‌ಗೆ ಆಡಳಿತಾಧಿಕಾರಿಯಾಗಿ ನೇಮಕ ಮಾಡಲಾಗಿದೆ. ಆಡಳಿತಾಧಿಕಾರಿ ಕೂಡಲೇ ಕ್ಲಬ್ ಅಧಿಕಾರ ವಹಿಸಿಕೊಂಡು, ಅಲ್ಲಿನ ನ್ಯೂನತೆಗಳನ್ನು ಸರಿಪಡಿಸಿ, ಆಡಳಿತ ಮಂಡಳಿಗೆ ಚುನಾವಣೆ ನಡೆಸಿ, ಆ ಚುನಾಯಿತ ಆಡಳಿತ ಮಂಡಳಿಗೆ ಅಧಿಕಾರ ಹಸ್ತಾಂತರಿಸಿ ಸರ್ಕಾರಕ್ಕೆ ವರದಿ ಸಲ್ಲಿಸಬೇಕು ಎಂದು ಆದೇಶದಲ್ಲಿ ಸೂಚಿಸಲಾಗಿದೆ.

ದೂರವಾಣಿ ಕದ್ದಾಲಿಕೆ: ತನಿಖೆಗೆ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ವಿರೋಧ ಪಕ್ಷಗಳ ನಾಯಕರ ದೂರವಾಣಿ ಕದ್ದಾಲಿಕೆ ಮಾಡಲಾಗುತ್ತಿದೆ ಎಂದು ಪೊಲೀಸ್ ಅಧಿಕಾರಿಗಳು ನನ್ನ ಗಮನಕ್ಕೆ ತಂದಿದ್ದಾರೆ. ಈ ವಿಷಯದ ಬಗ್ಗೆ ಸಿಬಿಐ ತನಿಖೆ ನಡೆಸಬೇಕು' ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್. ಅಶೋಕ ಆಗ್ರಹಿಸಿದ್ದಾರೆ.

ಬಿಜೆಪಿ ಕಚೇರಿಯಲ್ಲಿ ಮಂಗಳವಾರ ಬೆಂಗಳೂರು ಪದವೀಧರ ಕ್ಷೇತ್ರ ಮತ್ತು ಆಗ್ನೇಯ ಶಿಕ್ಷಕರ ಕ್ಷೇತ್ರದ ಪ್ರಮುಖರ ಸಭೆಯ ಬಳಿಕ ಅವರು ಸುದ್ದಿಗಾರರ ಜತೆ ಮಾತನಾಡಿ ಈ ವಿಷಯ ತಿಳಿಸಿದರು.

'ಸರ್ಕಾರ ದೂರವಾಣಿ ಕದ್ದಾಲಿಕೆ ಮಾಡುತ್ತಿಲ್ಲ ಎನ್ನುವುದಾದರೆ ಕದ್ದಾಲಿಕೆ ಉಪಕರಣಗಳು ಎಲ್ಲಿವೆ ಎಂಬುದರ ಬಗ್ಗೆ ತನಿಖೆ ಮಾಡಿಸಲಿ. ಅಂತಹ ಉಪಕರಣಗಳನ್ನು ವಶಕ್ಕೆ ತೆಗೆದುಕೊಂಡರೆ ಆಗ ಯಾರು ಕದ್ದಾಲಿಕೆ ಮಾಡಿದ್ದಾರೆ? ಯಾರು ಮಾಡಿಸಿದ್ದಾರೆ ಎಂಬ ಅಂಶ ಬಯಲಿಗೆ ಬರುತ್ತದೆ' ಎಂದರು.

'ಜೆಡಿಎಸ್ ನಾಯಕ ಕುಮಾರಸ್ವಾಮಿ ಅವರ ಬಳಿ ಇರುವ ಮಾಹಿತಿಯಡಿ ಇದನ್ನು ಹೇಳಿದ್ದಾರೆ. ಯಾರೇ ಆಗಲಿ, ಈ ರೀತಿ ಕದ್ದಾಲಿಕೆ ಮಾಡಿಸುವುದು ಅಪರಾಧ. ಅಂತಹವರನ್ನೆಲ್ಲ ಜೈಲಿಗೆ ಕಳುಹಿಸಬೇಕು. ದೂರವಾಣಿ ಕದ್ದಾಲಿಕೆಯಂತಹ ಅಕ್ರಮಗಳಿಗೆ ಕಡಿವಾಣ ಹಾಕಬೇಕು' ಎಂದು ಒತ್ತಾಯಿಸಿದರು.

ಸುಮಾರು ₹50 ಲಕ್ಷಕ್ಕೆ ಚೀನಾ ನಿರ್ಮಿತ ದೂರವಾಣಿ ಕದ್ದಾಲಿಕೆ ಉಪಕರಣಗಳು ಸಿಗುತ್ತವೆ. ಈ ರೀತಿ ಚೀನಾದಿಂದ ಎಷ್ಟು ದೂರವಾಣಿ ಕದ್ದಾಲಿಕೆ ಉಪಕರಣಗಳು ಬಂದಿವೆ. ಅವು ಯಾರ ಯಾರ ಮನೆಗಳಲ್ಲಿವೆ ಎಂಬುದನ್ನು ಪತ್ತೆ ಮಾಡಬೇಕು. ವಿದೇಶಿ ಉಪಕರಣಗಳ ಮೂಲಕ ಕದ್ದಾಲಿಕೆ ಮಾಡಿಸಿದರೆ ಇಲ್ಲಿನ ಪೊಲೀಸರಿಂದ ಏನು ಮಾಡುವುದಕ್ಕೂ ಸಾಧ್ಯವಿಲ್ಲ ಎಂದರು.

ಕೊಲೆ ಯತ್ನ: ಆರೋಪಿಗೆ ಜಾಮೀನು

ಬೆಂಗಳೂರು: ಚಿಂತಾಮಣಿ ನಗರಸಭೆ ಸದಸ್ಯ ಅಗ್ರಹಾರ ಮುರಳಿ ಕೊಲೆ ಯತ್ನ ಪ್ರಕರಣದ ಮೊದಲ ಆರೋಪಿ ಡಿ.ನರೇನ್ ಕುಮಾರ್‌ಗೆ ಹೈಕೋರ್ಟ್ ಷರತ್ತುಬದ್ಧ ಜಾಮೀನು ನೀಡಿದೆ.

ಈ ಸಂಬಂಧ ನ್ಯಾಯಾಂಗ ಬಂಧನದಲ್ಲಿದ್ದ ಆರೋಪಿ ಡಿ.ನರೇನ್ ಕುಮಾರ್ ಸಲ್ಲಿಸಿದ್ದ ಅರ್ಜಿಯನ್ನು ರಜಾಕಾಲದ ಪೀಠದಲ್ಲಿದ್ದ ನ್ಯಾಯಮೂರ್ತಿ ಟಿ. ವೆಂಕಟೇಶ್ ನಾಯಕ್ ವಿಚಾರಣೆ ನಡೆಸಿ ಈ ಕುರಿತಂತೆ ಆದೇಶಿಸಿದ್ದಾರೆ.

'₹2 ಲಕ್ಷ ಮೊತ್ತದ ವೈಯಕ್ತಿಕ ಬಾಂಡ್ ಹಾಗೂ ಅಷ್ಟೇ ಮೊತ್ತಕ್ಕೆ ಇಬ್ಬರ ಭದ್ರತಾ ಖಾತರಿ ಒದಗಿಸಬೇಕು. ಸಾಕ್ಷ್ಯ ತಿರುಚಲು ಪ್ರಯತ್ನಿಸಬಾರದು' ಎಂಬುದೂ ಸೇರಿದಂತೆ ಹಲವು ಷರತ್ತುಗಳನ್ನು ವಿಧಿಸಿ ನ್ಯಾಯಪೀಠ ಜಾಮೀನು ಮಂಜೂರು ಮಾಡಿದೆ.

ಬಡವರನ್ನು ಆರ್ಥಿಕವಾಗಿ ಸಬಲರನ್ನಾಗಿಸುವುದು ಅಭಿವೃದ್ಧಿ ಅಲ್ಲವೇ: ಸಿ.ಎಂ ಪ್ರಶ್ನೆ

'ಬಿಜೆಪಿಯವರಿಗೆ ಅರ್ಥಶಾಸ್ತ್ರ ಗೊತ್ತಾಗಲ್ಲ'

ಪ್ರಜಾವಾಣಿ ವಾರ್ತೆ

ಮಂಗಳೂರು: 'ಬಿಜೆಪಿಯವರು ಬಜೆಟ್ ಓದುವುದಿಲ್ಲ. ಅವರಿಗೆ ಅರ್ಥಶಾಸ್ತ್ರ ಗೊತ್ತಾಗುವುದಿಲ್ಲ. ಏನೇನೋ ಬಾಯಿಗೆ ಬಂದ ಹಾಗೆ ಮಾತನಾಡುತ್ತಾರೆ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಇಲ್ಲಿನ ಬಜಪೆ ವಿಮಾನ ನಿಲ್ದಾಣದಲ್ಲಿ ಸುದ್ದಿಗಾರರ ಜೊತೆ ಮಂಗಳವಾರ ಮಾತನಾಡಿದ ಅವರು, 'ರಾಜ್ಯದಲ್ಲಿ ಅಭಿವೃದ್ಧಿ ಶೂನ್ಯ ಎಂದು ಬಿಜೆಪಿಯವರು ಹೇಳುತ್ತಾರೆ. ಬಡವರನ್ನು ಆರ್ಥಿಕವಾಗಿ ಸಬಲರನ್ನಾಗಿಸುವುದು ಅಭಿವೃದ್ಧಿ ಅಲ್ಲವೇ. ದೇಶಕ್ಕೆ ರಾಜಕೀಯ ಸ್ವಾತಂತ್ರ್ಯ ಬಂದರೆ ಸಾಲದು. ಜನರಿಗೆ ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ ಶಕ್ತಿ ಬಂದರೆ ಮಾತ್ರ ರಾಜಕೀಯ ಸ್ವಾತಂತ್ರ್ಯಕ್ಕೆ ಅರ್ಥ ಬರುತ್ತದೆ ಎಂದು ಅಂಬೇಡ್ಕರ್ ಹೇಳಿದ್ದಾರೆ. ಈ ವಿಚಾರ ಅವರಿಗೆ ಗೊತ್ತಿದೆಯೇ' ಎಂದು ಪ್ರಶ್ನಿಸಿದರು.

'ಗ್ಯಾರಂಟಿ ಯೋಜನೆ ಹೊರತು ಬೇರೆ ಅಭಿವೃದ್ಧಿ ಆಗಿಲ್ಲ' ಎಂಬ ಬಿಜೆಪಿ ಆರೋಪಕ್ಕೆ ಪ್ರತಿಕ್ರಿಯಿಸಿದ ಮುಖ್ಯಮಂತ್ರಿ, 'ಅವರು ಸುಳ್ಳು ಹೇಳುತ್ತಾರೆ. ನೀವೂ ಸುಳ್ಳು ಹೇಳುತ್ತೀರಾ' ಎಂದು ಸುದ್ದಿಗಾರರನ್ನೇ ಪ್ರಶ್ನಿಸಿದರು.

ನುಡಿನಮನ: ಬಳಿಕ, ಬೆಳ್ತಂಗಡಿಯ ಮಾಜಿ ಶಾಸಕ ದಿ. ವಸಂತ ಬಂಗೇರ ನುಡಿನಮನ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಭಾಗವಹಿಸಿದರು.

ಬೆಳ್ತಂಗಡಿ ಪಟ್ಟಣದಲ್ಲಿ ವೃತ್ತವೊಂದನ್ನು ಅಭಿವೃದ್ಧಿಪಡಿಸಿ ಅದರಲ್ಲಿ ವಸಂತ ಬಂಗೇರ ಅವರ ಪುತ್ಥಳಿಯನ್ನು ನಿರ್ಮಿಸಬೇಕು ಹಾಗೂ ಹೊಸದಾಗಿ ನಿರ್ಮಾಣವಾಗಲಿರುವ ಬಸ್‌ನಿಲ್ದಾಣಕ್ಕೆ ಅವರ ಹೆಸರಿಡಬೇಕು ಎಂದು ಬೆಳ್ತಂಗಡಿ ಶ್ರೀಗುರು ನಾರಾಯಣ ಸ್ವಾಮಿ ಸೇವಾ ಸಂಘದವರು ಮುಖ್ಯಮಂತ್ರಿಯವರಿಗೆ ಮನವಿ ಸಲ್ಲಿಸಿದರು. ಈ ಕಾರ್ಯ ಸರ್ಕಾರದಿಂದ ಮಾಡಿಸುವುದಾಗಿ ಭರವಸೆ ನೀಡಿದರು.



ಬೆಳ್ತಂಗಡಿಯ ಕುವೆಟ್ಟುವಿನಲ್ಲಿ ಏರ್ಪಡಿಸಿದ್ದ ದಿ.ವಸಂತ ಬಂಗೇರ 'ನುಡಿ ನಮನ' ಕಾರ್ಯಕ್ರಮದಲ್ಲಿ ಅವರ ಭಾವಚಿತ್ರಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮಂಗಳವಾರ ಪುಷ್ಪಾಂಜಲಿ ಸಲ್ಲಿಸಿದರು. ಬಂಗೇರ ಅವರ ಮಗಳು ಪ್ರೀತಿತಾ, ಅಳಿಯ ಧರ್ಮ ವಿಜೇತ್, ಬಂಗೇರ ಅವರ ಪತ್ನಿ ಸುಜಿತಾ ವಿ. ಬಂಗೇರ, ಸೊಲೂರು ಮಠದ ವಿಖ್ಯಾತಾನಂದ ಸ್ವಾಮೀಜಿ, ಕುದ್ರೋಳಿ ಗೋಕರ್ಣನಾಥ ಕ್ಷೇತ್ರದ ಖಜಾಂಜಿ ಆರ್.ಪದ್ಮರಾಜ್, ಕೇಂದ್ರದ ಮಾಜಿ ಸಚಿವ ಜನಾರ್ದನ ಪೂಜಾರಿ, ವಿಧಾನ ಸಭಾಧ್ಯಕ್ಷ ಯು.ಟಿ. ಖಾದರ್ ಭಾಗವಹಿಸಿದ್ದರು

'ಐತಿಹಾಸಿಕ ಹೆಜ್ಜೆ'

ಬೆಂಗಳೂರು: 'ಹೊರ ಗುತ್ತಿಗೆ ನೇಮಕಾತಿಯಲ್ಲಿ ಮೀಸಲಾತಿ ನೀಡಿರುವ ಮೂಲಕ ಸಾಮಾಜಿಕ ನ್ಯಾಯ ಪಾಲನೆಗೆ ಅವಕಾಶ ಕಲ್ಪಿಸುವ ಐತಿಹಾಸಿಕ ಹೆಜ್ಜೆ ಇರಿಸಿದ್ದೇವೆ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದ್ದಾರೆ.

ಈ ಕುರಿತು 'ಎಕ್ಸ್' ಮೂಲಕ ತಮ್ಮ ಅಭಿಪ್ರಾಯವನ್ನು ಹಂಚಿಕೊಂಡಿರುವ ಅವರು, ರಾಜ್ಯದ ಸರ್ಕಾರ ವಿವಿಧ ಇಲಾಖೆಗಳಲ್ಲಿ ನಡೆಸುವ ಹೊರಗುತ್ತಿಗೆ ನೌಕರರ ನೇಮಕಾತಿಯಲ್ಲಿ ಮೀಸಲಾತಿ ಜಾರಿ ಮಾಡಿ ಆದೇಶ ಹೊರಡಿಸಿದೆ. ಸಂಪತ್ತು, ಅಧಿಕಾರ, ಅವಕಾಶಗಳು ಸಮಾನವಾಗಿ ಹಂಚಿಕೆಯಾಗ ಬೇಕೆಂಬ ಸಮಸಮಾಜದ ಆಶಯವೇ ನಮ್ಮ ಸರ್ಕಾರದ ಆಶಯವಾಗಿದೆ ಎಂದರು.

ವಿವಿಧ ಇಲಾಖೆಗಳಲ್ಲಿ ನಡೆಸುವ ಹೊರಗುತ್ತಿಗೆ ನೌಕರರ ನೇಮಕಾತಿಯಲ್ಲಿ ಮೀಸಲಾತಿಯನ್ನು ಅಳವಡಿಸುವಂತೆ ರಾಜ್ಯ ಸರ್ಕಾರ ಸೋಮವಾರ ಸುತ್ತೋಲೆ ಹೊರಡಿಸಿದೆ.

ನಗರದಲ್ಲಿ 4 ವರ್ಷಗಳಲ್ಲಿ 660 ಅಕ್ರಮ ಸಾಗಣೆ ಪ್ರಕರಣ ವರದಿ

ಮಹಿಳೆಯರ ಅಕ್ರಮ ಸಾಗಣೆ ಸಕ್ರಿಯ

• ವರುಣ ಹೆಗಡೆ

ಬೆಂಗಳೂರು: ಮಹಿಳೆಯರ ಅಸಹಾಯಕತೆಯನ್ನು ದುರ್ಬಳಕೆ ಮಾಡಿಕೊಂಡು ಅವರನ್ನು ಅಕ್ರಮ ಸಾಗಣೆ ಮಾಡುವ ಜಾಲ ನಗರದಲ್ಲಿ ಸಕ್ರಿಯವಾಗಿದ್ದು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಮಾಹಿತಿ ಪ್ರಕಾರ ನಾಲ್ಕು ವರ್ಷಗಳಲ್ಲಿ 660 ಮಹಿಳೆಯರ ಅಕ್ರಮ ಸಾಗಣೆ ಪ್ರಕರಣಗಳು ವರದಿಯಾಗಿವೆ.

ಉದ್ಯೋಗ ಸಂಬಂಧ ವಲಸೆ ಬಂದವರು, ಕುಟುಂಬದಿಂದ ಹೊರತಳ್ಳಲ್ಪಟ್ಟವರು, ಆರ್ಥಿಕ ಸಂಕಷ್ಟಕ್ಕೆ ಸಿಲುಕಿದವರು ಸೇರಿ ವಿವಿಧ ಸಮಸ್ಯೆ ಎದುರಿಸುತ್ತಿರುವ ಮಹಿಳೆಯರನ್ನೇ ಈ ಪ್ರಕರಣಗಳಲ್ಲಿ ಗುರಿಯಾಗಿಸಿಕೊಳ್ಳಲಾಗಿದೆ. ಹಣದ ಆಮಿಷವೊಡ್ಡಿ, ಅಕ್ರಮ ಸಾಗಣೆ ಮಾಡಲಾಗುತ್ತಿದೆ.

ಮಹಿಳೆಯರ ಆರ್ಥಿಕ ಸಬಲೀಕರಣಕ್ಕಾಗಿ ಸರ್ಕಾರ ವಿವಿಧ ಯೋಜನೆಗಳನ್ನು ಹಮ್ಮಿಕೊಂಡು, ಪೊಲೀಸ್ ಹಾಗೂ ವಿವಿಧ ಇಲಾಖೆಗಳ ನೆರವಿನಿಂದ ಕಾನೂನಿನಡಿ ಕ್ರಮ ಕೈಗೊಂಡರೂ ನಗರದಲ್ಲಿ ಮಹಿಳೆಯರ ಅಕ್ರಮ ಸಾಗಣೆ ತಡೆಯಲು ಸಾಧ್ಯವಾಗುತ್ತಿಲ್ಲ. ಸಂತ್ರಸ್ತೆಯರು ದೂರು ದಾಖಲಿಸಲು ಹಿಂದೇಟು ಹಾಕುವ ಕಾರಣ ಕೆಲ ಪ್ರಕರಣಗಳು ಮಾತ್ರ ವರದಿಯಾಗಿವೆ.


ರಾಜ್ಯದಲ್ಲಿ ವರದಿಯಾಗುತ್ತಿರುವ ಒಟ್ಟು ಮಹಿಳಾ ಅಕ್ರಮ ಸಾಗಣೆ ಪ್ರಕರಣಗಳಲ್ಲಿ ಬೆಂಗಳೂರಿನಲ್ಲಿಯೇ ಬಹುತೇಕ ಪ್ರಕರಣಗಳು ವರದಿಯಾಗಿವೆ.



ಅಕ್ರಮ ಸಾಗಣೆ ಮಹಿಳೆಯರ ಬಳಕೆ
- ವೇಶ್ಯಾವಾಟಿಕೆ
- ಲೈಂಗಿಕ ಕಿರುಕುಳ
- ಬಾರ್‌ಗಳಲ್ಲಿ ನೃತ್ಯ
- ಅಶ್ಲೀಲ ಚಿತ್ರೀಕರಣ
- ಭಿಕ್ಷಾಟನೆ
- ಅಂಗಾಂಗಗಳಿಗೆ
- ಜೀತ

ಅಕ್ರಮದ ಮಾರ್ಗಗಳು
- ಭಯ ಹುಟ್ಟಿಸುವುದು
- ಬಲಾತ್ಕಾರ, ಅಪಹರಣ
- ವಂಚನೆ, ಅಧಿಕಾರದ ದುರ್ಬಳಕೆ
- ಹಣ ಸೇರಿ ವಿವಿಧ ಆಮಿಷ

ಮಹಿಳೆಯರ ಅಕ್ರಮ ಸಾಗಣೆ ಪ್ರಕರಣಗಳು



2022ರಲ್ಲಿ ರಾಜ್ಯದಲ್ಲಿ ವರದಿಯಾದ 321 ಪ್ರಕರಣಗಳಲ್ಲಿ 230ಕ್ಕೂ ಅಧಿಕ ಪ್ರಕರಣಗಳು ಬೆಂಗಳೂರಿನಲ್ಲಿಯೇ ದಾಖಲಾಗಿವೆ. ಕಳೆದ ವರ್ಷ ರಾಜ್ಯದಲ್ಲಿ 299 ಪ್ರಕರಣಗಳು ವರದಿಯಾದರೆ, ನಗರದಲ್ಲಿ 200ರ ಗಡಿ ದಾಟಿದೆ. ಈ ಪ್ರಕರಣಗಳಲ್ಲಿ ಸಂತ್ರಸ್ತೆಯರ ಮೂಲತಾಣ, ಸಾಗಾಣಿಕೆ ಪ್ರದೇಶ ಹಾಗೂ ತಲುಪುವ ತಾಣವೆಂದು ವಿಂಗಡಿಸಿ, ರೈಲ್ವೆ ಸಂರಕ್ಷಣಾ ಪಡೆ ಸೇರಿ ವಿವಿಧ ಇಲಾಖೆಗಳ ನೆರವಿನಿಂದ ಅಪರಾಧಿಗಳನ್ನು ಪತ್ತೆ ಮಾಡಲಾಗುತ್ತಿದೆ.

ತಡೆಗೆ ವಿವಿಧ ಕ್ರಮ: ಮಹಿಳೆಯರ ಅಕ್ರಮ ಸಾಗಣೆ ತಡೆಗೆ ಸಂಬಂಧಿಸಿದಂತೆ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯು ಪೊಲೀಸ್ ಇಲಾಖೆಯ ನೆರವಿನಿಂದ ವಿವಿಧ ಕ್ರಮಗಳನ್ನು ಕೈಗೊಂಡಿದೆ. ವಿವಿಧ ಇಲಾಖೆಗಳ ಸಿಬ್ಬಂದಿಗೆ ಈ ಪ್ರಕರಣಗಳ ನಿರ್ವಹಣೆ ಹಾಗೂ ತಡೆಗೆ ತರಬೇತಿಯನ್ನೂ ಒದಗಿಸುತ್ತಿದೆ. ದೌರ್ಜನ್ಯಕ್ಕೆ ಒಳಗಾದ ಮಹಿಳೆಯರಿಗಾಗಿ ‘ಸಾಂತ್ವನ’, ‘ಸಖಿ’ ಸೇರಿ ವಿವಿಧ ಯೋಜನೆಗಳನ್ನು ಜಾರಿಗೊಳಿಸಿದೆ. ಮಹಿಳೆಯರ ಸಾಮಾಜಿಕ ಮತ್ತು ಆರ್ಥಿಕ ಸಬಲೀಕರಣಕ್ಕಾಗಿ ‘ಉದ್ಯೋಗಿನಿ’ ಸೇರಿ ವಿವಿಧ ಯೋಜನೆಗಳನ್ನು ಅನುಷ್ಠಾನ ಮಾಡಿದೆ. ಇಷ್ಟಾಗಿ ಮಹಿಳಾ ಅಕ್ರಮ ಸಾಗಣೆ ನಿಂತಿಲ್ಲ.

‘ಮಹಿಳೆಯರ ಅಕ್ರಮ ಸಾಗಣೆ ತಡೆಗೆ ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ಜತೆಗೆ ಜಾಗೃತಿ ಶಿಬಿರಗಳನ್ನೂ ನಡೆಸಲಾಗುತ್ತಿದೆ. ಇಂತಹ ಪ್ರಕರಣಗಳ ತಡೆಗೆ ಸರ್ಕಾರೇತರ ಸಂಸ್ಥೆಗಳೂ ಕೈಜೋಡಿಸಬೇಕು. ಸಾಮಾಜಿಕ, ಆರ್ಥಿಕ ದುರ್ಬಲ ಮಹಿಳೆಯರನ್ನು ಗುರಿಯಾಗಿಸಿಕೊಂಡು ಅಕ್ರಮ ಸಾಗಣೆ ನಡೆಸಲಾಗುತ್ತಿದೆ. ಹೀಗಾಗಿ, ಮಹಿಳೆಯರ ಸಾಮಾಜಿಕ ಹಾಗೂ ಆರ್ಥಿಕ ಪರಿಸ್ಥಿತಿ ಸುಧಾರಣೆಗೆ ವಿವಿಧ ಯೋಜನೆಗಳನ್ನು ಹಮ್ಮಿಕೊಳ್ಳಲಾಗಿದೆ’ ಎಂದು ಇಲಾಖೆಯ ಅಧಿಕಾರಿಯೊಬ್ಬರು ತಿಳಿಸಿದರು.

ಜಿಲ್ಲಾ, ತಾಲ್ಲೂಕು ಪಂಚಾಯಿತಿ ಚುನಾವಣೆ ಶೀಘ್ರ

ಡಿಸಿಎಂ ಡಿ.ಕೆ.ಶಿವಕುಮಾರ್ ಸುಳಿವು • ಸಿದ್ಧತೆ ಮಾಡಿಕೊಳ್ಳಲು ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪಕ್ಷದ ನಾಯಕರು, ಕಾರ್ಯಕರ್ತರು ಸ್ಥಳೀಯ ಸಂಸ್ಥೆಗಳ ಚುನಾವಣೆಗೆ ಸಜ್ಜಾಗಬೇಕು ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಕರೆ ನೀಡುವ ಮೂಲಕ ಮೂರು ವರ್ಷಗಳಿಂದ ನನೆಗುದಿಗೆ ಬಿದ್ದಿರುವ ಜಿಲ್ಲಾ ಹಾಗೂ ತಾಲ್ಲೂಕು ಪಂಚಾಯಿತಿ ಚುನಾವಣೆ ಶೀಘ್ರದಲ್ಲೇ ನಡೆಯುವ ಸುಳಿವು ನೀಡಿದರು.

ಕೆಪಿಸಿಸಿ ಕಚೇರಿಯಲ್ಲಿ ಮಂಗಳವಾರ ಹಮ್ಮಿಕೊಂಡಿದ್ದ ಮಾಜಿ ಪ್ರಧಾನಿ ರಾಜೀವ್ ಗಾಂಧಿ ಅವರ ಪುಣ್ಯಸ್ಮರಣೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ’ಶೀಘ್ರ ಸ್ಥಳೀಯ ಸಂಸ್ಥೆಗಳ ಚುನಾವಣೆ ನಡೆದು, ಜನರ ಕೈಗೆ ಅಧಿಕಾರ ಹೋಗಲಿದೆ. ಪಕ್ಷದ ಎಲ್ಲರೂ ಸಿದ್ಧತೆ ಮಾಡಿಕೊಳ್ಳಬೇಕು‘ ಎಂದರು.

ನೆಹರೂ, ರಾಜಗೋಪಾಲಾಚಾರಿ, ಕೆಂಗಲ್ ಹನುಮಂತಯ್ಯ, ಬಿ.ಡಿ. ಜತ್ತಿ, ಮಲ್ಲಿಕಾರ್ಜುನ ಖರ್ಗೆ ಅವರು ಸೇರಿದಂತೆ ಹಲವು ನಾಯಕರು ಸ್ಥಳೀಯ ಸಂಸ್ಥೆಗಳ ಚುನಾವಣೆ ಮೂಲಕ ರಾಷ್ಟ್ರಮಟ್ಟಕ್ಕೆ ಬೆಳೆದಿದ್ದಾರೆ. ಅದಕ್ಕಾಗಿ ಪಕ್ಷದ ಸಂಘಟನೆ ಬಲಗೊಳಿಸಬೇಕು. ಪಕ್ಷದ ಎಲ್ಲಾ ಘಟಕಗಳನ್ನು ವಿಸರ್ಜಿಸಿ, ಹೊಸದಾಗಿ ರಚಿಸುವ ಸಮಯ ಬಂದಿದೆ ಎಂದು ಹೇಳಿದರು.



ಮಾಜಿ ಪ್ರಧಾನಿ ರಾಜೀವ್ ಗಾಂಧಿ ಅವರ 32ನೇ ಪುಣ್ಯ ಸ್ಮರಣೆ ಕಾರ್ಯಕ್ರಮದಲ್ಲಿ ಉಪಮುಖ್ಯಮಂತ್ರಿ ಡಿ. ಕೆ. ಶಿವಕುಮಾರ್ ಅವರು ರಾಜೀವ್ ಗಾಂಧಿ ಅವರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿದರು. ಪಕ್ಷದ ನಾಯಕಿ ರಾಣಿ ಸತೀಶ್, ವಿಧಾನ ಪರಿಷತ್ತಿನ ಮುಖ್ಯ ಸಚೇತಕ ಸಲೀಂ ಅಹ್ಮದ್, ಕೆಪಿಸಿಸಿ ಕಾರ್ಯಾಧ್ಯಕ್ಷ ಜಿ.ಸಿ. ಚಂದ್ರಶೇಖರ್, ಉಪಾಧ್ಯಕ್ಷ ಎಂ. ನಾರಾಯಣ ಸ್ವಾಮಿ, ಪ್ರಧಾನ ಕಾರ್ಯದರ್ಶಿ ವಿಜಯ್ ಮುಳಗುಂದ್ ಭಾಗವಹಿಸಿದ್ದರು. –ಪ್ರಜಾವಾಣಿ ಚಿತ್ರ.

ಈ ದೇಶದ ಐಕ್ಯತೆ, ಸಮಗ್ರತೆ, ಶಾಂತಿಗಾಗಿ ಪ್ರಾಣತ್ಯಾಗ ಮಾಡಿದ ನಾಯಕ ರಾಜೀವ್ ಗಾಂಧಿ ಅವರು ಸಾವಿರಾರು ಯುವ ನಾಯಕರನ್ನು ಸಮಾಜಕ್ಕೆ ಕೊಡುಗೆ ಕೊಟ್ಟ, ಯುವ, ವಿದ್ಯಾರ್ಥಿ ನಾಯಕತ್ವವನ್ನು ಬೆಳೆಸಿದರು ಎಂದು ಶಿವಕುಮಾರ್ ಹೇಳಿದರು.

ಅರಣ್ಯ ಸಚಿವ ಈಶ್ವರ ಖಂಡ್ರೆ ಮಾತನಾಡಿ, ರಾಜೀವ್ ಗಾಂಧಿ ಇಲ್ಲಿಯವರೆಗೂ ಇದ್ದಿದ್ದರೆ ಭಾರತ ವಿಶ್ವದಲ್ಲೇ ಅತ್ಯಂತ ಶಕ್ತಿಶಾಲಿ ದೇಶವಾಗುತ್ತಿತ್ತು. ಯುವಕರಿಗೆ 18 ವರ್ಷಕ್ಕೆ ಮತದಾನದ ಹಕ್ಕು ನೀಡಿದರು, ಗ್ರಾಮಗಳಿಗೆ ಇಂಟರ್‌ನೆಟ್ ಸಂಪರ್ಕ ಕಲ್ಪಿಸುವ ಮೂಲಕ ಅಂದೇ ಡಿಜಿಟಲ್ ಭಾರತಕ್ಕೆ ನಾಂದಿ ಹಾಡಿದ್ದರು. ಪಂಚಾಯತ್ ರಾಜ್ ಕಾಯ್ದೆ ತಿದ್ದುಪಡಿ ತಂದು ಜನಸಾಮಾನ್ಯರಿಗೂ ಅಧಿಕಾರ ನೀಡಿದವರು ಎಂದು ಅವರು ಸ್ಮರಿಸಿದರು.

ಬದಲಾಗುವರೇ ಕೆಪಿಸಿಸಿ ಅಧ್ಯಕ್ಷ?

ಅಧ್ಯಕ್ಷ ಸ್ಥಾನ ತೊರೆಯುವ ಸುಳಿವನ್ನು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಪರೋಕ್ಷವಾಗಿ ನೀಡಿದರು. ಚುನಾವಣೆ ಬಳಿಕ ಸರ್ಕಾರದಲ್ಲಿ ಡಿ.ಕೆ.ಶಿವಕುಮಾರ್ ಉಪ ಮುಖ್ಯಮಂತ್ರಿ ಆದರೂ ಕೆಪಿಸಿಸಿ ಅಧ್ಯಕ್ಷಗಿರಿ ತೊರೆದಿರಲಿಲ್ಲ.

ರಾಜೀವ್ ಗಾಂಧಿ ಪುಣ್ಯಸ್ಮರಣೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ‘ನಾನು ಎಷ್ಟು ದಿನ ಅಧ್ಯಕ್ಷನಾಗಿ ಇರುತ್ತೇನೆ ಎಂಬುದು ಮುಖ್ಯವಲ್ಲ. ನಾನು ಅಧಿಕಾರ ಬಿಟ್ಟು ಹೋಗುವ ಮುನ್ನ ಪಕ್ಷದ ಸಂಘಟನೆಗೆ ಭದ್ರ ಬುನಾದಿ ಹಾಕಿಕೊಡುವ ಕೆಲಸ ಮಾಡುತ್ತೇನೆ. ಈ ವಿಚಾರದಲ್ಲಿ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳುತ್ತೇನೆ. ಮುಂದಿನ ಮೂರು ನಾಲ್ಕು ತಿಂಗಳಲ್ಲಿ ಕಾರ್ಯಯೋಜನೆ ಸಿದ್ಧಪಡಿಸುತ್ತೇವೆ. ನೀವೆಲ್ಲರೂ ಅದಕ್ಕೆ ಸಿದ್ಧರಾಗಬೇಕು’ ಎಂದು ಹೇಳಿದರು.



ಕುಸಿದ ಮಂಟಪ

ಹೊಸಪೇಟೆಯಲ್ಲಿರುವ ಹಂಪಿ ವಿರೂಪಾಕ್ಷ ದೇವಸ್ಥಾನದ ರಥಬೀದಿಯಲ್ಲಿರುವ ಸಾಲು ಮಂಟಪಗಳ ಪೈಕಿ ಒಂದು ಮಂಗಳವಾರ ರಾತ್ರಿ ಕುಸಿದಿರುವುದು. ಮೂರು ಮಂಟಪ ಕುಸಿದಿದೆ ಎಂದು ಪ್ರವಾಸಿ ಮಾರ್ಗದರ್ಶಿಗಳು ಮಾಹಿತಿ ನೀಡಿದ್ದಾರೆ. ಆದರೆ, ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆ (ಎಎಸ್‌ಐ) ಅಧಿಕಾರಿಗಳು ಇದನ್ನು ನಿರಾಕರಿಸಿದ್ದು, ಒಂದು ಮಂಟಪವಷ್ಟೇ ಕುಸಿದಿದೆ ಎಂದಿದ್ದಾರೆ –ಪ್ರಜಾವಾಣಿ ಚಿತ್ರ

ಚಿನ್ನದ ದರ ₹550, ಬೆಳ್ಳಿ ₹1,600 ಇಳಿಕೆ

ನವದೆಹಲಿ (ಪಿಟಿಐ): ಇಲ್ಲಿನ ಚಿನಿವಾರ ಪೇಟೆಯಲ್ಲಿ ಮಂಗಳವಾರ ಹೂಡಿಕೆದಾರರು ಮಾರಾಟಕ್ಕೆ ಹೆಚ್ಚು ಗಮನ ನೀಡಿದ್ದರಿಂದಾಗಿ ದಾಖಲೆಯ ಮಟ್ಟಕ್ಕೆ ಜಿಗಿದಿದ್ದ ಚಿನ್ನ ಮತ್ತು ಬೆಳ್ಳಿ ಧಾರಣೆಯು ಇಳಿಕೆಯಾಗಿದೆ.

ಚಿನ್ನದ ದರವು 10 ಗ್ರಾಂಗೆ ₹550 ಕಡಿಮೆಯಾಗಿ, ₹74,650ಕ್ಕೆ ಮಾರಾಟವಾಯಿತು. ಬೆಳ್ಳಿ ಧಾರಣೆಯು ಕೆ.ಜಿಗೆ ₹1,600 ಇಳಿಕೆಯಾಗಿದ್ದು, ₹94,500 ಆಗಿದೆ.

ಜಾಗತಿಕ ಮಾರುಕಟ್ಟೆಯಲ್ಲಿ ಚಿನ್ನ ಮತ್ತು ಬೆಳ್ಳಿ ಧಾರಣೆಯು ಒಂದು ಔನ್ಸ್‌ಗೆ (28.34 ಗ್ರಾಂ) ಕ್ರಮವಾಗಿ 2,420 ಡಾಲರ್ (ಅಂದಾಜು ₹2.01 ಲಕ್ಷ) ಮತ್ತು 31.60 (ಅಂದಾಜು ₹2,632) ಡಾಲರ್‌ನಂತೆ ಮಾರಾಟವಾಗಿದೆ.

‘ಶಕ್ತಿ’ಯಿಂದ ‘ನಮ್ಮ ಮೆಟ್ರೊ’ಗೆ ನಷ್ಟವಾಗಿಲ್ಲ: ಸಚಿವ ರಾಮಲಿಂಗಾರೆಡ್ಡಿ

ಬೆಂಗಳೂರು: ‘ಶಕ್ತಿ’ ಯೋಜನೆಯಿಂದ ‘ನಮ್ಮ ಮೆಟ್ರೊ’ಗೆ ಯಾವುದೇ ರೀತಿ ನಷ್ಟ ಆಗಿಲ್ಲ. ಬದಲಿಗೆ ಮೆಟ್ರೊ ಪ್ರಯಾಣಿಕರ ಸಂಖ್ಯೆ ಮತ್ತು ಆದಾಯದಲ್ಲಿ ಗಣನೀಯ ಏರಿಕೆ ಆಗಿದೆ ಎಂದು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಹೇಳಿದ್ದಾರೆ.

ಶಕ್ತಿ ಯೋಜನೆಯಿಂದ ‘ಮೆಟ್ರೊ’ಗೆ ಕುತ್ತು ಬಂದಿದೆ ಎಂಬ ಪ್ರಧಾನಿ ಮೋದಿಯವರ ಹೇಳಿಕೆ ಅವೈಜ್ಞಾನಿಕ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಶಕ್ತಿ ಯೋಜನೆ 2023ರ ಜೂನ್ 11 ರಂದು ಜಾರಿಗೆ ಬಂದಿದ್ದು, ಇದೇ 20ರವರೆಗೆ ಯೋಜನೆಯಡಿ ಬೆಂಗಳೂರು ವ್ಯಾಪ್ತಿಯಲ್ಲಿ ಮಹಿಳೆಯರು 67.34 ಕೋಟಿ ಬಾರಿ ಪ್ರಯಾಣಿಸಿದ್ದಾರೆ ಎಂದರು.

ಕಳೆದ ಒಂದು ವರ್ಷದಲ್ಲಿ ‘ನಮ್ಮ ಮೆಟ್ರೊ’ ಪ್ರಯಾಣಿಕರ ಸಂಖ್ಯೆ ಶೇ 30ರಷ್ಟು ಏರಿಕೆಯಾಗಿದೆ. ಜನವರಿ 2023ರಲ್ಲಿ ಮೆಟ್ರೊ ಪ್ರಯಾಣಿಕರ ಸಂಖ್ಯೆ 1.65 ಕೋಟಿ, ಆದಾಯ ₹39.15 ಕೋಟಿ ಇತ್ತು. 2024ರ ಏಪ್ರಿಲ್‌ನಲ್ಲಿ ಪ್ರಯಾಣಿಕರ ಸಂಖ್ಯೆ 2 ಕೋಟಿಗೆ, ಆದಾಯ ₹51.71 ಕೋಟಿಗೆ ಏರಿದೆ ಎಂದು ಹೇಳಿದ್ದಾರೆ.

2023ಕ್ಕೆ ಹೋಲಿಸಿದರೆ 2024 ರಲ್ಲಿ ಒಂದು ತಿಂಗಳ ಪ್ರಯಾಣಿಕರ ಸಂಖ್ಯೆಯಲ್ಲಿ ಸರಾಸರಿ 35 ಲಕ್ಷ ಏರಿಕೆ ಮತ್ತು ಆದಾಯದಲ್ಲಿ ₹1.10 ಕೋಟಿ ಏರಿಕೆಯಾಗಿದೆ ಎಂದು ರಾಮಲಿಂಗಾರೆಡ್ಡಿ ಅವರು ತಿಳಿಸಿದ್ದಾರೆ.

ಗೃಹಸಚಿವರ ವಿರುದ್ಧ ಶಾಸಕ ಬಸನಗೌಡ ಪಾಟೀಲ ಯತ್ನಾಳ ಆರೋಪ

ವೈಫಲ್ಯ ಮುಚ್ಚಿಹಾಕಲು ಪೊಲೀಸರ ಅಮಾನತು

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: ‘ಅಂಜಲಿ ಅಂಬಿಗೇರ ಹತ್ಯೆಗೆ ಸಂಬಂಧಿಸಿದಂತೆ ರಾಜ್ಯದ ಗೃಹ ಸಚಿವರು ತಮ್ಮ ವೈಫಲ್ಯ ಮುಚ್ಚಿಹಾಕಲು, ಪೊಲೀಸ್ ಅಧಿಕಾರಿಗಳನ್ನು ಅಮಾನತು ಮಾಡಿದ್ದಾರೆ’ ಎಂದು ಶಾಸಕ ಬಸನಗೌಡ ಪಾಟೀಲ ಯತ್ನಾಳ ಆರೋಪಿಸಿದರು.

ಇಲ್ಲಿನ ವೀರಾಪೂರ ಓಣಿಯಲ್ಲಿ ಇರುವ ಅಂಜಲಿ ಅಂಬಿಗೇರ ಮನೆಗೆ ಮಂಗಳವಾರ ಭೇಟಿ ನೀಡಿ, ಕುಟುಂಬಸ್ಥರಿಗೆ ಸಾಂತ್ವನ ಹೇಳಿದ ಬಳಿಕ ಸುದ್ದಿಗಾರ ಜೊತೆ ಮಾತನಾಡಿದರು.

‘ಮದ್ಯದ ದರ ತುಟ್ಟಿಯಾದ ಕಾರಣ ರಾಜ್ಯದಲ್ಲಿ ಗಾಂಜಾ, ಅಫೀಮು ಸೇರಿ ಮಾದಕ ವ್ಯಸ್ತುಗಳ ಮಾರಾಟ ಹಾಗೂ ಸೇವನೆ ರಾಜಾರೋಷವಾಗಿ ನಡೆದಿದೆ. ಇದರಿಂದ ಯುವ ಜನಾಂಗ ದಾರಿ ತಪ್ಪುತ್ತಿದೆ. ಎಲ್ಲ ಅಪರಾಧಗಳಿಗೆ ಇದೇ ಕಾರಣ’ ಎಂದರು.



ಹುಬ್ಬಳ್ಳಿಯಲ್ಲಿ ಹತ್ಯೆಗೀಡಾದ ಅಂಜಲಿ ಮನೆಗೆ ಶಾಸಕ ಬಸನಗೌಡ ಪಾಟೀಲ ಯತ್ನಾಳ ಅವರು ಮಂಗಳವಾರ ಭೇಟಿ, ಕುಟುಂಬಸ್ಥರಿಗೆ ಸಾಂತ್ವನ ಹೇಳಿದರು

‘ಘಟನೆ ನಡೆದು ಒಂದು ವಾರದ ನಂತರ ಭೇಟಿ ನೀಡಿದ ಗೃಹ ಸಚಿವರು ಈ ಬಗ್ಗೆ ಕೂಲಂಕಷ ಪರಿಶೀಲನೆ ನಡೆಸಿಲ್ಲ. ಮೃತಳ ಕುಟುಂಬಕ್ಕೆ ಮನೆಯ ಆಸೆ ತೋರಿಸಿ ಹೋಗಿದ್ದಾರೆ. ಪೊಲೀಸ್ ಅಧಿಕಾರಿಗಳು ಮುಕ್ತವಾಗಿ ಕೆಲಸ ಮಾಡಲು ಅವಕಾಶ ನೀಡುತ್ತಿಲ್ಲ. ಅವರ ಕೆಲಸದಲ್ಲಿ ಹಸ್ತಕ್ಷೇಪ ಮಾಡಿ, ತಮ್ಮನ್ನು ವಿರೋಧ ಮಾಡಿದವರ ವಿರುದ್ಧ ಪ್ರಕರಣ ದಾಖಲಿಸುವಂತೆ ಒತ್ತಡ ಹೇರಲಾಗುತ್ತಿದೆ’ ಎಂದು ಆಪಾದಿಸಿದರು.

ಅಧಿವೇಶನದಲ್ಲಿ ಚರ್ಚೆ: ‘ನೇಹಾ ಹಿರೇಮಠ ಕೊಲೆ ಆದಾಗಲೇ ಇಲ್ಲಿನ ಪೊಲೀಸ್ ಅಧಿಕಾರಿಗಳ ವಿರುದ್ಧ ಜಿಲ್ಲಾ ಉಸ್ತುವಾರಿ ಸಚಿವರು ಕ್ರಮ ಕೈಗೊಳ್ಳಬೇಕಿತ್ತು. ಸಂತ್ರಸ್ತರಿಗೆ ರಕ್ಷಣೆ ನೀಡುವ ಬದಲು ಅಪರಾಧಿಗಳಿಗೆ ರಕ್ಷಣೆ ನೀಡುತ್ತಿದ್ದಾರೆ. ತಮಗೆ ಬೇಕಾದ ಪೊಲೀಸರನ್ನು ನೇಮಕ ಮಾಡಿಸಿಕೊಳ್ಳುತ್ತಾರೆ. ಈ ಬಗ್ಗೆ ಅಧಿವೇಶನದಲ್ಲಿ ಚರ್ಚಿಸುವೆ’ ಎಂದು ಅವರು ಹೇಳಿದರು.

‘ದೇಶದೆಲ್ಲೆಡೆ ಒಂದೇ ಪೊಲೀಸ್ ಕಾನೂನು ಇದೆ. ಆದರೆ, ಉತ್ತರ ಪ್ರದೇಶದಲ್ಲಿ ಅಕ್ರಮಗಳ ವಿರುದ್ಧ ಕಠಿಣ ಕ್ರಮ ಕೈಗೊಂಡಂತೆ ಇಲ್ಲ ಕ್ರಮ ವಹಿಸುತ್ತಿಲ್ಲ. ಕಾನೂನು–ಸುವ್ಯವಸ್ಥೆ ರಕ್ಷಿಸಬೇಕು’ ಎಂದು ಆಗ್ರಹಿಸಿದರು.

ಗೌಡರ ಕುಟುಂಬಕ್ಕೆ ಕೆಟ್ಟ ಹೆಸರು ತರಲು ಪೆನ್ ಡ್ರೈವ್ ಸಂಚಿನಲ್ಲಿ ಭಾಗಿಯಾಗಿರುವ ಉಪ ಮುಖ್ಯಮಂತ್ರಿ: ಆರೋಪ

ಡಿಕೆಶಿ ರಾಜೀನಾಮೆಗೆ ಎಚ್‌ಡಿಕೆ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದೇವೇಗೌಡರ ಕುಟುಂಬಕ್ಕೆ ಕೆಟ್ಟ ಹೆಸರು ತರುವ ಉದ್ದೇಶ ಹೊಂದಿದ್ದ ಪೆನ್‌ಡ್ರೈವ್ ಸಂಚಿನಲ್ಲಿ ಭಾಗಿಯಾಗಿರುವ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಕೂಡಲೇ ತಮ್ಮ ಹುದ್ದೆಗೆ ರಾಜೀನಾಮೆ ಕೊಡಬೇಕು ಎಂದು ಜೆಡಿಎಸ್ ರಾಜ್ಯ ಘಟಕದ ಅಧ್ಯಕ್ಷ ಎಚ್.ಡಿ. ಕುಮಾರಸ್ವಾಮಿ ಆಗ್ರಹಿಸಿದರು.

ಸುದ್ದಿಗಾರರ ಜತೆಗೆ ಮಂಗಳವಾರ ಮಾತನಾಡಿದ ಅವರು, 'ಪೆನ್ ಡ್ರೈವ್ ಸೃಷ್ಟಿಕರ್ತ ಕಾರ್ತಿಕ್ ಗೌಡ ವಿಡಿಯೊಗಳನ್ನು ಮೊದಲು ತಂದುಕೊಟ್ಟಿದ್ದೇ ಶಿವಕುಮಾರ್ ಅವರಿಗೆ. ಆ ವೇಳೆ, ಹಾಸನದ ಕಾಂಗ್ರೆಸ್ ಅಭ್ಯರ್ಥಿಯೂ ಇದ್ದರು. ಈ ಪ್ರಕರಣದಲ್ಲಿ ಶಿವಕುಮಾರ್ ಪಾತ್ರ ಇರುವುದಕ್ಕೆ ಆಡಿಯೊ ಸಂಭಾಷಣೆಯ ಸಾಕ್ಷ್ಯವೂ ಇದೆ. ಅವರು ರಾಜೀನಾಮೆ ಕೊಡದಿದ್ದರೆ, ಅವರನ್ನು ಮುಖ್ಯಮಂತ್ರಿಯವರು ಸಚಿವ ಸಂಪುಟದಿಂದ ವಜಾ ಮಾಡಬೇಕು ಎಂದು ಒತ್ತಾಯಿಸಿದರು.

'ಪೆನ್ ಡ್ರೈವ್ ಸೃಷ್ಟಿ ಮಾಡಿ, ಅದನ್ನೆಲ್ಲಾ ಹೊರಗೆ ತಂದು ಮಹಿಳೆಯರ ಪಾಲಿಗೆ ಕಂಟಕರಾದವರೇ ಇವತ್ತು ನರೇಂದ್ರ ಮೋದಿ, ಅಮಿತ್ ಶಾ ಅವರನ್ನು, ಎನ್‌ಡಿಎ ಮೈತ್ರಿಕೂಟದಿಂದ ಜೆಡಿಎಸ್ ಪಕ್ಷವನ್ನು ಯಾವಾಗ ಹೊರಕ್ಕೆ ಹಾಕುತ್ತೀರಿ ಎಂದು ಪ್ರಶ್ನಿಸುತ್ತಿದ್ದಾರೆ. ಆಡಿಯೊ ಸಂಭಾಷಣೆಯಲ್ಲಿ ಈ ಅಂಶವೂ ಇದೆ. ಅಲ್ಲಿಗೆ ಇವರ ದುರುದ್ದೇಶ ಏನು ಎನ್ನುವುದು ಅರ್ಥ ಆಯಿತಲ್ಲವೇ' ಎಂದು ಕುಮಾರಸ್ವಾಮಿ ಪ್ರಶ್ನಿಸಿದರು.

'ಪೆನ್ ಡ್ರೈವ್ ಪ್ರಕರಣದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಸಾಕ್ಷ್ಯ ಇದೆಯಾ ಎಂದು ಕೇಳಿದ್ದಾರೆ. ಮಾಧ್ಯಮಗಳಲ್ಲಿ ಬಿಡುಗಡೆ ಆಗಿರುವ ಶಿವರಾಮೇಗೌಡ, ದೇವರಾಜೇಗೌಡ, ಶಿವಕುಮಾರ್ ನಡುವಿನ ಮೊಬೈಲ್ ಸಂಭಾಷಣೆಗಿಂತ ಬೇರೆ ಸಾಕ್ಷ್ಯ ಬೇಕಾ' ಎಂದು ಅವರು ಕೇಳಿದರು.

'ಅಸೂಯೆ, ಹೊಟ್ಟೆಕಿಚ್ಚಿಗೆ ಮದ್ದಿಲ್ಲ'



'ವಿಧಾನಸಭಾ ಚುನಾವಣೆಯ ಫಲಿತಾಂಶದ ನಂತರ ಭ್ರಮನಿರಸನಗೊಂಡಿರುವ ಎಚ್.ಡಿ. ಕುಮಾರಸ್ವಾಮಿ, ಹೇಗಾದರೂ ಮಾಡಿ ನನ್ನ ರಾಜೀನಾಮೆ ಪಡೆಯುವ ಆಸೆ ಇಟ್ಟುಕೊಂಡಿದ್ದಾರೆ. ಅವರ ಅಸೂಯೆ, ಹೊಟ್ಟೆಕಿಚ್ಚಿಗೆ ಮದ್ದಿಲ್ಲ' ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

ಸುದ್ದಿಗಾರರ ಜತೆ ಮಂಗಳವಾರ ಮಾತನಾಡಿದ ಅವರು, 'ಕಿಂಗ್ ಮೇಕರ್ ಆಗುವ ಭ್ರಮೆಯಲ್ಲಿದ್ದ ಅವರು ಈಗ ಶಕ್ತಿ ಕಳೆದುಕೊಂಡಿದ್ದಾರೆ. ಹತಾಶೆಗೆ ಒಳಗಾಗಿದ್ದಾರೆ. ಅದಕ್ಕಾಗಿ ಬಿಜೆಪಿಯನ್ನು ಅಪ್ಪಿಕೊಂಡಿದ್ದಾರೆ. ರಾಜ್ಯದ ಜನರು ನನ್ನ ಅಧ್ಯಕ್ಷತೆಗೆ 135 ಸ್ಥಾನ, ಅವರಿಗೆ 19 ಸ್ಥಾನ ನೀಡಿದ್ದಾರೆ. ನಮ್ಮನ್ನು ಕೆಳಗಿಳಿಸಲು ರಾಜೀನಾಮೆ ಪಡೆಯಲು ನಿರಂತರ ಪ್ರಯತ್ನ ಮುಂದುವರಿಸಿದ್ದಾರೆ. ಅವರು ಆಸೆ ಪಡುವುದನ್ನು ನಾನೇಕೆ ತಪ್ಪು ಎನ್ನಲಿ' ಎಂದು ಪ್ರಶ್ನಿಸಿದರು.

ಕುಮಾರಸ್ವಾಮಿ ಅವರ ದೂರವಾಣಿ ಕದ್ದಾಲಿಕೆಯ ಆರೋಪದ ಬಗ್ಗೆ ಕೇಳಿದಾಗ, 'ಅವರಲ್ಲಿ ಏನೋ ಸಮಸ್ಯೆ ಇರಬೇಕು. ಅವರು ಹಿಂದೆ ಇಂತಹ ಹೀನಾಯ ಕೆಲಸಗಳನ್ನು ಮಾಡಿರಬೇಕು. ಅದಕ್ಕಾಗಿ ಅದನ್ನು ಬೇರೆಯವರ ಮೇಲೆ ಹಾಕಲು ಪ್ರಯತ್ನಿಸುತ್ತಿದ್ದಾರೆ' ಎಂದು ಉತ್ತರಿಸಿದರು.

ರಾಹುಲ್ ಗಾಂಧಿ ವಿದೇಶಕ್ಕೆ ಹೋಗುತ್ತಾರೆ ಎಂಬ ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರ ಹೇಳಿಕೆಗೆ ಪ್ರತಿಕ್ರಿಯಿಸಿದ ಅವರು, 'ಈ ಬಾರಿಯ ಚುನಾವಣೆಯಲ್ಲಿ ಬಿಜೆಪಿ ಸೋಲನುಭವಿಸಲಿದ್ದು, ಯೋಗಿ ಆದಿತ್ಯನಾಥ ಅವರು ಮತ್ತೊಮ್ಮೆ ಸನ್ಯಾಸತ್ವ ಸ್ವೀಕರಿಸಲಿದ್ದಾರೆ' ಎಂದು ಹೇಳಿದರು.

ಸರ್ಕಾರದ ಸಾಧನೆ ಶೂನ್ಯ ಎಂಬ ಬಿಜೆಪಿ ಟೀಕೆಗೆ ಪ್ರತಿಕ್ರಿಯಿಸಿದ ಅವರು, 'ರಾಜ್ಯದಲ್ಲಿ ವಿರೋಧ ಪಕ್ಷದ ನಾಯಕನನ್ನು ಆಯ್ಕೆ ಮಾಡಲು ಬಿಜೆಪಿಗೆ ಏಳು ತಿಂಗಳು ಬೇಕಾಯಿತು. ಇದು ಬಿಜೆಪಿಯ ಅಸಮರ್ಥತೆಗೆ ಪುರಾವೆ. ರಾಜ್ಯದಲ್ಲಿ ಬಿಜೆಪಿ ಪರಿಸ್ಥಿತಿ ಶೂನ್ಯ' ಎಂದರು.

'ಪ್ರಜ್ವಲ್ ಆರೋಪಿಯಷ್ಟೇ; ಅಪರಾಧಿಯಲ್ಲ'



'ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಪ್ರಜ್ವಲ್ ರೇವಣ್ಣನನ್ನು ಅಪರಾಧಿ ಮಾಡಿ ಬಿಟ್ಟಿದ್ದಾರೆ. ಇನ್ನೂ ಆರೋಪಿ ಸ್ಥಾನದಲ್ಲಿದ್ದಾನೆ. ಅವನು ಅಪರಾಧಿ ಎಂದು ಎಲ್ಲಿ ಸಾಬೀತಾಗಿದೆ' ಎಂದು ಕುಮಾರಸ್ವಾಮಿ ಪ್ರಶ್ನಿಸಿದರು.

'ವಿಡಿಯೊಗಳಲ್ಲಿ ಪುರುಷನ ಮುಖವೇ ಕಾಣುವುದಿಲ್ಲ ಎಂಬ ಕಾರಣಕ್ಕೆ ತನಿಖಾ ತಂಡದವರೇ ಮಾಧ್ಯಮಗಳಿಗೆ ಮಾಹಿತಿ ಸೋರಿಕೆ ಮಾಡಿದ್ದಾರೆ. ಇದು ಮುಖ್ಯಮಂತ್ರಿಗೆ ಗೊತ್ತಿಲ್ಲವೇ. ನಾವು ನೈತಿಕತೆ ಉಳಿಸಬೇಕು ಎಂಬ ಉದ್ದೇಶದಿಂದಲೇ, ಆತನ ವಿರುದ್ಧ ಆರೋಪ ಕೇಳಿ ಬಂದ ತಕ್ಷಣ ಪಕ್ಷದಿಂದ ಅಮಾನತು ಮಾಡಿದ್ದೇವೆ. ಸಿದ್ದರಾಮಯ್ಯನವರ ತರಹ ನಾವು ಭಂಡತನ ಮಾಡಿಲ್ಲ. ನಿಮ್ಮ ಮಗನದ್ದು ನಡೆಯಿತಲ್ಲ.. ಅಪ್ಪ..ಅಪ್ಪ.. ನಾನು ಕೊಟ್ಟಿದ್ದೇ 5 ಹೆಸರು, 6 ಹೆಸರು ಎಲ್ಲಿಂದ ಬಂತು ಹೇಳಿ ಎಂದು ಕಥೆ ಕಟ್ಟಿದ್ದರಲ್ಲ. ನಿಮ್ಮ ಮಗನ ಹೆಸರು ಬಂದ ಕೂಡಲೇ ಅದಕ್ಕೆ ಸಿಎಸ್‌ಆರ್ ಫಂಡ್ ಎಂದು ಬಣ್ಣ ಹಚ್ಚಿದ್ದು ಗೊತ್ತಿಲ್ಲವೇ' ಎಂದು ಕೇಳಿದರು.

ವಾಪಸ್ ಬಾ ಪ್ರಜ್ವಲ್; ಮತ್ತೊಮ್ಮೆ ಮನವಿ

48 ಗಂಟೆಯೊಳಗೆ ವಾಪಸ್ ಬರುವಂತೆ ಪ್ರಜ್ವಲ್ ರೇವಣ್ಣಗೆ ಸೋಮವಾರ ಮನವಿ ಮಾಡಿದ್ದ ಎಚ್.ಡಿ. ಕುಮಾರಸ್ವಾಮಿ, 'ಎಲ್ಲೇ ಇದ್ದರೂ ತಕ್ಷಣ ಎಸ್ಐಟಿ ಮುಂದೆ ಹಾಜರಾಗು ಎಂದು ಸಂದೇಶ ನೀಡಿದ್ದೇನೆ' ಎಂದು ಮಂಗಳವಾರ ಹೇಳಿದರು.

'ನನ್ನ ಸಂಪರ್ಕದಲ್ಲಿ ಪ್ರಜ್ವಲ್ ಇಲ್ಲ. ಆ ಕಾರಣಕ್ಕೆ ಸಾರ್ವಜನಿಕವಾಗಿ ಮಾಧ್ಯಮಗಳ ಮೂಲಕ ಮನವಿ ಮಾಡಿದ್ದೇನೆ. ವಾಪಸ್ ಬರುತ್ತಾನೆ ಎಂದು ನಾನು ನಿರೀಕ್ಷೆ ಇಟ್ಟುಕೊಂಡಿದ್ದೇನೆ. ದೇವೇಗೌಡರು ಹಾಗೂ ನಮ್ಮ ಪಕ್ಷದ ಕಾರ್ಯಕರ್ತರ ಮೇಲೆ ಗೌರವ ಎನ್ನುವುದು ಇದ್ದರೆ ವಾಪಸ್ ಬಾ.. ಎಂದು ಹೇಳಿದ್ದೇನೆ. ಈ ಕೂಡಲೇ ವಾಪಸ್ ಬಾ.. ಎಂದು ಮಾಧ್ಯಮಗಳು ಮೂಲಕ ಮತ್ತೆ ಮನವಿ ಮಾಡುತ್ತೇನೆ' ಎಂದರು.

ಸಾಮರಸ್ಯಕ್ಕೆ ಪ್ರಾರ್ಥಿಸಿ: ಹಜ್ ಯಾತ್ರಿಗಳಿಗೆ ಸಿ.ಎಂ ಮನವಿ



ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಹೆಗಡೆ ನಗರದ ಹಜ್ ಭವನದಲ್ಲಿ ಮಂಗಳವಾರ ನಡೆದ ಕಾರ್ಯಕ್ರಮದಲ್ಲಿ ಹಜ್ ಯಾತ್ರಿಕರನ್ನು ಬೀಳ್ಕೊಟ್ಟರು. ವಸತಿ ಸಚಿವ ಜಮೀರ್ ಅಹಮದ್ ಖಾನ್, ಹಜ್ ಸಚಿವ ರಹೀಂ ಖಾನ್ ಇದ್ದರು.

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಎಲ್ಲ ಧರ್ಮವರಿಗೂ ಆರ್ಥಿಕ, ಸಾಮಾಜಿಕ, ರಾಜಕೀಯ ಶಕ್ತಿ ಬಂದು ಸಬಲರಾಗಬೇಕು. ದೇಶ ಮತ್ತು ರಾಜ್ಯದಲ್ಲಿ ಉತ್ತಮ ಮಳೆಯಾಗಿ ಬೆಳೆ ಬರಲಿ, ನಾಡು ಸಮೃದ್ಧವಾಗಲಿ ಎಂದು ಹಜ್ ಯಾತ್ರಿಗಳು ಪ್ರಾರ್ಥಿಸಲಿ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಮನವಿ ಮಾಡಿದ್ದಾರೆ.

ಹೆಗಡೆನಗರದಲ್ಲಿರುವ ಹಜ್ ಭವನದಲ್ಲಿ ಆಯೋಜಿಸಲಾಗಿದ್ದ ಹಜ್ ಯಾತ್ರಿಗಳ ಬೀಳ್ಕೊಡುಗೆ ಸಮಾರಂಭದಲ್ಲಿ ಭಾಗವಹಿಸಿದ ಬಳಿಕ ಅವರು ಮಾಧ್ಯಮ ಪ್ರತಿನಿಧಿಗಳ ಜತೆ ಮಾತನಾಡಿದರು.

'10,168 ಹಜ್ ಯಾತ್ರಿಗಳ ಪ್ರಯಾಣ ಸುಖಕರವಾಗಿರಲಿ ಎಂದು ಶುಭಕೋರಿದ್ದೇನೆ. ಸಮಾಜದಲ್ಲಿ ಸಾಮರಸ್ಯ, ಸೌಹಾರ್ದ ನೆಲಸಲಿ ಎಂದು ಪ್ರಾರ್ಥಿಸುವಂತೆ ತಿಳಿಸಿದ್ದೇನೆ. ಕುವೆಂಪು ಅವರು ಸರ್ವ ಜನಾಂಗದ ಶಾಂತಿಯ ತೋಟ ಎಂದು ಹೇಳಿದಂತೆ ಹಿಂದೂ, ಮುಸ್ಲಿ, ಕ್ರಿಶ್ಚಿಯನ್, ಬೌದ್ಧ, ಸಿಖ್ ಧರ್ಮದವರೆಲ್ಲ ಒಂದು ತಾಯಿಯ ಮಕ್ಕಳಂತೆ ಇರಬೇಕು. ಇದಕ್ಕಾಗಿ ಪ್ರಾರ್ಥಿಸುವಂತೆ ಯಾತ್ರಾರ್ಥಿಗಳಲ್ಲಿ ಮನವಿ ಮಾಡಿದ್ದೇನೆ' ಎಂದೂ ಅವರು ಹೇಳಿದರು.

ಅನುದಾನ: ಮಂಗಳೂರು ಮತ್ತು ಕಲಬುರಗಿಯಲ್ಲಿ ಹಜ್ ಭವನ ನಿರ್ಮಾಣಕ್ಕಾಗಿ ಅನುದಾನ ಒದಗಿಸಲಾಗಿದೆ. ಕಲಬುರಗಿಯಲ್ಲಿ ಸ್ಥಳ ಸಿಗದೇ ವಿಳಂಬವಾಗಿದೆ. ಮಂಗಳೂರಿನಲ್ಲಿ ಸ್ಥಳ ಗುರುತಿಸಲಾಗಿದೆ. ಚುನಾವಣಾ ನೀತಿ ಸಂಹಿತೆ ಮುಗಿದ ಮೇಲೆ ಕಾಮಗಾರಿಗೆ ಚಾಲನೆ ನೀಡಲಾಗುವುದು ಎಂದು ಹೇಳಿದರು.

ರೇವ್ ಪಾರ್ಟಿ: ಡ್ರಗ್ಸ್ ಸೇವನೆ ಪತ್ತೆಗೆ ವೈದ್ಯಕೀಯ ಪರೀಕ್ಷೆಗೆ ರವಾನೆ

101 ಜನರ ರಕ್ತದ ಮಾದರಿ ಸಂಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆನೇಕಲ್ ತಾಲ್ಲೂಕಿನ ಹೆಬ್ಬಗೋಡಿ ಪೊಲೀಸ್ ಠಾಣೆ ವ್ಯಾಪ್ತಿಯ ಹುಸ್ಕೂರ್ ಬಳಿಯ ಜಿ.ಆರ್.ಫಾರ್ಮ್ ಹೌಸ್‌ನಲ್ಲಿ ನಡೆದಿದ್ದ ರೇವ್ ಪಾರ್ಟಿ ಪ್ರಕರಣದ ತನಿಖೆ ಚುರುಕುಗೊಳಿಸಿರುವ ಸಿಸಿಬಿ ಪೊಲೀಸರು, ಪಾರ್ಟಿಯಲ್ಲಿದ್ದ 101 ಜನರ ರಕ್ತದ ಮಾದರಿ ಸಂಗ್ರಹಿಸಿ ವೈದ್ಯಕೀಯ ಪರೀಕ್ಷೆಗೆ ರವಾನಿಸಿದ್ದಾರೆ.

'ವೈದ್ಯಕೀಯ ಪರೀಕ್ಷೆಯ ವರದಿ ಬಂದ ಬಳಿಕ, ಪಾರ್ಟಿಯಲ್ಲಿದ್ದವರು ಡ್ರಗ್ಸ್ ಸೇವಿಸಿದ್ದರೆ ಅಥವಾ ಇಲ್ಲವೇ ಎಂಬುದು ತಿಳಿಯಲಿದೆ' ಎಂದು ಸಿಸಿಬಿ ಮೂಲಗಳು ತಿಳಿಸಿವೆ.

'ಸನ್‌ಸೆಟ್ ಟು ಸನ್‌ರೈಸ್ ವಿಕ್ಟರಿ' ಹೆಸರಿನಲ್ಲಿ ಪಾರ್ಟಿ ಆಯೋಜಿಸಲಾಗಿತ್ತು. ರಾತ್ರಿಯಿಡೀ ಪಾರ್ಟಿ ನಡೆಸುವ ಉದ್ದೇಶವಿತ್ತು. ಭಾನುವಾರ ತಡರಾತ್ರಿ ದಾಳಿ ನಡೆಸಲಾಗಿತ್ತು. ನಾಪತ್ತೆ ಆಗಿರುವ ಫಾರ್ಮ್ ಹೌಸ್ ಮಾಲೀಕನ ಪತ್ತೆಗೆ ಶೋಧ ಕಾರ್ಯ ನಡೆಸಲಾಗುತ್ತಿದೆ' ಎಂದು ಮೂಲಗಳು ಹೇಳಿವೆ.

'ಸ್ಥಳದಲ್ಲಿ ಕೊಕೇನ್, ಎಂಡಿಎಂಎ, ಹೈಡ್ರೊ ಗಾಂಜಾ ಸೇರಿ ಹಲವು ಮಾದರಿಯ ಮಾದಕ ವಸ್ತುಗಳು ಪತ್ತೆಯಾಗಿದ್ದು ಅವುಗಳನ್ನು ಜಪ್ತಿ ಮಾಡಿಕೊಳ್ಳಲಾಗಿದೆ. ಎಲೆಕ್ಟ್ರಾನಿಕ್ ಸಿಟಿ ಪೊಲೀಸ್ ಠಾಣೆಯಿಂದ ಹೆಬ್ಬಗೋಡಿ ಠಾಣೆಗೆ ಪ್ರಕರಣ ವರ್ಗಾವಣೆ ಮಾಡಿ, ತನಿಖೆ ಮುಂದುವರಿಸಲಾಗಿದೆ' ಎಂದು ನಗರ ಪೊಲೀಸ್ ಕಮಿಷನರ್ ಬಿ.ದಯಾನಂದ ಪತ್ರಿಕಾಗೋಷ್ಠಿಯಲ್ಲಿ ಮಂಗಳವಾರ ಮಾಹಿತಿ ನೀಡಿದರು.



ವಿ.ರಣಧೀರ



ವಾಸು



ಅರುಣ್



ನಾಗಬಾಬು



ಮಹಮ್ಮದ್ ಸಿದ್ದಿಕ್ಕಿ

ಈಜುಕೊಳಕ್ಕೆ ಡ್ರಗ್ಸ್ ಎಸೆದಿದ್ದ ಪೆಡ್ಲರ್‌ಗಳು: 'ಪೊಲೀಸರು ದಾಳಿ ನಡೆಸುವ ಮಾಹಿತಿ ತಿಳಿದ ಗ್ರಾಹಕರು ಹಾಗೂ ಪೆಡ್ಲರ್‌ಗಳು ಮಾದಕ ವಸ್ತುಗಳನ್ನು ಈಜುಕೊಳ ಹಾಗೂ ಕಮೋಡ್‌ಗೆ ಹಾಕಿ ನಾಶಪಡಿಸಲು ಪ್ರಯತ್ನಿಸಿದ್ದರು. ಕಾರು ಹಾಗೂ ಕೊಠಡಿಯಲ್ಲಿ ಬಚ್ಚಿಟ್ಟಿದ್ದ ಡ್ರಗ್ಸ್ ಅನ್ನು ಪತ್ತೆ ಮಾಡುವಲ್ಲಿ ಶ್ವಾನದಳ ಯಶಸ್ವಿಯಾಗಿದೆ' ಎಂದು ಮಾಹಿತಿ ನೀಡಿದರು.

'ಯಾವುದೇ ರಾಜ್ಯದ ಚುನಾಯಿತ ಪ್ರತಿನಿಧಿಗಳು ರೇವ್ ಪಾರ್ಟಿಯಲ್ಲಿ ಇರಲಿಲ್ಲ. ಹೊರರಾಜ್ಯದ ಗ್ರಾಹಕರೇ ಹೆಚ್ಚಿನ ಸಂಖ್ಯೆಯಲ್ಲಿದ್ದರು ಎಂಬುದು ತನಿಖೆಯಿಂದ ಗೊತ್ತಾಗಿದೆ' ಎಂದು ಮಾಹಿತಿ ನೀಡಿದರು.

ಡ್ರಗ್ಸ್ ಪೂರೈಸಿದ್ದ ಐವರ ವಿಚಾರಣೆ

'ಪಾರ್ಟಿಗೆ ಡ್ರಗ್ಸ್ ಪೂರೈಸಿದ್ದ ಆರೋಪದ ಮೇರೆಗೆ ವಿ.ರಣಧೀರ್ (43), ವೈ.ಎಂ.ಅರುಣ್‌ಕುಮಾರ್ (35), ಎಲ್.ವಾಸು (35), ನಾಗಬಾಬು (32), ಮಹಮ್ಮದ್ ಅಬೂಬಕ್ಕರ್ ಸಿದ್ದಿಕಿ (29) ಅವರನ್ನು ಬಂಧಿಸಿ ಕಸ್ಟಡಿಗೆ ಪಡೆಯಲಾಗಿದೆ. ಆರೋಪಿಗಳು ಹೊರ ರಾಜ್ಯದಿಂದ ಮಾದಕ ವಸ್ತು ತಂದು ಪಾರ್ಟಿಗೆ ಪೂರೈಸಿದ್ದರು ಎಂಬ ಮಾಹಿತಿಯಿದೆ' ಎಂದು ಮೂಲಗಳು ತಿಳಿಸಿವೆ.

ಸ್ಥಳದಲ್ಲೇ ಡ್ರಗ್ಸ್ ಖರೀದಿ: 'ರೇವ್ ಪಾರ್ಟಿಗೆ ಅಂದಾಜು ₹50ಲಕ್ಷದಿಂದ ₹60 ಲಕ್ಷ ಖರ್ಚು ಮಾಡಲಾಗಿದೆ ಎಂದು ಹೇಳಲಾಗಿದೆ. ಪ್ರತಿ ಗ್ರಾಹಕನಿಂದ ಕನಿಷ್ಠ ₹10 ಸಾವಿರ ಶುಲ್ಕ ಪಡೆಯಲಾಗಿತ್ತು. ಹೆಚ್ಚುವರಿಯಾಗಿ ಮಾದಕ ವಸ್ತುಗಳನ್ನು ಸ್ಥಳದಲ್ಲೇ ಖರೀದಿಗೆ ಅವಕಾಶ ನೀಡಲಾಗಿತ್ತು. ದಾಳಿ ನಡೆಸಿದಾಗ ಕೆಲವರು ಮುಖ ಮುಚ್ಚಿಕೊಂಡು ಪರಾರಿಯಾಗಲು ಯತ್ನಿಸಿದರು' ಎಂದು ಮೂಲಗಳು ತಿಳಿಸಿವೆ.

ರೇವ್ ಪಾರ್ಟಿ ಪ್ರಕರಣವನ್ನು ಸದ್ಯ ಹೆಬ್ಬಗೋಡಿ ಠಾಣೆ ಪೊಲೀಸರು ತನಿಖೆ ನಡೆಸುತ್ತಿದ್ದಾರೆ. ಪ್ರಕರಣವನ್ನು ಸಿಸಿಬಿಗೆ ವರ್ಗಾವಣೆ ಮಾಡಿಕೊಳ್ಳುವ ಚಿಂತನೆ ಇದೆ

ಬಿ.ದಯಾನಂದ, ನಗರ ಪೊಲೀಸ್ ಕಮಿಷನರ್

'ಮುದ್ರಣ ದೋಷ: ದಾಸ್ತಾನು ಮಾಡಿದ್ದ ಔಷಧ ವಾಪಸ್'

ಪ್ರಜಾವಾಣಿ ವಾರ್ತೆ



ಬೆಂಗಳೂರು: 'ಕರ್ನಾಟಕ ರಾಜ್ಯ ವೈದ್ಯಕೀಯ ಸರಬರಾಜು ನಿಗಮಕ್ಕೆ (ಕೆಎಸ್‌ಎಂಎಸ್‌ಸಿಎಲ್)ಪುಷ್ಕರ್ ಫಾರ್ಮಾ ಕಂಪನಿ ಸರಬರಾಜು ಮಾಡಿರುವ ಔಷಧ ಉತ್ಪನ್ನಗಳ ಮೇಲೆ ಮುದ್ರಣ ದೋಷವಾಗಿದ್ದು, ಮುಂಜಾಗ್ರತಾ ಕ್ರಮವಾಗಿ ದಾಸ್ತಾನಿನಲ್ಲಿರುವ ಈ ಉತ್ಪನ್ನಗಳನ್ನು ವಾಪಸ್ ಕಳಿಸಲು ಸೂಚಿಸಲಾಗಿದೆ' ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ತಿಳಿಸಿದ್ದಾರೆ.

ಕಂಪನಿಯು ಸರಬರಾಜು ಮಾಡಿರುವ 'ಆಕ್ಸಿಮೆಟಾಜೋಲಿನ್ ಹೈಡ್ರೋಕ್ಲೋರೈಡ್' ದ್ರಾವಣದ ಲೇಬಲ್ ಮೇಲೆ 'ಪಶುಗಳಿಗೆ' ಎಂಬ ಬಳಕೆಯಿಂದ ಉಂಟಾದ ಗೊಂದಲದ ಬಗ್ಗೆ ಅವರು ಸ್ಪಷ್ಟನೆ ನೀಡಿದ್ದಾರೆ.

'ಕಂಪನಿಯು ಸರಬರಾಜು ಮಾಡಿರುವ ಔಷಧ ಉತ್ಪನ್ನದಲ್ಲಿ ದೋಷವಿದೆಯೇ ಎಂಬುದರ ಬಗ್ಗೆ ಪರಿಶೀಲಿಸಲು ಅಧಿಕಾರಿಗಳಿಗೆ ಸೂಚನೆ ನೀಡಲಾಗಿತ್ತು. ಔಷಧ ಪರಿಶೀಲನೆ ವೇಳೆ ಇದು ಪಶುಗಳಿಗೆ ಬಳಸುವ ಔಷಧವಲ್ಲ ಎಂಬುದು ದೃಢಪಟ್ಟಿದ್ದು, ಮುದ್ರಣ ದೋಷದಿಂದ ಹೀಗಾಗಿದೆ. ಆರೋಗ್ಯ ಇಲಾಖೆಯ ಅಧಿಕಾರಿಗಳು ಈ ಬಗ್ಗೆ ಈಗಾಗಲೇ ಕ್ರಮ ಕೈಗೊಂಡಿದ್ದಾರೆ. ಗೋದಾಮುಗಳಿಂದ ಔಷಧ ಉತ್ಪನ್ನವನ್ನು ಹಿಂಪಡೆಯಲಾಗುತ್ತಿದೆ' ಎಂದು ಹೇಳಿದ್ದಾರೆ.

'ಲೇಬಲ್ ಬದಲಾಗಿರುವ ಬಗ್ಗೆ ಪುಷ್ಕರ್ ಫಾರ್ಮಾ ಕಂಪನಿಯು ಮೊದಲೇ ಮಾಹಿತಿ ನೀಡಿದ್ದು, ಆರೋಗ್ಯ ಅಧಿಕಾರಿಗಳು ಕೂಡ ಸೂಕ್ತ ಪರಿಶೀಲನೆ ನಡೆಸಿದ್ದಾರೆ. ಜನರು ಯಾವುದೇ ಆತಂಕಪಡುವ ಅಗತ್ಯವಿಲ್ಲ. ರಾಜ್ಯದ ಜನರ ಆರೋಗ್ಯ ವಿಷಯದಲ್ಲಿ ಯಾವುದೇ ಪ್ರಮಾದ ನಡೆಯಲು ನಮ್ಮ ಇಲಾಖೆ ಯಾವುದೇ ಕಾರಣಕ್ಕೂ ಆಸ್ಪದ ನೀಡುವುದಿಲ್ಲ' ಎಂದು ತಿಳಿಸಿದ್ದಾರೆ.

'ಖರ್ಗೆ ಪ್ರಧಾನಿ ಆಗುವುದು ಸಿ.ಎಂಗೆ ಇಷ್ಟವಿಲ್ಲ'

ಕಲಬುರಗಿ: 'ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಬಹುಶಃ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರನ್ನು ಪ್ರಧಾನಿಯಾಗಿ ನೋಡುವ ಇಚ್ಛೆ ಇಲ್ಲವೆಂದು ತೋರುತ್ತಿದೆ' ಎಂದು ಶಾಸಕ ಬಸವರಾಜ ಬೊಮ್ಮಾಯಿ ಕುಟುಕಿದರು.

'ಕರ್ನಾಟಕದಿಂದ ಯಾರೂ ಪ್ರಧಾನಿ ಆಗುವುದಿಲ್ಲ' ಎಂದು ಸಿದ್ದರಾಮಯ್ಯ ನೀಡಿದ್ದ ಹೇಳಿಕೆಗೆ ನಗರದಲ್ಲಿ ಮಂಗಳವಾರ ಸುದ್ದಿಗಾರರಿಗೆ ಪ್ರತಿಕ್ರಿಯಿಸಿದ ಅವರು, 'ರಾಜ್ಯದಲ್ಲಿನ ಮತದಾನ ಮುಗಿದ ಬಳಿಕ ಖರ್ಗೆ ಅವರನ್ನು ಗುರಿಯಾಗಿಸಿಕೊಂಡು ಹೇಳಿಕೆ ಕೊಟ್ಟಿದ್ದಾರೆ ಅನಿಸುತ್ತಿದೆ. 'ಇಂಡಿಯಾ' ಮೈತ್ರಿಕೂಟದ ಮಮತಾ ಬ್ಯಾನರ್ಜಿ ಮತ್ತು ಅರವಿಂದ್ ಕೇಜ್ರಿವಾಲ್ ಅವರು ಪ್ರಧಾನಿ ಅಭ್ಯರ್ಥಿಗೆ ಖರ್ಗೆ ಹೆಸರು ಪ್ರಸ್ತಾಪಿಸಿದ್ದರು. ಅದಕ್ಕೆ ಕಾಂಗ್ರೆಸ್ಸಿಗರೇ ಒಪ್ಪಿಗೆ ನೀಡಲಿಲ್ಲ. ಇದು ಅವರೊಳಗಿನ ನಾಯಕತ್ವದ ಬಿಕ್ಕಟ್ಟನ್ನು ತೋರಿಸುತ್ತದೆ' ಎಂದು ಹೇಳಿದರು.


ಎಚ್‌ಎಸ್‌ಆರ್‌ಪಿ ಬಲವಂತದ ಕ್ರಮ ಇಲ್ಲ: ಭರವಸೆ

ಬೆಂಗಳೂರು: 'ಹೈ ಸೆಕ್ಯೂರಿಟಿ ರಿಜಿಸ್ಟ್ರೇಷನ್ ನಂಬರ್ ಪ್ಲೇಟ್ (ಎಚ್‌ಎಸ್‌ಆರ್‌ಪಿ) ಅಳವಡಿಸದ ವಾಹನ ಸವಾರರ ವಿರುದ್ಧ ಜೂನ್ 12ರವರೆಗೂ ಯಾವುದೇ ಬಲವಂತದ ಕ್ರಮ ಕೈಗೊಳ್ಳುವುದಿಲ್ಲ' ಎಂದು ರಾಜ್ಯ ಸರ್ಕಾರ ಹೈಕೋರ್ಟ್‌ಗೆ ಭರವಸೆ ನೀಡಿದೆ.

'ಎಚ್‌ಎಸ್‌ಆರ್‌ಪಿ ಅಳವಡಿಕೆಗೆ ಇದೇ 31ರವರೆಗೆ ವಿಧಿಸಲಾಗಿರುವ ಗಡುವನ್ನು ವಿಸ್ತರಿಸಲು ಸರ್ಕಾರಕ್ಕೆ ನಿರ್ದೇಶಿಸಬೇಕು' ಎಂದು ಕೋರಿ 'ಬಿಎನ್ ಡಿ ಎನರ್ಜಿ ಲಿಮಿಟೆಡ್ ಕಂಪನಿ' ಸಲ್ಲಿಸಿದ್ದ ಅರ್ಜಿಯನ್ನು ರಜಾಕಾಲದ ನ್ಯಾಯಪೀಠದಲ್ಲಿದ್ದ ನ್ಯಾಯಮೂರ್ತಿ ಎಂ.ಜಿ.ಎಸ್.ಕಮಲ್ ಅವರು ಮಂಗಳವಾರ ವಿಚಾರಣೆ ನಡೆಸಿದರು.

ವಿಚಾರಣೆ ವೇಳೆ ಹೆಚ್ಚುವರಿ ಅಡ್ವೊಕೇಟ್ ಜನರಲ್ ರೂಬೆನ್ ಜೇಕಬ್, 'ಪ್ರಕರಣಕ್ಕೆ ಸಂಬಂಧಿಸಿದ ಅರ್ಜಿ 2024ರ ಜೂನ್ 11ರಂದು ವಿಚಾರಣೆಗೆ ನಿಗದಿಯಾಗಿದೆ. ಹೀಗಾಗಿ, ಈ ಮಧ್ಯಂತರ ಅರ್ಜಿಗೆ ಸಂಬಂಧಿಸಿದಂತೆ ಯಾವುದೇ ಆದೇಶ ಹೊರಡಿಸಬಾರದು' ಎಂದು ಕೋರಿದರು.

ತಂತ್ರಜ್ಞಾನ





ದೂರದ ಜನರಿಗೆ ಹತ್ತಿರವಾಗಬಲ್ಲ ಸ್ಮಾರ್ಟ್ ಐಸಿಯು

ಅವಿನಾಶ್ ಬಿ.

ವೈದ್ಯಕೀಯ ಕ್ಷೇತ್ರದಲ್ಲಿ ಸ್ಮಾರ್ಟ್ ಐಸಿಯು ಎಂಬುದೀಗ ಸದ್ದು ಮಾಡುತ್ತಿದೆ. ತಂತ್ರಜ್ಞಾನದ ಪ್ರಯೋಜನಗಳನ್ನೆಲ್ಲ ಬಾಚಿಕೊಂಡು, ದೂರದಲ್ಲೆಲ್ಲೋ ಇರುವ ನುರಿತತಜ್ಞರಿಂದ ರೋಗಿಯ ತಪಾಸಣೆ, ಮೇಲ್ವಿಚಾರಣೆ, ಚಿಕಿತ್ಸೆ, ಸಕಾಲಿಕ ಮಧ್ಯಪ್ರವೇಶದ ಮೂಲಕ ಅದೆಷ್ಟೋ ಮಂದಿಯ ಜೀವಗಳನ್ನು ಉಳಿಸುವ ಈ ವ್ಯವಸ್ಥೆಯು ತುರ್ತು ಚಿಕಿತ್ಸಾ ಕ್ಷೇತ್ರದಲ್ಲಿ ಮತ್ತು ಜನಸಾಮಾನ್ಯರ ಬದುಕಿನಲ್ಲಿ ಆಶಾಕಿರಣ ಮೂಡಿಸಿದೆ.

ಏನಿದು ಸ್ಮಾರ್ಟ್ ಐಸಿಯು?

ಸುಲಭ ಲಭ್ಯತೆ ಮತ್ತು ಸ್ವೀಕಾರಾರ್ಹತೆಯಿಂದಾಗಿ ತಂತ್ರಜ್ಞಾನವು ನಮ್ಮೆಲ್ಲರ ಬದುಕಿನಲ್ಲಿ ಹಾಸುಹೊಕ್ಕಾಗಿದ್ದರೂ ಅದರ ವ್ಯಾಪಕತೆಗೆ ಪ್ರಮುಖ ಸವಾಲುಗಳೆಂದರೆ ಹೆಚ್ಚಿದ ಜನಸಾಂದ್ರತೆ, ಜೊತೆಗೆ ವೈದ್ಯಕೀಯ ಕ್ಷೇತ್ರಕ್ಕೆ ಸವಾಲಾಗಿರುವ ದಿಢೀರ್ ಆರೋಗ್ಯ ಸಮಸ್ಯೆಗಳು! ಎಲ್ಲ ಪ್ರದೇಶಗಳಲ್ಲಿ ಎಲ್ಲ ರೀತಿಯ ಸೌಕರ್ಯಗಳಿರುವ ಆಸ್ಪತ್ರೆಗಳಾಗಲೀ, ತಜ್ಞವೈದ್ಯರಾಗಲೀ ಇರುವುದು ಕಷ್ಟ. ಆಧುನಿಕ ತಂತ್ರಜ್ಞಾನವನ್ನು ಈ ಸಮಸ್ಯೆಯ ಪರಿಹಾರಕ್ಕೆ ಹೇಗೆ ಬಳಸಬಹುದು? ತಜ್ಞವೈದ್ಯರು ಅದೆಷ್ಟೋ ಸಾವಿರ ಕಿಲೋಮೀಟರ್ ದೂರದಲ್ಲಿದ್ದೇ ರೋಗಿಯೊಬ್ಬನ ಜೀವವನ್ನು ಉಳಿಸುವಂತಾಗಿರುವುದೇ ಈ ಯೋಚನೆಯ ಫಲ. ಇಷ್ಟರ ಮಟ್ಟಿಗೆ ದೂರಸಂಪರ್ಕ ತಂತ್ರಜ್ಞಾನವು ಬೆಳೆದಿದೆ. ದೂರವಾಣಿ ಈಗ ಮಾತುಕತೆಗಾಗಿ ಮಾತ್ರವೇ ಸೀಮಿತವಾಗದೆ, ಅದು ಸ್ಮಾರ್ಟ್ ಫೋನ್ ಆಗಿ ಪರಿವರ್ತನೆಗೊಂಡ ಬಳಿಕ, ಜನಜೀವನದ ಅವಿಭಾಜ್ಯ ಅಂಗವೂ ಆಗಿದೆ. ದೂರಸಂವಹನ ತಂತ್ರಜ್ಞಾನದ ಸುಧಾರಿತ ರೂಪವೇ 'ಸ್ಮಾರ್ಟ್' ಆಗಿರುವ ತುರ್ತು ನಿಗಾ ಘಟಕಗಳು - 'ಸ್ಮಾರ್ಟ್ ಐಸಿಯು'ಗಳು. ಇಂತಿಂಥ ನಗರದ ಇಂಥ ಆಸ್ಪತ್ರೆಗೆ ಕರೆದೊಯ್ಯುವ ಮುನ್ನ ದಾರಿ ಮಧ್ಯೆಯೇ ಅಸುನೀಗಿದರು ಎಂಬ ಘಟನೆಗಳಿಗಿನ್ನು ಕಡಿವಾಣ ಬೀಳಬಹುದು.

ಜೀವನ್ಮರಣದ ನಡುವೆ ಹೋರಾಡುವ ಸ್ಥಿತಿಯಲ್ಲಿರುವ ರೋಗಿಗಳ ಆರೈಕೆಗೆ ಬೇಕಾಗಿರುವ ಸಕಲ ವ್ಯವಸ್ಥೆಗಳು ಎಲ್ಲ ಕಡೆ ಇಲ್ಲದಿರಲು ಕಾರಣವೆಂದರೆ, ಅದರ ಸ್ಥಾಪನೆಗೆ ತಗುಲುವ ದುಬಾರಿ ವೆಚ್ಚ ಮತ್ತು ತಜ್ಞವೈದ್ಯರ ಸೀಮಿತ ಲಭ್ಯತೆ. ವಿಶೇಷವಾಗಿ ಗ್ರಾಮಾಂತರ ಪ್ರದೇಶಗಳಲ್ಲಿ ವಿಶೇಷ ಸವಲತ್ತುಗಳು ಇರುವ ಆಸ್ಪತ್ರೆಗಳೂ ಇರುವುದಿಲ್ಲ. ಇಂಥ ಪರಿಸ್ಥಿತಿಯಲ್ಲಿ ತುರ್ತು ನಿಗಾ ಘಟಕದಲ್ಲಿ ದಾಖಲಾಗಿ ಚಿಕಿತ್ಸೆ ಪಡೆಯಬೇಕಿದ್ದರೆ ದೂರದ ಊರಿಗೆ ಹೋಗುವುದು ಮತ್ತು ನಗರ ಪ್ರದೇಶಗಳಲ್ಲಿರುವ ಅತ್ಯಾಧುನಿಕ ಸೌಲಭ್ಯಗಳಿರುವ, ಮಲ್ಟಿಸ್ಪೆಷಾಲಿಟಿ ಆಸ್ಪತ್ರೆಗೆ ದಾಖಲಾಗುವುದು – ಇವೆಲ್ಲ ಆರ್ಥಿಕವಾಗಿ ಅಷ್ಟೊಂದು ಸಾಮರ್ಥ್ಯವಿಲ್ಲದ ಸಾಮಾನ್ಯ ಜನರಿಗೆ ದೊಡ್ಡ ಹೊರೆ. ಅತ್ಯಾಧುನಿಕ ಚಿಕಿತ್ಸೆಯ ಮೂಲಕ ದೂರದಿಂದಲೇ ರೋಗಿಗಳ ಪ್ರಾಣರಕ್ಷಣೆಗೆ ನೆರವಾಗುವ ಈ ತಂತ್ರಜ್ಞಾನವನ್ನು ಪರಿಚಯಿಸಿರುವ ಖಾಸಗಿ ಕಂಪನಿಗಳಲ್ಲಿ ಬೆಂಗಳೂರು ಮೂಲದ 'ಕ್ಲೌಡ್ ಫಿಸಿಶಿಯನ್' ಮುಂಚೂಣಿಯಲ್ಲಿದೆ. ಈಗಾಗಲೇ ದೇಶದ ವಿವಿಧ ರಾಜ್ಯಗಳ 59 ಕಡೆ ಸುಮಾರು 200 ಆಸ್ಪತ್ರೆಗಳು ಇದರ ಪ್ರಯೋಜನಕ್ಕೆ ಮುಂದಾಗಿವೆ. ಅಂತೆಯೇ ರಾಜ್ಯದಲ್ಲಿ 35ಕ್ಕೂ ಹೆಚ್ಚು ಆಸ್ಪತ್ರೆಗಳು ಸ್ಮಾರ್ಟ್ ಐಸಿಯು ಸೇವೆ ಬಳಸಿಕೊಳ್ಳುತ್ತಿವೆ. ಇದೊಂದೇ ಅಲ್ಲದೆ, ಪ್ರಮುಖ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆಗಳೂ ಇಂಥ ಸೇವೆಯನ್ನು ನೀಡುತ್ತಿವೆ. ಕೋವಿಡ್-19 ನಂಥ ಪಿಡುಗು ಬಾಧಿಸಿ, 'ಓಡಾಡಬಾರದು', 'ಮುಟ್ಟಬಾರದು' ಅಂತೆಲ್ಲ ನಿರ್ಬಂಧವಿದ್ದ ಸಂದರ್ಭದಲ್ಲಿ ಈ ರೀತಿಯ ವ್ಯವಸ್ಥೆಗಳೇ ಹಲವರ ಜೀವಗಳನ್ನು ಉಳಿಸಿದ್ದವು. ಕರ್ನಾಟಕ ಸರ್ಕಾರವು 2022ರಲ್ಲಿ '10 Bed ICU' (10 ಬೆಡ್ ಐಸಿಯು) ಯೋಜನೆಯಡಿ, ಗೂಗಲ್ ಕ್ಲೌಡ್ ಪಾಲುದಾರಿಕೆಯೊಂದಿಗೆ ರಾಜ್ಯದ ಎಲ್ಲ ಜಿಲ್ಲೆಗಳಲ್ಲಿ 41 ಸ್ಮಾರ್ಟ್ ಐಸಿಯು ಕೇಂದ್ರಗಳನ್ನು ತೆರೆದಿತ್ತು. ಇದು ಹಲವಾರು ಕೋವಿಡ್ ರೋಗಿಗಳ ಜೀವಗಳನ್ನು ಉಳಿಸಿತ್ತು ಎಂಬುದನ್ನು ನಾವು ನೆನಪಿಸಿಕೊಳ್ಳಬೇಕು.

> ತಂತ್ರಜ್ಞಾನದ ಪ್ರಯೋಜನಗಳನ್ನೆಲ್ಲ ಬಾಚಿಕೊಂಡು, ದೂರದಲ್ಲೆಲ್ಲೋ ಇರುವ ನುರಿತತಜ್ಞರಿಂದ ರೋಗಿಯ ತಪಾಸಣೆ, ಮೇಲ್ವಿಚಾರಣೆ, ಚಿಕಿತ್ಸೆ, ಸಕಾಲಿಕ ಮಧ್ಯಪ್ರವೇಶದ ಮೂಲಕ ಅದೆಷ್ಟೋ ಮಂದಿಯ ಜೀವಗಳನ್ನು ಉಳಿಸುವ ಈ ವ್ಯವಸ್ಥೆಯು ತುರ್ತು ಚಿಕಿತ್ಸಾ ಕ್ಷೇತ್ರದಲ್ಲಿ ಮತ್ತು ಜನಸಾಮಾನ್ಯರ ಬದುಕಿನಲ್ಲಿ ಆಶಾಕಿರಣ ಮೂಡಿಸಿದೆ. ಸ್ಮಾರ್ಟ್ ಐಸಿಯು ಬಗ್ಗೆ ಒಂದಿಷ್ಟು ಮಾಹಿತಿ.



ಸ್ಮಾರ್ಟ್ ಐಸಿಯು ಅಳವಡಿಕೆ ಹೇಗೆ?

ದೊಡ್ಡ ದೊಡ್ಡ ಆಸ್ಪತ್ರೆಗಳು ದೂರದೂರುಗಳಲ್ಲಿರುವ ಸಣ್ಣ ಮಟ್ಟದ ಆಸ್ಪತ್ರೆಗಳ ತುರ್ತು ನಿಗಾ ಘಟಕಗಳನ್ನೇ ಅತ್ಯಾಧುನಿಕ ಐಸಿಯು ಆಗಿ ಪರಿವರ್ತಿಸುವ ವ್ಯವಸ್ಥೆಯೇ ಈ ಸ್ಮಾರ್ಟ್ ಐಸಿಯು. ಅಂದರೆ ತಜ್ಞವೈದ್ಯರು, ಸಣ್ಣಾಸ್ಪತ್ರೆಗಳಲ್ಲಿರುವ ಕ್ಯಾಮೆರಾದಿಂದ ಲಭ್ಯವಾಗುವ ನೇರಪ್ರಸಾರದ ವಿಡಿಯೊ ಮೂಲಕ ದೊರೆಯುವ ಮಾಹಿತಿಯ ಆಧಾರದಲ್ಲಿ ಅಲ್ಲಿರುವ ವೈದ್ಯರಿಗೆ ಮುಂದೇನು ಮಾಡಬೇಕು, ಹೇಗೆ ಏನು ಎತ್ತ ಎಂಬುದನ್ನೆಲ್ಲಾ ಹೇಳುತ್ತಾ ಹೋಗುತ್ತಾರೆ. ಸಣ್ಣ ಆಸ್ಪತ್ರೆಗಳಲ್ಲಿ ಒಂದಕ್ಕಿಂತ ಹೆಚ್ಚು ತುರ್ತು ಚಿಕಿತ್ಸಾ ಬೆಡ್‌ಗಳನ್ನು ಅಳವಡಿಸಬಹುದು. ಪಕ್ಕದಲ್ಲೇ ತರಬೇತಾದ ವೈದ್ಯರು, ಸಿಬ್ಬಂದಿಯು ಕ್ಯಾಮೆರಾ ಸಹಾಯದಿಂದ ರೋಗಿಯ ದೈಹಿಕ ಸಮಸ್ಯೆಗಳನ್ನು ತೋರಿಸುತ್ತಾ ಇದ್ದರೆ, ವರ್ಚುವಲ್ ಆಗಿ ತಜ್ಞವೈದ್ಯರು ಅದನ್ನು ನೋಡಿ ಸಲಹೆ ಸೂಚನೆಗಳನ್ನು ನೀಡುತ್ತಾರೆ. ಈ ಸ್ಮಾರ್ಟ್ ಐಸಿಯು ಮುಖ್ಯ ಉದ್ದೇಶ ತುರ್ತು ಚಿಕಿತ್ಸೆ ಆಗಿರುವುದರಿಂದ, ಹೆಚ್ಚಿನ ಚಿಕಿತ್ಸೆ ಅಗತ್ಯವಿದ್ದರೆ ಮಾತ್ರವೇ ದೂರದ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆಗಳಿಗೆ ಹೋಗಬಹುದು. ಹಠಾತ್ ಹೃದಯಾಘಾತ, ಶಿಶು ಆರೈಕೆ, ಟ್ರಾಮಾ ಕೇರ್, ಕ್ಯಾನ್ಸರ್ ಕೇರ್ ಸೇರಿದಂತೆ ಬಹುತೇಕ ಎಲ್ಲಾ ರೀತಿಯ ಐಸಿಯು ಅಗತ್ಯವಿರುವ ಸಮಸ್ಯೆಗಳಿಗೆ ಈ ತಂತ್ರಜ್ಞಾನವೊಂದು ವರದಾನ.

ದಿನದ ಇಪ್ಪತ್ತನಾಲ್ಕು ಗಂಟೆಯೂ ಸ್ಮಾರ್ಟ್ ಐಸಿಯು ಸೇವಾ ಪೂರೈಕೆ ಕೇಂದ್ರದಲ್ಲಿ ತಜ್ಞರು, ಸಿಬ್ಬಂದಿ ಲಭ್ಯರಿರುತ್ತಾರೆ. ಈ ಸೇವಾ ಸ್ವೀಕಾರ ಕೇಂದ್ರಗಳಾದ ಸಣ್ಣ ಮತ್ತು ಸಮುದಾಯ ಆಸ್ಪತ್ರೆಗಳು ನಿರ್ವಹಣಾ ಶುಲ್ಕವನ್ನು ನೀಡಬೇಕಾಗುತ್ತದೆ. ಜೊತೆಗೆ, ಕೆಲವೊಂದು ವೈದ್ಯಕೀಯ ಮೂಲಸೌಕರ್ಯ ವ್ಯವಸ್ಥೆಗಳನ್ನೂ ಈ ಸಣ್ಣಾಸ್ಪತ್ರೆಗಳು ಹೊಂದಿರಬೇಕಾಗುತ್ತದೆ. ಅಗತ್ಯವಿರುವ ಕೊಠಡಿಗಳು, ಅತ್ಯುತ್ತಮ ಅಂತರ್ಜಾಲ ಸಂಪರ್ಕ ಮತ್ತು ಕಂಪ್ಯೂಟರ್, ಪರದೆ ಮತ್ತಿತರ ತಾಂತ್ರಿಕ ಪರಿಕರಗಳು, ಹೈ-ರೆಸೊಲ್ಯುಶನ್ ಇರುವ ಕ್ಯಾಮೆರಾ ಅಳವಡಿಕೆಯ ಖರ್ಚು ಇರುತ್ತದೆ. ಇದನ್ನು ನಿಭಾಯಿಸುವ ಬಗ್ಗೆ ಆಸ್ಪತ್ರೆಯ ಸಿಬ್ಬಂದಿ ಒಂದಿಷ್ಟು ತರಬೇತಿ ಪಡೆಯಬೇಕಾಗುತ್ತದೆ. ತಜ್ಞರ ಕನ್ಸಲ್ಟೇಶನ್, ತುರ್ತು ಸಂದರ್ಭದಲ್ಲಿ ರೋಗಿಯ ದೈಹಿಕ ಸ್ಥಿತಿಗತಿಗಳ ವರದಿಯ ಮತ್ತು ದತ್ತಾಂಶದ ಕ್ಷಿಪ್ರ ಪರಿಶೀಲನೆ, ಚಿಕಿತ್ಸಾ ವೆಚ್ಚ - ಮುಂತಾದವುಗಳನ್ನು ಪರಿಗಣಿಸಿದರೆ, ಆರ್ಥಿಕವಾಗಿ ಸಬಲರಾಗಿಲ್ಲದ ರೋಗಿಗಳಿಗೆ ಹಾಗೂ ಆಸ್ಪತ್ರೆಗಳಿಗೆ ಈ ರೀತಿಯ ದೂರನಿಯಂತ್ರಿತ ಐಸಿಯು ಸೌಕರ್ಯದಿಂದ ಹೆಚ್ಚು ಅನುಕೂಲ. ಮಲ್ಟಿಸ್ಪೆಷಾಲಿಟಿ (ಹಲವು ರೀತಿಯ ಕಾಯಿಲೆಗಳ ಚಿಕಿತ್ಸಾ ತಜ್ಞರಿರುವ) ಆಸ್ಪತ್ರೆಗಳಿಲ್ಲದ ಹೊರತಾಗಿಯೂ, ಕಾಯಿಲೆಗಳಿಗೆ ಚಿಕಿತ್ಸೆಯನ್ನು ತಮ್ಮೂರಲ್ಲೇ, ಮಾಡಿಸಿಕೊಳ್ಳಬಹುದು.

ಸ್ಮಾರ್ಟ್ ಐಸಿಯು ಪರಿಕಲ್ಪನೆಯು ಗ್ರಾಮಾಂತರ ಪ್ರದೇಶಗಳಲ್ಲಿ ವೈದ್ಯಕೀಯ ಕ್ಷೇತ್ರದ ವಿಷಯತಜ್ಞರ ಕೊರತೆಯನ್ನು ನೀಗಿಸುತ್ತದೆ. ಸ್ಮಾರ್ಟ್ ಐಸಿಯು ವ್ಯವಸ್ಥೆಯಲ್ಲಿ ಈಗಾಗಲೇ ಅತ್ಯಾಧುನಿಕ ವೈದ್ಯಕೀಯ ಉಪಕರಣಗಳ ಸೇರ್ಪಡೆಯೂ ಆಗಿದ್ದು, ತುರ್ತಾಗಿ ಆರೈಕೆಯ ಅಗತ್ಯವಿರುವ ನಾಗರಿಕರ ಆರೋಗ್ಯರಕ್ಷಣೆ ಮತ್ತು ಜೀವರಕ್ಷಣೆಯಲ್ಲಿ ಮಹತ್ತರ ಪಾತ್ರ ವಹಿಸುವುದಂತೂ ದಿಟ. 'ಕ್ಲೌಡ್' (ಅಂತರ್ಜಾಲ ಸಂಪರ್ಕಿತ ಸರ್ವರ್) ಆಧಾರಿತವಾಗಿ ರಾಡಾರ್ ತಂತ್ರಜ್ಞಾನವು ನಿರಂತರವಾಗಿ ರೋಗಿಯ ಡೇಟಾವನ್ನು ಸಂಗ್ರಹಿಸಿ, ವಿಶ್ಲೇಷಿಸಿ ತಕ್ಷಣ ಸ್ಪಂದಿಸುವ ಆಧುನಿಕ ವ್ಯವಸ್ಥೆಯೂ ಇರುತ್ತದೆ. ಊರಲ್ಲೇ ಇರುವ ಆಸ್ಪತ್ರೆಗಳನ್ನು ಸ್ಮಾರ್ಟ್ ಐಸಿಯು ಆಗಿ ಪರಿವರ್ತಿಸುವುದರಿಂದ ತಕ್ಷಣದ ಚಿಕಿತ್ಸೆ ಲಭ್ಯವಾಗುವ ಮೂಲಕ ಅದೆಷ್ಟೋ ರೋಗಿಗಳ ಜೀವಗಳನ್ನು ಉಳಿಸಬಹುದಾಗಿದೆ. ವರ್ಚುವಲ್ ಕನ್ಸಲ್ಟೇಶನ್, ವರ್ಚುವಲ್ ಚಿಕಿತ್ಸೆಗಳ ಮೂಲಕ ಸಮಯ, ಹಣ ಉಳಿತಾಯವಾಗುವುದರಿಂದ ಆರ್ಥಿಕವಾಗಿ ಸಬಲರಲ್ಲದವರಿಗೆ ಇದರ ಅನುಕೂಲ ಹೆಚ್ಚು. ❖

ಜಲಶುದ್ಧೀಕರಣಕ್ಕಾಗಿ ಮದ್ಯತಯಾರಕ ಯೀಸ್ಟ್!

ಅಮೃತೇಶ್ವರಿ ಬಿ.

ಯೀಸ್ಟ್ ನಿಮಗೆಲ್ಲಾ ಪರಿಚಯವಿರಬೇಕು. ಇದೊಂದು ಶಿಲೀಂಧ್ರ. ಆಹಾರ ಪದಾರ್ಥಗಳನ್ನು ಹುದುಗಿಸುತ್ತದೆ. ಬೇಕರಿಯ ತಿಂಡಿಗಳು, ಎಣ್ಣೆ–ಸಾರಾಯಿಗಳನ್ನು ತಯಾರಿಸುವಾಗ, ಹಿಟ್ಟು–ಹಣ್ಣಿನ ರಸವನ್ನು ಹುದುಗಿಸಲು ಈ ಯೀಸ್ಟನ್ನು ಬಳಸುತ್ತಾರೆ. ಅದರಲ್ಲಿಯೂ ಬೇಕರಿಗಾಗಿ ಬಳಸುವ ಯೀಸ್ಟ್ ಬೇರೆ. ಮದ್ಯಗಳ ತಯಾರಿಕೆಯಲ್ಲಿ ಬಳಸುವ ಯೀಸ್ಟ್ ಬೇರೆ. ಹೊಸ ವಿಷಯವೇನೆಂದರೆ ಮದ್ಯಗಳನ್ನು ತಯಾರಿಸಲು ಬಳಸುವ ಯೀಸ್ಟ್ ನೀರನ್ನು ಶುದ್ಧೀಕರಿಸುತ್ತದೆಯಂತೆ; ನೀರಲ್ಲಿರುವ ಭಾರಧಾತು ಸೀಸವನ್ನು ಹೊರತೆಗೆಯಬಲ್ಲದಂತೆ! ಹಾಗೆಂದು ಎಂಐಟಿಯ ಸಂಶೋಧಕರು ಮೊನ್ನೆ 'ರಾಯಲ್ ಸೊಸೈಟಿ ಆಫ್ ಕೆಮಿಸ್ಟ್ರಿ' ಪತ್ರಿಕೆಯಲ್ಲಿ ವರದಿ ಮಾಡಿದ್ದಾರೆ. ಅಂತೂ ಎಣ್ಣೆಗಂಟಿರುವ ಕುಖ್ಯಾತಿ ಈಗ ಪ್ರಖ್ಯಾತಿಯಾಯಿತೆನ್ನಬಹುದು!

ಕೈಗಾರೀಕರಣದಿಂದಾಗಿ ನೀರಿನಲ್ಲಿ ಭಾರಧಾತುಗಳು ಸೇರಿ ಜಲಮಾಲಿನ್ಯವಾಗುತ್ತಿರುವುದು ಹೊಸ ಸಮಸ್ಯೆಯೇನಲ್ಲ. ಸೀಸ, ಪಾದರಸ, ಆರ್ಸೆನಿಕ್ ಮುಂತಾದ ಧಾತುಗಳು ನೀರಿನಲ್ಲಿ ಸೇರಿದರೆ ಅವುಗಳನ್ನು ಶುದ್ಧೀಕರಿಸುವುದು ಕಷ್ಟ. ಅಪಾಯವೂ ಹೆಚ್ಚು. ಇದೊಂದು ಜಾಗತಿಕ ತೊಂದರೆ. ಸಾಂಪ್ರದಾಯಿಕ ವಿಧಾನಗಳು, ಮೆಂಬ್ರೇನ್ ಫಿಲ್ಟ್ರೇಷನ್ ತಂತ್ರಗಳಿಂದ ದಕ್ಷವಾಗಿ ನೀರನ್ನು ಶುದ್ಧೀಕರಿಸಲು ಆಗಿಲ್ಲ. ಸಾಧ್ಯವಾದರೂ ಅದಕ್ಕೆ ಬಳಕೆಯಾಗುವ ಸಂಪನ್ಮೂಲಗಳು ಹಾಗೂ ಸಮಯ ಹೆಚ್ಚು. ಆದರೆ ಯೀಸ್ಟ್, ಅಲ್ಲಲ್ಲ ಮದ್ಯವನ್ನು ತಯಾರಿಸಿದ ನಂತರ ದೊರೆಯುವ ಯೀಸ್ಟ್‌ನ ತ್ಯಾಜ್ಯ ಮಾತ್ರ ತಕ್ಷಣವೇ ಸೀಸವನ್ನು ನೀರಿನಿಂದ ಪ್ರತ್ಯೇಕಗೊಳಿಸುತ್ತದೆಯಂತೆ! ಅದುವೂ 1 ಪಾರ್ಟ್ ಪರ್ ಮಿಲಿಯನ್ (ಶೇ. 0.0001) ಅಷ್ಟು ಕಡಿಮೆ ಪ್ರಮಾಣದಲ್ಲಿದ್ದರೂ. ಇನ್ನು, ಒಂದೇ ಮದ್ಯತಯಾರಿಕಾ ಕಂಪೆನಿ ಇಡೀ ಒಂದು ನಗರ ಬಳಸುವ ನೀರನ್ನು ಶುದ್ಧೀಕರಿಸಲು ಬೇಕಾಗುವಷ್ಟು ಯೀಸ್ಟ್ ತ್ಯಾಜ್ಯವನ್ನು ಉತ್ಪಾದಿಸುತ್ತದೆಯಂತೆ. ಅರ್ಥಾತ್ ಅಷ್ಟು ಸುಲಭ, ಅಗ್ಗ ಮತ್ತು ಖಚಿತವಾಗಿ ನೀರನ್ನು ಶುದ್ಧೀಕರಿಸುವ ಸಂವೇದನಾಶೀಲ ವಿಧಾನವಿದು. ಇದಕ್ಕಾಗಿ ದೇವೇಶ್ ಗೋಖಲೆ ಮತ್ತು ತಂಡದವರು ಮೊದಲಿಗೆ ಅವಕೆಂಪುಕಿರಣಗಳೊಂದಿಗೆ ವೇಗವಾಗಿ ಪ್ರತಿಕ್ರಿಯಿಸುವ ಪಾಲಿ–ಇಥೈಲೀನ್ ಗ್ಲೈಕಾಲ್‌ನಿಂದ ಮಾಡಿದ ಪಾಲಿಮರುಗಳನ್ನು ತಯಾರಿಸಿಕೊಂಡಿದ್ದಾರೆ. ಮಲ್ಟಿವಿಟಮಿನ್ ಟ್ಯಾಬ್ಲೆಟ್‌ನ ಖಾಲಿ ಕ್ಯಾಪ್ಸೂಲುಗಳನ್ನು ತೆಗೆದುಕೊಂಡು ಅದರೊಳಗೆ ವಿಟಮಿನ್‌ಗಳನ್ನು ತುಂಬುವ ಬದಲು ಯೀಸ್ಟ್ ಅನ್ನು ತುಂಬಿಸಿದ್ದಾರೆ. ಯೀಸ್ಟ್ ಅನ್ನು ಮೊದಲಿಗೆ ಶೈತ್ಯಾಗಾರದಲ್ಲಿ ಹೆಪ್ಪುಗಟ್ಟಿಸಿ, ಅದನ್ನು ನಿರ್ವಾತದಲ್ಲಿಟ್ಟು ಒಣಗಿಸಿದ್ದಾರೆ. ಫ್ರೀಜ್ ಡ್ರೈ ಮಾಡಿದ ಯೀಸ್ಟನ್ನು ಕ್ಯಾಪ್ಸೂಲುಗಳೊಳಗೆ ತುಂಬಿಸಿ ಸ್ವಲ್ಪ ನೀರನ್ನು ಬೆರೆಸಿದ್ದಾರೆ. ಈಗ ಯೀಸ್ಟ್ ತುಂಬಿದ ಕ್ಯಾಪ್ಸೂಲನ್ನು ಪಾಲಿ–ಇಥೈಲೀನ್ ಗ್ಲೈಕಾಲಿನ ಪಾಲಿಮರಿನೊಳಗೆ ತುಂಬಿಸಿ ಅವಕೆಂಪು ಕಿರಣಗಳನ್ನು ಹಾಯಿಸಿದ್ದಾರೆ. ಕ್ಯಾಪ್ಸೂಲುಗಳು ರಂಧ್ರಗಳನ್ನೊಳಗೊಂಡಿದ್ದು, ನೀರು ಅದರೊಳಗೆ ಹೋದಾಗ ಯೀಸ್ಟ್ ಕೋಶಗಳು ಸೀಸವನ್ನು ತನ್ನೊಳಗೆ ಅಂಟಿಸಿಕೊಂಡುಬಿಡುತ್ತದೆ. ನೀರಿನೊಳಗೆ ಯೀಸ್ಟ್ ಮಿಶ್ರಣವಾಗುವುದಿಲ್ಲ. ಹಾಗಾಗಿ ಮತ್ತೊಮ್ಮೆ ಯೀಸ್ಟ್ ಅನ್ನು ನೀರಿನಿಂದ ತೆಗೆಯುವ ಒಂದು ಹಂತವೂ ಮುಗಿಯಿತು. ಕ್ಯಾಪ್ಸೂಲುಗಳನ್ನು ಹೊರತೆಗೆದರೆ ನೀರೂ ಶುದ್ಧವಾಯಿತು!

ಈ ಕ್ಯಾಪ್ಸೂಲುಗಳು ನಲ್ಲಿ–ಕೊಳಾಯಿಗಳಿಂದ ಬೀಳುವ ನೀರಿನ ಒತ್ತಡವನ್ನು ಸಹಿಸಿಕೊಳ್ಳುವಷ್ಟು ಪ್ರಬಲವಾಗಿರುವುದನ್ನು ಖಚಿತಪಡಿಸಿಕೊಂಡಿದ್ದಾರೆ. ನಂತರ ಇಪಿಎ(ಎನ್ವಿರಾನ್ಮೆಂಟಲ್ ಪ್ರೊಟೆಕ್ಷನ್ ಏಜೆನ್ಸಿ) ಗ್ರೇಡ್‌ನ ಬಯೋಫಿಲ್ಟರ್‌ಗಳನ್ನು ಬಳಸಿಕೊಂಡು ಹೈಡ್ರೋಜೆಲ್ ಯೀಸ್ಟ್ ಗ್ರ್ಯಾನ್ಯೂಲು(ಹರಳು)ಗಳನ್ನು ಸಿದ್ಧಪಡಿಸಿ ನೀರನ್ನು ಶುದ್ಧೀಕರಿಸಲು ಪ್ರಯತ್ನಿಸಿದ್ದಾರೆ. ಹನ್ನೆರಡು ದಿನಗಳವರೆಗೆ ಈ ಶುದ್ಧೀಕರಣವನ್ನು ಕ್ರಿಯೆಯನ್ನು ನಡೆಸಿ, ಮೆಂಬ್ರೇನ್ ಫಿಲ್ಟ್ರೇಷನ್ ವಿಧಾನಕ್ಕಿಂತಲೂ ಕಡಿಮೆ ಶಕ್ತಿ ಬೇಡುವ ದಕ್ಷ ಆಯ್ಕೆಯಿದು ಎಂದು ಸಾಬೀತುಪಡಿಸಿದ್ದಾರೆ, ಗೋಖಲೆ ಮತ್ತು ತಂಡ.

ಹಾಗಾಗಿ, ಜಲಮಾಲಿನ್ಯ ಮತ್ತು ಶುದ್ಧ ನೀರಿನ ಕೊರತೆಯನ್ನು ಎದುರಿಸುತ್ತಿರುವ ಕಡಿಮೆ ಆದಾಯದ, ಪ್ರತಿಕೂಲ ಪರಿಸ್ಥಿತಿಯಲ್ಲಿರುವ ಸಮುದಾಯಗಳಿಗೆ ಯೀಸ್ಟ್‌ನಿಂದ ನೀರನ್ನು ಶುದ್ಧೀಕರಿಸುವುದು ಒಂದು ಅಗ್ಗದ, ಸುಸ್ಥಿರವಾದ ನೀರು ಚಿಕಿತ್ಸಕಾ ವಿಧಾನ ಆಗಬಹುದು. ಜೊತೆಗೆ ಸೀಸವಷ್ಟೇ ಅಲ್ಲದೆ, ಸೂಕ್ಷ್ಮ ಪ್ಲಾಸ್ಟಿಕ್ಕುಗಳು ಹಾಗೂ ಸಾವಿರಾರು ವರ್ಷಗಳಾದರೂ ಭೂಮಿಯಲ್ಲೇ ಉಳಿದು ಹೋಗುವ ರಾಸಾಯನಿಕಗಳನ್ನೂ ಹೆಕ್ಕುವಂತಹ ಶೋಧಕಗಳನ್ನು ಮುಂದೆ ಪತ್ತೆ ಮಾಡಲಿದ್ದೇವೆ ಎನ್ನುತ್ತಾರೆ, ಸಂಶೋಧಕರು. 'ಕಸದಿಂದ ರಸ' ಎನ್ನಬಹುದಾದ ಈ ತಂತ್ರ ನಿಜಕ್ಕೂ ಅನುಕೂಲಿ ಮತ್ತು ಪ್ರಶಂಸನೀಯವಾದುದು. ❖

> ಮದ್ಯಗಳ ತಯಾರಿಕೆಯಲ್ಲಿ ಬಳಸುವ ಯೀಸ್ಟ್ ಈಗ ನೀರನ್ನು ಶುದ್ಧೀಕರಿಸುವ ಸಾಮರ್ಥ್ಯ ಹೊಂದಿದೆಯಂತೆ

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ - ವಿಜ್ಞಾನ

ಜೀವ ಕ್ರಿಯೆಗಳು

3) ಬೆಳಗಿನ ಸಮಯದಲ್ಲಿ ಸಸ್ಯಗಳು ಯಾಕೆ ಕಾರ್ಬನ್ ಡೈ ಆಕ್ಸೈಡ್ ಬಿಡುಗಡೆ ಮಾಡುವುದಿಲ್ಲ?

ಉತ್ತರ:– ಸಸ್ಯಗಳು ಬೆಳಗಿನ ಉಸಿರಾಟ ಕ್ರಿಯೆ ಸಮಯದಲ್ಲಿ ಕಾರ್ಬನ್ ಡೈ ಆಕ್ಸೈಡ್ ಅನ್ನು ದ್ಯುತಿಸಂಶ್ಲೇಷಣೆ ಕ್ರಿಯೆಗೆ ಬಳಸಿಕೊಳ್ಳುತ್ತವೆ ಹೀಗಾಗಿ ಆ ಹೊತ್ತಿನಲ್ಲಿ ಕಾರ್ಬನ್ ಡೈ ಆಕ್ಸೈಡ್ ಬಿಡುಗಡೆ ಮಾಡುವುದಿಲ್ಲ. ಇದರ ಬದಲು ಆಕ್ಸಿಜನ್ ಬಿಡುಗಡೆ ಮಾಡುತ್ತವೆ.

4) ಗಾಳಿಯಲ್ಲಿರುವ ಆಕ್ಸಿಜನ್ ಅನ್ನು ನಮ್ಮ ದೇಹದಲ್ಲಿ ಎಲ್ಲಿರುವ ರಕ್ತವು ದೇಹದ ಎಲ್ಲಾ ಜೀವ ಕೋಶಗಳಿಗೆ ಸರಬರಾಜು ಮಾಡಲು ಪಡೆದುಕೊಳ್ಳುತ್ತದೆ?

ಉತ್ತರ:– ಅಲ್ವಿಯೋಲಾರ್ ರಕ್ತನಾಳದಲ್ಲಿರುವ ರಕ್ತವು ಗಾಳಿಯಲ್ಲಿರುವ ಆಕ್ಸಿಜನ್ ಅನ್ನು ದೇಹದ ಎಲ್ಲಾ ಜೀವ ಕೋಶಗಳಿಗೆ ಸರಬರಾಜು ಮಾಡಲು ಪಡೆದುಕೊಳ್ಳುತ್ತದೆ

5) ನಮ್ಮ ಜಠರದಲ್ಲಿ ಲೋಳೆಯ ಪಾತ್ರವೇನು?

ಉತ್ತರ: ಲೋಳೆಯು ಹೈಡ್ರೋಕ್ಲೋರಿಕ್ ಆಮ್ಲದಿಂದ ಜಠರಕ್ಕೆ ಆಗುವ ಹಾನಿಯನ್ನು ತಡೆಯುತ್ತದೆ.

6) ಎಟಿಪಿಯನ್ನು ವಿಸ್ತರಿಸಿ

ಉತ್ತರ:– ಅಡಿನೋಸೈನ್ ಟ್ರೈ ಫಾಸ್ಫೇಟ್

7) ಆಹಾರದ ಜೀರ್ಣಕ್ರಿಯೆಯಲ್ಲಿ ಲಾಲಾರಸದ ಪಾತ್ರವೇನು?

ಉತ್ತರ:– ಲಾಲಾರಸ ಗ್ರಂಥಿಗಳು ಸ್ರವಿಸುವ ಲಾಲಾರಸದಿಂದ ಆಹಾರವು ತೇವಗೊಳ್ಳುವುದು. ಲಾಲಾರಸದಲ್ಲಿರುವ ಸಲಿವರಿ ಅಮಲೈಸ್ ಎಂಬ ಕಿಣ್ವವು ಪಿಷ್ಟವನ್ನು ಸಕ್ಕರೆಯಾಗಿ ಪರಿವರ್ತಿಸುವುದು.

8) ಸ್ವಪೋಷಕ ಪೋಷಣೆಗೆ ಅಗತ್ಯವಾದ ಪರಿಸ್ಥಿತಿಗಳು ಯಾವುವು?


ಉತ್ತರ:– ಸ್ವಪೋಷಕ ಪೋಷಣೆಗೆ ಅಗತ್ಯವಾದ ಪರಿಸ್ಥಿತಿಗಳು ಎಂದರೆ
* ದ್ಯುತಿಸಂಶ್ಲೇಷಣೆ ಕ್ರಿಯೆಗೆ ಬೇಕಾದ ಕಚ್ಚವಸ್ತುಗಳಾದ ಕಾರ್ಬನ್ ಡೈ ಆಕ್ಸೈಡ್ ಮತ್ತು ನೀರು ಲಭ್ಯವಿರಬೇಕು
* ದ್ಯುತಿಸಂಶ್ಲೇಷಣೆ ಕ್ರಿಯೆಗೆ ಬೇಕಾದ ಸೂರ್ಯನ ಬೆಳಕು ಮತ್ತು ಕ್ಲೋರೋಫಿಲ್ ಇರಬೇಕು

9) ಸ್ವಪೋಷಕ ಮತ್ತು ಪರಪೋಷಕಗಳಿರುವ ವ್ಯತ್ಯಾಸವನ್ನು ಬರೆಯಿರಿ

ಉತ್ತರ:– ತಮ್ಮ ಆಹಾರವನ್ನು ತಾವೇ ತಯಾರಿಸುವ ಜೀವಿಗಳನ್ನು ಸ್ವಪೋಷಕಗಳು ಎನ್ನುವರು ಆದರೆ ಆಹಾರಕ್ಕಾಗಿ ಇತರ ಜೀವಿಗಳನ್ನು ಅವಲಂಬಿಸಿರುವವರನ್ನು ಪರಪೋಷಕ ಜೀವಿಗಳು ಎನ್ನುವರು

10) ಎಲೆಯ ಅಡ್ಡ ಸೀಳಿಕೆಯ ನೋಟವನ್ನು ತೋರಿಸುವ ಚಿತ್ರವನ್ನು ಬರೆದು ಭಾಗಗಳನ್ನು ಗುರುತಿಸಿ

ಉತ್ತರ:–



11) ಮಾನವನ ಜೀರ್ಣಾಂಗ ವ್ಯವಸ್ಥೆಯ ಬಗ್ಗೆ ಬರೆಯಿರಿ

ಉತ್ತರ:– ನಾವು ಅನೇಕ ವಿವಿಧ ಆಹಾರವನ್ನು ಸೇವಿಸುತ್ತೇವೆ. ಆ ಆಹಾರವು ನಮ್ಮ ಹಲ್ಲಿನಿಂದ ನುರಿಸುವ ಮೂಲಕ ಇದನ್ನು ನುಣ್ಣಗೆ ಮಾಡಲಾಗುತ್ತದೆ. ನಾಳದ ಒಳಗೋಡೆಗಳ ಪದರ ಮೃದುವಾಗಿರುವುದರಿಂದ ಆಹಾರವು ನಯವಾಗಿ ಹಾದು ಹೋಗಲು ಅದು ತೇವಾಂಶದಿಂದ ಕೂಡಿರಬೇಕು. ಅದಕ್ಕೆ ಲಾಲಾರಸ ಗ್ರಂಥಿಯಿಂದ ಸ್ರವಿಸಲ್ಪಡುವ ಲಾಲಾರಸ ಸಹಾಯ ಮಾಡುತ್ತದೆ

ಲಾಲಾರಸವು ಲಾಲಾರಸದ ಅಮೈಲೇಸ್ ಎಂಬ ಕಿಣ್ವವನ್ನು ಹೊಂದಿದ್ದು ಅದು ಪಿಷ್ಟ ಎಂಬ ಸಂಕೀರ್ಣ ಅಣುವನ್ನು ವಿಭಜಿಸಿ ಸಕ್ಕರೆಯನ್ನು ಬಿಡುಗಡೆ ಮಾಡುತ್ತದೆ. ಆಹಾರವು ಲಾಲಾರಸದೊಂದಿಗೆ ಚೆನ್ನಾಗಿ ಮಿಶ್ರಣಗೊಂಡು ಸ್ನಾಯುವಿನಿಂದಾದ ನಾಲಿಗೆಯ ಸಹಾಯದಿಂದ ಮೆಲ್ಲುವಾಗ ಬಾಯಿಯ ತುಂಬಾ ಚಲಿಸುತ್ತದೆ. ಆಹಾರವು ಜೀರ್ಣನಾಳದ ಪ್ರತಿಯೊಂದು ಭಾಗದಲ್ಲಿ ಸರಿಯಾಗಿ ಸಂಸ್ಕರಿಸಲು ಅದು ಜೀರ್ಣನಾಳದಲ್ಲಿ ಒಂದು ನಿಯಂತ್ರಿತ ರೀತಿಯಲ್ಲಿ ಚಲಿಸುತ್ತದೆ. ಜೀರ್ಣನಾಳದ ಒಳಸ್ತರಿಯು ಸ್ನಾಯುಗಳನ್ನು ಹೊಂದಿದ್ದು ಅದು ಆಹಾರವನ್ನು ಮುಂದಕ್ಕೆ ತಳ್ಳಲು ಲಯಬದ್ಧವಾಗಿ ಸಂಕುಚಿಸುತ್ತದೆ. ಈ ಪರಿಕ್ರಮಣ ಸಂಕುಚನ ಚಲನೆಗಳು ಕರುಳಿನ ಉದ್ದಕ್ಕೂ ಉಂಟಾಗುತ್ತವೆ.

ಆಹಾರವು ಬಾಯಿಯಿಂದ ಜಠರಕ್ಕೆ ಆಹಾರ ನಾಳ ಅಥವಾ ಅನ್ನನಾಳದ ಮೂಲಕ ಒಯ್ಯಲ್ಪಡುತ್ತದೆ. ಜಠರವು ಒಂದು ದೊಡ್ಡ ಅಂಗವಾಗಿದ್ದು ಆಹಾರ ಪ್ರವೇಶಿಸಿದಾಗ ಹಿಗ್ಗುತ್ತದೆ. ಜಠರದ ಸ್ನಾಯುಕ ಗೋಡೆಗಳು ಹೆಚ್ಚಿನ ಪಚನ ರಸಗಳೊಂದಿಗೆ ಆಹಾರವು ಚೆನ್ನಾಗಿ ಮಿಶ್ರಣವಾಗಲು ಸಹಾಯ ಮಾಡುತ್ತವೆ. ಈ ಪಚನ ಪ್ರಕ್ರಿಯೆಗಳು ಜಠರದ ಗೋಡೆಯಲ್ಲಿ ಕಂಡುಬರುವ ಜಠರ ಗ್ರಂಥಿಗಳಿಂದ ನಿರ್ವಹಿಸಲ್ಪಡುತ್ತವೆ. ಇವು ಹೈಡ್ರೋಕ್ಲೋರಿಕ್ ಆಮ್ಲ, ಪ್ರೋಟಿನನ್ನು ಜೀರ್ಣಿಸುವ ಪೆಪ್ಸಿನ್ ಮತ್ತು ಲೋಳೆಯನ್ನು ಸ್ರವಿಸುತ್ತವೆ. ಹೈಡ್ರೋಕ್ಲೋರಿಕ್ ಆಮ್ಲವು ಪೆಪ್ಸಿನ್ ಕಿಣ್ವದ ಕ್ರಿಯೆಯನ್ನು ಉತ್ತೇಜಿಸುವ ಆಮ್ಲೀಯ ಮಾಧ್ಯಮವನ್ನು ಉಂಟುಮಾಡುತ್ತದೆ. ಸಾಮಾನ್ಯ ಪರಿಸ್ಥಿತಿಗಳಲ್ಲಿ ಲೋಳೆಯು ಜಠರದ ಗೋಡೆಗಳನ್ನು ಆಮ್ಲದ ಕ್ರಿಯೆಯಿಂದ ರಕ್ಷಿಸುತ್ತದೆ. ಜಠರದಿಂದ ಆಹಾರದ ಹೊರದೂಡುವಿಕೆಯು ಸಂಕುಚನ ಸ್ನಾಯುಗಳಿಂದ(sphincter muscle) ನಿಯಂತ್ರಿಸಲ್ಪಡುತ್ತದೆ. ಅದು ಆಹಾರವನ್ನು ಸಣ್ಣ ಪ್ರಮಾಣದಲ್ಲಿ ಸಣ್ಣಕರುಳಿಗೆ ಬಿಡುಗಡೆ ಮಾಡುತ್ತದೆ. ಈಗ ಆಹಾರವು ಜಠರದಿಂದ ಸಣ್ಣಕರುಳಿಗೆ ಪ್ರವೇಶಿಸುತ್ತದೆ. ಇದು ಜೀರ್ಣನಾಳದ ಅತ್ಯಂತ ಉದ್ದದ ಭಾಗವಾಗಿದ್ದು, ವ್ಯಾಪಕವಾಗಿ ಸುರುಳಿಹೊಂದಿ ಕಡಿಮೆ ಸ್ಥಳದಲ್ಲಿ ಅಳವಡಿಸಲ್ಪಟ್ಟಿದೆ. ಸಣ್ಣಕರುಳಿನ ಉದ್ದವು ವಿವಿಧ ಪ್ರಾಣಿಗಳಲ್ಲಿ ಅವು ಸೇವಿಸುವ ಆಹಾರದ ಆಧಾರದ ಮೇಲೆ ವಿಭಿನ್ನವಾಗಿವೆ. ಹುಲ್ಲನ್ನು ತಿನ್ನುವ ಸಸ್ಯಾಹಾರಿಗಳಿಗೆ ಸೆಲ್ಯುಲೋಸನ್ನು ಜೀರ್ಣಿಸುವ ಸಲುವಾಗಿ ಉದ್ದನೆಯ ಸಣ್ಣಕರಳು ಇದ್ದರೆ ಹುಲಿಯಂಥ ಮಾಂಸಾಹಾರಿಗಳು ಗಿಡ್ಡ ಸಣ್ಣಕರುಳನ್ನು ಹೊಂದಿವೆ.

ಸಣ್ಣಕರುಳು ಎಂಬುದು ಕಾರ್ಬೋಹೈಡ್ರೇಟ್‌ಗಳು, ಪ್ರೋಟೀನ್‌ಗಳು ಮತ್ತು ಕೊಬ್ಬುಗಳು ಸಂಪೂರ್ಣ ಪಚನವಾಗುವ ಸ್ಥಳವಾಗಿದೆ. ಈ ಉದ್ದೇಶಕ್ಕಾಗಿ ಇದು ಮೇದೋಜೀರಕ ಗ್ರಂಥಿ ಮತ್ತು ಯಕೃತ್‌ಗಳ ಸ್ರವಿಕೆಗಳ ಸಹಾಯ ಪಡೆಯುತ್ತದೆ.

ಜಠರದಿಂದ ಬರುವ ಆಹಾರವು ಆಮ್ಲೀಯವಾಗಿದ್ದು ಮೇದೋಜೀರಕ ಕಿಣ್ವಗಳ ಪ್ರತಿವರ್ತನೆಗಾಗಿ ಅದನ್ನು ಕ್ಷಾರೀಯಗೊಳಿಸುವ ಅಗತ್ಯವಿದೆ. ಯಕೃತ್‌ನಿಂದ ಸ್ರವಿಕೆಯಾಗುವ ಪಿತ್ತರಸವು ಕೊಬ್ಬಿನ ಮೇಲೆ ಪ್ರತಿವರ್ತಿಸುವ ಜೊತೆಗೆ ಈ ಕಾರ್ಯವನ್ನು ಪೂರ್ಣಗೊಳಿಸುತ್ತದೆ.

(ಮುಂದುವರಿಯುವುದು)

II PUC BIOLOGY

ಎಸ್ಸೆಸ್ಸೆಲ್ಸಿ ಗಣಿತ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ

II PUC : BIOLOGY
MOLECULAR BASIS OF INHERITANCE

3. What is the importance of Mendelism?

Ans:- (……Contd)

(2) Improvement of animals – Mendelism has enabled the animal breeders to improve the races of the domestic animals. Hybridisation through artificial insemination has proved highly successful in improving the quality of milk, meat, egg and other animal products.

(3) Improvement of human race – Laws of heredity postulated by Mendel are equally applicable to mankind.

(4) Disputed parentage – Study of the inheritance of the blood group can solve this.

(5) Genetic counselling- With the knowledge of mendelism genetic counsellor can predict the possibility of the heredity defect in future (unconceived child) and even direct genetic disorder in early foetus.

4. What is multiple allelism?

Ans:- The phenomenon of a gene occurring in multiple forms is called multiple allelism or gene polymorphism.

Blood groups in man, coat colour in rabbits, eye colour in Drosophila, self-sterility gene in Nicotiana are some of the examples for multiple allelism.

5. What is the importance of having a knowledge of Blood groups?

Ans:- The importance of having a knowledge of Blood groups is to
(i) understand the human population
(ii) identify criminals
(iii) have successful blood transfusion
(iv) solve disputed parentage

6. What is meant by blood transfusion? Why is it necessary to identify the blood groups before transfusion?

Ans:- Injecting blood of donor to the recipient to make up the loss in the recipient's body is called blood transfusion.

Identification of different blood groups is very important for blood transfusion because if unmatched bloods are mixed blood clumping will take place and the patient will die within some time.

7. A plant with purple flowers was crossed with white flowers producing 50 plants with purple flowers. On selfing, the plants produced 470 plants with purple flowers and 160 with white flowers. Explain the genetic mechanism accounting for the above result.

Ans:- In F_2 generation ratio of purple to white flower is approximately 3 : 1 so the ratio can be classified under Mendelian Monohybrid cross. The cross further explains the following facts:

(a) F_1 is represented only by one parental forms, ie., purple flower plant.

(b) Both the parents i.e., purple and white flowered plants appear in F_2 generation.

8. In human beings blue eye colour is recessing to brown eye. A brown-eyed man has blue-eyed mother.
(a) What is the genotype of man and his mother?
(b) What is the possible genotype of his father?

Ans:- (a) the genotype of man is Bb
(b) the genotype of his mother is bb
(c) the possible genotype of his father is BB or Bb

9. In tomato plants, the gene for purple stem (P) is dominant for green stem (p) and the gene for red fruit (R) is dominant to its allele for the yellow fruit (r). If two tomato plants heterozygous for both the traits are crossed, state what proportion of offspring are expected to have
(a) purple stem and yellow fruits
(b) green stem and red fruits
(c) purple stems and red fruits

Ans:- Genotype of parents
PpRr (purple stems and red fruits)
Expected proportion of offspring
(a) purple stems and yellow fruits (3/16)
(b) green stems and red fruits (3/16)
(c) purple stems and red fruits (9/16)

10. What are the components of normal haemoglobin molecule?

Ans:- Each normal haemoglobin molecule [Hb^A] consists of the protein, globin and the non – protein prosthetic group, the haem containing iron. Globin is formed of four polypeptide chains – two α - polypeptide chains, each containing 146 amino acids. In each β - polypeptide chain, the amino acid present in the 6^{th} carbon position is glutamic acid.

11. Write short note on sickle cell anaemia?

Ans:- Sickle cell anaemia is a disease caused by the defective RBC. It is caused if the gene responsible for the synthesis of haemoglobin is defective (on account of mutation), a defective or abnormal haemoglobin.

(Contd/-)





1.ಚಾಮರಾಜನಗರ ತಾಲ್ಲೂಕಿನ ಚನ್ನಪ್ಪನಪುರ, ಅಮಚವಾಡಿ ರಸ್ತೆಯಲ್ಲಿರುವ ಸೇತುವೆ ಮಳೆಯಿಂದ ಮುಳುಗಡೆಯಾಗಿತ್ತು 2. ಚಿತ್ರದುರ್ಗ ಜಿಲ್ಲೆಯ ಧರ್ಮಪುರ ಸುತ್ತಮುತ್ತ ಸೋಮವಾರ ರಾತ್ರಿ ಸುರಿದ ಮಳೆಗೆ ಅರಳೀಕೆರೆ ಧರ್ಮಪುರ ಸಂಪರ್ಕ ರಸ್ತೆ ಕುಸಿದು, ಕಾರೊಂದು ರಸ್ತೆಯಲ್ಲಿ ಉಂಟಾದ ಗುಂಡಿಯಲ್ಲಿ ಸಿಲುಕಿತ್ತು 3. ಚಿಕ್ಕಮಗಳೂರು ಜಿಲ್ಲೆಯ ತರೀಕೆರೆ ತಾಲ್ಲೂಕಿನ ಉಡೇವಾ ಗ್ರಾಮದ ಊರ ಮುಂದಿನ ಕೆರೆ ತುಂಬಿದೆ

ಇಳೆಯ ದಾಹ ತಗ್ಗಿಸಿದ ವ್ಯಾಪಕ ಮಳೆ

ಪ್ರಜಾವಾಣಿ ವಾರ್ತೆ

ತುಮಕೂರು/ದಕ್ಷಿಣ ಕನ್ನಡ: ಹಲವು ಜಿಲ್ಲೆಗಳಲ್ಲಿ ಮಂಗಳವಾರವೂ ಮಳೆ ಮುಂದುವರಿದಿದ್ದು ಚಿಕ್ಕಮಗಳೂರು ಜಿಲ್ಲೆಯ ಕಡೂರು ತಾಲ್ಲೂಕಿನ ಕುಪ್ಪ-ಸಮುದ್ರದ ಕೆರೆ, ಚೌಳಹಿರಿಯೂರು, ವಿಷ್ಣುಸಮುದ್ರ ಕೆರೆಗಳು ತುಂಬುವ ಹಂತದಲ್ಲಿವೆ.

ಅಜ್ಜಂಪುರ, ತರೀಕೆರೆ ತಾಲ್ಲೂಕಿನಲ್ಲೂ ಜೋರು ಮಳೆಯಾಗಿದೆ. ಹಳ್ಳ-ಕೊಳ್ಳಗಳು ತುಂಬಿ ಹೊಲ ಮತ್ತು ಅಡಿಕೆ ತೋಟಗಳಿಗೆ ನೀರು ತುಂಬಿಕೊಂಡಿದೆ.

ಚಿಕ್ಕಮಗಳೂರು ನಗರ, ಆವತಿ, ಜಾಗರ, ಲಕ್ಯಾ, ಬೀರೂರು, ಸಖರಾಯ ಪಟ್ಟಣ, ಸಿಂಗಟಗೆರೆ, ಪಂಚನಹಳ್ಳಿ, ಯಗಟಿ, ಕೊಪ್ಪ, ಹರಿಹರಪುರ, ಬಾಳೆಹೊನ್ನೂರು, ಶೃಂಗೇರಿ, ಅಮೃತಾಪುರ, ಲಿಂಗದಹಳ್ಳಿ, ಚೌಳಹಿರಿಯೂರು, ಶಿವನಿ, ಹಿರೇನಲ್ಲೂರು ಸುತ್ತಮುತ್ತ ಜೋರು ಮಳೆಯಾಗಿದೆ. ವಿಪರೀತ ಬರಗಾಲ ಮತ್ತು ಬಿಸಿಲಿನಿಂದ ಕಾದಿದ್ದ ನೆಲ ತಂಪಾಗಿದೆ.

ದಕ್ಷಿಣ ಕನ್ನಡದ ಬೆಳ್ತಂಗಡಿ ಪ್ರದೇಶದಲ್ಲಿ ಮಂಗಳವಾರ ಮಧ್ಯಾಹ್ನದ ವೇಳೆ ಸುಮಾರು ಅರ್ಧ ಗಂಟೆ ಧಾರಾಕಾರ ಮಳೆ ಸುರಿಯಿತು.

ತುಮಕೂರು ಜಿಲ್ಲೆಯಲ್ಲಿ ಸುರಿದ ಧಾರಾಕಾರ ಮಳೆಯಿಂದ ತೋವಿನಕೆರೆ ಬಸ್ ನಿಲ್ದಾಣದ ಬಳಿ ಮಧುಗಿರಿ ರಸ್ತೆ-ಯಲ್ಲಿರುವ ಹಾಲು ಉತ್ಪಾದಕರ ಸಂಘದ ಕಟ್ಟಡ, ಧಾನ್ಯ ಮಾರಾಟ ಮಳಿಗೆ ಹಾಗೂ ತಗ್ಗು ಪ್ರದೇಶದ ಮನೆಗಳಿಗೂ ನೀರು ನುಗ್ಗಿ ಸಾರ್ವಜನಿಕರು ಪರದಾಡಿದರು.

ಹೊಸಪೇಟೆ (ವಿಜಯನಗರ)/ಬಳ್ಳಾರಿ ವರದಿ: ವಿಜಯನಗರ ಜಿಲ್ಲೆಯ ಕೂಡ್ಲಿಗಿ ಮತ್ತು ಹಗರಿಬೊಮ್ಮನಹಳ್ಳಿ ತಾಲ್ಲೂಕುಗಳಲ್ಲಿ ಉತ್ತಮ ಮಳೆಯಾಗಿದ್ದರಿಂದ ಗೋಕಟ್ಟೆ, ಕೃಷಿ ಹೊಂಡಗಳು ಮೈದುಂಬಿಕೊಳ್ಳುತ್ತಿವೆ. ಕೃಷಿ ಚಟುವಟಿಕೆಗಳು ಗರಿಗೆದರಿವೆ.

ಬಳ್ಳಾರಿ ಜಿಲ್ಲೆಯಲ್ಲಿ ಎರಡು ಮನೆಗಳಿಗೆ ಹಾನಿಯಾಗಿದೆ. ಮತ್ತೊಂದೆಡೆ, ಜಲಮೂಲಗಳಿಗೆ ನೀರು ಹರಿದು ಬರುತ್ತಿದೆ. ಸಂಡೂರಿನ ಜೀವನಾಡಿ ನಾರಿಹಳ್ಳ ಜಲಾಶಯಕ್ಕೆ ನೀರು ಹರಿದು ಬರುತ್ತಿದೆ.

ಮೈಸೂರು ವರದಿ: ಮಡಿಕೇರಿ ನಗರ ಮತ್ತು ನಾಪೋಕ್ಲು ವ್ಯಾಪ್ತಿ, ಸಿದ್ದಾಪುರದಲ್ಲಿ ಭಾರಿ ಮಳೆ ಸುರಿದಿದೆ. ಸುಂಟಿಕೊಪ್ಪ, ಸೋಮವಾರಪೇಟೆ, ಕುಶಾಲನಗರದಲ್ಲಿ ಸಾಧಾರಣ ಮಳೆಯಾಗಿದೆ.

ಚಾಮರಾಜನಗರ ತಾಲ್ಲೂಕಿನ ವಿ.ಸಿ.ಹೊಸೂರು, ವೆಂಕಟಯ್ಯನ ಛತ್ರ, ಅಮಚವಾಡಿ, ಚನ್ನಪ್ಪನಪುರ ಸೇರಿದಂತೆ ಸುತ್ತಮುತ್ತಲಿನ ಭಾಗಗಳಲ್ಲಿ ಒಂದು ಗಂಟೆಗೂ ಹೆಚ್ಚು ಕಾಲ ಧಾರಾಕಾರ ಮಳೆಯಾಗಿದ್ದು, ತೊರೆ, ಹೊಳೆಗಳು ತುಂಬಿ ಹರಿದಿವೆ.

ಮೈಸೂರು ಜಿಲ್ಲಾ ಕೇಂದ್ರದಲ್ಲಿ ಸೋಮವಾರ ರಾತ್ರಿಯಿಡೀ ಮಳೆ ಸುರಿಯಿತು. ಪಿರಿಯಾಪಟ್ಟಣ ತಾಲ್ಲೂಕಿನ ಬೆಟ್ಟದಪುರ, ಹುಣಸೂರು ತಾಲ್ಲೂಕಿನ ಧರ್ಮಾಪುರ ಹಾಗೂ ಹನಗೋಡು, ಸಾಲಿಗ್ರಾಮ ಹಾಗು ನಂಜನಗೂಡು ತಾಲ್ಲೂಕು, ತಿ.ನರಸೀಪುರ ತಾಲ್ಲೂಕಿನ ತಲಕಾಡು ಪ್ರದೇಶದಲ್ಲಿ ಮಧ್ಯಾಹ್ನದ ಬಳಿಕ ಗಾಳಿ ಸಹಿತ ಜೋರು ಮಳೆಯಾಯಿತು. ಹಾಸನ ಜಿಲ್ಲೆಯ ಅರಕಲಗೂಡು, ಕೊಣನೂರಿನ ಸುತ್ತ ಸೋಮವಾರ ರಾತ್ರಿ ಧಾರಾಕಾರ ಮಳೆಯಾಗಿದೆ. ಹೊಳೆನರಸೀಪುರ, ಹಾಸನ, ಹಿರೀಸಾವೆ, ಚನ್ನರಾಯಪಟ್ಟಣ, ಬೇಲೂರು, ಹಳೇಬೀಡಿನಲ್ಲಿ ಮಂಗಳವಾರ ಸಂಜೆ ಸಾಧಾರಣ ಮಳೆ ಸುರಿದಿದೆ.

ದಾವಣಗೆರೆ ವರದಿ: ಸೋಮವಾರ ರಾತ್ರಿಯಿಂದ ಬೆಳಗಿನ ಜಾವದವರೆಗೂ ದಾವಣಗೆರೆ ನಗರ, ಜಿಲ್ಲೆಯ ಜಗಳೂರು, ಹೊನ್ನಾಳಿ, ನ್ಯಾಮತಿ, ಚನ್ನಗಿರಿ, ಸಂತೇಬೆನ್ನೂರು, ಹರಿಹರ, ಮಲೇಬೆನ್ನೂರು ಭಾಗಗಳಲ್ಲಿ ಉತ್ತಮ ಮಳೆಯಾಗಿದೆ.

ಕೆರೆ- ಕಟ್ಟೆಗಳಿಗೆ ನೀರು ಹರಿದಿದ್ದು, ರೈತರಲ್ಲಿ ಹರ್ಷ ತಂದಿದೆ. ಅಡಿಕೆ ತೋಟ ಉಳಿಸಿಕೊಳ್ಳಲು ಪರದಾಡುತ್ತಿದ್ದ ರೈತರು ಈಗ ಸುರಿಯುತ್ತಿರುವ ಮಳೆಯಿಂದ ನಿಟ್ಟುಸಿರು ಬಿಟ್ಟಂತಾಗಿದೆ. ಇತರ ತೋಟಗಾರಿಕೆ ಬೆಳೆಗಳಿಗೆ ಮಳೆ ವರವಾಗಿ ಪರಿಣಮಿಸಿದೆ. ಜಗಳೂರು ತಾಲ್ಲೂಕಿನಲ್ಲಿ ಸೋಮವಾರ ರಾತ್ರಿ ವ್ಯಾಪಕವಾಗಿ ಮಳೆ ಸುರಿದಿದೆ. ಕೆರೆ–ಕಟ್ಟೆಗಳಿಗೆ ನೀರು ಹರಿದು ಬರುತ್ತಿದೆ. ಗಡಿಮಾಕುಂಟೆ ಕೆರೆಗೆ ನಾಲ್ಕು ಅಡಿಗೂ ಹೆಚ್ಚು ನೀರು ಬಂದಿದ್ದು, ಹಲವು ಹಳ್ಳಗಳು ತುಂಬಿ ಹರಿಯುತ್ತಿವೆ. ಭರಮಸಮುದ್ರದ ಕೆರೆಗೂ ನೀರು ಬಂದಿದ್ದು, ಗೋಕಟ್ಟೆಗಳು, ಚೆಕ್ ಡ್ಯಾಂಗಳು ಭರ್ತಿಯಾಗಿವೆ.

ಚಿತ್ರದುರ್ಗ ವರದಿ: ಸೋಮವಾರ ರಾತ್ರಿ ಹಾಗೂ ಮಂಗಳವಾರ ಜಿಲ್ಲೆಯಾದ್ಯಂತ ಉತ್ತಮ ಮಳೆಯಾಗಿದೆ. ಚಿತ್ರದುರ್ಗ ನಗರದಲ್ಲಿ ಸುರಿದ ಮಳೆಯ ರಭಸಕ್ಕೆ ತಿಮ್ಮಣ್ಣನಾಯಕನ ಕೆರೆಯ ಸಮೀಪದ ಟ್ರೀ ಪಾರ್ಕ್ ಅಸ್ತವ್ಯಸ್ತಗೊಂಡಿದೆ.

ಸತತ ಮಳೆಯಿಂದ ಜಲಮೂಲಗಳಿಗೆ ನೀರು ಹರಿದು ಬಂದಿದೆ. ಧರ್ಮಪುರ- ಅರಳೀಕೆರೆ ರಸ್ತೆ ಕುಸಿದಿದ್ದು, ಕಾರೊಂದು ಬೃಹತ್ ಗುಂಡಿಗೆ ಇಳಿದಿದೆ. ಪ್ರಯಾಣಿಕರು ಅಪಾಯದಿಂದ ಪಾರಾಗಿದ್ದಾರೆ.

ಧರ್ಮಸ್ಥಳದಲ್ಲಿ 15 ಸೆಂ.ಮೀ. ಮಳೆ

ಮಂಗಳವಾರ ಬೆಳಿಗ್ಗೆ 8.30ಕ್ಕೆ ಅನ್ವಯಿಸಿದಂತೆ ಹಿಂದಿನ 24 ಗಂಟೆಗಳ ಅವಧಿಯಲ್ಲಿ ಕರಾವಳಿ, ದಕ್ಷಿಣ ಒಳನಾಡಿನ ಹಲವು ಕಡೆ ಮತ್ತು ಉತ್ತರ ಒಳನಾಡಿನ ಒಂದೆರಡು ಕಡೆ ಮಳೆಯಾಗಿದೆ. ದಕ್ಷಿಣ ಕನ್ನಡ ಜಿಲ್ಲೆಯ ಧರ್ಮಸ್ಥಳದಲ್ಲಿ ಗರಿಷ್ಠ (15 ಸೆಂ.ಮೀ.) ಮಳೆಯಾಗಿದೆ.

ಉತ್ತರ ಕನ್ನಡದ ಯಲ್ಲಾಪುರ ಹಾಗೂ ಚಾಮರಾಜನಗರದಲ್ಲಿ ತಲಾ 10 ಸೆಂ.ಮೀ., ದಾವಣಗೆರೆಯ ಸಂತೆಬೆನ್ನೂರಿನಲ್ಲಿ 8 ಸೆಂ.ಮೀ., ದಕ್ಷಿಣ ಕನ್ನಡದ ಉಪ್ಪಿನಂಗಡಿ, ಪಣಂಬೂರು, ಮಂಗಳೂರು ವಿಮಾನ ನಿಲ್ದಾಣ, ಗದಗದ ಲಕ್ಷ್ಮೇಶ್ವರ, ಚಿಕ್ಕಮಗಳೂರಿನ ಕೊಪ್ಪ ಹಾಗೂ ಶಿವಮೊಗ್ಗದ ಹುಂಚದಕಟ್ಟೆ-ಯಲ್ಲಿ ತಲಾ 7 ಸೆಂ.ಮೀ. ಮಳೆಯಾಗಿದೆ. ಇನ್ನುಳಿದೆಡೆ ಇದಕ್ಕಿಂತ ಕಡಿಮೆ ಪ್ರಮಾಣದಲ್ಲಿ ಮಳೆ ಸುರಿದಿದೆ.

ರಾಜ್ಯದ ಏಳು ಜಿಲ್ಲೆಗಳಿಗೆ ‘ಯೆಲ್ಲೊ ಅಲರ್ಟ್’

ಬೆಂಗಳೂರು: ರಾಜ್ಯದ ವಿವಿಧೆಡೆ ಬುಧವಾರವೂ ಗುಡುಗು ಸಹಿತ ಭಾರಿ ಮಳೆಯಾಗುವ ಸಾಧ್ಯತೆಯಿದ್ದು, ಹವಾಮಾನ ಇಲಾಖೆಯು ಏಳು ಜಿಲ್ಲೆಗಳಿಗೆ ‘ಯೆಲ್ಲೊ ಅಲರ್ಟ್’ ಘೋಷಿಸಿದೆ.

ಉತ್ತರ ಕನ್ನಡ, ಉಡುಪಿ, ದಕ್ಷಿಣ ಕನ್ನಡ, ಚಿಕ್ಕಮಗಳೂರು, ಹಾಸನ, ಕೊಡಗು ಹಾಗೂ ಮೈಸೂರು ಜಿಲ್ಲೆಗೆ ‘ಯೆಲ್ಲೊ ಅಲರ್ಟ್’ ನೀಡಲಾಗಿದೆ. ಕೊಡಗು ಜಿಲ್ಲೆಯ ಒಂದೆರಡು ಸ್ಥಳಗಳಲ್ಲಿ ಬಿರುಗಾಳಿಯೊಂದಿಗೆ ಭಾರಿ ಮಳೆಯಾಗುವ ಸಾಧ್ಯತೆಯಿದೆ. ಈ ಜಿಲ್ಲೆಗಳ ಜತೆಗೆ ಶಿವಮೊಗ್ಗ ಜಿಲ್ಲೆಯ ಒಂದೆರಡು ಸ್ಥಳದಲ್ಲಿ ಭಾರಿ ಮಳೆಯಾಗುವ ಸಂಭವವಿದೆ ಎಂದು ಇಲಾಖೆ ತಿಳಿಸಿದೆ.

ಬಳ್ಳಾರಿ, ಬೆಂಗಳೂರು ಗ್ರಾಮಾಂತರ, ಬೆಂಗಳೂರು ನಗರ, ಚಾಮರಾಜನಗರ, ಚಿಕ್ಕಬಳ್ಳಾಪುರ, ಚಿತ್ರದುರ್ಗ, ದಾವಣಗೆರೆ, ಕೋಲಾರ, ಮಂಡ್ಯ, ರಾಮನಗರ, ತುಮಕೂರು ಹಾಗೂ ವಿಜಯನಗರ ಜಿಲ್ಲೆಯ ಹಲವು ಸ್ಥಳಗಳಲ್ಲಿ ಗುಡುಗು ಸಹಿತ ಬಿರುಗಾಳಿಯೊಂದಿಗೆ ಸಾಧಾರಣ ಮಳೆಯಾಗುವ ಸಂಭವವಿದೆ. ಉಳಿದ ಜಿಲ್ಲೆಗಳಲ್ಲಿ ಹಗುರ ಮಳೆಯಾಗುವ ಸಾಧ್ಯತೆಯಿದೆ ಎಂದು ಹೇಳಿದೆ.

ಮೀನುಗಾರರಿಗೆ ಎಚ್ಚರಿಕೆ: ರಾಜ್ಯದ ಹಲವು ಸ್ಥಳಗಳಲ್ಲಿ ಬುಧವಾರ 40ರಿಂದ 50 ಕಿ.ಮೀ. ವೇಗದಲ್ಲಿ ಗಾಳಿ ಬೀಸುವ ಸಂಭವವಿದೆ. ಕರಾವಳಿಯಲ್ಲಿ ಬಿರುಗಾಳಿಯ ಸಾಧ್ಯತೆಯೊಂದಿಗೆ, ಗಾಳಿಯು 55 ಕಿ.ಮೀ. ವೇಗದಲ್ಲಿ ಬೀಸಬಹುದು. ಇದರಿಂದಾಗಿ ಮೀನುಗಾರರು ಸಮುದ್ರಕ್ಕೆ ಇಳಿಯಬಾರದು ಎಂದು ಇಲಾಖೆ ಎಚ್ಚರಿಕೆ ನೀಡಿದೆ.

ಇದೇ 23ರಿಂದ ಉತ್ತರ ಒಳನಾಡಿನಲ್ಲಿ ಗರಿಷ್ಠ ತಾಪಮಾನ 2ರಿಂದ 3 ಡಿಗ್ರಿ ಸೆಲ್ಸಿಯಸ್ ಹೆಚ್ಚಳವಾಗುವ ಸಾಧ್ಯತೆಯಿದೆ. 28ರವರೆಗೂ ರಾಜ್ಯದ ವಿವಿಧೆಡೆ ಮಳೆಯಾಗುವ ಸಂಭವವಿದೆ ಎಂದು ಇಲಾಖೆ ಹೇಳಿದೆ.

ಸರ್ಕಾರಕ್ಕಿಂತ ಅಧಿಕಾರಿಗಳೇ ಬಲಿಷ್ಠ: ಸತೀಶ ಜಾರಕಿಹೊಳಿ

ಪ್ರಜಾವಾಣಿ ವಾರ್ತೆ



ಬೆಳಗಾವಿ: ‘ಈ ದೇಶದಲ್ಲಿ ಸರ್ಕಾರಕ್ಕಿಂತ ಅಧಿಕಾರಿಗಳೇ ಬಲಿಷ್ಠರಾಗಿದ್ದಾ-ರೆ. ಯಾವುದೇ ಸರ್ಕಾರ ಬರಲಿ, ಯಾರೇ ಸಚಿವರಾಗಲಿ. ಎಲ್ಲಕ್ಕಿಂತ ಅಧಿಕಾರಿಗಳೇ ಪವರ್‌ಫುಲ್’ ಎಂದು ಸಚಿವ ಸತೀಶ ಜಾರಕಿಹೊಳಿ ಬೇಸರ ವ್ಯಕ್ತಪಡಿಸಿದರು.

‘ನಾವು ಈ ವ್ಯವಸ್ಥೆ ಬದಲಾಯಿಸಲು ಯತ್ನಿಸಿದರೆ, ಅವರು ನಮ್ಮನ್ನೇ ಬದಲಿಸುತ್ತಾರೆ. ಹಳ್ಳಿಯಿಂದ ದೆಹಲಿಯವರೆಗೆ ಸಚಿವರಿಗಿಂತ ಅಧಿಕಾರಿಗಳೇ ಬಲಿಷ್ಠರಾಗಿ ಬೆಳೆದಿದ್ದಾರೆ’ ಎಂದು ಅವರು ಮಂಗಳವಾರ ಪತ್ರಿಕಾ-ಗೋಷ್ಠಿಯಲ್ಲಿ ಹೇಳಿದರು.

ಜಿಲ್ಲೆಯಲ್ಲಿ ಅಧಿಕಾರಿಗಳ ನಡುವೆ ಸಮನ್ವಯತೆಯಿಲ್ಲ ಎಂಬ ಪ್ರಶ್ನೆಗೆ ಪ್ರತಿ-ಕ್ರಿಯಿಸಿದ ಅವರು, ‘ನಾವು ಒಬ್ಬರನ್ನು ಬಸ್‌ನಿಂದ ಕೆಳಗೆ ಇಳಿಸಿದರೆ, ಅವರು ಮತ್ತೆ ಹಿಂಬಾಗಿಲಿನಿಂದ ಅದೇ ಬಸ್ ಹತ್ತುತ್ತಾರೆ’ ಎಂದರು.

ಜಿಲ್ಲಾ ಉಸ್ತುವಾರಿ ಸಚಿವರೂ ಆದ ಸತೀಶ ಜಾರಕಿಹೊಳಿ, ಈಚೆಗೆ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಶಿಕ್ಷಣ ಇಲಾಖೆಯ ಅಧಿಕಾ-ರಿಗಳನ್ನು ವರ್ಗಾವಣೆ ಮಾಡಿದ್ದರು. ಅವರು ಮತ್ತೆ ಅದೇ ಸ್ಥಾನಕ್ಕೆ ವರ್ಗಾವಣೆ ಮಾಡಿಸಿಕೊಂಡು, ಬಂದ ಬಗ್ಗೆ ಸಚಿವರು ಬೇಸರ ವ್ಯಕ್ತಪಡಿಸಿದರು.

ಕಾಂಗ್ರೆಸ್ ಮಹಿಳಾ ಘಟಕದ ಪ್ರಧಾನ ಕಾರ್ಯದರ್ಶಿ ಕೊಲೆ: ಪತಿ ಪರಾರಿ

ಪ್ರಜಾವಾಣಿ ವಾರ್ತೆ

ಮೈಸೂರು: ಜಿಲ್ಲೆಯ ತಿ.ನರಸೀಪುರ ತಾಲ್ಲೂಕಿನ, ಬನ್ನೂರು ಹೋಬಳಿ ತುರಗನೂರಿನಲ್ಲಿ ನಟಿ ಹಾಗೂ ನಗರ ಕಾಂಗ್ರೆಸ್ ಮಹಿಳಾ ಘಟಕದ ಪ್ರಧಾನ ಕಾರ್ಯದರ್ಶಿ ವಿದ್ಯಾ ಅವರನ್ನು ಆಕೆಯ ಪತಿ ನಂದೀಶ್ ಸೋಮವಾರ ತಡರಾತ್ರಿ ಕೊಲೆ ಮಾಡಿ ಪರಾರಿಯಾಗಿದ್ದಾರೆ.

‘ನಗರದ ಶ್ರೀರಾಂಪುರ ನಿವಾಸಿಯಾಗಿದ್ದ ವಿದ್ಯಾ ಅವರು ತಡರಾತ್ರಿ ತುರಗನೂರಿನಲ್ಲಿರುವ ಗಂಡನ ಮನೆಗೆ ತೆರಳಿದ್ದು, ಇಬ್ಬರ ನಡುವೆ ಜಗಳವಾಗಿತ್ತು. ಜಗಳದ ನಡುವೆ ಆರೋಪಿಯು ಪತ್ನಿಯ ತಲೆಗೆ ತಲವಾರಿನಿಂದ ಹಲ್ಲೆ ನಡೆಸಿದ್ದರಿಂದ ಆಕೆ ಮೃತಪಟ್ಟರು’ ಎಂದು ಪೊಲೀಸರು ತಿಳಿಸಿದ್ದಾರೆ. ಮೃತರ ತಾಯಿಯ ಹೇಳಿಕೆ ಆಧರಿಸಿ ಬನ್ನೂರು ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

‘2018ರಲ್ಲಿ ವಿದ್ಯಾ–ನಂದೀಶ್ ವಿವಾಹವಾಗಿದ್ದು, ಮೈಸೂರಿನಲ್ಲಿ ಬಾಡಿಗೆ ಮನೆಯಲ್ಲಿ ವಾಸವಿದ್ದರು. ಇಬ್ಬರ ನಡುವೆ ಹಲವು ಬಾರಿ ಕೌಟುಂಬಿಕ ಕಲಹಗಳು ನಡೆದಿದ್ದು, ವಿಚ್ಛೇದನವನ್ನೂ ಪಡೆದಿದ್ದರು. ಎರಡು ವರ್ಷದ ಹಿಂದೆ ಮತ್ತೆ ಒಂದಾಗಿ, ಮದುವೆ ನೋಂದಣಿ ಮಾಡಿಸಿದ್ದರು. ಆದರೂ ಕಲಹ ನಿಂತಿರಲಿಲ್ಲ’ ಎಂದು ಮೂಲಗಳು ತಿಳಿಸಿವೆ. ‘ಭಜರಂಗಿ’ ಮತ್ತು ‘ಮಾರುತಿ 800’ ಸಿನಿಮಾದಲ್ಲಿ ಅವರು ಸಹನಟಿಯಾಗಿ ಕಾಣಿಸಿಕೊಂಡಿದ್ದರು. ಅವರಿಗೆ ಇಬ್ಬರು ಪುತ್ರಿಯರಿದ್ದಾರೆ.

ಮುಂಬೈಗೆ ಬಿಭವ್ ಕುಮಾರ್

ನವದೆಹಲಿ (ಪಿಟಿಐ): ಎಎಪಿ ಸಂಸದೆ ಸ್ವಾತಿ ಮಲಿವಾಲ್ ಅವರ ಮೇಲೆ ಹಲ್ಲೆ ನಡೆಸಿದ ಆರೋಪದಲ್ಲಿ ಬಂಧಿತರಾಗಿರುವ ದೆಹಲಿ ಮುಖ್ಯಮಂತ್ರಿ ಅರವಿಂದ್ ಕೇಜ್ರಿವಾಲ್ ಅವರ ಆಪ್ತ ಸಹಾಯಕ ಬಿಭವ್ ಕುಮಾರ್ ಅವರು ಅಳಿಸಿ ಹಾಕಿದ ಐಫೋನ್‌ನಿಂದ ದತ್ತಾಂಶವನ್ನು ಪುನಃ ಪಡೆದುಕೊಳ್ಳುವ ಸಲುವಾಗಿ ಅವರನ್ನು ಮುಂಬೈಗೆ ಕರೆದೊಯ್ಯ-ಲಾಗುತ್ತಿದೆ ಎಂದು ಪೊಲೀಸರು ಮಂಗಳವಾರ ತಿಳಿಸಿದ್ದಾರೆ.

ಬಿಭವ್ ಕುಮಾರ್ ಅವರು ತಮ್ಮ ಮೊಬೈಲ್ ಫೋನ್‌ನಲ್ಲಿ ಸಂಪೂರ್ಣ ದತ್ತಾಂಶವನ್ನು ಅಳಿಸಿ ಹಾಕುವ ಮೊದಲು ಮುಂಬೈನಲ್ಲಿರುವ ಕೆಲವು ವ್ಯಕ್ತಿಗಳಿಗೆ ಅಥವಾ ಬೇರೆ ಉಪಕರಣಗಳಿಗೆ ವರ್ಗಾಯಿಸಿದ್ದಾರೆ ಎಂದು ಪೊಲೀಸರು ಹೇಳಿದ್ದಾರೆ.

ಕಲುಷಿತ ನೀರು ಸೇವನೆ: ಯುವಕ ಸಾವು

ಪ್ರಜಾವಾಣಿ ವಾರ್ತೆ



ಕನಕರಾಜು

ಮೈಸೂರು: ಕಲುಷಿತ ನೀರು ಸೇವಿಸಿ ಅಸ್ವಸ್ಥಗೊಂಡು ಚಿಕಿತ್ಸೆ ಪಡೆಯುತ್ತಿದ್ದ ತಾಲ್ಲೂಕಿನ ಕೆ.ಸಾಲುಂಡಿ ಗ್ರಾಮದ ನಿವಾಸಿ ಕನಕರಾಜು (22) ಮಂಗಳವಾರ ಮೃತಪಟ್ಟು, 37 ಮಂದಿ ಚೇತರಿಸಿಕೊಂಡಿದ್ದಾರೆ.

ಸೋಮವಾರ ನೀರು ಸೇವಿಸಿ ಅಸ್ವಸ್ಥಗೊಂಡಿದ್ದ 38 ಮಂದಿ ಗ್ರಾಮಸ್ಥರನ್ನು ನಗರದ ವಿವಿಧ ಆಸ್ಪತ್ರೆಗಳಿಗೆ ದಾಖಲಿಸಲಾಗಿತ್ತು. ವಾಂತಿ– ಭೇದಿಯಿಂದ ಬಳಲಿದ್ದ ಕನಕರಾಜು, ಖಾಸಗಿ ಆಸ್ಪತ್ರೆಯಲ್ಲಿ ಔಷಧ ಪಡೆದು ಮನೆಗೆ ಮರಳಿದ್ದರು. ಸಮಸ್ಯೆ ತೀವ್ರಗೊಂಡಾಗ ಸೋಮವಾರ ಸಂಜೆ ಆಸ್ಪತ್ರೆಗೆ ದಾಖಲಾಗಿದ್ದರು.

‘ಕುಡಿಯುವ ನೀರು ಮಲಿನಗೊಂಡಿದ್ದೇ ಗ್ರಾಮಸ್ಥರು ಅಸ್ವಸ್ಥಗೊಳ್ಳಲು ಕಾರಣ’ ಎಂದು ಜಿಲ್ಲಾ ಆರೋಗ್ಯಾಧಿಕಾರಿ ಡಾ.ಪಿ.ಸಿ.ಕುಮಾರಸ್ವಾಮಿ ತಿಳಿಸಿದರು.

ಸ್ಥಳಕ್ಕೆ ಭೇಟಿ ನೀಡಿದ್ದ ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ, ‘ಮುಡಾ ನಿರ್ಮಿಸಿರುವ ಬಡಾವಣೆಗಳಲ್ಲಿ ಒಳಚರಂಡಿ ಸಮಸ್ಯೆ ಎದ್ದು ಕಂಡಿದ್ದು, ಕಾರಣರಾದ ಎಂಜಿನಿಯರ್‌ಗಳ ವಿರುದ್ಧ ಕ್ರಮ ಕೈಗೊಳ್ಳಲಾಗುವುದು’ ಎಂದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರೂ ಅಧಿಕಾರಿಗಳಿಗೆ ಕರೆ ಮಾಡಿ, ಘಟನೆ ಬಗ್ಗೆ ಮಾಹಿತಿ ಪಡೆದಿದ್ದು, ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳಬೇಕು’ ಎಂದು ಸೂಚಿಸಿದ್ದಾರೆ.

ಸಂಕ್ಷಿಪ್ತ ಸುದ್ದಿ

ಹಾಸನ ಡಿವೈಎಸ್‌ಪಿ ಬ್ಯಾಂಕ್ ಖಾತೆಗೆ ಕನ್ನ

ಹಾಸನ: ಇಲ್ಲಿನ ಹಾಸನ ಉಪ ವಿಭಾಗದ ಡಿವೈಎಸ್ಪಿ ಪಿ.ಕೆ. ಮುರಳೀಧರ್ ಅವರ ಬ್ಯಾಂಕ್ ಖಾತೆಗೆ ಕನ್ನ ಹಾಕಿರುವ ಕಳ್ಳರು, ಒಟ್ಟು ₹15.98 ಲಕ್ಷ ವರ್ಗಾವಣೆ ಮಾಡಿಕೊಂಡಿದ್ದಾರೆ.

ಅಧಿಕಾರಿಯು ಕೆನರಾ ಬ್ಯಾಂಕ್ ಮಡಿಕೇರಿ ಮುಖ್ಯಶಾಖೆ ಹಾಗೂ ಭಾಗಮಂಡಲ ಶಾಖೆಯಲ್ಲಿ ಖಾತೆ ಹೊಂದಿದ್ದಾರೆ. ಮೇ 20 ರಂದು ಮಧ್ಯಾಹ್ನ 1.30 ರ ಸುಮಾರಿಗೆ ಅವರ ಮೊಬೈಲ್‌ಫೋನ್‌ಗೆ ಮೆಸೇಜ್‌ಗಳು ಬಂದಾಗ ಹಣ ವರ್ಗಾವಣೆಯಾಗಿದ್ದು ಗೊತ್ತಾಯಿತು.

ಮಡಿಕೇರಿ ಮುಖ್ಯಶಾಖೆ ಖಾತೆಯಿಂದ ಒಟ್ಟು 25 ವರ್ಗಾವಣೆಗಳ ಮೂಲಕ ₹12,10,711 ಹಾಗೂ ಭಾಗಮಂಡಲ ಶಾಖೆ ಖಾತೆಯಿಂದ 10 ವರ್ಗಾವಣೆಗಳ ಮೂಲಕ ಒಟ್ಟು ₹ 3,88,050 ಸೇರಿದಂತೆ ಒಟ್ಟು ₹ 15,98,761 ಅನ್ನು ಅಪರಿಚಿತ ಬ್ಯಾಂಕ್ ಖಾತೆಗಳಿಗೆ ವರ್ಗಾವಣೆ ಮಾಡಲಾಗಿದೆ.

ಹಣ ವರ್ಗಾವಣೆಗೊಂಡಿರುವ ಬ್ಯಾಂಕ್ ಖಾತೆಗಳನ್ನು ಹಾಗೂ ಖಾತೆದಾರರನ್ನು ಪತ್ತೆ ಮಾಡಿ ಕಾನೂನು ಕ್ರಮ ಕೈಗೊಳ್ಳುವಂತೆ ಅವರು ಸೆನ್ ಠಾಣೆಗೆ ದೂರು ನೀಡಿದ್ದಾರೆ.

ಕೆರಗೋಡು: ಹೊಸದಾಗಿ ತ್ರಿವರ್ಣ ಧ್ವಜಾರೋಹಣ

ಮಂಡ್ಯ: ತಾಲ್ಲೂಕಿನ ಕೆರಗೋಡು ಗ್ರಾಮದ ರಂಗಮಂದಿರದ ಎದುರು ಸ್ಥಾಪಿಸಲಾಗಿರುವ 108 ಅಡಿ ಧ್ವಜಸ್ತಂಭದಲ್ಲಿ ಬಿಗಿ ಪೊಲೀಸ್ ಬಂದೋಬಸ್ತ್ ನಡುವೆ ಮಂಗಳವಾರ ಹೊಸದಾಗಿ ತ್ರಿವರ್ಣ ಧ್ವಜ ಹಾರಿಸಲಾಯಿತು.

ಗೌರಿಶಂಕರ ಸೇವಾಟ್ರಸ್ಟ್ ಹಾರಿಸಿದ್ದ ಹನುಮ ಧ್ವಜವನ್ನು ಫೆ.28ರಂದು ತಾಲ್ಲೂಕು ಆಡಳಿತ ತೆರವುಗೊಳಿಸಿ ರಾಷ್ಟ್ರಧ್ವಜ ಹಾರಿಸಿತ್ತು. ಅದಕ್ಕೆ ಬಿಜೆಪಿ, ಜೆಡಿಎಸ್, ಬಜರಂಗದಳ, ವಿಶ್ವ ಹಿಂದೂ ಪರಿಷತ್ ಸದಸ್ಯರು ತೀವ್ರವಾಗಿ ಖಂಡಿಸಿದ್ದರು. ಅಲ್ಲಿ ಮತ್ತೆ ಹನುಮ ಧ್ವಜ ಹಾರಿಸಬೇಕು ಎಂದು ಒತ್ತಾಯಿಸಿದ್ದರು. ತಿಂಗಳ ಕಾಲ ಗ್ರಾಮದಲ್ಲಿ ಬಿಗುವಿನ ವಾತಾವರಣ ನಿರ್ಮಾಣವಾಗಿತ್ತು.

‘ಸ್ತಂಭಕ್ಕೆ ರಾಷ್ಟ್ರಧ್ವಜ ಸರಿಯಾಗಿ ಅಳವಡಿಕೆಯಾಗಿಲ್ಲ, ಕೊಂಚ ಕೆಳಗೆ ಇಳಿದಂತೆ ಹಾರುತ್ತಿದೆ, ಧ್ವಜ ಹಳೆಯದಾಗಿದೆ’ ಎಂದು ಆರೋಪಿಸಿ ಕೆಲವರು ಜಿಲ್ಲಾಡಳಿತಕ್ಕೆ ಮನವಿ ಸಲ್ಲಿಸಿದ್ದರು. ಇದರಿಂದಾಗಿ ಹೆಚ್ಚುವರಿ ಜಿಲ್ಲಾಧಿಕಾರಿ ಎಚ್.ಎಲ್.ನಾಗರಾಜು, ತಹಶೀಲ್ದಾರ್ ಶಿವಕುಮಾರ್ ಬಿರಾದರ, ಎಎಸ್‌ಪಿ ತಿಮ್ಮಯ್ಯ ನೇತೃತ್ವದಲ್ಲಿ ಹಳೆಯ ಧ್ವಜ ತೆಗೆದು ಹೊಸ ಧ್ವಜ ಆರೋಹಣ ಮಾಡಲಾಯಿತು.

‘ಮೊದಲು ತರಾತುರಿಯಲ್ಲಿ ಧ್ವಜಾರೋಹಣ ಮಾಡಿದ್ದ ಕಾರಣ ಧ್ವಜ ಗಂಟುಹಾಕಿಕೊಂಡು ಸರಿಯಾಗಿ ಹಾರುತ್ತಿರಲಿಲ್ಲ. ಹೀಗಾಗಿ ರಾಷ್ಟ್ರಗೀತೆ ಹಾಡಿ ನಿಯಮಾನುಸಾರವಾಗಿ ಹೊಸದಾಗಿ ಧ್ವಜಾರೋಹಣ ಮಾಡಿದ್ದೇವೆ’ ಎಂದು ಹೆಚ್ಚುವರಿ ಜಿಲ್ಲಾಧಿಕಾರಿ ಎಚ್.ಎಲ್.ನಾಗರಾಜು ಹೇಳಿದರು.

ಮೂವರಿಗೆ ‘ವೀಚಿ’ ಸಾಹಿತ್ಯ ಪ್ರಶಸ್ತಿ



ಬಿ.ಜನಾರ್ದನ ಭಟ್



ರವಿಕುಮಾರ್ ನೀಹ



ದಯಾನಂದ

ತುಮಕೂರು: ವೀಚಿ ಸಾಹಿತ್ಯ ಪ್ರತಿಷ್ಠಾನ ಕೊಡಮಾಡುವ 2023ನೇ ಸಾಲಿನ ‘ವೀಚಿ ಸಾಹಿತ್ಯ ಪ್ರಶಸ್ತಿ’ಗೆ ಬಿ.ಜನಾರ್ದನ ಭಟ್ ಅವರ 'ವಿನೂತನ ಕಥನ ಕಾರಣ' (ವಿಮರ್ಶೆ) ಹಾಗೂ ರವಿಕುಮಾರ್ ನೀಹ ಅವರ 'ಅರಸು ಕುರನ್ಗರಾಯ' (ಸಂಶೋಧನೆ) ಕೃತಿಗಳು ಆಯ್ಕೆಯಾಗಿವೆ.

ಪ್ರಶಸ್ತಿಯು ₹25 ಸಾವಿರ ನಗದು ಹಾಗೂ ಪ್ರಶಸ್ತಿ ಪತ್ರ ಒಳಗೊಂ-ಡಿರುತ್ತದೆ. ಪ್ರಶಸ್ತಿಗೆ ಎರಡು ಕೃತಿ ಆಯ್ಕೆಯಾಗಿದ್ದು, ಪ್ರಶಸ್ತಿ ಮೊತ್ತವನ್ನು ಇಬ್ಬರು ಲೇಖಕರಿಗೂ ಸಮನಾಗಿ ನೀಡಲಾಗುತ್ತದೆ.

ವೀಚಿ ಯುವ ಪ್ರಶಸ್ತಿಗೆ ದಯಾನಂದ ಅವರ 'ಬುದ್ಧನ ಕಿವಿ' (ಕತೆಗಳು) ಕೃತಿ ಆಯ್ಕೆಯಾಗಿದೆ. ಪ್ರಶಸ್ತಿಯು ₹5 ಸಾವಿರ ನಗದು ಮತ್ತು ಪ್ರಶಸ್ತಿ ಫಲಕ ಒಳಗೊಂಡಿ-ರುತ್ತದೆ.

ಸಾಹಿತಿಗಳಾದ ಎಚ್.ದಂಡಪ್ಪ, ಎಸ್.ಗಂಗಾಧರಯ್ಯ, ಗೀತಾ ವಸಂತ ಅವರನ್ನು ಒಳಗೊಂಡ ಆಯ್ಕೆ ಸಮಿತಿಯು ಪ್ರಶಸ್ತಿಗೆ ಕೃತಿಗಳನ್ನು ಆಯ್ಕೆ ಮಾಡಿದೆ ಎಂದು ವೀಚಿ ಪ್ರತಿಷ್ಠಾನದ ಗೌರವ ಕಾರ್ಯದರ್ಶಿ ಎಂ.ಎಚ್.ನಾಗರಾಜ್ ತಿಳಿಸಿದ್ದಾರೆ.

ಬಿಕ್ಕುತ್ತಿವೆ ತೋಟದ ಮನೆಗಳು

ಒಂದನೇ ಪುಟದಿಂದ...

ಅಂದು– ಇಂದೂ ಹೆಣ್ಣಿನ ಅಸಹಾಯಕತೆ ದುರ್ಬಳಕೆಯಾಗಿದೆ’ ಎಂದು ಅವರು ನಿಟ್ಟುಸಿರು ಬಿಟ್ಟರು. ‘ಆತನ ವಕ್ರದೃಷ್ಟಿಗೆ ಬಲಿಯಾಗಿದ್ದಾರೆ ಎನ್ನಲಾದವರಲ್ಲಿ ಹೆಚ್ಚಿನವರೆಲ್ಲ ವಿವಾಹಿತರು. ತಾತ್ಕಾಲಿಕ ಉದ್ಯೋಗದ ಆಮಿಷ, ಕುಟುಂಬದ ರಕ್ಷಣೆ, ಸಹೋದರರಿಗೆ ಗುತ್ತಿಗೆ ಅಥವಾ ಇನ್ನಾವುದೇ ಕೆಲಸ, ಪತಿಯ ಅಧಿಕಾರದ ಆಸೆ ಇಂತಹ ಸಂಕೋಲೆಗೆ ಮಹಿಳೆ ಬಲಿಯಾಗಿದ್ದಾಳೆ. ಆಕೆಯನ್ನು ಬೆದರಿಸಿ, ಒಂಟಿಯಾಗಿರುವ ತೋಟದ ಮನೆಗಳು, ಸಂಸದರ ವಸತಿ ಗೃಹಗಳು ಅಥವಾ ಮಹಾನಗರಕ್ಕೆ ಕರೆದೊಯ್ದು ದುರ್ಬಳಕೆ ಮಾಡಿಕೊಳ್ಳಲಾಗುತ್ತಿತ್ತು. ಸ್ಥಳೀಯವಾಗಿ ಯಾರಿಗೂ ಗೊತ್ತಾಗದಂತೆ ಗೋಪ್ಯತೆ ಕಾಪಾಡಲಾಗುತ್ತಿತ್ತು. ಸಂಸದರ ತೀರಾ ಆಪ್ತ ವಲಯದಿಂದ ಈ ವಿಷಯ ಯಾವುದೇ ಕಾರಣಕ್ಕೂ ಹೊರಹೋಗದಂತೆ ಎಚ್ಚರ ವಹಿಸಲಾ-ಗುತ್ತಿತ್ತು’ ಎಂದರು ಇನ್ನೊಬ್ಬ ವಕೀಲರು.

‘ಕೋವಿಡ್–19 ಸಾಂಕ್ರಾಮಿಕದ ಸಂದರ್ಭದಲ್ಲಿ ಎಲ್ಲ ನಿರ್ಬಂಧಗಳ ನಡುವೆಯೂ ಇಂತಹ ದುಷ್ಕೃತ್ಯಗಳು ನಡೆದಿವೆ ಎಂಬ ಸಣ್ಣ ಸುಳಿವೂ ಸ್ಥಳೀಯರಿಗೆ ಇರಲಿಲ್ಲ. ಈಗ ಪೆನ್‌ಡ್ರೈವ್ ಹಂಚಿಕೆಯ ಬೆನ್ನಲ್ಲಿ ಹೊರ ಬೀಳುತ್ತಿರುವ ಸತ್ಯಗಳು ದಿಗಲುಗೊಳಿಸುತ್ತಿವೆ. ನಾಲ್ಕು ಗೋಡೆಗಳ ನಡುವೆ ಅಸಹಾಯಕಳಾ-ಗುವ ಹೆಣ್ಣನ್ನು ವಿವಸ್ತ್ರಗೊಳಿಸುವಂತೆ ಬೆದರಿಸಿ, ಆಕೆಯ ಚಿತ್ರ, ವಿಡಿಯೊಗಳನ್ನು ಮೊಬೈಲ್ ಫೋನ್‌ನಲ್ಲಿ ಸೆರೆ ಹಿಡಿದಿಟ್ಟು-ಕೊಳ್ಳುತ್ತಿದ್ದ ಆತ, ವಾಹನದಲ್ಲಿ ಪ್ರಯಾ-ಣಿಸುವಾಗಲೂ ಅವನ್ನೆಲ್ಲ ವೀಕ್ಷಿಸುತ್ತಿದ್ದ. ಈ ಚಿತ್ರಗಳನ್ನೇ ಇಟ್ಟು ಬ್ಲ್ಯಾಕ್ ಮೇಲ್ ಅಸ್ತ್ರವಾಗಿ ಬಳಸುತ್ತಿದ್ದ, ಅದೇ ಕಾರಣಕ್ಕೆ ಸಂಗ್ರಹಿಸಿಟ್ಟುಕೊಳ್ಳುತ್ತಿದ್ದ ಎಂದು ಆತನ ಆಪ್ತರು ಬಾಯ್ಬಿಟ್ಟಾಗ, ಪಾಪದ ಕೊಡ ತುಂಬಿದೆ ಎಂದು ನಾವು ಸ್ನೇಹಿತರೆಲ್ಲ ಮಾತನಾಡಿಕೊಂಡಿದ್ದೆವು’ ಎಂದ ಇನ್ನೊಬ್ಬ ವಕೀಲರು ತಮ್ಮ ಹೆಸರು ಪ್ರಕಟಿಸದಂತೆ ತಾಕೀತು ಮಾಡಿದರು.

ಮೌನಕ್ಕೆ ಶರಣಾದ ಕಾರ್ಯಕರ್ತೆಯರು

ಒಂದನೇ ಪುಟದಿಂದ...

ಕೆಲವು ಕಾರ್ಯಕರ್ತರು ಸನಿಹಕ್ಕೆ ಬಂದು ಅನಾಮಿಕರಾಗಿ ತಮ್ಮ ಒಡಲಾಳದ ನೋವು ಹಂಚಿಕೊಂಡರು.

‘ಮೈಸೂರು, ಮಂಡ್ಯ, ಬೆಂಗಳೂರು ಎಲ್ಲೇ ಹೋಗಲಿ ಜೆಡಿಎಸ್ ಕಾರ್ಯಕರ್ತೆಯರು ಎಂದು ಅಹಂನಿಂದ ಹೇಳಿಕೊಳ್ಳುತ್ತಿದ್ದ ನಮಗೆ, ಈಗ ‘ಹಾಸನದವರು’ ಎನ್ನುವುದೇ ತೀರಾ ಮುಜುಗರ ಮೂಡಿಸುತ್ತಿದೆ. ಲೋಕಸಭೆ ಚುನಾವಣೆ ವೇಳೆ ಪ್ರಚಾರಕ್ಕೆ ಹೋಗಿರುವ ಪಾಪ ಪ್ರಜ್ಞೆ ಕಾಡುತ್ತಿದೆ’ ಎಂದು ಹಾಸನದ ಕಾರ್ಯಕರ್ತೆಯೊಬ್ಬರು ಹೇಳಿಕೊಂಡರು. ಅಧಿಕಾರಸ್ಥರ ದಾಹಕ್ಕೆ ಬಲಿಯಾಗಿರುವ ಹೆಣ್ಣು ಜೀವಗಳಿಗೆ ಸಾಂತ್ವನ ಬೇಕಾಗಿದೆ. ಇವ್ಯಾವುದರ ಅರಿವು ಇಲ್ಲದೆ ಪಕ್ಷದ ನಿಷ್ಠಾವಂತ ಕಾರ್ಯಕರ್ತೆಯರಾಗಿ ದುಡಿದವರಿಗೆ ಬೇಸರವಾಗಿದೆ. ಕಾರ್ಯಕರ್ತರಲ್ಲಿ ವಿಶ್ವಾಸ ಮೂಡಿಸಿ, ಸಾಂತ್ವನ ಹೇಳುವ ಕೆಲಸ ಪಕ್ಷದ ಹಿರಿಯರಿಂದಾದರೂ ಆಗಬೇಕಾಗಿದೆ ಎಂದು ಹಿರಿಯ ಕಾರ್ಯಕರ್ತೆಯೊಬ್ಬರು ಅಲವತ್ತುಕೊಂಡರು.

ಕೌನ್ಸೆಲಿಂಗ್ ನೆರವು

ನೊಂದ ಮಹಿಳೆಯರಿಗೆ ಅಗತ್ಯವಿದ್ದಲ್ಲಿ ಕೌನ್ಸೆಲಿಂಗ್ ನಡೆಸಲು ಅನನ್ಯ ಟ್ರಸ್ಟ್ ಮುಂದಾಗಿದೆ. ಟ್ರಸ್ಟ್‌ನಲ್ಲಿರುವ ವೈದ್ಯರು ನೆರವು ಬಯಸಿ ಬಂದವರ ಮಾಹಿತಿ ಗೋಪ್ಯವಾಗಿಡುತ್ತಾರೆ ಎಂದರು ಸಾಮಾಜಿಕ ಹೋರಾಟಗಾರ್ತಿ ಕೆ.ಟಿ. ಜಯಶ್ರೀ.

ಪೆನ್‌ಡ್ರೈವ್‌ನಲ್ಲಿರುವ ಅಶ್ಲೀಲ ಚಿತ್ರಗಳು, ವಿಡಿಯೊಗಳು ಬಹುತೇಕರ ಮೊಬೈಲ್ ಫೋನ್ ಒಳಗೆ ನುಗ್ಗಿವೆ. ಈಗಷ್ಟೇ ಹರೆಯಕ್ಕೆ ಕಾಲಿಡುತ್ತಿರುವ ಮಕ್ಕಳು ಇದನ್ನು ನೋಡಿ ಮಾನಸಿಕ ಆಘಾತಕ್ಕೆ ಒಳಗಾಗಿರುವ ಸಾಧ್ಯತೆ ಇದೆ. ಅದನ್ನು ಪಾಲಕರ ಬಳಿ ಹೇಳಿಕೊಂಡರೆ ಅವರು ಬಯ್ಯಬಹುದೆಂಬ ಭಯ. ಮಕ್ಕಳಿಗೆ ತುರ್ತು ಸಾಮೂಹಿಕ ಕೌನ್ಸೆಲಿಂಗ್ ನೀಡಬೇಕಾಗಿದೆ. ಶಾಲೆಗಳು ಆರಂಭವಾದ ಮೇಲೆ ಶಿಕ್ಷಕರ ಮೂಲಕ ಮಕ್ಕಳಿಗೆ ತಿಳಿವಳಿಕೆ ನೀಡಬೇಕು ಎಂದರು ಸ್ತ್ರೀರೋಗ ತಜ್ಞೆ ಡಾ. ರಂಗಲಕ್ಷ್ಮಿ. ‘ತುಂಬಾ ತಾಯಂದಿರು ಆತಂಕಕ್ಕೆ ಒಳಗಾಗಿದ್ದಾರೆ. ತಮ್ಮ ಹೆಣ್ಣು ಮಕ್ಕಳ ಚಿತ್ರಗಳು ತಿರುಚಿ ವಿಡಿಯೊ, ಚಿತ್ರಗಳಾಗಿ ಬಂದರೆ ಎಂಬ ಭಯ ಕಾಡುತ್ತಿದೆ. ಸಂಸ್ಕಾರ, ನೀತಿಪಾಠ ಬರೀ ಹೆಣ್ಣು ಮಕ್ಕಳಿಗಷ್ಟೇ ಸೀಮಿತವಲ್ಲ, ಮನೆಯ ಗಂಡು ಮಕ್ಕಳಿಗೂ ಚಿಕ್ಕಂದಿನಿಂದ ಸರಿ–ತಪ್ಪಿನ ಅರಿವು ಮೂಡಿಸಬೇಕು’ ಎಂದು ಸ್ತ್ರೀರೋಗ ತಜ್ಞೆ ಡಾ. ಸಾವಿತ್ರಿ ಅಭಿಪ್ರಾಯಪಟ್ಟರು.

ಭ್ರೂಣಹತ್ಯೆ; ನ್ಯಾಯಾಲಯಕ್ಕೆ ಪಿಸಿಆರ್ ಸಲ್ಲಿಕೆ

ಪ್ರಜಾವಾಣಿ ವಾರ್ತೆ

ವರದಿ ಪರಿಣಾಮ

ಮಂಡ್ಯ: ಹೆಣ್ಣು ಭ್ರೂಣಹತ್ಯೆ ಪ್ರಕರಣ ಸಂಬಂಧ ಸಿಐಡಿ ವರದಿ ಆಧರಿಸಿ ಆರೋಪಿಗಳ ವಿರುದ್ಧ ವಿಚಾರಣೆ ನಡೆಸು ವಂತೆ ಕೋರಿ ಸಕ್ಷಮ ಪ್ರಾಧಿಕಾರದಿಂದ ಮಂಗಳವಾರ ನಗರದ ಜೆಎಂಎಫ್‌ಸಿ ನ್ಯಾಯಾಲಯದಲ್ಲಿ ಖಾಸಗಿ ದೂರು ನೋಂದಣಿ (ಪಿಸಿಆರ್) ಮಾಡಲಾಯಿತು.

ಸಿಐಡಿ ಅಧಿಕಾರಿಗಳು ವಿಚಾರಣಾ ವರದಿ ಸಲ್ಲಿಸಿ ತಿಂಗಳಾಗಿದ್ದರೂ ಅಧಿಕಾರಿಗಳು ನ್ಯಾಯಾಲಯಕ್ಕೆ ದೂರು ದಾಖಲು ಮಾಡಿಲ್ಲ ಎಂಬ ಬಗ್ಗೆ ‘ಪ್ರಜಾವಾಣಿ’ ಮೇ 17ರಂದು ವರದಿ ಪ್ರಕಟಿಸಿತ್ತು. ವರದಿಯಿಂದ ಎಚ್ಚೆತ್ತ ಪಿಸಿ ಮತ್ತು ಪಿಎನ್‌ಡಿಟಿ (ಗರ್ಭಪೂರ್ವ ಮತ್ತು ಪ್ರಸವ ಪೂರ್ವ ಭ್ರೂಣಲಿಂಗ ಪತ್ತೆ ನಿಷೇಧ ಕಾಯ್ದೆ) ಅನುಷ್ಠಾನ ಅಧಿಕಾರಿ, ಪ್ರಭಾರ ಉಪ ವಿಭಾಗಾಧಿಕಾರಿ ಮಹೇಶ್ ನ್ಯಾಯಾಲಯಕ್ಕೆ ದೂರು ಸಲ್ಲಿಸಿದರು. ಜೊತೆಗೆ, 1,500 ಪುಟಗಳ ಸಿಐಡಿ ವರದಿ ಹಾಗೂ ಇನ್ನಿತರ ಸಾಕ್ಷ್ಯಗಳನ್ನು ಒಳಗೊಂಡ ಕಡತವನ್ನು ಸಲ್ಲಿಸಿದರು. ಆರೋಗ್ಯ ಇಲಾಖೆ ಅಧಿಕಾರಿಗಳು ಹಾಗೂ ಸರ್ಕಾರಿ ವಕೀಲರು ಹಾಜರಿದ್ದರು.

ರೈತರಿಗೆ ನೀರು– ನೆರಳಿನ ವ್ಯವಸ್ಥೆ ಕಲ್ಪಿಸಿಲ್ಲ: ಆರೋಪ

ಬಿತ್ತನೆ ಬೀಜಕ್ಕೆ ಬಿಸಿಲಲ್ಲೇ ಮುಗಿಬಿದ್ದ ರೈತರು

ಪ್ರಜಾವಾಣಿ ವಾರ್ತೆ



ಹಾವೇರಿ ಜಿಲ್ಲೆಯ ಶಿಗ್ಗಾವಿ ತಾಲ್ಲೂಕಿನ ಬಂಕಾಪುರದ ರೈತ ಸಂಪರ್ಕ ಕೇಂದ್ರದಲ್ಲಿ ಮಂಗಳವಾರ ರೈತರು ಮುಂಗಾರು ಹಂಗಾಮಿನ ಬಿತ್ತನೆ ಬೀಜ ಪಡೆದರು

ಶಿಗ್ಗಾವಿ (ಹಾವೇರಿ ಜಿಲ್ಲೆ): ‘ಬೀಜ, ಗೊಬ್ಬರ ಪಡೆಯಲು ನಾವು ಬಿಸಿಲಲ್ಲೇ ಸರತಿ ಸಾಲಿನಲ್ಲಿ ನಿಲ್ಲಬೇಕು. ಇಲ್ಲಿ ನೆರಳಿನ ವ್ಯವಸ್ಥೆ ಮಾಡಿಲ್ಲ. ನೀರಿನ ಸೌಲಭ್ಯ ಕಲ್ಪಿಸಿಲ್ಲ’ ಎಂದು ರೈತರು ಮಂಗಳವಾರ ಬೇಸರ ವ್ಯಕ್ತಪಡಿಸಿದರು.

ತಾಲ್ಲೂಕಿನ ಬಂಕಾಪುರ ಪಟ್ಟಣದ ರೈತ ಸಂಪರ್ಕ ಕೇಂದ್ರದಲ್ಲಿ ಮಂಗಳವಾರ ಮುಂಗಾರು ಹಂಗಾಮಿನ ಬಿತ್ತನೆ ಬೀಜ ವಿತರಣೆ ಕಾರ್ಯಕ್ರಮದ ಸಂದರ್ಭದಲ್ಲಿ ಸುದ್ದಿಗಾರರೊಂದಿಗೆ ಅವರು ಸಂಕಷ್ಟ ಹೇಳಿಕೊಂಡರು.

‘ಜೋರು ಬಿಸಿಲಿದೆ. ನೀರಿನ ಸಮಸ್ಯೆಯೂ ಇದೆ. ಬರ ಆವರಿಸಿದೆ. ಎಲ್ಲವನ್ನೂ ಎದುರಿಸಿಕೊಂಡೇ ಇಲ್ಲಿ ಬೀಜ, ಗೊಬ್ಬರ ತೆಗೆದುಕೊಳ್ಳಲು ಬಂದಿದ್ದೇವೆ. ಅಧಿಕಾರಿಗಳು ನಮ್ಮ ಪರಿಸ್ಥಿತಿ ಅರಿತು, ಕನಿಷ್ಠ ಮೂಲಸೌಲಭ್ಯ ಕಲ್ಪಿಸಲು ಕ್ರಮ ತೆಗೆದುಕೊಳ್ಳಬೇಕಿತ್ತು. ರೈತರ ಬಗ್ಗೆ ಹೀಗೆ ನಿರ್ಲಕ್ಷ್ಯ ವಹಿಸಿದರೆ ಹೇಗೆ’ ಎಂದು ರೈತರಾದ ಮಂಜುನಾಥ ಸವೂರ ಮತ್ತು ಹನುಮೇಶ ಹಳವಳ್ಳಿ ಬೇಸರ ವ್ಯಕ್ತಪಡಿಸಿದರು.

ಹಾವೇರಿ ಜಿಲ್ಲೆಯ ವಿವಿಧ ರೈತ ಸಂಪರ್ಕ ಕೇಂದ್ರಗಳ ಮುಂಭಾಗ ರೈತರು ಸಾಲುಗಟ್ಟಿ ನಿಂತಿದ್ದರು. ಕೆಲಹೊತ್ತಿನ ನಂತರ ಬಿತ್ತನೆ ಬೀಜ ಪಡೆಯಲು ಮುಗಿಬಿದ್ದ ದೃಶ್ಯ ಕಂಡುಬಂದಿತು.

ಕೃತಕ ಅಭಾವ ಸೃಷ್ಟಿಸಿದರೆ ಕ್ರಮ: ಡಿಸಿ ‘ಹಾವೇರಿ ಜಿಲ್ಲೆಯಲ್ಲಿ ಬಿತ್ತನೆ ಬೀಜ ಮತ್ತು ರಸಗೊಬ್ಬರದ ಕೊರತೆ ಇಲ್ಲ. ರಸಗೊಬ್ಬರ, ಬಿತ್ತನೆ ಬೀಜ ಮಾರಾಟಗಾರರು ಮಾರಾಟ ಮಳಿಗೆಯಲ್ಲಿ ದರಪಟ್ಟಿ ರೈತರಿಗೆ ಕಾಣುವಂತೆ ಕಡ್ಡಾಯವಾಗಿ ಪ್ರದರ್ಶಿಸ-ಬೇಕು. ನಿಗದಿತ ದರಕ್ಕಿಂತ ಹೆಚ್ಚಿನ ದರಕ್ಕೆ ಮಾರುವುದು, ಬಿಲ್ ನೀಡದಿರುವುದು, ಅವಧಿ ಮೀರಿದ ಕೃಷಿ ಪರಿಕರಗಳನ್ನು ವಿತರಿಸುವುದು ಅಥವಾ ರಸಗೊಬ್ಬರ ಅಕ್ರಮವಾಗಿ ದಾಸ್ತಾನು ಮಾಡಿ ಕೃತಕ ಅಭಾವ ಸೃಷ್ಟಿಸುವುದು ಕಂಡುಬಂದಲ್ಲಿ ಅಂತಹ ಮಾರಾಟಗಾರರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಲಾಗುವುದು. ಮಾರಾಟಗಾರರ ಪರವಾನಗಿ ರದ್ದು ಮಾಡಲಾಗುವುದು’ ಎಂದು ಜಿಲ್ಲಾಧಿಕಾರಿ ರಘುನಂದನ ಮೂರ್ತಿ ಎಚ್ಚರಿಕೆ ನೀಡಿದ್ದಾರೆ.

‘ಬಿಸಿಲಿದ್ದರೆ ಶಾಮಿಯಾನ’

‘ಬಂಕಾಪುರ ರೈತ ಸಂಪರ್ಕ ಕೇಂದ್ರದಲ್ಲಿ ಬಿತ್ತನೆ ಬೀಜ ವಿತರಿಸಲಾಗುತ್ತಿ-ದ್ದು, ಸರತಿಯಲ್ಲಿ ನಿಂತ ರೈತರಿಗೆ ತಕ್ಷಣವೇ ಕುಡಿಯುವ ನೀರಿನ ವ್ಯವಸ್ಥೆ ಮಾಡಲಾಯಿತು. ನಾಳೆ ಇದೇ ರೀತಿ ಬಿಸಿಲು ಇದ್ದರೆ ಶಾಮಿಯಾನ ಹಾಕಲಾಗುವುದು. ರೈತರಿಗೆ ತೊಂದರೆ ಆಗದಂತೆ ಬೀಜ ವಿತರಿಸುತ್ತೇವೆ’ ಎಂದು ಬಂಕಾಪುರ ರೈತ ಸಂಪರ್ಕ ಕೇಂದ್ರದ ಕೃಷಿ ಅಧಿಕಾರಿ ಶ್ರೀಧರ ದಾಸರ ‘ಪ್ರಜಾವಾಣಿ’ಗೆ ತಿಳಿಸಿದರು.

ಬೀಜ, ಗೊಬ್ಬರ ಕೊರತೆ ಆಗದಂತೆ ಕ್ರಮವಹಿಸಿ: ಸಿದ್ದರಾಮಯ್ಯ

ಬೆಂಗಳೂರು: ‘ರಾಜ್ಯದಲ್ಲಿ ಮುಂಗಾರು ಕೃಷಿ ಚಟುವಟಿಕೆ ಆರಂಭವಾಗಿ-ರುವುದರಿಂದ ಬೀಜ ಮತ್ತು ಗೊಬ್ಬರಕ್ಕೆ ಕೊರತೆ ಆಗದಂತೆ ನೋಡಿಕೊಳ್ಳಿ’ ಎಂದು ಕೃಷಿ ಇಲಾಖೆ ಅಧಿಕಾರಿಗಳಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಸೂಚನೆ ನೀಡಿದ್ದಾರೆ.

ಬೀಜ ಮತ್ತು ಗೊಬ್ಬರಕ್ಕಾಗಿ ಹಾವೇರಿಯಲ್ಲಿ ರೈತರು ಸಾಲುಗಟ್ಟಿ ನಿಂತಿದ್ದ ವಿಷಯ ತಿಳಿಯುತ್ತಿದ್ದಂತೆಯೇ ಸಿದ್ದರಾಮಯ್ಯ ಅವರು ಕೃಷಿ ಸಚಿವ ಚಲು-ವರಾಯಸ್ವಾಮಿ ಮತ್ತು ಇಲಾಖೆ ಹಿರಿಯ ಅಧಿಕಾರಿಗಳಿಗೆ ಈ ನಿರ್ದೇಶನ ನೀಡಿದ್ದಾರೆ. ಉತ್ತಮ ಮಳೆಯಾಗುತ್ತಿರುವ ಕಾರಣ ರೈತರು ಕೃಷಿ ಚಟುವಟಿಕೆ ಆರಂಭಿಸಿದ್ದಾರೆ. ಆದ್ದರಿಂದ ರೈತರು ಬೀಜ ಮತ್ತು ಗೊಬ್ಬರದ ಕೊರತೆ ಎದುರಿಸುವ ಪರಿಸ್ಥಿತಿ ನಿರ್ಮಾಣವಾಗಬಾರದು. ಇಲಾಖೆಯ ಅಧಿಕಾರಿಗಳ ಸಭೆಯನ್ನು ತಕ್ಷಣ ಕರೆದು ಬೀಜ, ಗೊಬ್ಬರ ದಾಸ್ತಾನು ಕುರಿತು ಮಾಹಿತಿ ಪಡೆದುಕೊಳ್ಳಿ ಎಂದೂ ಹೇಳಿದರು.

ನ್ಯಾಯಾಲಯದಲ್ಲಿ ನೌಕರಿ ಪಡೆದ ಯುವಕ

ಓದಲು ಬಾರದು: ಅಂಕ ಶೇ 99!

ಪ್ರಜಾವಾಣಿ ವಾರ್ತೆ

ಕೊಪ್ಪಳ: ಸರಿಯಾಗಿ ಓದಲು ಹಾಗೂ ಬರೆಯಲು ಬಾರದ ಇಲ್ಲಿನ ಸಜ್ಜಿ ಓಣಿಯ ನಿವಾಸಿ 23 ವರ್ಷದ ಪ್ರಭು ಲೋಕರೆ ಎಸ್‌ಎಸ್‌ಎಲ್‌ಸಿ ಬೋರ್ಡ್ ಪರೀಕ್ಷೆಯಲ್ಲಿ ಶೇ 99.52ರಷ್ಟು ಫಲಿತಾಂಶ ಪಡೆದು ನ್ಯಾಯಾಲಯದಲ್ಲಿ ಜವಾನನ ಹುದ್ದೆ ಗಿಟ್ಟಿಸಿಕೊಂಡಿದ್ದಾನೆ.

ಇದರಿಂದ ಅನುಮಾನಗೊಂಡ ಕೊಪ್ಪಳದ ಜೆಎಂಎಫ್‌ಸಿ ನ್ಯಾಯಾಲಯದ ನ್ಯಾಯಾಧೀಶರು ಪ್ರಭು ವಿದ್ಯಾಭ್ಯಾಸದ ಮಾರ್ಗದ ಕುರಿತು ವಿಚಾರಣೆ ನಡೆಸುವಂತೆ ಪೊಲೀಸರಿಗೆ ಸೂಚನೆ ನೀಡಿದ್ದಾರೆ. ಇದರ ಅನ್ವಯ ನಗರ ಪೊಲೀಸ್ ಠಾಣೆಯಲ್ಲಿ ಏಪ್ರಿಲ್ 26ರಂದು ಎಫ್‌ಐಆರ್ ದಾಖಲಾಗಿದೆ.

ಆಗಿದ್ದೇನು?: ಪ್ರಭು ಯಾದಗಿರಿಯ ಜಿಲ್ಲಾ ಮತ್ತು ಸಷೆನ್ಸ್ ನ್ಯಾಯಾಲಯದಲ್ಲಿ ಜವಾನನಾಗಿ ಇದೇ ವರ್ಷದ ಏಪ್ರಿಲ್ 22ರಂದು ಆಯ್ಕೆಯಾಗಿದ್ದಾನೆ. 7ನೇ ತರಗತಿ ಉತ್ತೀರ್ಣರಾದ ಬಳಿಕ ಯಾವುದೇ ಶಾಲೆಯಲ್ಲಿ ಪ್ರವೇಶ ಪಡೆಯದೆ ನೇರವಾಗಿ ಎಸ್‌ಎಸ್‌ಎಲ್‌ಸಿ ಪರೀಕ್ಷೆ ಬರೆದು ಒಟ್ಟು 625ಕ್ಕೆ 623 ಅಂಕಗಳನ್ನು ಪಡೆದುಕೊಂಡಿದ್ದಾನೆ.

ಪ್ರಭು ಇಷ್ಟೊಂದು ಅಂಕಗಳನ್ನು ಪಡೆಯಲು ನಿಜಕ್ಕೂ ಸಮರ್ಥರಾಗಿದ್ದಾರೆಯೇ? ಎಂಬುದು ಈಗ ಪ್ರಶ್ನೆಯಾಗಿದೆ.

‘ಆತನಿಗೆ ಕನ್ನಡ ಹಾಗೂ ಇಂಗ್ಲಿಷ್ ಓದಲು ಸಾಧ್ಯವಿಲ್ಲ. ಬರೆಯಲೂ ಬರುವುದಿಲ್ಲ ಎನ್ನುವ ನಂಬಲರ್ಹವಾದ ಸ್ಥಿತಿಯಿದೆ. ಇಂಥ ಪರಿಸ್ಥಿತಿಯಲ್ಲಿಯೂ ಅವರು ಇಷ್ಟೊಂದು ಅಂಕಗಳನ್ನು ಪಡೆದಿದ್ದಾರೆ ಎನ್ನುವುದು ಆಘಾತಕಾರಿ ಮಾಹಿತಿಯಾಗಿದೆ. ಇದು ವಿದ್ಯಾರ್ಥಿ ಸಮೂಹಕ್ಕೆ ಮತ್ತು ರಾಜ್ಯಕ್ಕೆ ಮೋಸ ಮಾಡಿದಂತಿದೆ. ಕನಿಷ್ಠ ಜ್ಞಾನವೂ ಇಲ್ಲದ ವಿದ್ಯಾರ್ಥಿಯೊಬ್ಬ ಮೋಸದ ಮೂಲಕ ಅಂಕಗಳನ್ನು ಪಡೆದುಕೊಂಡರೆ ಅರ್ಹ ಮತ್ತು ಪ್ರಾಮಾಣಿಕ ವಿದ್ಯಾ-ರ್ಥಿಗಳಿಗೆ ಇಂಥವರೊಂದಿಗೆ ಸ್ಪರ್ಧೆ ಸಾಧ್ಯವೇ’ ಎಂದು ಎಫ್‌ಐಆರ್‌ನಲ್ಲಿ ಪ್ರಶ್ನಿಸಲಾಗಿದೆ.

‘ಇದು ಅನೇಕ ವಿದ್ಯಾರ್ಥಿಗಳ ಭವಿಷ್ಯದ ಪ್ರಶ್ನೆಯಾಗಿದ್ದು, ಗಂಭೀರವೂ ಆಗಿದೆ. ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಉತ್ತಮ ಅಂಕಗಳನ್ನು ಪಡೆದುಕೊಳ್ಳಲು ಇತರರ ಜೊತೆ ಶಾಮೀಲಾಗಿ ಮೋಸದ ಹಾದಿ ಹುಡುಕಿದಂತಿದ್ದು, ಈ ಕುರಿತು ವಿಚಾರಣೆ ನಡೆಸಬೇಕು. ಪ್ರಭು ಬರೆದ ಉತ್ತರ ಪತ್ರಿಕೆಯನ್ನು ಆತನ ಕೈಬರಹಕ್ಕೆ ಹೋಲಿಕೆ ಮಾಡಿ ನೋಡಬೇಕು’ ಎಂದು ನ್ಯಾಯಾಧೀಶರು ಸೂಚನೆ ನೀಡಿದ್ದಾರೆ.

ದೆಹಲಿ ಬೋರ್ಡ್‌ನಿಂದ ಅಂಕಪಟ್ಟಿ: ಪ್ರಭು

ಕೊಪ್ಪಳ: ‘ನನಗೆ ಓದಲು ಹಾಗೂ ಬರೆಯಲು ಬರುತ್ತದೆ. 2017–18ರಲ್ಲಿ ಬಾಗಲಕೋಟೆ ಜಿಲ್ಲೆಯ ಬನಹಟ್ಟಿಯಲ್ಲಿರುವ ಖಾಸಗಿ ಸಂಸ್ಥೆಯೊಂದರ ಕೇಂದ್ರದಲ್ಲಿ ಪರೀಕ್ಷೆ ಬರೆದು ಉತ್ತಮ ಅಂಕ ಪಡೆದಿದ್ದೇನೆ’ ಎಂದು ಪ್ರಭು ಲೋಕರೆ ಪ್ರತಿಕ್ರಿಯಿಸಿದ್ದಾರೆ.

‘ದೆಹಲಿ ಎಜುಕೇಷನ್ ಬೋರ್ಡ್ ನಡೆಸಿರುವ ಪರೀಕ್ಷೆಯಲ್ಲಿ ಉತ್ತೀರ್ಣನಾ-ಗಿದ್ದೇನೆ. ಪರೀಕ್ಷೆಗೆ ಹಾಜರಾಗಿ ನಾನೇ ಪರೀಕ್ಷೆ ಬರೆದಿದ್ದೇನೆ. ನಾನು ಪಡೆದಿರುವ ಅಂಕಪಟ್ಟಿ ರಾಜ್ಯದ ಎಸ್‌ಎಸ್‌ಎಲ್‌ಸಿ ಮಂಡಳಿಯದ್ದು ಅಲ್ಲ. ನನ್ನ ಜೊತೆ ರಾಜ್ಯದ ಅನೇಕರು ಉತ್ತೀರ್ಣರಾಗಿ ನ್ಯಾಯಾಲಯದಲ್ಲಿ ಜವಾನನ ಹುದ್ದೆಗೆ ಆಯ್ಕೆಯಾಗಿದ್ದಾರೆ’ ಎಂದು ಹೇಳಿದ್ದಾರೆ.

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

ಅಭಿಮತ



ಸುಭಾಷಿತ

ಹೂವುಗಳನ್ನು ನೀವು ನಾಶ ಮಾಡಿಬಿಡಬಹುದು, ಆದರೆ ವಸಂತದ ಆಗಮನವನ್ನು ತಡೆಯಲು ನಿಮ್ಮಿಂದ ಆಗದು.

-ಪಾಬ್ಲೊ ನೆರೂಡ

ಬಿಬಿಎಂಪಿ ಎಚ್ಚರಗೊಳ್ಳಲಿ ಮುಂಗಾರಿಗೆ ಸನ್ನದ್ಧವಾಗಲಿ

ಬೆಂಗಳೂರಿನ ಮಟ್ಟಿಗೆ ಹೇಳುವುದಾದರೆ, ಪ್ರತಿವರ್ಷದ ಮಳೆಗಾಲದಲ್ಲೂ ಅದೇ ಹಳೆಯ ಕಥೆ ಪುನರಾವರ್ತನೆ ಆಗುತ್ತದೆ. ಮೊದಲ ಮಳೆಗೇ ನಗರದ ರಸ್ತೆಗಳಲ್ಲಿ ಪ್ರವಾಹದ ಪರಿಸ್ಥಿತಿ ಉಂಟಾಗುತ್ತದೆ. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು (ಬಿಬಿಎಂಪಿ) ಯಥಾಪ್ರಕಾರ ನಿದ್ರೆಯಲ್ಲಿ ಮೈಮರೆತಿರುತ್ತದೆ. ಜಗತ್ತಿನ ಅತ್ಯಂತ ಯೋಜನಾಬದ್ಧ ನಗರಗಳು ಕೂಡ ಅತಿಯಾದ ಮಳೆಯಾದಾಗ ಪ್ರವಾಹದ ಸನ್ನಿವೇಶವನ್ನು ಎದುರಿಸಬೇಕಾಗುತ್ತದೆ ಎನ್ನುವುದು ದಿಟ. ಆದರೆ, ಬೆಂಗಳೂರಿನ ಸಮಸ್ಯೆ ಹೇಗಿದೆಯೆಂದರೆ ಸಣ್ಣ ಮಳೆಗೂ ಇಲ್ಲಿ 'ನಗರ ಮಹಾಪೂರ' ಉಂಟಾಗುತ್ತದೆ. ಆಗ ಯರ್‍ರಾಬಿರ್‍ರಿ ಸಂಚಾರ ದಟ್ಟಣೆಯೂ ಆಗುತ್ತದೆ. ಸಾಮಾನ್ಯವಾಗಿ ಮಳೆಗಾಲಕ್ಕೆ ಬೇಸಿಗೆಯಲ್ಲೇ ತಯಾರಿ ಮಾಡಿಕೊಳ್ಳುವುದು ವಾಡಿಕೆ. ಹೂಳನ್ನು ತೆಗೆಯುವುದು, ಮೋರಿ ದುರಸ್ತಿಗೊಳಿಸುವುದು, ಚರಂಡಿ ಗೋಡೆಯನ್ನು ಸರಿಪಡಿಸುವುದು– ಹೀಗೆ ಎಲ್ಲ ಕಾರ್ಯಗಳೂ ಆಗಲೇ ಆಗಬೇಕು. ಆದರೆ, ಪಾಲಿಕೆ ಆಡಳಿತ ತನ್ನ ಹೊಣೆಯನ್ನು ಮರೆತು ಕುಳಿತಿದೆ. ನಗರದಲ್ಲಿ ವಿಪರೀತ ಎನಿಸುವಷ್ಟು 'ಅಭಿವೃದ್ಧಿ' ಚಟುವಟಿಕೆಗಳು ನಡೆದಿರುವುದು ಹಾಗೂ ಮಳೆಗೆ ತಯಾರಿ ಮಾಡಿಕೊಳ್ಳುವಲ್ಲಿ ಬಿಬಿಎಂಪಿ ಮುಗ್ಗರಿಸಿರುವುದು ಅವಘಡಗಳಿಗೆ ಕಾರಣ ಎನ್ನದೆ ವಿಧಿಯಿಲ್ಲ. ಮುಂಗಾರುಪೂರ್ವ ಮಳೆ ಶುರುವಾಗುವುದಕ್ಕಿಂತ ಕೇವಲ ಒಂದು ವಾರದ ಮೊದಲು ಬೆಂಗಳೂರಿನ ಜನ ವಿಪರೀತ ತಾಪಮಾನದಿಂದ ಬಳಲಿದ್ದರು. ಈ ಮಳೆ ಅವರಿಗೆ ಆಹ್ಲಾದವನ್ನು ಉಂಟುಮಾಡಿರಲಿಕ್ಕೆ ಸಾಕು. ಆದರೆ, ಈಗ ಅತಿವೃಷ್ಟಿ ಏನೂ ಆಗಿಲ್ಲ. ಅಷ್ಟರಲ್ಲಿ, ನಗರದ ಕೆಲವು ಪ್ರದೇಶಗಳು ಜಲಾವೃತಗೊಂಡಿವೆ. ಮಳೆ ಸುರಿದ ಸಂದರ್ಭಗಳಲ್ಲಿ, ಬೆಂಗಳೂರಿನ ಬಹುಪಾಲು ರಸ್ತೆಗಳಲ್ಲಿ ಸಂಚಾರ ದಟ್ಟಣೆ ತೀವ್ರವಾಗಿತ್ತು. ಹಾಗೆ ನೋಡಿದರೆ, ಇನ್ನೂ ಇದು ಪೂರ್ವ ಮುಂಗಾರು. ಇನ್ನೇನು ಮುಂಗಾರು ಶುರುವಾಗಲಿದ್ದು, ಒಳ್ಳೆಯ ಮಳೆ ಬೀಳಲಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ. ಮಳೆ ಮುಂದೆ ಜೋರಾಗಿ ಸುರಿದರೆ ಆಗಿನ ಸ್ಥಿತಿ ಇನ್ನೂ ಎಷ್ಟು ಹದಗೆಡಲಿದೆ ಎಂಬುದನ್ನು ಊಹಿಸುವುದು ಕಷ್ಟವಲ್ಲ.



ಮಳೆಗಾಲದ ನಿರ್ವಹಣೆಯಲ್ಲಿ ಯಾವುದೇ ಲೋಪ ಆಗದಂತೆ ನೋಡಿಕೊಳ್ಳುವ ಗುರುತರ ಹೊಣೆ ಬಿಬಿಎಂಪಿ ಅಧಿಕಾರಿಗಳ ಮೇಲಿದೆ. ಅದಕ್ಕಾಗಿ ಸರ್ವರೀತಿಯಲ್ಲೂ ಸನ್ನದ್ಧರಾಗಿರಬೇಕು

'ಮಳೆಗಾಲಕ್ಕೆ ಸರ್ವಸಿದ್ಧತೆ ಮಾಡಿಕೊಳ್ಳಲಾಗಿದೆ' ಎಂದು ಬಿಬಿಎಂಪಿಯ ಮುಖ್ಯ ಆಯುಕ್ತರು ಕೆಲವೇ ದಿನಗಳ ಹಿಂದೆ ಹೇಳಿದ್ದರು. ನೆಲದ ವಾಸ್ತವಕ್ಕೂ ಅವರ ಭರವಸೆಗೂ ಅಜಗಜಾಂತರ ಇರುವುದು ಕನ್ನಡಿಯ ಬಿಂಬದಷ್ಟೇ ಸ್ಪಷ್ಟ. ಯಲಹಂಕ ಭಾಗದಲ್ಲಿ ರಾಜಕಾಲುವೆಯಲ್ಲಿ ಉಂಟಾದ ಪ್ರವಾಹದಿಂದ 22 ಐಷಾರಾಮಿ ವಿಲ್ಲಾಗಳು ಜಲಾವೃತವಾದ ಘಟನೆ ಇದಕ್ಕೆ ಸಾಕ್ಷಿ. ರಾಜಕಾಲುವೆಯು ಕೆರೆಯನ್ನು ಸೇರುವ ಪ್ರದೇಶವು ಹೂಳಿನಿಂದ ತುಂಬಿದ್ದೇ ಘಟನೆಗೆ ಕಾರಣ ಎಂದು ಹೇಳಲಾಗಿದೆ. ಕಾಲುವೆಗಳ ಹೂಳನ್ನು ಮುಂಚಿತವಾಗಿಯೇ ಸಂಪೂರ್ಣವಾಗಿ ತೆರವುಗೊಳಿಸಿದ್ದರೆ ಈ ಘಟನೆಯನ್ನು ಸುಲಭವಾಗಿ ತಪ್ಪಿಸಬಹುದಿತ್ತು. ಬೊಮ್ಮನಹಳ್ಳಿ ಭಾಗದಲ್ಲಿ, ಪ್ರವಾಹದ ನೀರನ್ನು ಪಂಪ್ ಮಾಡಲು ಪಾಲಿಕೆಯು ಖಾಸಗಿಯವರೊಂದಿಗೆ ಮಾಡಿಕೊಂಡಿರುವ ಒಪ್ಪಂದದ ಅವಧಿ ಮುಗಿದಿದ್ದು, ಅದು ನವೀಕರಣಗೊಂಡಿಲ್ಲ. ಹೀಗಾಗಿ, ಮನೆಗಳಿಗೆ ನುಗ್ಗಿದ ನೀರನ್ನು ನಿವಾಸಿಗಳೇ ಹೊರಹಾಕಿ ತಮ್ಮನ್ನು ತಾವು ರಕ್ಷಿಸಿಕೊಳ್ಳುವಂತಹ ಅನಿವಾರ್ಯ ಸೃಷ್ಟಿಯಾಯಿತು. ಬೆಂಗಳೂರು ಈ ಸಲ 150 ದಿನಗಳವರೆಗೆ ಒಂದೇ ಒಂದು ಮಳೆಯನ್ನೂ ಕಾಣಲಿಲ್ಲ. ಹೀಗಾಗಿ, ಮಳೆಗಾಲಕ್ಕೆ ತಯಾರಿ ನಡೆಸಲು ಬಿಬಿಎಂಪಿ ಬಳಿ ಅಗತ್ಯಕ್ಕಿಂತ ಹೆಚ್ಚಿನ ಸಮಯಾವಕಾಶ ಇತ್ತು. ಆದರೆ ಅದನ್ನು ಪೂರ್ಣ ಪ್ರಮಾಣದಲ್ಲಿ ಸದ್ಬಳಕೆ ಮಾಡಿಕೊಂಡಂತೆ ತೋರುತ್ತಿಲ್ಲ. ನಗರದ ವಿವಿಧ ಕಡೆಗಳಲ್ಲಿ ಹೂಳು ತೆಗೆಯಲು ಬಿಬಿಎಂಪಿ ನಡೆಸಿದ ಕಾಮಗಾರಿ ಅಪೂರ್ಣವಾಗಿದೆ. ತೆಗೆದ ಹೂಳನ್ನೂ ರಸ್ತೆ ಪಕ್ಕವೇ ಗುಡ್ಡೆ ಹಾಕಿದ್ದರಿಂದ, ಮಳೆನೀರು ಸರಾಗವಾಗಿ ಹರಿಯಲು ಸಾಧ್ಯವಾಗದೆ ರಸ್ತೆಗಳಲ್ಲಿ ಪ್ರವಾಹ ಉಂಟಾಗಲು ಕಾರಣವಾಗಿದೆ.

ಮಳೆ ಅನಾಹುತಗಳು, ನಗರ ಮಹಾಪೂರಗಳು ಇತ್ತೀಚಿನ ವರ್ಷಗಳಲ್ಲಿ ತೀವ್ರಗತಿಯಲ್ಲಿ ಹೆಚ್ಚುತ್ತಿದ್ದರೂ ಯೋಜನಾಬದ್ಧವಾಗಿ ಕ್ರಮ ಕೈಗೊಳ್ಳದ ಬಿಬಿಎಂಪಿಯ ನಿರ್ಲಕ್ಷ್ಯ ಆಶ್ಚರ್ಯ ಹುಟ್ಟಿಸುತ್ತದೆ. ಮಳೆನೀರು ಮನೆಗಳಿಗೆ ನುಗ್ಗಿದಾಗ ಅರೆಮಂಪರಿನಲ್ಲಿ ಒಂದಿಷ್ಟು ಕಾಮಗಾರಿ ನಡೆಸುವುದು, ಪುನಃ ಕುಂಭಕರ್ಣ ನಿದ್ರೆಗೆ ಜಾರುವುದು ಪಾಲಿಕೆಗೆ ಚಾಳಿಯಾಗಿಬಿಟ್ಟಿದೆ. 'ಬ್ರ್ಯಾಂಡ್ ಬೆಂಗಳೂರು' ಎಂಬ ಜಪದಲ್ಲಿ ಭಾರಿ ಯೋಜನೆ ಹಾಕಿಕೊಳ್ಳುವ ಉಮೇದು ಬೆಂಗಳೂರು ಅಭಿವೃದ್ಧಿ ಖಾತೆಯನ್ನೂ ಹೊಂದಿರುವ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರಿಗೆ. ಆದರೆ, ನಾಗರಿಕರಿಗೆ ದುಃಸ್ವಪ್ನವಾಗಿ ಕಾಡುವಂತಹ ರಾಜಕಾರಣಿಗಳ ಕನಸಿನ ಯೋಜನೆಗಳಿಗೆ ಸಾವಿರಾರು ಕೋಟಿ ರೂಪಾಯಿ ಸುರಿಯುವ ಮೊದಲು ನಗರದ ಮೂಲ ಸೌಕರ್ಯವನ್ನು ಸರಿಪಡಿಸುವ ಕಡೆ ಗಮನ ಹರಿಸಬೇಕಾದುದು ತುರ್ತು ಅಗತ್ಯ. ಮಳೆಗಾಲದ ನಿರ್ವಹಣೆಯಲ್ಲಿ ಯಾವುದೇ ಲೋಪ ಆಗದಂತೆ ಬಿಬಿಎಂಪಿ ಅಧಿಕಾರಿಗಳನ್ನು ಎಚ್ಚರಗೊಳಿಸಬೇಕಾದ ಹೊಣೆ ಕೂಡ ಉಪಮುಖ್ಯಮಂತ್ರಿಯವರ ಮೇಲಿದೆ.

ದಿನದ ಟ್ವೀಟ್

ಅಂಕಿ–ಅಂಶ ಲಭ್ಯವಿದೆಯೇ?



ಮತದಾನದ ಕೊನೆಯ ಹಂತ ಮುಗಿಯುವತನಕ ಮತಗಟ್ಟೆ ಸಮೀಕ್ಷೆಯ ವರದಿ ಪ್ರಕಟಿಸುವುದಕ್ಕೆ ನಿಷೇಧ ಇದೆ. ಆದರೆ, ಪ್ರತಿ ಹಂತದ ಮತದಾನದ ವೇಳೆ ಅಂಕಿ–ಅಂಶ ಸಂಗ್ರಹಿಸಲಾಗುತ್ತಿದೆ. ಜನ ಹೆಚ್ಚಿನ ಮಾಹಿತಿ ಅಪೇಕ್ಷಿಸುತ್ತಿರುವುದರಿಂದ, ನಿಷೇಧದ ಪರಿಣಾಮವಾಗಿ ಮಾಹಿತಿ ನಿರ್ವಾತ ಸೃಷ್ಟಿಯಾಗಿದೆ. ಹೀಗಾಗಿ, ಈಗ ಚುನಾವಣಾ ಫಲಿತಾಂಶದ 'ಸಟ್ಟಾ ಬಜಾರ್' ಲೆಕ್ಕಾಚಾರಗಳು ಎಲ್ಲೆಲ್ಲೂ ಹರಿದಾಡುತ್ತಿವೆ. ಇಂತಹ ಲೆಕ್ಕಾಚಾರಗಳನ್ನು ಮುಂದಿಡುವವರಿಗೆ ಮತಗಟ್ಟೆ ಸಮೀಕ್ಷೆಯ ಅಂಕಿ–ಅಂಶಗಳೇನಾದರೂ ಸಿಗುತ್ತವೆಯೇ?

ಅಶ್ವಿನ್ ಮಹೇಶ್, ನಗರ ಯೋಜನಾ ತಜ್ಞ

ಕಿಡಿನುಡಿ



ನಾನು ಬೆಂಗಳೂರಿಗೆ ಭೇಟಿ ನೀಡಿದಾಗಲೆಲ್ಲ ನನ್ನ ಪ್ರಮುಖ ಆಕರ್ಷಣೆ ಎಂದರೆ ಅಲ್ಲಿನ ಉದ್ಯಾನಗಳು ಮತ್ತು ಕೆರೆಗಳು. ನನ್ನ ಮುಂಜಾನೆಯ ನಡಿಗೆ ಮತ್ತು ವಿಶ್ರಾಂತಿಯ ತಾಣಗಳಾಗಿ ಅವು ನನಗೆ ಒದಗಿ ಬರುತ್ತವೆ. ಆದರೆ ಇಲ್ಲಿನ ಬಹುತೇಕ ಉದ್ಯಾನಗಳು ಮತ್ತು ಕೆರೆಗಳ ಆವರಣದ ಬಾಗಿಲನ್ನು ಬೆಳಿಗ್ಗೆ 11ಕ್ಕೆ ಮತ್ತು ಸಂಜೆ 6 ಗಂಟೆಗೆ ಮುಚ್ಚಲಾಗುತ್ತದೆ ಎಂಬುದು ಆಶ್ಚರ್ಯಕರ. ಇಂತಹ ಸಾರ್ವಜನಿಕ ಸ್ಥಳಗಳನ್ನು ಹೀಗೆ ವ್ಯರ್ಥಗೊಳಿಸಲಾಗುತ್ತಿದೆ.

ರಾಜನ್ ನಾಯರ್, ಛಾಯಾಗ್ರಾಹಕ

25 ವರ್ಷಗಳ ಹಿಂದೆ

ಶನಿವಾರ, 22-5-1999

• ಉಚ್ಚಾಟನೆ: ಫ್ಯಾಸಿಸ್ಟ್ ಧೋರಣೆ ಪ್ರತೀಕ– ಅಟಲ್

ಕಲ್ಕತ್ತ, ಮೇ 21 (ಯುಎನ್ಐ, ಪಿಟಿಐ): ಶರದ್ ಪವಾರ್, ಸಂಗ್ಮಾ ಮತ್ತು ತಾರಿಖ್ ಅನ್ವರ್ ಅವರನ್ನು ಪಕ್ಷದಿಂದ ಏಕಾಏಕಿ ಉಚ್ಚಾಟಿಸುವ ಮೂಲಕ ಕಾಂಗ್ರೆಸ್ ಪಕ್ಷ ಫ್ಯಾಸಿಸ್ಟ್ ಧೋರಣೆಯನ್ನು ಅನುಸರಿಸಿದೆ ಎಂದು ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ಅವರು ಟೀಕಿಸಿದ್ದಾರೆ.

ವಿದೇಶಿ ಮೂಲ ಕುರಿತಂತೆ ಉಚ್ಚಾಟಿತ ಕಾಂಗ್ರೆಸ್ ನಾಯಕರಾದ ಶರದ್ ಪವಾರ್ ಮತ್ತಿತರರು ಸಲಹೆ ಮಾಡಿದ ವಿಷಯವನ್ನು ಸಮಗ್ರವಾಗಿ ಚರ್ಚಿಸುವುದನ್ನು ಬಿಟ್ಟು ಅವರ ವಾದವನ್ನು ಹತ್ತಿಕ್ಕಲು ಕಾಂಗ್ರೆಸ್ ಯತ್ನಿಸಿದೆ, ಇದು ಖಂಡನೀಯ ಎಂದು ಪ್ರಧಾನಿ ಅವರು ಇಂದು ಇಲ್ಲಿ ಪ್ರಕಟಿಸಿದ ಪತ್ರಿಕಾ ಹೇಳಿಕೆಯಲ್ಲಿ ತಿಳಿಸಿದ್ದಾರೆ.

• ಹೊಸ ಪಕ್ಷ ಸ್ಥಾಪಿಸಲು ಶರದ್ ಪವಾರ್ ನಿರ್ಧಾರ

ಪುಣೆ, ಮೇ 21 (ಪಿಟಿಐ)– ಹೊಸ ರಾಜಕೀಯ ರಂಗವೊಂದನ್ನು ಸ್ಥಾಪಿಸುವುದಾಗಿ ಕಾಂಗ್ರೆಸ್ಸಿನಿಂದ ಉಚ್ಚಾಟಿತರಾದ ಹಿರಿಯ ರಾಜಕಾರಣಿ ಶರದ್ ಪವಾರ್ ಇಂದು ಪ್ರಕಟಿಸಿದರು.

'ಈ ರಂಗದಲ್ಲಿ ಕಾಂಗ್ರೆಸ್ಸಿನ ತತ್ವಗಳ ಬಗ್ಗೆ ಪ್ರೀತ್ಯಾದರಗಳಿರುವ ಪಕ್ಷಗಳು ಹಾಗೂ ಜನರು ಇರುತ್ತಾರೆ' ಎಂದು ಹೇಳಿದ ಅವರು, 'ಈ ರಂಗ ಕಾಂಗ್ರೆಸ್ ಪಕ್ಷ ಹೊಂದಿರುವಂಥ ಯಾವುದೇ ದೋಷಗಳನ್ನು ಹೊಂದಿರುವುದಿಲ್ಲ' ಎಂದು ಸ್ಪಷ್ಟಪಡಿಸಿದರು. ರಂಗದ ಸ್ಥಾಪನೆ ಕಾರ್ಯ ಮುಂದಿನ ಎಂಟು ದಿನಗಳಲ್ಲಿ ಸಾಕಾರಗೊಳ್ಳುವುದು ಎಂದರು.

50 ವರ್ಷಗಳ ಹಿಂದೆ

ಬುಧವಾರ, 22-5-1974

• ಪಾಕಿಸ್ತಾನಕ್ಕೆ ಯಾವುದೇ ಅಪಾಯ ತರದು: ಸ್ವರಣ್‌ಸಿಂಗ್ ಭರವಸೆ

ನವದೆಹಲಿ, ಮೇ 21– ಭಾರತವು ಶಾಂತಿಯುತ ಉದ್ದೇಶಕ್ಕಾಗಿ ಅಣುಸಾಧನ ಸ್ಫೋಟಿಸಿದ್ದು, ಪಾಕಿಸ್ತಾನಕ್ಕೆ ಯಾವುದೇ ರೀತಿಯ ಅಪಾಯವನ್ನು ತಂದೊಡ್ಡುವುದಿಲ್ಲ ಎಂದು ವಿದೇಶಾಂಗ ಮಂತ್ರಿ ಸ್ವರಣ್‌ಸಿಂಗ್ ಅವರು ಇಂದು ಪಾಕಿಸ್ತಾನಕ್ಕೆ ಮತ್ತೆ ಭರವಸೆ ನೀಡಿದರು.

ಶಾಂತಿಯುತ ಉದ್ದೇಶಕ್ಕಾಗಿ ನಾವು ಅಣುಸಾಧನ ಸ್ಫೋಟಿಸಿದ್ದನ್ನು ಪಾಕಿಸ್ತಾನದಲ್ಲಿ ಅಪಾರ್ಥ ಮಾಡಿಕೊಂಡಿರುವುದು ದುರದೃಷ್ಟಕರ ಎಂದೂ ಅವರು ತಿಳಿಸಿದರು.

ಜನರ ಬದುಕನ್ನು ಶ್ರೀಮಂತಗೊಳಿಸುವುದಕ್ಕೆ ವಿವಿಧ ಬಗೆಯ ಸ್ವಾತಂತ್ರ್ಯಗಳು ಮುಖ್ಯವಾಗುತ್ತವೆ

ಬಗೆಬಗೆ ಸ್ವಾತಂತ್ರ್ಯ, ಅಭಿವೃದ್ಧಿ ಸಾಮರ್ಥ್ಯ



ವಿಶ್ಲೇಷಣೆ

ಟಿ.ಎಸ್.ವೇಣುಗೋಪಾಲ್

ಅರ್ಥಶಾಸ್ತ್ರಜ್ಞ ಅಮರ್ತ್ಯ ಸೇನ್ ಅವರಿಗೆ ಆಗ 10 ವರ್ಷ ವಯಸ್ಸು. ಭಾರತಕ್ಕೆ ಇನ್ನೂ ಸ್ವಾತಂತ್ರ್ಯ ಬಂದಿರಲಿಲ್ಲ. ಢಾಕಾದ ತಮ್ಮ ಮನೆಯಲ್ಲಿ ಆಡಿಕೊಳ್ಳುತ್ತಿದ್ದರು. ಬೆನ್ನೆಲ್ಲಾ ರಕ್ತದಿಂದ ತೋಯ್ದುಹೋಗಿದ್ದ ಒಬ್ಬ ವ್ಯಕ್ತಿ ಅಳುತ್ತಾ ಇವರ ಮನೆಗೆ ಓಡಿಬರುತ್ತಾನೆ. ಅದು ಕೋಮುಗಲಭೆ ನಡೆಯುತ್ತಿದ್ದ ಸಂದರ್ಭ. ಆತನನ್ನು ಯಾರೋ ಚಾಕುವಿನಿಂದ ಇರಿದಿದ್ದರು. ಆತ ದಿನಗೂಲಿ ಮಾಡಿಕೊಂಡು ಜೀವನ ನಡೆಸುತ್ತಿದ್ದ ಅಲ್ಪಸಂಖ್ಯಾತ ಸಮುದಾಯದ ವ್ಯಕ್ತಿ. ಹೊಟ್ಟೆಪಾಡಿಗೆ ನೆರೆಹೊರೆಯ ಮನೆಗಳಲ್ಲಿ ಕೆಲಸಕ್ಕೆ ಬಂದಿದ್ದಾಗ, ಬಹುಸಂಖ್ಯಾತರೇ ಹೆಚ್ಚಾಗಿದ್ದ ಇವರ ಬಡಾವಣೆಯಲ್ಲಿ ಯಾರೋ ಕೋಮುವಾದಿ ದುರುಳರು ಆತನನ್ನು ಇರಿದಿದ್ದರು. ಸೇನ್ ಅವರ ತಂದೆ ಆತನನ್ನು ಆಸ್ಪತ್ರೆಗೆ ಕರೆದೊಯ್ದರು.

'ನಮ್ಮನ್ನು ದ್ವೇಷಿಸುವವರೇ ಹೆಚ್ಚಾಗಿರುವ ಬಡಾವಣೆಗೆ ಹೋಗಬೇಡ' ಎಂದು ಆ ಕೂಲಿಕಾರ್ಮಿಕನ ಹೆಂಡತಿ ಹೇಳುತ್ತಲೇ ಇದ್ದಳಂತೆ. ಆದರೆ ಆತನಿಗೆ ಹೀಗೆ ಕೆಲಸಕ್ಕೆ ಹೋಗುವುದು ಅನಿವಾರ್ಯವಾಗಿತ್ತು. ಕಿತ್ತು ತಿನ್ನುವ ಬಡತನ. ಆರ್ಥಿಕ ಸ್ವಾತಂತ್ರ್ಯ ಇಲ್ಲದ ಕಾರಣಕ್ಕೆ ಆತ ಪ್ರಾಣವನ್ನು ಪಣಕ್ಕೆ ಒಡ್ಡಬೇಕಾಯಿತು.


ಬಡತನದಿಂದಾಗಿ ಮನುಷ್ಯ ಆರ್ಥಿಕ ಸ್ವಾತಂತ್ರ್ಯವನ್ನು ಕಳೆದುಕೊಳ್ಳುತ್ತಾನೆ. ಅದರ ಪರಿಣಾಮವಾಗಿ, ಇತರ ಸಾಮಾಜಿಕ, ರಾಜಕೀಯ ಸ್ವಾತಂತ್ರ್ಯಗಳಿಂದಲೂ ವಂಚಿತನಾಗಿಬಿಡುತ್ತಾನೆ. ಸಾಮಾಜಿಕ ಅಥವಾ ರಾಜಕೀಯ ಸ್ವಾತಂತ್ರ್ಯ ಇಲ್ಲದಿರುವುದು ಕೂಡ ಆರ್ಥಿಕ ಸ್ವಾತಂತ್ರ್ಯ ಇಲ್ಲದಿರುವುದಕ್ಕೆ ಕಾರಣವಾಗುತ್ತದೆ. ಇದನ್ನು ಅರ್ಥಮಾಡಿಕೊಂಡ ಸೇನ್, ಅಭಿವೃದ್ಧಿಯನ್ನು ಈ ಸ್ವಾತಂತ್ರ್ಯಗಳನ್ನು ವಿಸ್ತರಿಸುವ ಪ್ರಕ್ರಿಯೆಯಾಗಿ ನೋಡುತ್ತಾರೆ. ಅಭಿವೃದ್ಧಿಯನ್ನು ಸಾಮಾನ್ಯವಾಗಿ ಜಿಡಿಪಿ ಹೆಚ್ಚಳ, ಕೈಗಾರಿಕೀಕರಣ, ತಾಂತ್ರಿಕ ಬೆಳವಣಿಗೆ, ಸಾಮಾಜಿಕ ಆಧುನೀಕರಣ ಅನ್ನುವ ಅರ್ಥದಲ್ಲಿ ನೋಡಲಾಗುತ್ತದೆ. ಜಿಡಿಪಿಯ ಹೆಚ್ಚಳದಿಂದ ಸಮಾಜದಲ್ಲಿ ಮನುಷ್ಯನಿಗಿರುವ ಸ್ವಾತಂತ್ರ್ಯ ಬಲಗೊಳ್ಳುತ್ತದೆಯಾದರೂ ಜನರ ಬದುಕನ್ನು ಹೆಚ್ಚು ಶ್ರೀಮಂತಗೊಳಿಸುವುದಕ್ಕೆ ಆರ್ಥಿಕ, ಸಾಮಾಜಿಕ, ರಾಜಕೀಯ ಸ್ವಾತಂತ್ರ್ಯಗಳೂ ಮುಖ್ಯವಾಗುತ್ತವೆ. ಇವು ಮನುಷ್ಯನ ಸಾಮರ್ಥ್ಯವನ್ನು ಹೆಚ್ಚಿಸುತ್ತವೆ. ಜನ ನಿಜವಾಗಿ ಬದುಕಬೇಕು ಅಂದುಕೊಂಡ ರೀತಿಯಲ್ಲಿ ಬದುಕುವುದಕ್ಕೆ ನೆರವಾಗುತ್ತವೆ.

ಸೇನ್ ಗುರುತಿಸುವಂತೆ, ಈ ಸ್ವಾತಂತ್ರ್ಯಗಳು ಮನುಷ್ಯನ ಜೀವನಮಟ್ಟವನ್ನು ಸುಧಾರಿಸುವುದರ ಜೊತೆಗೆ ಇತರ ಹಲವು ಸಮಸ್ಯೆಗಳಿಗೂ ಪರಿಹಾರ ದೊರಕಿಸಿಕೊಡುತ್ತವೆ. ಉದಾಹರಣೆಗೆ, ಜನಸಂಖ್ಯಾ ಹೆಚ್ಚಳವನ್ನು ಹೆಚ್ಚಿನ ಸಾಮಾಜಿಕ ಭದ್ರತೆ, ಶಿಕ್ಷಣದ ಮೂಲಕ ನಿಯಂತ್ರಿಸಬಹುದು. ಬೆಳವಣಿಗೆಯನ್ನು ಸ್ವಾತಂತ್ರ್ಯಗಳನ್ನು ವಿಸ್ತರಿಸುವ ಪ್ರಕ್ರಿಯೆಯಾಗಿ ನೋಡುವುದಕ್ಕೆ ಸಾಧ್ಯವಾಗಬೇಕು. ಆಗ ನಮಗೆ ಅಭಿವೃದ್ಧಿಯನ್ನು ಹೇಗೆ ಸಾಧಿಸಬೇಕು ಅನ್ನುವುದಕ್ಕಿಂತ ಅಭಿವೃದ್ಧಿ ಯಾಕೆ ಬೇಕು ಅನ್ನುವುದು ಮುಖ್ಯವಾಗುತ್ತದೆ.

ಈ ಚಿಂತನೆಯನ್ನು ಮುಂದುವರಿಸುತ್ತಾ ಮತ್ತೊಬ್ಬ ಅರ್ಥಶಾಸ್ತ್ರಜ್ಞ ಜೋಸೆಫ್ ಸ್ಟಿಗ್‌ಲಿಟ್ಜ್, ಸ್ವಾತಂತ್ರ್ಯವನ್ನು ಒಬ್ಬ ವ್ಯಕ್ತಿಯ ಆಯ್ಕೆಗಿರುವ ಅವಕಾಶವನ್ನಾಗಿ ನೋಡುತ್ತಾರೆ. ಆಯ್ಕೆಗಿರುವ ಅವಕಾಶ ಹೆಚ್ಚಾಗಿ ಇದ್ದಷ್ಟೂ ಮನುಷ್ಯನ ಸ್ವಾತಂತ್ರ್ಯ ಹೆಚ್ಚುತ್ತದೆ. ಒಬ್ಬ ಹೊಟ್ಟೆಗೇ ಇಲ್ಲದ ಸ್ಥಿತಿಯಲ್ಲಿದ್ದರೆ ಅವನು ಎಲ್ಲಾ ಅವಕಾಶಗಳಿಂದ ವಂಚಿತನಾಗಿರುತ್ತಾನೆ. ಅವನಿಗೆ ಯಾವ ಸ್ವಾತಂತ್ರ್ಯವೂ ಇರುವುದಿಲ್ಲ. ಒಂದು ದೇಶದಲ್ಲಿ ಅಂತಹವರೇ ಹೆಚ್ಚಾಗಿದ್ದರೆ ಆ ದೇಶದಲ್ಲಿ ಸ್ವಾತಂತ್ರ್ಯ ಇಲ್ಲ ಅಂತಲೇ ಭಾವಿಸಬೇಕು.

ಸ್ಟಿಗ್‌ಲಿಟ್ಜ್ ದೃಷ್ಟಿಯಲ್ಲಿ ಅಸಮಾನತೆ ಹಾಗೂ ಬಡತನ ಹೆಚ್ಚಾಗಿರುವ ದೇಶಗಳು ಸ್ವತಂತ್ರ ದೇಶಗಳಲ್ಲ. ಬಡತನ, ನಿರುದ್ಯೋಗ ಅಥವಾ ಅನಾರೋಗ್ಯ ಇವೆಲ್ಲಾ ಮನುಷ್ಯನ ಸ್ವಾತಂತ್ರ್ಯವನ್ನು ಅತಿಯಾಗಿ ಕುಗ್ಗಿಸುತ್ತವೆ. ಅದಕ್ಕೆ ವ್ಯತಿರಿಕ್ತವಾಗಿ, ಸರ್ಕಾರಗಳು ನೀಡುವ ಹಣಕಾಸಿನ ಬೆಂಬಲ ಹಾಗೂ ಶಿಕ್ಷಣ, ತರಬೇತಿ, ಆರೋಗ್ಯದ ನೆರವು, ಸಬ್ಸಿಡಿಗಳು ಜನರ ಸ್ವಾತಂತ್ರ್ಯವನ್ನು ಹೆಚ್ಚಿಸುತ್ತವೆ. ಸರ್ಕಾರ ಎಲ್ಲರಿಗೂ ಆಹಾರ, ಉದ್ಯೋಗ, ಗುಣಮಟ್ಟದ ಶಿಕ್ಷಣ, ಆರೋಗ್ಯ, ಪಿಂಚಣಿಯನ್ನು ನೀಡುವ ಮೂಲಕ ಜನರ ಸ್ವಾತಂತ್ರ್ಯವನ್ನು ಸದೃಢಗೊಳಿಸಬಹುದು. ಇಂತಹ ಕಾರ್ಯಕ್ರಮ ಹಮ್ಮಿಕೊಳ್ಳುವುದಕ್ಕೆ ಸರ್ಕಾರಕ್ಕೆ ಹಣ ಬೇಕು. ಹಣವನ್ನು ಕ್ರೋಡೀಕರಿಸುವುದಕ್ಕೆ ಸರ್ಕಾರಕ್ಕೆ ಇರುವ ದಾರಿ ಅಂದರೆ ತೆರಿಗೆ.

ಇಂದು ನಾವು ಅನುಸರಿಸುತ್ತಿರುವ ಬೆಳವಣಿಗೆಯ ಮಾದರಿಯಲ್ಲಿ ಒಂದು ಸಮಸ್ಯೆಯಿದೆ. ಅದು ಆರ್ಥಿಕ ಪ್ರಗತಿಗೆ ಬೃಹತ್ ಹೂಡಿಕೆದಾರರನ್ನು ನೆಚ್ಚಿಕೊಂಡಿದೆ. ಅದರಿಂದಾಗಿ ಸರ್ಕಾರದ ಆದ್ಯತೆಗಳೆಲ್ಲಾ ಅವರ ಸ್ವಾತಂತ್ರ್ಯವನ್ನು ವಿಸ್ತರಿಸುವ ಕಡೆಗಿವೆ. ಅವರ ಸಂಪತ್ತಿನ ಮೇಲೆ ತೆರಿಗೆ ವಿಧಿಸುವುದನ್ನು ಅವರ ಸ್ವಾತಂತ್ರ್ಯಕ್ಕೆ ಅಡ್ಡಿ ಎಂಬಂತೆ ನೋಡಲಾಗುತ್ತಿದೆ. ತೆರಿಗೆ ಹಾಗೂ ನಿಯಂತ್ರಣದಂತಹವುಗಳಿಂದ ಮುಕ್ತಗೊಳಿಸುವ ಮೂಲಕ ಅವರ ಸ್ವಾತಂತ್ರ್ಯವನ್ನು ಬಲಪಡಿಸುವ ದಿಸೆಯಲ್ಲಿ ನೀತಿಗಳು ರೂಪುಗೊಳ್ಳುತ್ತಿವೆ. ಹಾಗೆ ಮಾಡುವುದರಿಂದ ಹೂಡಿಕೆ ಹೆಚ್ಚುತ್ತದೆ, ಆರ್ಥಿಕ ಪ್ರಗತಿಯಾಗುತ್ತದೆ ಎಂದು ಹಲವು ಆರ್ಥಿಕ ತಜ್ಞರು ವಾದಿಸುತ್ತಿದ್ದಾರೆ. ಅವರ ಪ್ರಕಾರ, ಆರ್ಥಿಕತೆಯಲ್ಲಿ ಸರ್ಕಾರದ ಪಾತ್ರ ಕನಿಷ್ಠ ಪ್ರಮಾಣದಲ್ಲಿ ಇರಬೇಕು. ಹೀಗೆ ಹೇಳುವಾಗ ಅವರು ಒಂದು ಅಂಶವನ್ನು ಮರೆಯುತ್ತಾರೆ. ರಸ್ತೆಗಳು, ಬಂದರುಗಳಂತಹವು ಇಲ್ಲದೇ ಹೋಗಿದ್ದರೆ ಉದ್ದಿಮೆದಾರರಿಗೆ ಸರಕುಗಳನ್ನು ಸಾಗಿಸಲು ಸಾಧ್ಯವಾಗುತ್ತಿರಲಿಲ್ಲ. ಶಿಕ್ಷಣ, ಆರೋಗ್ಯ ಇಲ್ಲದಿದ್ದರೆ ಉದ್ಯೋಗಿಗಳು ಸಿಗುತ್ತಿರಲಿಲ್ಲ. ಕಾನೂನು ಸುವ್ಯವಸ್ಥೆ ಇಲ್ಲದೇ ಹೋಗಿದ್ದರೆ ಮುಕ್ತ ವಾಣಿಜ್ಯ ಚಟುವಟಿಕೆ ಸಾಧ್ಯವಾಗುತ್ತಿರಲಿಲ್ಲ.



ಜಗತ್ತಿನ ಬಹುಪಾಲು ರಾಷ್ಟ್ರಗಳು ಖಾಸಗಿ, ಸರ್ಕಾರಿ, ಸಹಕಾರಿ ಹಾಗೂ ಲಾಭದ ಉದ್ದೇಶ ಇಲ್ಲದ ಉದ್ದಿಮೆಗಳಿಂದ ಕೂಡಿದ್ದ ಸೊಗಸಾದ, ಸಂಕೀರ್ಣವಾದ ಆರ್ಥಿಕತೆಯನ್ನು ಹೊಂದಿದ್ದವು. ಕಾರ್ಪೊರೇಟ್ ಕೇಂದ್ರಿತ ಆರ್ಥಿಕ ಚಿಂತನೆಯಿಂದ ಅದೊಂದು ಲಾಭ ಮುಖ್ಯವಾಗಿರುವ ಮುಕ್ತ ಉದ್ದಿಮೆಗಳ ಆರ್ಥಿಕತೆಯಾಗಿಬಿಟ್ಟಿದೆ ಎಂದು ಸ್ಟಿಗ್‌ಲೆಟ್ಜ್ ಹೇಳುತ್ತಾರೆ. ಕೆಲವು ಉದ್ಯಮಿಗಳು ಅನಿಯಂತ್ರಿತ ಏಕಸ್ವಾಮ್ಯದ ಸ್ವಾತಂತ್ರ್ಯ ಬಯಸುವುದುಂಟು. ನೈಸರ್ಗಿಕ ಸಂಪತ್ತಿನ ಒಡೆತನವೂ ಬೇಕು. ಅಂತಹ ಆರ್ಥಿಕತೆಯಲ್ಲಿ ಅಭಿವೃದ್ಧಿಯ ಫಲ ಎಲ್ಲರಿಗೂ ಸಮಾನವಾಗಿ ಸಿಗುವುದಕ್ಕೆ ಸಾಧ್ಯವೇ ಇಲ್ಲ.

ಬೃಹತ್ ಹೂಡಿಕೆದಾರರಿಗೆ ನೀಡುತ್ತಿರುವ ಕೆಲವು ವಿಶೇಷ ಸವಲತ್ತುಗಳು ಹಾಗೂ ಸ್ವಾತಂತ್ರ್ಯದ ಪರಿಣಾಮವಾಗಿ ಇಂದು ದೇಶದಲ್ಲಿ ಅಸಮಾನತೆ, ಪರಿಸರ ಮಾಲಿನ್ಯ, ಬೃಹತ್ ಉದ್ಯಮಗಳ ಏಕಸ್ವಾಮ್ಯ, ಹಣಕಾಸು ಬಿಕ್ಕಟ್ಟು, ನಿರಂಕುಶ ಆಳ್ವಿಕೆಯಂಥವು ಹೆಚ್ಚುತ್ತಿರುವುದನ್ನು ನೋಡುತ್ತಿದ್ದೇವೆ. ಈ ಪ್ರಕ್ರಿಯೆಯಲ್ಲಿ ಜನರ ಸ್ವಾತಂತ್ರ್ಯ ಕಡಿಮೆಯಾಗುತ್ತಿದೆ. ಬದುಕು ದುಸ್ತರವಾಗುತ್ತಿದೆ. ಬದುಕಲು ಇರುವ ಸ್ವಾತಂತ್ರ್ಯ ಉಳಿದ ಸ್ವಾತಂತ್ರ್ಯಗಳಿಗಿಂತ ಶ್ರೇಷ್ಠವಾದದ್ದು. ದೊಡ್ಡ ಉದ್ಯಮಪತಿಗಳಿಗೆ ಪರಿಸರ ಕೆಡಿಸಬಾರದು ಎಂಬ ನಿರ್ಬಂಧ ಹೇರಿದರೆ ಮುಂದಿನ ತಲೆಮಾರಿನವರಿಗೆ ಒಳ್ಳೆಯ ಬದುಕು ಸಾಧ್ಯ ಆಗುತ್ತದೆ. ಯಾವುದಾದರೂ ನಿಯಂತ್ರಣದಿಂದ ಒಟ್ಟಾರೆ ಸಮಾಜಕ್ಕೆ ಒಳಿತಾಗುವುದಾದರೆ ಅದು ಸಮರ್ಥನೀಯ.

ಜನರ ಸಾಮರ್ಥ್ಯವನ್ನು, ಅವರಿಗಿರುವ ಆಯ್ಕೆಯ ಅವಕಾಶವನ್ನು ಹೆಚ್ಚಿಸುವ ದೃಷ್ಟಿಯಿಂದ ಸ್ಟಿಗ್‌ಲಿಟ್ಜ್ ತರಹದ ಚಿಂತಕರು ಸರ್ಕಾರವು ಸಾಮಾಜಿಕ ಕ್ಷೇತ್ರಗಳಲ್ಲಿ ಸಕ್ರಿಯವಾಗಿ ತೊಡಗಿಕೊಳ್ಳಲು ಸೂಚಿಸುತ್ತಾರೆ. ಶಿಕ್ಷಣ, ಆರೋಗ್ಯದಂತಹವುಗಳನ್ನು ಒದಗಿಸುವ ಮೂಲಕ ಮಾನವ ಬಂಡವಾಳವನ್ನು, ಸಹಕಾರ ಹಾಗೂ ವಿಶ್ವಾಸವನ್ನು ಆಧರಿಸಿದ ಸಾಮಾಜಿಕ ಬಂಡವಾಳವನ್ನು, ಒಳ್ಳೆಯ ಗಾಳಿ ಹಾಗೂ ತಾಳಿಕೆಯ ಪರಿಸರವಿರುವ ನೈಸರ್ಗಿಕ ಬಂಡವಾಳವನ್ನು ಹೆಚ್ಚಿಸಬೇಕು ಎನ್ನುತ್ತಾರೆ. ಇವ್ಯಾವುದರಿಂದಲೂ ಜಿಡಿಪಿ ಹೆಚ್ಚುವುದಿಲ್ಲ. ಆದರೆ ಇವು ಮುಖ್ಯ. ಸರ್ಕಾರಕ್ಕೆ ಇಂತಹ ಸಾರ್ವಜನಿಕ ಸ್ವತ್ತನ್ನು ಬೆಳೆಸುವುದಕ್ಕೆ ಬಂಡವಾಳ ಬೇಕಾಗುತ್ತದೆ. ಅದಕ್ಕಾಗಿ ತೆರಿಗೆ ಸಂಗ್ರಹಿಸಬೇಕಾಗುತ್ತದೆ.

ಕೋಟ್ಯಧಿಪತಿಗಳು ತಮ್ಮ ಸಂಪತ್ತಿನ ಮೇಲೆ ಸ್ವಲ್ಪ ಹೆಚ್ಚಿನ ತೆರಿಗೆ ಕಟ್ಟಬೇಕಾಗಬಹುದು. ಅದರಿಂದ ಅವರಿಗೆ ಒಂದಿಷ್ಟು ಅನನುಕೂಲವಾಗಬಹುದು. ಆದರೆ ಅವರೂ ಸರ್ಕಾರ ಕಲ್ಪಿಸಿರುವ ಮೂಲಸೌಕರ್ಯದ ಲಾಭ ಪಡೆದುಕೊಂಡೇ ಬಂದಿರುತ್ತಾರೆ. ಹೆಚ್ಚುವರಿ ತೆರಿಗೆಯಿಂದ ಕಲ್ಪಿಸಬಹುದಾದ ಸೌಲಭ್ಯದಿಂದ, ಪೌಷ್ಟಿಕಾಂಶದ ಕೊರತೆಯಿಂದ ನರಳುತ್ತಿರುವ ಮಗುವಿನ ಬದುಕಿನಲ್ಲಿ, ಸಮಾಜದ ಕಟ್ಟಕಡೆಯ ಮನುಷ್ಯನ ಬದುಕಿನಲ್ಲಿ ಆಗಬಹುದಾದ ಬದಲಾವಣೆಯನ್ನು ಊಹಿಸಿಕೊಳ್ಳಿ. ಅವರ ಬದುಕು ಸುಧಾರಿಸುತ್ತದೆ. ಅಂತಿಮವಾಗಿ ಒಟ್ಟಾರೆ ಸಮಾಜಕ್ಕೆ ಅನುಕೂಲವಾಗುತ್ತದೆ. ಹಾಗಾಗಿ ವರಮಾನದ, ಸಂಪತ್ತಿನ ಒಂದಿಷ್ಟನ್ನು ತೆರಿಗೆಯಾಗಿ ಕಟ್ಟಲು ಮಾಡುವ ಒತ್ತಾಯವನ್ನು ಇಡೀ ಸಮಾಜದ ಒಳಿತಿನ ಕಡೆಗಿನ, ವಿಮೋಚನೆಯ ಕಡೆಗಿನ ಹೆಜ್ಜೆಯಾಗಿ ನೋಡುವುದಕ್ಕೆ ಸಾಧ್ಯವಾಗಬೇಕು.

ಚುರುಮುರಿ



ರಿಸಲ್ಟ್ ರಗಳೆ

• ಮಣ್ಣೆ ರಾಜು

'ಎಸ್‌ಎಸ್‌ಎಲ್‌ಸಿ ಪರೀಕ್ಷೆ ಬರೆದ ಮಕ್ಕಳಿಗೆ ಕೃಪಾಂಕ ನೀಡಿದ್ದಕ್ಕೆ ಮುಖ್ಯಮಂತ್ರಿ ಸಿಟ್ಟಾಗಿದ್ದಾರಂತೆ ಕಣ್ರೀ' ಅಂದಳು ಸುಮಿ.

'ಹೌದು, ಫಲಾನುಭವಿಗಳಿಗೆ ಸಾಲದಲ್ಲಿ ಸಬ್ಸಿಡಿ ನೀಡುವಂತೆ ಇಲಾಖೆಯು ಮಕ್ಕಳಿಗೆ ಕೃಪಾಂಕ ಕರುಣಿಸಿದೆ. ಊಟ, ಬಟ್ಟೆ, ಪುಸ್ತಕದ ಜೊತೆಗೆ ಮಕ್ಕಳಿಗೆ ಉಚಿತವಾಗಿ ಕೃಪಾಂಕ ಕೊಟ್ಟರೂ ಪರೀಕ್ಷಾ ಫಲಿತಾಂಶ ಕುಸಿದಿದೆಯಂತೆ' ಅಂದ ಶಂಕ್ರಿ.

'ಪರೀಕ್ಷಾ ಕೇಂದ್ರದಲ್ಲಿ ಸಿ.ಸಿ. ಟಿ.ವಿ ಕ್ಯಾಮೆರಾ ಮೂಲಕ ವೆಬ್‌ಕಾಸ್ಟಿಂಗ್ ಅಳವಡಿಸಿದ್ದು ಫಲಿತಾಂಶ ಕುಸಿಯಲು ಕಾರಣವಂತೆ'.

'ಸಿ.ಸಿ. ಕ್ಯಾಮೆರಾ ಕೆಂಗಣ್ಣಿಗೆ ಮಕ್ಕಳು ಹೆದರಿರಬಹುದು. ಸಾಲದ್ದಕ್ಕೆ ಪರೀಕ್ಷಾ ಕೇಂದ್ರದ ಸುತ್ತ ಪೊಲೀಸ್ ಕಾವಲು, ಆಗಾಗ ಸ್ಕ್ವಾಡ್‌ಗಳು ಬಂದು ಹೆದರಿಸಿದ್ರೆ ಮಕ್ಕಳು ನಿರ್ಭೀತಿಯಿಂದ ಪರೀಕ್ಷೆ ಬರೆಯಲು ಸಾಧ್ಯವೇ?'

'ಹೀಗೆ ಮಾಡದಿದ್ದರೆ ಪರೀಕ್ಷೆಯಲ್ಲಿ ಅಕ್ರಮ ನಡೆಯುವುದಂತೆ'.

'ಎಲ್ಲಾ ಶಾಲೆಗಳ ಕ್ಲಾಸ್ ರೂಮ್‌ಗಳಿಗೆ ಸಿ.ಸಿ. ಟಿ.ವಿ ಕ್ಯಾಮೆರಾ ಅಳವಡಿಸಿ ಪಾಠಪ್ರವಚನದ ಲೋಪಗಳನ್ನು ತರಗತಿ ಹಂತದಲ್ಲೇ ಸರಿಪಡಿಸಿದ್ದರೆ ಪರೀಕ್ಷೆಗಳನ್ನು ಸರಳವಾಗಿ ಮಾಡಬಹುದಿತ್ತೇನೊ'.

'ಹೌದು, ತರಗತಿಯಲ್ಲಿ ಯಾವ ಮಕ್ಕಳು ಆಸಕ್ತಿಯಿಂದ ಪಾಠ ಕೇಳುತ್ತಿದ್ದಾರೆ, ಇನ್ಯಾರು ಆಕಳಿಸಿ, ತೂಕಡಿಸುತ್ತಿದ್ದಾರೆ ಎಂಬುದು ಅಧಿಕಾರಿಗಳ ಗಮನಕ್ಕೆ ಬರುತ್ತದೆ. ನಿರಾಸಕ್ತ ಮಕ್ಕಳಿಗೆ ಸ್ಪೆಷಲ್ ಕ್ಲಾಸ್ ತಗೊಂಡು ಅವರ ಜ್ಞಾನ ವೃದ್ಧಿಸಬಹುದು'.

'ಬಿಸಿಯೂಟ ಉಂಡ ಶಿಕ್ಷಕರಿಗೇ ತೂಕಡಿಕೆ ಬರುತ್ತದೆ, ಮಕ್ಕಳು ತೂಕಡಿಸದೆ ಇರ್ತಾರಾ?'

'ಹಾಗಂತ, ಊಟದ ನಂತರ ಮಕ್ಕಳು ನಿದ್ರೆ ಮಾಡಲೆಂದು ಒಂದು ಪಿರಿಯಡ್ ಮೀಸಲಿಡಲಾಗುತ್ತಾ?'

'ಆಗಲ್ಲ, ಶೈಕ್ಷಣಿಕ ಸಮಸ್ಯೆ ಜಾಸ್ತಿಯಾಗ್ತಿದೆ. ಅನೇಕ ಶಾಲೆಗಳಲ್ಲಿ ಒಬ್ಬರೂ ಪಾಸಾಗದೆ ಬಿಗ್ ಜೀರೊ ರಿಸಲ್ಟ್ ಬಂದಿದೆಯಂತೆ. ಈ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಬೇಕು'.

'ನಿಜ, ಆಯಾ ಶಾಲೆಗಳಿಗೇ ಪರೀಕ್ಷೆ ನಡೆಸುವ 'ಕಾಪಿರೈಟ್ಸ್' ಕೊಟ್ಟರೆ ಎಲ್ಲ ಮಕ್ಕಳೂ ಪಾಸ್ ಆಗ್ತಾರೆ, ಇಲಾಖೆಯೂ ಪಾಸ್ ಆಗ್ತದೆ' ಎಂದಳು ಸುಮಿ!

ಸಂಗತ

ಅರಮನೆಯಾಚೆಗಿನ ನಿಜ ಅರಸ!

ನಶ್ವರತೆಗಿರುವ ಪ್ರಖರ ಮೌಲ್ಯವನ್ನು ಬುದ್ಧ ಅನಾವರಣಗೊಳಿಸುವ ಪರಿ ಅನನ್ಯ

• ಬಿ.ಎಸ್.ಭಗವಾನ್

ಗೌತಮ ಬುದ್ಧ ರಾಜಕೀಯ ಅಧಿಕಾರವನ್ನು ಎಂದೂ ಆಶ್ರಯಿಸಲಿಲ್ಲ. ಆದರೂ ಅವನು ನೀತಿ ಮತ್ತು ಹೊಣೆಗಾರಿಕೆಯ ತಳಹದಿಯಲ್ಲಿ ಜನಪ್ರಾತಿನಿಧ್ಯವನ್ನು ನಿರ್ವಹಿಸಬೇಕೆಂದು ಒತ್ತಿಹೇಳಿ, ತಾನು ಅರಮನೆಯ ಹೊರಗಿನ ನಿಜ ಅರಸನೆನ್ನಿಸಿದ. ಯಾವುದೇ ರಾಜಕೀಯ ವ್ಯವಸ್ಥೆಯು ಸಂಪೂರ್ಣ ಸಂತೋಷ, ಸಮಾಧಾನ ತರದು. ಆದರೆ ಪ್ರಜೆಗಳು ಮೂಲಭೂತ ಹಕ್ಕುಗಳಿಂದ ವಂಚಿತರಾಗಬಾರದಷ್ಟೆ. ಅವರಿಗೆ ಕನಿಷ್ಠ ಅನುಕೂಲಗಳಾದ ಉದ್ಯೋಗ, ಅನ್ನ, ನೀರು, ನೆರಳು, ಗೌರವ ಸಲ್ಲಲೇಬೇಕು.

ಬುದ್ಧ ನೀಡಿದ ಎರಡು ಮಹತ್ತರ ವಿಶ್ವಸಂದೇಶಗಳೆಂದರೆ, ಅಹಿಂಸೆ ಮತ್ತು ಶಾಂತಿ. ಯಾವುದೂ ಶಾಶ್ವತವಲ್ಲ ಎಂಬ ವಾಸ್ತವ ಅರಿತವ ವ್ಯಸನಮುಕ್ತ ಎಂದ ಆತ ಎಲ್ಲ ಕಾಲಕ್ಕೂ ಸಲ್ಲುವ ಮನೋವೈದ್ಯ. ಬುದ್ಧನಿಗೆ 'ಜ್ಞಾನೋದಯ'ದ ನಂತರ ಸೂಕ್ಷ್ಮವೂ ಕಠಿಣವೂ ಆದ ತಾನು ಕಂಡ ಸತ್ಯಾಂಶಗಳನ್ನು ಜನರಲ್ಲಿ ಹಂಚಿಕೊಳ್ಳುವುದು ಹೇಗೆಂಬ ಪ್ರಶ್ನೆ ಮೂಡಿತು. ಆದರೆ ಕೆಲವರಿಗಾದರೂ ಅವು ತಲುಪುತ್ತವೆ ಎಂಬ ದೃಢ ನಿಲುವಿನಿಂದ ಬೋಧನೆಗಳಿಗೆ ಆತ ಮುಂದಾದ.

'ನಮ್ಮ ಆಗುಹೋಗುಗಳ ನಿಯಂತ್ರಣ ನಮ್ಮಿಂದಲೇ' ಎಂದ ಬುದ್ಧನ ಬೋಧನೆಗಳು ಯಾರೇ ಅನುಸರಿಸಬಹುದಾದಷ್ಟು ಸರಳ. ಬದುಕು ಒಮ್ಮೆ ಮಾತ್ರ ಲಭಿಸುವ ಅವಕಾಶವಾದ್ದರಿಂದ ಅದನ್ನು ಹೇಗೆಂದರೆ ಹಾಗೆ ಕಳೆಯಬಾರದು ಎಂದ ಬುದ್ಧ. ನಾವೆಸಗುವ ಪ್ರಮಾದಗಳಿಂದ ಇತರರಿಗೆ ತೊಂದರೆ ಆಗುವುದಿರಲಿ, ನಮ್ಮನ್ನೇ ಹಿಂಸೆಗೆ ಗುರಿಪಡಿಸಿಕೊಳ್ಳುತ್ತೇವೆ. ಬುದ್ಧನ ಬಳಿ ಬರುತ್ತಿದ್ದ ಅಭಿಮಾನಿಗಳ ಪೈಕಿ ಹಲವರು 'ಸಂತೋಷಕ್ಕೆ ದಾರಿ ಸೂಚಿಸಿ ಗುರುವೇ' ಎಂದು ಮೊರೆಯಿಟ್ಟವರೆ. ಅವರಿಗೆಲ್ಲ ದೊರೆಯುತ್ತಿದ್ದ ಮಾರ್ಗದರ್ಶನ ಒಂದೇ- 'ಸಂತೋಷಕ್ಕೆ ದಾರಿಯಿಲ್ಲ, ಏಕೆಂದರೆ ಸಂತೋಷವೇ ಒಂದು ದಾರಿ'.

ತನ್ನ 'ಮಂಗಲಸೂತ್ರ' ಮಂತ್ರ ಪಠಣದಲ್ಲಿ ಬುದ್ಧ ಕೃತಜ್ಞತೆಯೇ ಎಲ್ಲ ಸದ್ಗುಣಗಳ ತಾಯಿ ಎನ್ನುತ್ತಾನೆ. ತಮ್ಮನ್ನು ಕಟ್ಟಾ ಧಾರ್ಮಿಕ ಅವಿಶ್ವಾಸಿ ಎಂದು ಕರೆದುಕೊಂಡ ಆಲ್ಬರ್ಟ್ ಐನ್‌ಸ್ಟೀನ್ 'ಆಧುನಿಕ ವಿಜ್ಞಾನದ ಆಶಯಗಳಿಗೆ ಅನುರೂಪವಾದ ಧರ್ಮ ಯಾವುದಾದರೂ ಇದ್ದರೆ ಅದುವೆ ಬೌದ್ಧಧರ್ಮ' ಎಂದರು. ಒಂದು ಧರ್ಮವು ರಾಜಕೀಯ ಇಚ್ಛೆಗಳಿಗೆ ಓಲೈಕೆಯಾದರೆ ಅದರ ನೈತಿಕ ಗೊತ್ತು ಗುರಿಗಳು ನೆಲಕಚ್ಚುತ್ತವೆ. ಬದಲಾವಣೆಗಳಿಗೆ ತೆರೆದ ಮನಸ್ಸು, ಪ್ರಕೃತಿಯೊಡನೆ ಅನುಸಂಧಾನ, ಆಂತರಿಕ ಶಾಂತಿ ಹಾಗೂ ಸಣ್ಣಪುಟ್ಟ ಸಂಗತಿಗಳಿಗೂ ಮೆಚ್ಚುಗೆ ಬದುಕಿಗೆ ರಹದಾರಿ.

ಇಂದ್ರಿಯ ಬುದ್ಧಿಮತ್ತೆ ಮತ್ತು ತೀವ್ರತರ ಸ್ವಯಂಶಿಸ್ತು- ಇವೆರಡರ ನಡುವಿನ 'ಮಧ್ಯಮಾರ್ಗ' ಎಂದು ಕರೆಯಲಾಗುವ ಸುಲಭ ವಿಧಾನವನ್ನು ಜನರಿಗೆ ಉಪದೇಶಿಸಿದ್ದು ಬುದ್ಧನ ಹೆಗ್ಗಳಿಕೆ. ಮಹಿಳೆಯರಿಗೆ ಧಾರ್ಮಿಕ ಸ್ವಾತಂತ್ರ್ಯ ಇರಬೇಕೆಂದು ಪ್ರತಿಪಾದಿಸಿದ ಮೊದಲಿಗ ಬುದ್ಧ. ಕೋಸಲ ದೇಶದ ದೊರೆ ತನ್ನ ರಾಣಿ ಹೆಣ್ಣುಮಗುವಿಗೆ ಜನ್ಮ ನೀಡಿದ್ದಕ್ಕೆ ನೊಂದುಕೊಳ್ಳುತ್ತಾನೆ. ಈ ಪರಿತಾಪ ಅರ್ಥಹೀನ ಎಂದು ಅವನನ್ನು ತರಾಟೆಗೆ ತೆಗೆದುಕೊಳ್ಳುತ್ತಾನೆ ಬುದ್ಧ. ಒಬ್ಬಳು ಹೆಣ್ಣುಮಗಳು ಗಂಡಿನಷ್ಟೇ ಸಮನಾಗಿ ಶ್ರೇಯಸ್ಸು ತಲುಪಿ ಸಮಾಜವನ್ನು ಉನ್ನತೀಕರಿಸಬಲ್ಲಳು ಎನ್ನುವ ಪಾಠದಿಂದ ರಾಜನ ಕಣ್ಣು ತೆರೆಯಿಸುತ್ತಾನೆ.

ನಶ್ವರತೆಗಿರುವ ಪ್ರಖರ ಮೌಲ್ಯವನ್ನು ಬುದ್ಧ ಅನಾವರಣಗೊಳಿಸುವ ಪರಿ ಸ್ವಾರಸ್ಯಕರವಾಗಿದೆ. ಒಂದು ವೇಳೆ ಸಾವೆನ್ನುವುದೇ ಇಲ್ಲವಾದರೆ ಬದುಕನ್ನು ವ್ಯಾಮೋಹ ಮತ್ತು ಹಂಬಲವೇ ಆಳುತ್ತವೆ. ಮರಣ ಒಂದಲ್ಲೊಂದು ದಿನ ಬರುತ್ತದೆ ಎಂದು ತಿಳಿದೂ ಮನುಷ್ಯ ಬಗೆ ಬಗೆ ರಂಪ, ರಗಳೆಗಿಳಿಯುತ್ತಾನೆ. ಇನ್ನು ಅಮರತ್ವ ಎಂತಹ ಅನಾಹುತಗಳನ್ನು ಸೃಷ್ಟಿಸಬಹುದು? ನಮ್ಮ ತೃಪ್ತಿ, ಸಮಾಧಾನವೇ ನಮ್ಮನ್ನು ನಿಷ್ಕ್ರಿಯತೆಗೆ ದೂಡಬಾರದೆಂಬುದು ಬುದ್ಧನ ಎಚ್ಚರಿಕೆ.

ಖಂಡಾಂತರ ವ್ಯಾಧಿ ಕೋವಿಡ್- 19 ಕಾಟ ಜಯಿಸಿದ್ದೇವೆ, ವಾಯುಗುಣ ಬದಲಾವಣೆ, ಜಾಗತಿಕ ತಪನದಂಥ ಸವಾಲುಗಳಿಗೆ ಕಾರಣ ಹಾಗೂ ಪರಿಹಾರೋಪಾಯಗಳ ಅನ್ವೇಷಣೆ ಸಾಗಿದೆ. ಬುದ್ಧನ ಹಿತನುಡಿಗಳು ಹಿಂದೆಂದೂ ಇಲ್ಲದಷ್ಟು ನಮಗೆ ಪ್ರಸ್ತುತವಾಗಬೇಕಿವೆ. ಬುದ್ಧನ ಪ್ರವಚನಗಳಲ್ಲಿ ನೀಡಿದ ದೃಷ್ಟಾಂತಗಳು, ಉಪಕಥೆಗಳು ಬಹು ಮನೋಜ್ಞವಾಗಿವೆ. ಒಮ್ಮೆ ಅವನು ರೇಷ್ಮೆ ಕರವಸ್ತ್ರವೊಂದನ್ನು ತೋರಿಸಿ ಅದರ ಎರಡು ಮೂಲೆಗಳನ್ನು ಬಿಗಿದು ಕಟ್ಟಿ ಒಂದು ಗಂಟು ಮಾಡುತ್ತಾನೆ. ಇಗೋ ಗಂಟು ಬಿಡಿಸಿ ಅಂತ ಶಿಷ್ಯರಿಗೆ ಆದೇಶಿಸಿದಾಗ ಎಲ್ಲರಿಗೂ ಅದು ಸಮಸ್ಯೆ. ಒಬ್ಬ ಶಿಷ್ಯ ಕರವಸ್ತ್ರವನ್ನು ಮತ್ತೂ ಎಳೆದಾಗ ಗಂಟು ಕಗ್ಗಂಟಾಗಿ ಬಿಡಿಸಲು ಮತ್ತೂ ತೊಂದರೆಯೇ ಆಗಿತ್ತು. ಆಗ ಬುದ್ಧ 'ಶಿಷ್ಯರೇ, ಗಂಟು ಬಿಡಿಸಬೇಕಾದರೆ ಇರುವ ಉಪಾಯವೆಂದರೆ ಅದು ಹೇಗೆ ಗಂಟಾಯಿತೆಂದು ಸಹನೆಯಿಂದ ಪರಾಮರ್ಶಿಸಬೇಕು. ಆಗ ಕರವಸ್ತ್ರವನ್ನು ಹಿಂದಿನ ಸ್ಥಿತಿಗೆ ತರಬಹುದು' ಎಂದ.



ಗೊಂದಲಗಳು, ಭಿನ್ನಾಭಿಪ್ರಾಯಗಳೂ ಹಾಗೆಯೇ ತಾನೆ? ಅವುಗಳ ಮೂಲಗಳನ್ನು ಹುಡುಕಿಯೇ ಪರಿಹರಿಸುವುದು ಬುದ್ಧಿವಂತಿಕೆ. ಕತ್ತರಿಸಿದರೆ ವಸ್ತ್ರವೇ ಹಾಳು. ಒಂದು ವಿದ್ಯಮಾನದ ಹಿಂದೆ ಹಲವಾರು ಕಾರಣಗಳು ಹಾಗೂ ಕರಾರುಗಳ ಸಾಲುಗಳೇ ಇರುತ್ತವೆ. ಸಂದ ದಿನಗಳು ಎಷ್ಟೇ ಗೌಜಾಗಿದ್ದರೂ ಮತ್ತೆ ಪ್ರಾರಂಭಿಸಬಹುದಲ್ಲ ಎಂಬುದು ಬುದ್ಧನ ಪ್ರಶ್ನೆ. ಬುದ್ಧ 45 ವರ್ಷಗಳ ಕಾಲ ವಿವಿಧೆಡೆಗಳಲ್ಲಿ ಸಂಚರಿಸಿ ಪ್ರವಚನಗಳನ್ನು ನೆರವೇರಿಸಿದ. ಅಂಗುಲಿಮಾಲಾನಂತಹ ದುರುಳರನ್ನೂ ಗೆದ್ದ ಸಂತ ಬುದ್ಧ. ಬುದ್ಧಪೂರ್ಣಿಮೆಯ ಈ ಹೊತ್ತಿನಲ್ಲಿ (ಮೇ 23) ನಾವೆಲ್ಲರೂ ಬುದ್ಧನ ಚಿಂತನೆಗಳನ್ನು ಅಳವಡಿಸಿಕೊಳ್ಳಲು ಪ್ರಯತ್ನಿಸೋಣ.

ವಾಚಕರ ವಾಣಿ

ಹಣ ಉಳಿಸಿತು 'ಶಕ್ತಿ': ಆದರೆ...?

ಮೊನ್ನೆ ಬೆಂಗಳೂರಿನಿಂದ ಚಿತ್ರದುರ್ಗಕ್ಕೆ ಬರುವಾಗ ಮಾರ್ಗಮಧ್ಯದಲ್ಲಿ ರಾತ್ರಿ ಹತ್ತು ಗಂಟೆ ಸುಮಾರಿಗೆ ಹಿರಿಯೂರು ಬಳಿಯ ಹೋಟೆಲೊಂದರ ಹತ್ತಿರ ನಾವಿದ್ದ ಬಸ್ ಊಟಕ್ಕಾಗಿ ನಿಲ್ಲಿಸಿತು. ಅಲ್ಲಿ ಕಲ್ಯಾಣ ಕರ್ನಾಟಕ ನಿಗಮದ ಸಾರಿಗೆ ಬಸ್ಸುಗಳೇ ಹೆಚ್ಚಿನ ಸಂಖ್ಯೆಯಲ್ಲಿ ಇದ್ದವು. ಹೋಟೆಲ್ ಕ್ಯಾಷ್ ಕೌಂಟರ್‌ನಲ್ಲಿ ಪ್ರಯಾಣಿಕರು ಟೋಕನ್ ಪಡೆಯಲು ನಿಂತು ಊಟ, ತಿಂಡಿ ದರ ಕೇಳುತ್ತಿದ್ದಾಗ, ಅನ್ನ–ಸಾಂಬಾರ್‌ಗೆ ನೂರು ರೂಪಾಯಿ ಅಂದದ್ದು ಕೇಳಿ ನನಗೆ ಅಚ್ಚರಿಯಾಯಿತು. ಪ್ರಯಾಣಿಕರಲ್ಲಿ ಹೆಚ್ಚಿನವರು ದೂರದ ಊರುಗಳಿಗೆ ಸುಖಾಸುಮ್ಮನೆ ತೆರಳುವವರಲ್ಲ, ಏನಾದರೂ ಕೆಲಸ ಇದ್ದರಷ್ಟೇ ಪ್ರಯಾಣಿಸುವಂತಹವರು ಎಂಬುದು ತಿಳಿಯುತ್ತಿತ್ತು. ಕೆಲವರು ಒಳಗೆ ಹೋಗಿ ಊಟ ಮಾಡುತ್ತಿದ್ದರೆ, ಮತ್ತೆ ಕೆಲವರು ತಾವು ತಂದಿದ್ದ ಬುತ್ತಿ ಗಂಟನ್ನು ಬಿಚ್ಚಿ ತಿನ್ನುತ್ತಿದ್ದ ದೃಶ್ಯವೂ ಕಂಡುಬಂತು.

ರಾಜ್ಯ ಮತ್ತು ರಾಷ್ಟ್ರೀಯ ಹೆದ್ದಾರಿಯ ಅಕ್ಕಪಕ್ಕದ ಹೋಟೆಲ್‌ಗಳಲ್ಲಿ ದುಬಾರಿ ದರ ಕೊಟ್ಟು ಊಟ, ಉಪಾಹಾರ ಸೇವಿಸಲು ಮನಸ್ಸು ಒಪ್ಪದಿದ್ದರೂ ಅನಿವಾರ್ಯ ಸಂದರ್ಭ ಅದಾಗಿರುತ್ತದೆ. 'ಶಕ್ತಿ' ಯೋಜನೆಯಡಿ ಓಡಾಡಿ ತಮ್ಮ ಕೆಲಸ ಮಾಡಿಕೊಳ್ಳುವಂತಹವರಿಗೆ ಹಸಿವು ನೀಗಿಸಿಕೊಳ್ಳಲು ಇದರಿಂದ ಕಷ್ಟವಾಗಬಹುದು. ಒಂದೇ ಹೋಟೆಲ್, ದುಬಾರಿ ದರದಂಥ ಅನಿವಾರ್ಯ ತಪ್ಪಿಸುವುದರತ್ತ ಸರ್ಕಾರ ಚಿತ್ತಹರಿಸಬೇಕಿದೆ. ಅವರವರ ಯೋಗ್ಯತಾನುಸಾರದ ಊಟ, ಉಪಾಹಾರಕ್ಕೆ ಪರ್ಯಾಯಗಳು ಇರುವಂತಹ ವ್ಯವಸ್ಥೆ ಬೇಕಾಗಿದೆ ಮತ್ತು ಸಾರಿಗೆ ನಿಗಮಗಳ ಬಸ್‌ಗಳನ್ನು ಅಂಥ ಕಡೆ ಊಟ–ಉಪಾಹಾರಕ್ಕೆ ನಿಲ್ಲಿಸುವಂಥ ಕ್ರಮದತ್ತ ಸರ್ಕಾರ ಯೋಚಿಸಬೇಕಾಗಿದೆ.

ರುದ್ರಮೂರ್ತಿ ಎಂ.ಜೆ., ಚಿತ್ರದುರ್ಗ

ಕಿರ್ಗಿಸ್ತಾನ ಪ್ರಕರಣ: ದೇಶವೇ ಹೊಣೆಯಲ್ಲ

ಕಿರ್ಗಿಸ್ತಾನದಲ್ಲಿ ಈಜಿಪ್ಟ್‌ನ ಕೆಲವು ವೈದ್ಯಕೀಯ ವಿದ್ಯಾರ್ಥಿಗಳು ಸ್ಥಳೀಯ ವಿದ್ಯಾರ್ಥಿಗಳೊಂದಿಗೆ ನಡೆಸಿದ ಘರ್ಷಣೆ ಸಂಬಂಧ ಭಾರತ ಮತ್ತು ಪಾಕಿಸ್ತಾನದ ವಿದ್ಯಾರ್ಥಿಗಳ ಮೇಲೂ ಹಲ್ಲೆ ನಡೆದಿರುವುದಾಗಿ ಮಾಧ್ಯಮ ವರದಿಗಳು ತಿಳಿಸಿವೆ. ಹಾಗಿದ್ದರೆ ಕಿರ್ಗಿಸ್ತಾನದ ಯುವಜನರು ದಕ್ಷಿಣ ಏಷ್ಯಾ ದೇಶಗಳಿಗೆ ಸೇರಿದ ವೈದ್ಯಕೀಯ ವಿದ್ಯಾರ್ಥಿಗಳಿಗೆ ಉದ್ದೇಶಪೂರ್ವಕವಾಗಿ ತೊಂದರೆ ಉಂಟು ಮಾಡುತ್ತಿದ್ದಾರೆಯೇ? ಹಾಗಂತ ಅಪ್ಪಿತಪ್ಪಿಯೂ ಹೇಳಲಾಗದು. ಕಿರ್ಗಿಸ್ತಾನದಲ್ಲಿ ವೈದ್ಯಕೀಯ ಶಿಕ್ಷಣದ ವೆಚ್ಚ ಕಡಿಮೆ ಇರುವುದರಿಂದ ಭಾರತ, ಪಾಕಿಸ್ತಾನ, ಬಾಂಗ್ಲಾದಂತಹ ದೇಶಗಳಿಂದ ವಿದ್ಯಾರ್ಥಿಗಳು ಸಹಜವಾಗಿಯೇ ಅಲ್ಲಿ ಕಲಿಯಲು ತೆರಳುತ್ತಾರೆ. ಆದರೆ ಈ ದೇಶಗಳ ವಿದ್ಯಾರ್ಥಿಗಳನ್ನು ಈಜಿಪ್ಟ್ ವಿದ್ಯಾರ್ಥಿಗಳೆಂದು ತಪ್ಪಾಗಿ ಭಾವಿಸಿ ಅವರ ಮೇಲೂ ಹಲ್ಲೆ ನಡೆಸಿರಬಹುದು. ಇದಕ್ಕೆ ಕಿರ್ಗಿಸ್ತಾನ ದೇಶವನ್ನೇ ಅಪರಾಧಿ ಸ್ಥಾನದಲ್ಲಿ ನಿಲ್ಲಿಸುವುದು ಸರಿಯಲ್ಲ.

ನಮ್ಮ ದೇಶದಲ್ಲಿ ಕಲಿಯಲು ವಿದ್ಯಾರ್ಥಿಗಳಿಗೆ ಪುಣೆ ಮತ್ತು ಬೆಂಗಳೂರು ಅಚ್ಚುಮೆಚ್ಚಿನ ತಾಣಗಳಾಗಿವೆ. ಪುಣೆಯಲ್ಲಿ ಹಿಂದೆ ಶಿಕ್ಷಣ ಪಡೆದ ವ್ಯಕ್ತಿಯು ಬಳಿಕ ಒಮನ್ ದೇಶದ ರಾಜರಾಗಿದ್ದರು. ಯಾವ ಯಾವ ಶಿಕ್ಷಣ ಸಂಸ್ಥೆಗಳಲ್ಲಿ ಭವಿಷ್ಯದ ದಿಗ್ಗಜರು ಇರುವರೋ ಎಂಬುದು ಗೊತ್ತಿರುವುದಿಲ್ಲ. ಅಚಾನಕ್ ಆಗಿ ನಡೆದಿರುವ ಕಿರ್ಗಿಸ್ತಾನ ಪ್ರಕರಣಕ್ಕೆ ಸಂಬಂಧಿಸಿದಂತೆ ಆ ದೇಶದ ಮೇಲೆ ಆರೋಪ ಹೊರಿಸಬೇಕಾಗಿಲ್ಲ. ಆದರೂ ಮುಂದಿನ ದಿನಗಳಲ್ಲಿ ಕಿರ್ಗಿಸ್ತಾನ ಸರ್ಕಾರವು ವಿದೇಶಿ ವಿದ್ಯಾರ್ಥಿಗಳ ಬಗ್ಗೆ ಸೂಕ್ತ ಗಮನಹರಿಸಿ, ಅವರಿಗೆ ರಕ್ಷಣೆ ಒದಗಿಸಲಿ ಎಂದು ಆಗ್ರಹಿಸೋಣ.

ಚಂದ್ರಕಾಂತ ನಾಮಧಾರಿ, ಅಂಕೋಲಾ, ಉತ್ತರ ಕನ್ನಡ

ಮೌಲ್ಯಯುತ ಶಿಕ್ಷಣದ ಕೊರತೆ, ನೈತಿಕ ದಿವಾಳಿತನ

ಹಣ, ಅಧಿಕಾರ ಮತ್ತು ಜಾತಿ ಬಲದಿಂದ ಒಬ್ಬ ವ್ಯಕ್ತಿ ಹೇಗೆ ತನ್ನ ವಿವೇಚನೆ ಕಳೆದುಕೊಳ್ಳಬಹುದು, ಸಮಾಜಕ್ಕೆ ಕಂಟಕನಾಗಬಹುದು ಎಂಬುದಕ್ಕೆ, ಪ್ರಜ್ವಲ್ ರೇವಣ್ಣ ಲೈಂಗಿಕ ಹಗರಣಕ್ಕೆ ಸಂಬಂಧಿಸಿದ ಸಂತ್ರಸ್ತೆಯರ ಸಂಕಟವನ್ನು ಬಿಂಬಿಸುವ ಸಂಧ್ಯಾ ಹೆಗಡೆ ಅವರ ಲೇಖನ (ಪ್ರ.ವಾ., ಮೇ 20) ನಿದರ್ಶನ. ಈ ಸಂತ್ರಸ್ತೆಯರು ಸಮಾಜವನ್ನು ಎದುರಿಸಲಾಗದೆ, ತಮ್ಮ ನೋವನ್ನು ಬಹಿರಂಗವಾಗಿ ತೋಡಿಕೊಳ್ಳಲಾಗದೆ ಮೂಕವಾಗಿ ರೋದಿಸುತ್ತಿರುವುದು ಈಗಿನ ವ್ಯವಸ್ಥೆಗೆ ಹಿಡಿದ ಕನ್ನಡಿಯಾಗಿದೆ. ಇದೆಲ್ಲದರ ಹಿಂದೆ ಕಾಣುವುದು ಆರೋಪಿಯ ನೈತಿಕ ದಿವಾಳಿತನ.

ಮಕ್ಕಳಿಗೆ ಸರಿಯಾದ ಮೌಲ್ಯಯುತ ಶಿಕ್ಷಣ, ಸಂಸ್ಕಾರವನ್ನು ನೀಡದೆ ಅತಿಯಾದ ಕಕ್ಕುಲತೆ ತೋರುವ, ಅವರು ಮಾಡಿದ್ದೆಲ್ಲ ಸೈ ಎಂದು ಬೆನ್ನು ತಟ್ಟುವ ಮನೋಭಾವ ಇರುವವರೆಗೂ ಮಕ್ಕಳು ಸಮಾಜಕ್ಕೆ ಮಾತ್ರ ಕಂಟಕವಲ್ಲ ತಮಗೂ ಸೆರಗಿನ ಕೆಂಡವಾಗುತ್ತಾರೆ ಎಂಬ ಸತ್ಯವನ್ನು ಈ ಪ್ರಕರಣದಿಂದ ಎಲ್ಲ ತಂದೆ ತಾಯಿಯೂ ಮನಗಾಣಬೇಕು.

ಜಗದೀಶ ಎಲ್.ಎಂ., ಹುಬ್ಬಳ್ಳಿ

ಫಲಿತಾಂಶ ಕುಸಿತ: ಕಾರಣ ಹುಡುಕೋಣ

ಮೊರಾರ್ಜಿ ದೇಸಾಯಿ ವಸತಿ ಶಾಲೆಯ ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿನಿ ರಾಜ್ಯಕ್ಕೆ ಟಾಪರ್ ಆಗಿರುವುದಕ್ಕೆ ಆಕೆಗೆ ಪ್ರೋತ್ಸಾಹಧನ ಮತ್ತು ಆಕೆ ಓದಿದ ಶಾಲೆಯ ಅಭಿವೃದ್ಧಿಗೆ ₹ 1 ಕೋಟಿ ಅನುದಾನವನ್ನು ರಾಜ್ಯ ಸರ್ಕಾರ ಕೊಟ್ಟಿರುವುದು ಶ್ಲಾಘನೀಯ. ಈಗಾಗಲೇ ತಾವು ಓದಿದ ಶಾಲೆಗೆ ಹಳೆಯ ವಿದ್ಯಾರ್ಥಿಗಳು ನೆರವಾಗುವ 'ನನ್ನ ಶಾಲೆ ನನ್ನ ಜವಾಬ್ದಾರಿ' ಎನ್ನುವ ಯೋಜನೆ ರೂಪಿಸಿರುವ ಸರ್ಕಾರ, ಸರ್ಕಾರಿ ಶಾಲಾ ಕಾಲೇಜುಗಳಿಗೆ ಉಚಿತ ವಿದ್ಯುತ್ ಮತ್ತು ನೀರನ್ನು ಒದಗಿಸುವ ಘೋಷಣೆಯನ್ನೂ ಮಾಡಿದೆ. ಇದರ ಜೊತೆಗೆ ಸರ್ಕಾರಿ ಶಾಲಾ ಕಾಲೇಜುಗಳ ಫಲಿತಾಂಶದ ಹಿನ್ನಡೆಗೆ, ದಾಖಲಾತಿಯ ಕುಸಿತಕ್ಕೆ ಕಾರಣಗಳನ್ನು ಕಂಡುಕೊಂಡು ಅದಕ್ಕೆ ಪರಿಹಾರಗಳನ್ನು ಸೂಚಿಸಿ, ಸರ್ಕಾರಿ ಶಾಲೆಗಳ ಬಗ್ಗೆ ಸಾರ್ವಜನಿಕರಿಗೆ ನಂಬಿಕೆ ಬರುವಂತೆ ಮಾಡಬೇಕಾದುದು ಇಂದಿನ ತುರ್ತು.

ಈ ಬಾರಿಯ ಎಸ್‌ಎಸ್‌ಎಲ್‌ಸಿ ಫಲಿತಾಂಶದ ಪ್ರಮಾಣ ಕುಸಿದಿರುವುದಕ್ಕೆ ಶಿಕ್ಷಕರು ಕಾರಣರೋ ಬೋಧನೆಯಿಂದಾಚೆಯ ಕೆಲಸಗಳಲ್ಲಿ ಶಿಕ್ಷಕರನ್ನು ತೊಡಗುವಂತೆ ಮಾಡಿರುವ ಸರ್ಕಾರದ ಯೋಜನೆಗಳು ಕಾರಣವೋ ಸಾಧಾರಣ ಕಲಿಕಾ ಮಟ್ಟವಿರುವ ವಿದ್ಯಾರ್ಥಿಗಳಷ್ಟೇ ಸರ್ಕಾರಿ ಶಾಲೆಗಳಿಗೆ ದಾಖಲಾಗುವುದು ಕಾರಣವೋ ಮೂಲ ಸೌಕರ್ಯಗಳ ಕೊರತೆ ಕಾರಣವೋ ಎಂಬುದನ್ನು ಮೊದಲು ಕಂಡುಕೊಳ್ಳಬೇಕು. ನಂತರ ಸರ್ಕಾರದ ಯೋಜನೆಗಳು ಕಾರ್ಯರೂಪಕ್ಕೆ ಬರುತ್ತಿವೆಯೇ ಎಂಬುದರ ಮೇಲೆ ನಿಗಾ ವಹಿಸಲು, ಈಗ ಎಸ್‌ಎಸ್‌ಎಲ್‌ಸಿ ಪರೀಕ್ಷೆಯನ್ನು ನಡೆಸಿದಂತೆ ವೆಬ್‌ಕಾಸ್ಟಿಂಗ್ ವ್ಯವಸ್ಥೆಯನ್ನು ಜಾರಿಗೆ ತರಬೇಕು. ಇದರ ಜೊತೆಗೆ, ಸರ್ಕಾರದ ಭಾಗವಾಗಿರುವ ರಾಜಕಾರಣಿಗಳು, ಅಧಿಕಾರಿಗಳು, ಶಿಕ್ಷಕರು ತಮ್ಮ ಮಕ್ಕಳನ್ನು ಸರ್ಕಾರಿ ಶಾಲಾ ಕಾಲೇಜುಗಳಿಗೆ ಸೇರಿಸುವಂತೆ ಆಗಬೇಕು. ಇಷ್ಟಾದರೆ ಸರ್ಕಾರಿ ಶಾಲಾ ಕಾಲೇಜುಗಳ ಬಲವರ್ಧನೆ ಆಗಬಲ್ಲದು, ಶಿಕ್ಷಣ ಸರ್ವರ ಸ್ವತ್ತಾಗಬೇಕೆಂಬ ಸಂವಿಧಾನದ ಆಶಯ ಈಡೇರಬಲ್ಲದು.

ರೇವಣ್ಣ ಎಂ.ಜಿ., ಕೃಷ್ಣರಾಜಪೇಟೆ, ಮಂಡ್ಯ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ನ್ಯಾಯಾಂಗದಲ್ಲಿದ್ದವರು ಅಧಿಕಾರ ಸ್ಥಾನಕ್ಕೇರಿದಾಗ...

ಪ್ರಜಾವಾಣಿ ವಾರ್ತೆ

'ನಾನು ಅಂದು-ಇಂದು ಎಂದಿಗೂ ರಾಷ್ಟ್ರೀಯ ಸ್ವಯಂ ಸೇವಕ ಸಂಘದ (ಆರ್‌ಎಸ್‌ಎಸ್) ಸದಸ್ಯನೇ ಆಗಿದ್ದೇನೆ. ಈಗ ಮತ್ತೊಮ್ಮೆ ಸಂಘದ ಕಾರ್ಯಚಟುವಟಿಕೆಗಳಲ್ಲಿ ತೊಡಗಿಕೊಳ್ಳಲು ಸಿದ್ಧನಿದ್ದೇನೆ' ಎಂದು ನಿವೃತ್ತ ಮುಖ್ಯ ನ್ಯಾಯಮೂರ್ತಿ ಚಿತ್ತರಂಜನ್ ದಾಸ್ ಹೇಳಿದ್ದಾರೆ. ಕಲ್ಕತ್ತಾ ಹೈಕೋರ್ಟ್‌ನಿಂದ ಇತ್ತೀಚೆಗೆ ದಾಸ್ ಅವರು ನಿವೃತ್ತರಾಗಿದ್ದರು ಮತ್ತು ತಮ್ಮ ಬೀಳ್ಕೊಡುಗೆ ಸಮಾರಂಭದಲ್ಲಿ ಅವರು ಹೀಗೆ ಹೇಳಿದ್ದಾರೆ.

ಇದೇ ನ್ಯಾಯಾಲಯದ ನ್ಯಾಯಮೂರ್ತಿ ಅಭಿಜಿತ್ ಗಂಗೋಪಾಧ್ಯಾಯ ಅವರು ತಮ್ಮ ನಿವೃತ್ತಿಗೆ ಕೆಲವೇ ತಿಂಗಳ ಮೊದಲು ಕೆಲಸಕ್ಕೆ ರಾಜೀನಾಮೆ ನೀಡಿ, ಬಿಜೆಪಿ ಸೇರ್ಪಡೆಗೊಂಡಿದ್ದರು. ರಾಜೀನಾಮೆ ನೀಡುವ ಮೊದಲೇ, ತಾವು ಬಿಜೆಪಿ ಸೇರುವುದಾಗಿ ಸಾರ್ವಜನಿಕವಾಗಿಯೇ ಹೇಳಿದ್ದರು. ಈಗ ಅವರು ಬಿಜೆಪಿಯ ಟಿಕೆಟ್‌ನೊಂದಿಗೆ ಲೋಕಸಭೆಗೆ ಸ್ಪರ್ಧಿಸುತ್ತಿದ್ದಾರೆ.

ಕಳೆದ 10 ವರ್ಷಗಳಲ್ಲಿ ಇಂಥ ಹಲವು ಉದಾಹರಣೆಗಳನ್ನು ಪಟ್ಟಿ ಮಾಡಬಹುದು. ಹಾಗಾದರೆ, 10 ವರ್ಷಗಳ ಹಿಂದೆ ಈ ರೀತಿ ನಡೆದಿಲ್ಲವೇ ಎಂದು ಕೇಳಿದರೆ, ಆಗ ನಡೆದ ಇಂಥ ಹಲವು ಘಟನೆಗಳನ್ನು ಉದಾಹರಿಸಬಹುದು. ನ್ಯಾಯಮೂರ್ತಿಗಳು ಹಲವು ಚುನಾವಣೆಯಲ್ಲಿ ಸ್ಪರ್ಧಿಸಿ ಗೆದ್ದು, ಸಚಿವರೂ ಆಗಿದ್ದಾರೆ. ರಾಜ್ಯಪಾಲರಾಗಿದ್ದಾರೆ.

ನ್ಯಾಯ ನೀಡುವ ಸ್ಥಾನದಲ್ಲಿರುವವರು ಯಾವುದೇ ಒಂದು ಪಕ್ಷಕ್ಕೆ, ಸಿದ್ಧಾಂತಕ್ಕೆ ವಾಲುವುದು ಇಡೀ ನ್ಯಾಯಾಂಗ ವ್ಯವಸ್ಥೆ ಮೇಲೆಯೇ ಅನುಮಾನ ಮೂಡುವಂತೆ ಮಾಡುವುದಿಲ್ಲವೇ ಎನ್ನುವ ಚರ್ಚೆ ಕೂಡ ಹಲವು ದಶಕಗಳಿಂದ ಇದ್ದೇ ಇದೆ. ಆದರೆ, ಸಂವಿಧಾನದ ಪ್ರಕಾರ ಯಾವ ವ್ಯಕ್ತಿಯನ್ನೂ ಚುನಾವಣೆಗೆ ಸ್ಪರ್ಧಿಸುವುದರಿಂದ, ರಾಜಕೀಯ ಪಕ್ಷಗಳಿಗೆ ಸೇರುವುದರಿಂದ ತಡೆಯಲು ಸಾಧ್ಯವಿಲ್ಲ. ನ್ಯಾಯಮೂರ್ತಿಗಳೂ ಇದಕ್ಕೆ ಹೊರತಲ್ಲ. ಆದರೆ, ನಿವೃತ್ತಿಯಾದ ಬಳಿಕ ಅಥವಾ ನಿವೃತ್ತಿಗೆ ಕೆಲವು ತಿಂಗಳಿದೆ ಎನ್ನುವಾಗ ಕೆಲಸಕ್ಕೆ ರಾಜೀನಾಮೆ ನೀಡಿ ತಕ್ಷಣವೇ ರಾಜಕೀಯ ಪಕ್ಷಗಳಿಗೆ ಸೇರಿಕೊಳ್ಳುವುದು, ನೈತಿಕವೇ ಎಂಬ ದೃಷ್ಟಿಯಿಂದಲೂ ನ್ಯಾಯಮೂರ್ತಿಗಳು ಯೋಚಿಸಬೇಕು ಎನ್ನುವ ವಾದವೂ ಇದೆ. ಹೀಗಾಗಿಯೇ ವಿರಾಮ ಕಾಲ (ಕೂಲಿಂಗ್ ಆಫ್ ಪೀರಿಯಡ್) ಎನ್ನುವ ವಿಚಾರವು ಪ್ರಾಮುಖ್ಯ ಪಡೆದುಕೊಂಡಿದೆ.

ಸಂವಿಧಾನ ಕರಡು ರಚನಾ ಸಭೆಯಲ್ಲಿಯೂ ಚರ್ಚೆ

ಸುಪ್ರೀಂ ಕೋರ್ಟ್ ಮತ್ತು ಹೈಕೋರ್ಟ್ ನ್ಯಾಯಮೂರ್ತಿಗಳು ಕೇಂದ್ರ ಅಥವಾ ರಾಜ್ಯ ಸರ್ಕಾರದ ಆಡಳಿತಾತ್ಮಕ ಹುದ್ದೆಗೆ ನೇಮಕವಾಗುವುದನ್ನು ತಡೆಯುವ ನಿಯಮ ರೂಪಿಸಬೇಕು ಎಂಬ ಪ್ರಸ್ತಾವವನ್ನು ಕೆ.ಟಿ. ಶಾ ಅವರು ಸಂವಿಧಾನ ಕರಡು ರಚನಾ ಸಮಿತಿ ಸಭೆಯ ಮುಂದಿಡುತ್ತಾರೆ. ಇದರಿಂದ ನ್ಯಾಯಾಂಗ ಸ್ವಾಯಂತ್ರ್ಯವನ್ನು ಕಾಪಾಡಬಹುದು ಎಂದೂ ಪ್ರತಿಪಾದಿಸುತ್ತಾರೆ. ಈ ಪ್ರಸ್ತಾವವನ್ನು ಕೆ.ವಿ. ಕಾಮತ್ ಹಗೂ ಶಿಬನ್ ಲಾಲ್ ಸಕ್ಸೇನಾ ಅವರೂ ಬೆಂಬಲಿಸುತ್ತಾರೆ.

'ಕೇಂದ್ರ ಹಾಗೂ ರಾಜ್ಯಗಳು ಮತ್ತು ರಾಜ್ಯ-ರಾಜ್ಯಗಳ ನಡುವಣ ವ್ಯಾಜ್ಯಗಳು ಮತ್ತು ಸಾಂವಿಧಾನಿಕ ವ್ಯಾಜ್ಯಗಳ ಕುರಿತು ಸಂಧಾನ ಮತ್ತು ನ್ಯಾಯತೀರ್ಮಾನಗಳನ್ನು ಸುಪ್ರೀಂ ಕೋರ್ಟ್ ಮಾಡಬೇಕಾಗುತ್ತದೆ. ಇಂತಹ ಹಲವು ಪ್ರಕರಣಗಳಲ್ಲಿ ಕೇಂದ್ರ ಸರ್ಕಾರವು ಹಿತಾಸಕ್ತ ಆಗಿರಬಹುದು. ಸುಪ್ರೀಂ ಕೋರ್ಟ್ ಮುಂದೆ ಇರುವ ಹಲವು ಪ್ರಕರಣಗಳು ರಾಷ್ಟ್ರಪತಿ ಅಥವಾ ಕೇಂದ್ರ ಸರ್ಕಾರಕ್ಕೆ ಮಹತ್ವದ್ದು ಹಾಗೂ ಹಿತಾಸಕ್ತಿ ಇರುವುದೂ ಆಗುವುದು ಸಾಮಾನ್ಯ. ಇಂತಹ ವಿಚಾರಗಳಲ್ಲಿ ನಿರ್ದಿಷ್ಟವಾದ ತೀರ್ಪನ್ನು ಸುಪ್ರೀಂ ಕೋರ್ಟ್ ನೀಡಬೇಕು ಎಂದು ಅವರು ಬಯಸಬಹುದು' ಎಂದು ಪ್ರತಿಪಾದಿಸುತ್ತಾರೆ ಕೆ.ವಿ. ಕಾಮತ್. ನ್ಯಾಯಮೂರ್ತಿಗಳು ರಾಜಕಾರಣಕ್ಕೆ ಬರುವುದಕ್ಕೆ ನಿರ್ಬಂಧ ಇರಬೇಕು ಎಂಬುದಕ್ಕೆ ಕಾಮತ್ ಅವರ ಸಮರ್ಥನೆ ಇದು.

ಆದರೆ, ಬಿ.ಆರ್. ಅಂಬೇಡ್ಕರ್ ಅವರು ಈ ವಾದವನ್ನು ಒಪ್ಪುವುದಿಲ್ಲ. '...ನ್ಯಾಯಾಂಗವು ಸರ್ಕಾರದ ವಿಚಾರದಲ್ಲಿ ಹೆಚ್ಚು ಆಸಕ್ತವಾಗಿ ಇರುವುದಿಲ್ಲ: ಜನರ ಹಕ್ಕುಗಳಿಗೆ ಸಂಬಂಧಿಸಿದ ವ್ಯಾಜ್ಯಗಳನ್ನು ಪರಿಹರಿಸುವುದು, ಕೇಂದ್ರ ಸರ್ಕಾರ ಮತ್ತು ರಾಜ್ಯಗಳ ಹಕ್ಕುಗಳಿಗೆ ಸಂಬಂಧಿಸಿದ ವ್ಯಾಜ್ಯಗಳನ್ನು ಪರಿಹರಿಸುವುದರಲ್ಲಿಯೇ ಸುಪ್ರೀಂ ಕೋರ್ಟ್ ಹೆಚ್ಚು ಆಸಕ್ತವಾಗಿ ಇರುತ್ತದೆ... ನ್ಯಾಯಾಂಗದ ಮೇಲೆ ಸರ್ಕಾರವು ಪ್ರಭಾವ ಬೀರುವ ಅವಕಾಶಗಳು ಬಹಳ ಕಡಿಮೆ. ಹಾಗಾಗಿಯೇ, ಇತರ ಹುದ್ದೆಗಳನ್ನು ಹೊಂದುವುದರಿಂದ ಇವರನ್ನು ಅನರ್ಹಗೊಳಿಸುವುದು ಸ್ಪಷ್ಟವಾಗಿ ಸೈದ್ಧಾಂತಿಕ ಕಾರಣವಷ್ಟೇ ಆಗುತ್ತದೆ ಮತ್ತು ಹಾಗೆ ಮಾಡುವುದು ಅತಿರೇಕ ಎಂದು ನನಗೆ ಅನಿಸುತ್ತದೆ' ಎಂದು ಅಂಬೇಡ್ಕರ್ ಹೇಳಿದ್ದಾರೆ.




ಏನಿದು ವಿರಾಮ ಕಾಲ?

'ನಿವೃತ್ತಿಯ ಬಳಿಕ ರಾಜಕೀಯ ಪಕ್ಷಗಳಿಗೆ ಸೇರಿಕೊಳ್ಳಬೇಕು ಅಥವಾ ಆಡಳಿತಾತ್ಮಕ ಹುದ್ದೆಗಳನ್ನು ಪಡೆಯಬೇಕು ಎಂದು ಬಯಸುವ ನ್ಯಾಯಮೂರ್ತಿಗಳು ಕನಿಷ್ಠ ಎರಡು ವರ್ಷ ವಿರಾಮ ಕಾಲದಲ್ಲಿ (ಕೂಲಿಂಗ್ ಆಫ್ ಪೀರಿಯಡ್) ಇರಬೇಕು' ಎಂದು ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿಯಾಗಿದ್ದ ಆರ್.ಎಂ. ಲೋಢಾ ಅವರು ಒಮ್ಮೆ ಅಭಿಪ್ರಾಯಪಟ್ಟಿದ್ದರು. ಐಎಎಸ್, ಐಪಿಎಸ್ ಅಧಿಕಾರಿಗಳು ತಮ್ಮ ಕೆಲಸಕ್ಕೆ ರಾಜೀನಾಮೆ ನೀಡಿ ತಕ್ಷಣವೇ ರಾಜಕೀಯ ಪಕ್ಷಗಳಿಗೆ ಸೇರಿಕೊಳ್ಳುವ ಪ್ರಕರಣಗಳು ಅಧಿಕವಾಗ ತೊಡಗಿವೆ. ವೃತ್ತಿಯೇತರ ಅಭಿಪ್ರಾಯ, ಹಿತಾಸಕ್ತಿಗಳು ಅವರ ಕೆಲಸದಲ್ಲಿಯೂ ಪ್ರಭಾವ ಬೀರುತ್ತವೆ ಎಂಬೆಲ್ಲಾ ಕಾರಣಗಳನ್ನು ನೀಡಿ ಅಧಿಕಾರಿಗಳು ರಾಜೀನಾಮೆ ಕೊಟ್ಟ ತಕ್ಷಣದಲ್ಲಿಯೇ ಪಕ್ಷಗಳಿಗೆ ಸೇರಿಕೊಳ್ಳುವುದನ್ನು ತಡೆಯಬೇಕು ಎಂದು ಚುನಾವಣಾ ಆಯೋಗ 2012ರಲ್ಲಿ ಕೋರಿತ್ತು.

ಆಯೋಗದ ಕೋರಿಕೆಯನ್ನು ಅಂದಿನ ಕೇಂದ್ರ ಸರ್ಕಾರವು ತಳ್ಳಿ ಹಾಕಿತ್ತು. ಅಂದಿನ ಅಟಾರ್ನಿ ಜನರಲ್ ಜಿ.ಇ. ವಹನ್ವತಿ ಅವರ ಅಭಿಪ್ರಾಯವನ್ನು ಪಡೆದುಕೊಂಡೇ ಕೋರಿಕೆಯನ್ನು ತಳ್ಳಿ ಹಾಕುತ್ತಿರುವುದಾಗಿ ಕೇಂದ್ರ ಹೇಳಿತ್ತು. 'ಯಾವುದೇ ವ್ಯಕ್ತಿಯನ್ನು ಚುನಾವಣೆಯಲ್ಲಿ ಸ್ಪರ್ಧಿಸುವುದನ್ನು ತಡೆಯುವುದು, ರಾಜಕೀಯ ಪಕ್ಷಗಳಿಗೆ ಸೇರುವುದನ್ನು ತಡೆಯುವುದು ಸಂವಿಧಾನದ 14ನೇ ವಿಧಿಗೆ ವಿರುದ್ಧವಾದುದು' ಎಂದು ವಹನ್ವತಿ ಅವರು ಅಭಿಪ್ರಾಯಪಟ್ಟಿದ್ದರು.

ಈ ಎರಡೂ ವಿಚಾರಗಳನ್ನು ಪರಿಗಣಿಸುವಂತೆ ಮತ್ತು ಇವುಗಳನ್ನು ಜಾರಿಗೆ ತರಲು ನಿರ್ದೇಶಿಸುವಂತೆ ಕೋರಿ ಸುಪ್ರೀಂ ಕೋರ್ಟ್‌ನಲ್ಲಿ ಹಲವು ಅರ್ಜಿಗಳು ದಾಖಲಾಗಿದ್ದವು. ಆದರೆ, ಎಲ್ಲ ಅರ್ಜಿಗಳನ್ನೂ ಸುಪ್ರೀಂ ಕೋರ್ಟ್ ವಜಾ ಮಾಡಿದೆ. 'ನಿವೃತ್ತಿಯ ನಂತರ ಬೇರೆ ಹುದ್ದೆಗಳನ್ನು ಪಡೆದುಕೊಂಡರೆ, ನ್ಯಾಯಮೂರ್ತಿಯಾಗಿದ್ದಾಗ ಯಾವುದೋ ಸ್ಥಾನವನ್ನು ದೃಷ್ಟಿಯಲ್ಲಿ ಇರಿಸಿಕೊಂಡೇ ನ್ಯಾಯದಾನ ಮಾಡಿದ್ದಾರೆ ಎನ್ನುವಂಥ ತಪ್ಪುಕಲ್ಪನೆಯು ಜನರಲ್ಲಿ ರೂಪುಗೊಳ್ಳುತ್ತದೆ. ಅದಕ್ಕಾಗಿಯೇ ನಿವೃತ್ತಿಯ ಬಳಿಕವೇ ರಾಜಕೀಯ ಪಕ್ಷವೊಂದಕ್ಕೆ ನ್ಯಾಯಮೂರ್ತಿಗಳು ಸೇರಿಕೊಳ್ಳುವುದನ್ನು ತಡೆಯಬೇಕು' ಎಂದು ಬಾಂಬೆ ವಕೀಲರ ಸಂಘವು ಸುಪ್ರೀಂ ಕೋರ್ಟ್ ಅನ್ನು ಕೋರಿತ್ತು. ಈ ಅರ್ಜಿ ವಜಾ ಮಾಡಿದ ನ್ಯಾಯಾಲಯವು, 'ನಿವೃತ್ತಿಯ ನಂತರ ಯಾವುದೇ ಸ್ಥಾನವನ್ನು ಪಡೆಯಬೇಕೋ ಬೇಡವೋ ಎನ್ನುವುದು ಆಯಾ ನ್ಯಾಯಮೂರ್ತಿಯ ವಿವೇಚನೆಗೆ ಬಿಟ್ಟ ವಿಚಾರ. ಈ ಕುರಿತು ಕಾನೂನೊಂದನ್ನು ರೂಪಿಸಬೇಕೇ ಬೇಡವೇ ಎನ್ನುವುದು ಕೂಡ ನ್ಯಾಯಾಲಯದ ವ್ಯಾಪ್ತಿಗೆ ಬರದ ವಿಚಾರ' ಎಂದಿತ್ತು.

ರಾಜಕೀಯಕ್ಕೆ ಇಳಿದ ನ್ಯಾಯಮೂರ್ತಿಗಳು



ಬಹರುಲ್ ಇಸ್ಲಾಂ: ಇವರು ಕಾಂಗ್ರೆಸ್‌ನ ರಾಜ್ಯಸಭಾ ಸದಸ್ಯರಾಗಿದ್ದರು ಜೊತೆಯಲ್ಲಿ ವಕೀಲಿಕೆಯನ್ನೂ ಮಾಡುತ್ತಿದ್ದರು. ನಂತರ, 1972ರಲ್ಲಿ ಗುವಾಹಟಿಯ ನ್ಯಾಯಮೂರ್ತಿ ಆಗುವ ಸಲುವಾಗಿ ರಾಜ್ಯಸಭೆಗೆ ರಾಜೀನಾಮೆ ನೀಡಿದರು. ನಂತರ, ಸುಪ್ರೀಂ ಕೋರ್ಟ್‌ನ ನ್ಯಾಯಮೂರ್ತಿಯಾಗಿದ್ದರು. 1983ರಲ್ಲಿ ನಿವೃತ್ತರಾಗಬೇಕಿತ್ತು. ಅದಕ್ಕೂ ಮುನ್ನವೇ ಸ್ಥಾನಕ್ಕೆ ರಾಜೀನಾಮೆ ನೀಡಿ ಕಾಂಗ್ರೆಸ್‌ನಿಂದ ರಾಜ್ಯಸಭೆಗೆ ಎರಡನೇ ಬಾರಿಗೆ ಆಯ್ಕೆ ಆಗುತ್ತಾರೆ.

ಕೆ. ಸುಬ್ಬರಾವ್ ಮತ್ತು ಮೊಹಮ್ಮದ್ ಹಿದಾಯತುಲ್ಲಾ:



ಕೆ.ಸುಬ್ಬರಾವ್


ಸುಬ್ಬರಾವ್ ಅವರು ಸುಪ್ರೀಂ ಕೋರ್ಟ್‌ನ ಮುಖ್ಯನ್ಯಾಯಮೂರ್ತಿ ಸ್ಥಾನಕ್ಕೆ 1967ರಲ್ಲಿ ರಾಜೀನಾಮೆ ನೀಡಿದ್ದರು. ಬಳಿಕ, ರಾಷ್ಟ್ರಪತಿ ಚುನಾವಣೆಯಲ್ಲಿ ಸ್ಪರ್ಧಿಸಿದ್ದರು. ಜಾಕಿರ್ ಹುಸೇನ್ ಖಾನ್ ಅವರ ವಿರುದ್ಧ ಸೋತರು. ಜಾಕಿರ್ ಹುಸೇನ್ ಖಾನ್ ಅವರು 1969ರಲ್ಲಿ ಮೃತಪಟ್ಟಾಗ ತುಸು ಅವಧಿಗೆ ಮೊಹಮ್ಮದ್ ಹಿದಾಯತುಲ್ಲಾ ಅವರು ಹಂಗಾಮಿ ರಾಷ್ಟ್ರಪತಿಯಾಗಿ ಕಾರ್ಯನಿರ್ವಹಿಸುತ್ತಾರೆ. ಈ ವೇಳೆ ಅವರು ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿಯಾಗಿದ್ದರು. ನಂತರ, 1979ರಲ್ಲಿ ಪೂರ್ಣ ಅವಧಿಗೆ ಉಪರಾಷ್ಟ್ರಪತಿಯಾಗುತ್ತಾರೆ.



ಮೊಹಮ್ಮದ್ ಹಿದಾಯತುಲ್ಲಾ



ಕೆ.ಎಸ್. ಹೆಗ್ಡೆ: ಸುಪ್ರೀಂ ಕೋರ್ಟ್‌ನ ನ್ಯಾಯಮೂರ್ತಿಯಾಗಿದ್ದರು. 1973ರಲ್ಲಿ ರಾಜೀನಾಮೆ ನೀಡುತ್ತಾರೆ. ನಂತರ, 1977ರಲ್ಲಿ ಜನತಾ ಪಕ್ಷದಿಂದ ಗೆದ್ದು ಲೋಕಸಭೆಯ ಸ್ಪೀಕರ್ ಆಗುತ್ತಾರೆ.



ಎಂ. ರಾಮಾ ಜೋಯಿಸ್: 1992ರಲ್ಲಿ ಪಂಜಾಬ್-ಹರಿಯಾಣ ಹೈಕೋರ್ಟ್‌ನ ಮುಖ್ಯ ನ್ಯಾಯಮೂರ್ತಿಯಾದರು. ಅದೇ ವರ್ಷ ರಾಜೀನಾಮೆ ನೀಡಿದರು. 2002-2003ರವರೆಗೆ ಜಾರ್ಖಂಡ್‌ನ ಹಾಗೂ 2003-2004ರವರೆಗೆ ಬಿಹಾರದ ರಾಜ್ಯಪಾಲರಾಗಿದ್ದರು. 2008ರಿಂದ 2014ರವರೆಗೆ ಬಿಜೆಪಿಯಿಂದ ರಾಜ್ಯಸಭಾ ಸದಸ್ಯರಾಗಿದ್ದರು.



ಪಿ.ಸದಾಶಿವಂ: 2013ರಿಂದ 2014ರ ಅಲ್ಪಾವಧಿಗೆ ಸದಾಶಿವಂ ಅವರು ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿಯಾಗಿದ್ದರು. ನಿವೃತ್ತಿಯ ತಕ್ಷಣವೇ ಅವರನ್ನು ಕೇರಳದ ರಾಜ್ಯಪಾಲರನ್ನಾಗಿ ನೇಮಿಸಲಾಗುತ್ತದೆ.



ರಂಜನ್ ಗೊಗೊಯಿ: ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿಯಾಗಿದ್ದ ರಂಜನ್ ಗೊಗೊಯಿ ಅವರು 2019ರಲ್ಲಿ ನಿವೃತ್ತರಾಗುತ್ತಾರೆ. ನಾಲ್ಕೇ ತಿಂಗಳ ಬಳಿಕ, 2020ರಲ್ಲಿ ಅವರನ್ನು ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರವು ರಾಜ್ಯಸಭಾ ಸದಸ್ಯತ್ವಕ್ಕೆ ಶಿಫಾರಸು ಮಾಡುತ್ತದೆ.



ಅಬ್ದುಲ್ ನಜೀರ್: ನಜೀರ್ ಅವರು ಸುಪ್ರೀಂ ಕೋರ್ಟ್‌ನ ನ್ಯಾಯಮೂರ್ತಿಯಾಗಿದ್ದರು. 2023ರಲ್ಲಿ ಅವರು ನಿವೃತ್ತರಾಗುತ್ತಾರೆ. ಒಂದೇ ತಿಂಗಳ ಬಳಿಕ ಅವರನ್ನು ಆಂಧ್ರ ಪ್ರದೇಶದ ರಾಜ್ಯಪಾಲರನ್ನಾಗಿ ನೇಮಕ ಮಾಡಲಾಗುತ್ತದೆ.

ಆಧಾರ: ಪಿಟಿಐ, ಹೈಕೋರ್ಟ್ ಮತ್ತು ಸುಪ್ರೀಂ ಕೋರ್ಟ್ ವೆಬ್‌ಸೈಟ್, ಬಾರ್ ಆ್ಯಂಡ್ ಬೆಂಚ್


ಸಿನಿ ಬಿಟ್ಸ್

'ಉತ್ತರಕಾಂಡ' ಪ್ರವೇಶಿಸಿದ ಶಿವರಾಜ್‌ಕುಮಾರ್

ರೋಹಿತ್ ಪದಕಿ ಆ್ಯಕ್ಷನ್ ಕಟ್ ಹೇಳುತ್ತಿರುವ 'ಉತ್ತರಕಾಂಡ' ಸಿನಿಮಾದ ಚಿತ್ರೀಕರಣ ಆರಂಭವಾಗಿದ್ದು, ನಟ ಶಿವರಾಜ್‌ಕುಮಾರ್ ಇದೀಗ ಚಿತ್ರತಂಡ ಸೇರಿಕೊಂಡಿದ್ದಾರೆ.

ವಿಜಯಪುರದಲ್ಲಿ 'ಉತ್ತರಕಾಂಡ'ದ ಮೊದಲ ಹಂತದಲ್ಲಿ 15 ದಿನಗಳ ಚಿತ್ರೀಕರಣ ಇದೀಗ ಮುಕ್ತಾಯಗೊಂಡಿದೆ. ಬೆಳಗಾವಿಯಲ್ಲಿ ಮುಂದಿನ ಹಂತದ ಚಿತ್ರೀಕರಣ ನಡೆಯಲಿದೆ ಎಂದು ಚಿತ್ರತಂಡ ತಿಳಿಸಿದೆ. ಇದೊಂದು ಆ್ಯಕ್ಷನ್ ಡ್ರಾಮಾ ಚಿತ್ರವಾಗಿದ್ದು, ಚಿತ್ರದಲ್ಲಿ ಶಿವರಾಜ್‌ಕುಮಾರ್ ಮತ್ತು ಧನಂಜಯ ಮುಖ್ಯ ಭೂಮಿಕೆಯಲ್ಲಿದ್ದಾರೆ. ಧನಂಜಯ 'ಗಬ್ರು ಸತ್ಯ'ನಾಗಿ ತೆರೆ ಮೇಲೆ ಕಾಣಿಸಿಕೊಳ್ಳಲಿದ್ದು, ಅವರ ಲುಕ್ ಹೇಗಿರಲಿದೆ ಎನ್ನುವುದನ್ನು ಟೀಸರ್ ಮೂಲಕವೇ ಚಿತ್ರತಂಡ ಹೇಳಿದೆ. ಆದರೆ ಶಿವರಾಜ್‌ಕುಮಾರ್ ಅವರ ಪಾತ್ರದ ಬಗ್ಗೆ ಚಿತ್ರತಂಡ ಗುಟ್ಟುಬಿಟ್ಟುಕೊಟ್ಟಿಲ್ಲ.

ಧನಂಜಯ ಜೋಡಿಯಾಗಿ 'ದುರ್ಗಿ' ಎಂಬ ಪಾತ್ರದಲ್ಲಿ ಐಶ್ವರ್ಯ ರಾಜೇಶ್, 'ಲಚ್ಚಿ'ಯಾಗಿ ಚೈತ್ರಾ ಜೆ.ಆಚಾರ್, 'ಮಿರ್ಚಿ ಮಲ್ಲಿಗೆ' ಎಂಬ ಪಾತ್ರದಲ್ಲಿ ದಿಗಂತ್, 'ಬಂಡೆ ಕಾಕ'ನಾಗಿ ರಂಗಾಯಣ ರಘು, 'ಧರ್ಮ'ನಾಗಿ ಗೋಪಾಲಕೃಷ್ಣ ದೇಶಪಾಂಡೆ, 'ಪಂಡ್ರಿ ಬಾಯ್'ಯಾಗಿ ಉಮಾಶ್ರೀ, 'ಪಾಟೀಲ' ಎಂಬ ಪಾತ್ರದಲ್ಲಿ ಯೋಗರಾಜ್ ಭಟ್ ಕಾಣಿಸಿಕೊಳ್ಳಲಿದ್ದಾರೆ.



ಶಿವರಾಜ್‌ಕುಮಾರ್

ಪ್ರಜಾವಾಣಿ ಕನ್ನಡ ಸಿನಿ ಸಮ್ಮಾನ

'ಪ್ರಜಾವಾಣಿ ಕನ್ನಡ ಸಿನಿ ಸಮ್ಮಾನ' ಎರಡನೇ ಆವೃತ್ತಿ ಅತಿ ಶೀಘ್ರದಲ್ಲಿ

ರಿಷಿ ಹೊಸ ಸಿನಿಮಾ

ಇತ್ತೀಚೆಗಷ್ಟೇ 'ರಾಮನ ಅವತಾರ'ವೆತ್ತಿದ ನಟ ರಿಷಿ ಮತ್ತೊಂದು ಸಿನಿಮಾ ಒಪ್ಪಿಕೊಂಡಿದ್ದಾರೆ. ಇನ್ನೂ ಹೆಸರಿಡದ ಈ ಚಿತ್ರಕ್ಕೆ 'ಸಂಜು ವೆಡ್ಸ್ ಗೀತಾ' ಚಿತ್ರವನ್ನು ನಿರ್ಮಿಸಿದ್ದ ಪ್ರಮೋದ್ ನಾರಾಯಣ್ ಬಂಡವಾಳ ಹೂಡುತ್ತಿದ್ದಾರೆ. ನಿರ್ದೇಶಕ ರಾಮ್ ಗೋಪಾಲ್ ವರ್ಮ ಅವರ ಬಳಿ ನಿರ್ದೇಶನ ವಿಭಾಗದಲ್ಲಿ ಕೆಲಸ ಮಾಡಿರುವ ಕನ್ನಡಿಗ ಕಿಶೋರ್ ಭಾರ್ಗವ್ ಆ್ಯಕ್ಷನ್ ಕಟ್ ಹೇಳುತ್ತಿದ್ದಾರೆ.

'ರಾಕಡ್ ಫಿಲಂಸ್ ಮುಂಬೈ ಲಾಂಛನದಲ್ಲಿ ಈ ಚಿತ್ರ ನಿರ್ಮಾಣವಾಗುತ್ತಿದೆ. ಈಗಾಗಲೇ ತೆಲುಗು ಚಿತ್ರವೊಂದನ್ನು ನಿರ್ದೇಶಿಸಿರುವ ಕಿಶೋರ್ ಭಾರ್ಗವ್ ಅವರಿಗೆ ಕನ್ನಡದಲ್ಲಿ ಇದು ಮೊದಲ ಚಿತ್ರ. ಆಗಸ್ಟ್‌ನಲ್ಲಿ ಚಿತ್ರೀಕರಣ ಆರಂಭವಾಗಲಿದೆ. ಶೀಘ್ರದಲ್ಲಿ ಚಿತ್ರ ಶೀರ್ಷಿಕೆ ಬಿಡುಗಡೆ ಮಾಡುತ್ತೇವೆ' ಎಂದಿದ್ದಾರೆ ನಿರ್ಮಾಪಕ ಪ್ರಮೋದ್.

ವಿಭಿನ್ನ ಕಥಾಹಂದರ ಹೊಂದಿರುವ ಈ ಚಿತ್ರ ಕನ್ನಡ ಹಾಗೂ ತೆಲುಗು ಭಾಷೆಗಳಲ್ಲಿ ನಿರ್ಮಾಣವಾಗುತ್ತಿದೆ. 'ಸೈತಾನ್' ವೆಬ್ ಸಿರೀಸ್ ಮೂಲಕ ರಿಷಿ ತೆಲುಗಿನಲ್ಲೂ ಜನಪ್ರಿಯ. ಎಲ್ಲಾ ಭಾಷೆಗಳ ಅಭಿಮಾನಿಗಳಿಗೂ ಪ್ರಿಯವಾಗುವಂತಹ ಕಥೆ ಚಿತ್ರದಲ್ಲಿರುತ್ತದೆ ಎನ್ನುತ್ತಿದೆ ಚಿತ್ರತಂಡ.



ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ

9606038256

ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ಕೆಂಪು ಬಣ್ಣದ ಮುಖಪುಟವಿರುವ ವಿನ್ಯಾಸದ ಪುಸ್ತಕವೊಂದನ್ನು ಹಿಡಿದು ತೋರಿಸಿ, ಸಂವಿಧಾನ ಉಳಿಸುವಂತೆ ಜನರಲ್ಲಿ ಕೋರುತ್ತಿರುವ ಫೋಟೊಗಳು ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೆಯಾಗುತ್ತಿದೆ ಮತ್ತು ಇದು ಭಾರತದ ಸಂವಿಧಾನ ಪುಸ್ತಕವಲ್ಲ ಬದಲಿಗೆ ಚೀನಾದ ಸಂವಿಧಾನ ಪುಸ್ತಕ ಎಂದು ಹೇಳಲಾಗುತ್ತಿದೆ. ಹಿಮಂತ್ ಬಿಸ್ವಾ ಶರ್ಮಾ ಅವರು ಹೀಗೆ ಆರೋಪಿಸಿ ಎಕ್ಸ್‌ನಲ್ಲಿ ಬರೆದುಕೊಂಡಿದ್ದರು. ಭಾರತದ ಸಂವಿಧಾನವು ನೀಲಿ ಬಣ್ಣದ ಮುಖಪುಟವನ್ನು ಹೊಂದಿದೆ. ಚೀನಾದ ಸಂವಿಧಾನ ಪುಸ್ತಕಕ್ಕೆ ಕೆಂಪು ಬಣ್ಣದ ಮುಖಪುಟವಿದೆ ಎಂದಿದ್ದರು. ಆದರೆ, ಇದು ಸುಳ್ಳು ಸುದ್ದಿ.

ರಾಹುಲ್ ಗಾಂಧಿ ಅವರು ತೋರಿಸುತ್ತಿರುವುದು ಭಾರತದ ಸಂವಿಧಾನದ ಕಿರುಹೊತ್ತಗೆಯಾಗಿದೆ. ಇದರ ಮೇಲೆ 'ಕಾನ್‌ಸ್ಟಿಟ್ಯೂಷನ್ ಆಫ್ ಇಂಡಿಯಾ' ಎಂದು ಬರೆಯಲಾಗಿದೆ. ಇಂಥ ಕಿರುಹೊತ್ತಗೆಯು ಅಮೆಜಾನ್‌ನಲ್ಲಿಯೂ ಮಾರಾಟಕ್ಕೆ ಲಭ್ಯವಿದೆ. ಪ್ರಧಾನಿ ನರೇಂದ್ರ ಮೋದಿ, ಗೃಹ ಸಚಿವ ಅಮಿತ್ ಶಾ ಅವರಿಗೂ ಉಡುಗೊರೆಯಾಗಿ ಇಂಥ ಹೊತ್ತಗೆಯನ್ನು ನೀಡಲಾಗಿದೆ. ಚೀನಾದ ಸಂವಿಧಾನದ ಕಿರುಹೊತ್ತಗೆಯ ವಿನ್ಯಾಸವು ಬೇರೆ ರೀತಿಯೇ ಇದೆ. ಆದ್ದರಿಂದ, ರಾಹುಲ್ ಹಿಡಿದಿರುವುದು ಭಾರತದ ಸಂವಿಧಾನವೇ ಆಗಿದೆ ಎಂದು ಬೂಮ್‌ಲೈವ್ ಫ್ಯಾಕ್ಟ್‌ಚೆಕ್ ಪ್ರಕಟಿಸಿದೆ.

ಗುಂಡಣ್ಣ



ನುಡಿ ಬೆಳಗು

ಜಗಕೆ ಬುದ್ಧಿ ಕಲಿಸಲು ಹೊರಟು...





ಕಲೀಮ್ ಉಲ್ಲಾ, ಕನ್ನಡ ಉಪನ್ಯಾಸಕ

ಇವರು ಒಳ್ಳೆ ಮೇಷ್ಟ್ರಾಗಿ ಹೆಸರು ಮಾಡಿದ್ದರು. ಮಕ್ಕಳು ಇವರ ಪಾಠ ಇಷ್ಟಪಡುತ್ತಿದ್ದರು. ಕಷ್ಟದಲ್ಲಿದ್ದವರಿಗೆ ಸಹಾಯ ಮಾಡುವ ಧಾರಾಳ ಗುಣವೂ ಇವರಿಗಿತ್ತು. ಆದರೆ, ತಮ್ಮ ಬಗ್ಗೆ ತಾವೇ ರೇಜಿಗೆ ಬರುವಷ್ಟು ಪ್ರಶಂಸೆ ಮಾಡಿಕೊಳ್ಳುವ ಚಾಳಿ ಇವರಲ್ಲಿತ್ತು. ಚಾಡಿ ಹೇಳುವುದು ಮತ್ತು ಕೇಳುವುದು ಎರಡೂ ಇವರಿಗಿದ್ದ ಶ್ರೇಷ್ಠ ಚಟಗಳು. ಇಬ್ಬರ ನಡುವೆ ತಂದು ಹಾಕುವುದನ್ನು ಯಾವತ್ತೂ ತಪ್ಪಿಸುತ್ತಿರಲಿಲ್ಲ. ಅಕಸ್ಮಾತ್ ಸಿಕ್ಕಿ ಬಿದ್ದರೆ ಎಲ್ಲಾ ದೇವರ ಮೇಲೆ ಆಣೆ ಪ್ರಮಾಣ ಮಾಡಿ ನುಣುಚಿಕೊಳ್ಳುತ್ತಿದ್ದರು. ಯಾರನ್ನೂ ನಂಬುತ್ತಿರಲಿಲ್ಲ, ಯಾವುದನ್ನೂ ಒಪ್ಪುತ್ತಿರಲಿಲ್ಲ. ಎಲ್ಲರಲ್ಲೂ ಏನಾದರೊಂದು ಐಬು ಹುಡುಕುತ್ತಿದ್ದರು. ಸ್ನೇಹಿತರು ಎಂದು ಇದ್ದ ಕೆಲವರನ್ನು ದೂರ ಮಾಡಿಕೊಂಡರು.

ತಮಗೆ ತಾವೇ ವೈದ್ಯ ಪದ್ಧತಿ ಮಾಡಿಕೊಳ್ಳುವ ಮತ್ತೊಂದು ಶೋಕಿ ಅವರಿಗಿತ್ತು. ಅವರ ಮನೆಗೆ ಹೋದರೆ ಥರಾವರಿ ಔಷಧಿಗಳ ಘಾಟು ಮೂಗಿಗೆ ಬಡಿಯುತ್ತಿತ್ತು. ಎಲ್ಲೆಲ್ಲಿಂದಲೋ ಅನೇಕ ರೋಗಗಳ ಮುದ್ದು ತರಿಸಿ ಜೋಪಾನ ಮಾಡುತ್ತಿದ್ದರು. ಅನೇಕರಿಗೆ ಚಿಕಿತ್ಸೆ ಕೊಟ್ಟು ವಾಸಿ ಮಾಡಿದ್ದೇನೆಂದು ತುತ್ತೂರಿ ಊದುತ್ತಿದ್ದರು. ಎಲ್ಲಾ ಮಾಹಿತಿಗೂ ಇಂಟರ್‌ನೆಟ್ ಅವಲಂಬಿಸಿದ್ದರು. ಹೊಸ ತಂತ್ರಜ್ಞಾನದ ಉಪಕರಣಗಳ ನಂಬುತ್ತಿದ್ದರು. ತಾನು ಮಾಡಿದ್ದೇ ಸರಿ ಎಂಬ ಹಟ ಸಾಧಿಸಿಯೇ ತೃಪ್ತರಾಗುತ್ತಿದ್ದರು. ಹೆಂಡತಿ ಕಡೆಯ ಆಸ್ತಿಯ ವಿಚಾರದಲ್ಲಿ ಮೂಗು ತೂರಿಸಿದರು. ಸಂಬಂಧಿಕರು ಇವರ ಹೆಸರಲ್ಲಿ ಅನೇಕ ಮೂಗರ್ಜಿ ಬರೆದು ಸರಿಯಾಗಿ ಸಿಕ್ಕಿಸಿ ಹಾಕಿದರು. ಅವರಿಗೆಲ್ಲಾ ಬುದ್ಧಿ ಕಲಿಸಲು ಹೊರಟು ಬದುಕಲ್ಲಿ ಅನೇಕ ಸಮಸ್ಯೆಗಳ ತಲೆ ಮೇಲೆ ಎಳೆದುಕೊಂಡರು. ಚೆನ್ನಾಗಿ ಬಾಳಬಹುದಾಗಿದ್ದ ಬದುಕನ್ನು ಸಂಕೀರ್ಣ ಮಾಡಿಕೊಂಡರು. ತುಂಬಾ ಬುದ್ಧಿವಂತರಾಗಿದ್ದ ಅವರು ಜೀವನವನ್ನು ನೋಡುವ ವಿಧಾನ ತೀರಾ ವಿಭಿನ್ನವಾಗಿತ್ತು.

ಬರೀ ಗೋಜಲುಗಳಲ್ಲೇ ವೃತ್ತಿ ಮುಗಿಸಿದ ಅವರೀಗ ಒಂಟಿತನದಲ್ಲಿದ್ದಾರೆ. ಮೊನ್ನೆ ಸಿಕ್ಕಾಗ ತಾನು ತುಂಬಾ ಸುಖವಾಗಿದ್ದೇನೆ ಎಂದು ಹಸಿಸುಳ್ಳು ಹೇಳಿದರು. ಅವರ ಕಣ್ಣುಗಳು, ದೇಹ, ಮಾತು ಸತ್ಯ ಹೇಳುತ್ತಿದ್ದವು. ತಮ್ಮ ಎಲ್ಲಾ ಕಾಯಿಲೆಗಳ ಸಂಪೂರ್ಣ ವಾಸಿ ಮಾಡಿಕೊಂಡಿದ್ದೇನೆ ಎಂದರು. ಆದರೆ ಅವರ ಬಗಲಲ್ಲಿದ್ದ ಫೈಲು ಬೇರೆ ಬೇರೆ ಆಸ್ಪತ್ರೆಗಳ ವೈದ್ಯರ ವಿವರ ತೋರಿಸುತ್ತಿತ್ತು. ಹತಾಶರಾಗಿದ್ದರೂ ಸೋತಿದ್ದರೂ ಇಲ್ಲ ಎಂದು ವಾದಿಸಿದರು. ನಿಜ ಹೇಳುವ, ಮನಸ್ಸಿನೊಳಗಿನ ಕಸವ ಕಿತ್ತು ಬಿಸುಡುವ ವಿವೇಕ ಅವರಿಗೆ ಇರಲೇ ಇಲ್ಲ.

ತನಗೆ ತೊಂದರೆ ಕೊಟ್ಟವರ ದೊಡ್ಡ ಪಟ್ಟಿ ಕೈಯಲ್ಲಿ ಇಟ್ಟುಕೊಂಡೇ ಓಡಾಡುತ್ತಿದ್ದಾರೆ. ಇನ್ನೂ ತಾನು ಯಾರುಯಾರಿಗೆ ಬುದ್ಧಿ ಕಲಿಸುವವನಿದ್ದೇನೆಂದು ಮಾಹಿತಿ ಕೊಟ್ಟರು. ಚಮಚ ಹಿಡಿದು ನೆಟ್ಟಗೆ ತಿಂಡಿಯನ್ನು ಬಾಯೊಳಗೆ ಕಳಿಸುವ ಚೈತನ್ಯವೂ ಇಲ್ಲದ ಇವರ ಶತ್ರುಗಳ ಸಂಹಾರವಾಗಲು ಕನಿಷ್ಠ ಒಂದು ಸಾವಿರ ವರ್ಷವಾದರೂ ಬೇಕಾಗಬಹುದು.

ಬದುಕು ಎಷ್ಟು ದುರಂತಗಳನ್ನು ಕೊಟ್ಟರೂ ಮನುಷ್ಯನೇಕೆ ಪಾಠ ಕಲಿಯುವುದಿಲ್ಲ. ತನ್ನ ತಪ್ಪನ್ನು ಯಾಕೆ ಒಪ್ಪಿಕೊಳ್ಳದೆ ಹಟ ಮಾಡುತ್ತಾನೆ. ಮತ್ತೊಬ್ಬರಿಗೆ ತಕ್ಕ ಪಾಠ ಕಲಿಸುತ್ತೇನೆ ಎಂಬ ಜಿದ್ದೇ ಅರ್ಥವಿಲ್ಲದ್ದು. ಹಿತ ಚಿಂತಕರಿಂದಲೂ ಬುದ್ಧಿ ಕೇಳದಷ್ಟು ಮೂರ್ಖತನ ಬೆಳೆಸಿಕೊಂಡವರಿಗೆ ಯಾರು ಹೇಳಬಲ್ಲರು? ಮನುಷ್ಯ ಪ್ರೀತಿಯ ನಿಜ ಅರ್ಥವೇ ತಿಳಿಯದ ಅವಿವೇಕತನಕ್ಕೆ ಯಾರು ಏನು ಹೇಳಲಾದೀತು?

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಬುಧವಾರ ಮೇ 22, 2024

ಶ್ರೀ ಕ್ರೋಧಿ ನಾಮ ಸಂವತ್ಸರ ಉತ್ತರಾಯಣ ವಸಂತ ಋತು ತಿಥಿ: ವೈಶಾಖ ಶುಕ್ಲ ಚತುರ್ದಶಿ ಗಂ. 18-48 ನಕ್ಷತ್ರ: ಸ್ವಾತಿ ಗಂ. 7-47 ಯೋಗ: ವರಿಯಾನ್ ಗಂ. 12-37 ಕರಣ: ಗರ ಗಂ. 6-19, ವೃಷಭ ಮಾಸದ ನೇ 09 ದಿನ, ಮಳೆನಕ್ಷತ್ರ: ಕೃತ್ತಿಕಾ 4.

ರಾಹುಕಾಲ : ಮಧ್ಯಾಹ್ನ 12-00 – 01-30

ಸೂರ್ಯೋದಯ : 06-07 ಸೂರ್ಯಾಸ್ತ : 06-48

ಮುಸ್ಲಿಂ ದಿನಾಂಕ : 13 ಜುಲ್ಖಾಯದ್

ಅದೃಷ್ಟ ಸಂಖ್ಯೆ : 4, 7

ಮೇಷ: ವಾಹನ ಖರೀದಿಗಾರರಿಗೆ ಸೂಕ್ತ ಸಮಯವಲ್ಲದಿದ್ದರೂ ಮಾರಾಟಗಾರಿಗೆ ಲಾಭದ ದಿನ. ಉನ್ನತ ಅಧಿಕಾರಿಗಳ ಸಂಪರ್ಕ ಉಂಟಾಗುವುದು. ನೀಲಿ ಬಣ್ಣವು ಶುಭ ಉಂಟುಮಾಡುತ್ತದೆ.

ವೃಷಭ: ನಿರುದ್ಯೋಗಿಗಳು ಬಂದ ಅವಕಾಶವನ್ನು ಒಪ್ಪಿಕೊಳ್ಳುವುದು ಸದ್ಯದ ಪರಿಸ್ಥಿತಿಗೆ ಉತ್ತಮವಾಗಿ ಕಾಣುತ್ತದೆ. ಶಿಕ್ಷಕ ವೃತ್ತಿ ಆರಂಭಿಸುವ ಬಗ್ಗೆ ಆಲೋಚಿಸಿ. ತಂದೆ ಅಥವಾ ಹಿರಿಯ ಸಹೋದರರಲ್ಲಿ ಸಂಯಮದ ನಡವಳಿಕೆ ಅಗತ್ಯ.

ಮಿಥುನ: ಮಗನ ಕೆಲಸ ನೆರವೇರಿದ ಕಾರಣಕ್ಕೆ ಹೇಳಿಕೊಂಡ ಹರಕೆ ಪೂರ್ಣಗೊಳಿಸುವ ಬಗ್ಗೆ ಮಗನಲ್ಲಿ ಪ್ರಸ್ತಾಪಿಸಿ. ಬಂಧುಗಳ ಸಲಹೆ-ಸಹಕಾರ ನೂತನ ಕಾರ್ಯಗಳಿಗೆ ಫಲ ಕೊಡುವುದು. ಸಣ್ಣಪ್ರಮಾಣದ ಪ್ರಯಾಣ ಮಾಡುವಿರಿ.

ಕರ್ಕಾಟಕ: ಕೆಲವು ದಿನಗಳ ಬಳಿಕ ಸಮಾನಮನಸ್ಕರ ಜತೆ ಕಳೆದ ಸಮಯ ಜ್ಞಾನವನ್ನು ವರ್ಧನೆ ಮಾಡಿಕೊಳ್ಳಲು ಸಹಾಯಕಾರಿ. ಸ್ವಂತವಾಗಿ ಉದ್ಯೋಗ ಮಾಡುವವರು ಪ್ರಗತಿ ಕಾಣಲಿದ್ದೀರಿ.

ಸಿಂಹ: ಒಳ್ಳೆಯತನದಿಂದಾಗಿ ನೀವು ನುಂಗಿಕೊಂಡ ಸಿಟ್ಟು, ತಪ್ಪು ಮಾಡಿದವರ ನಿರ್ಲಕ್ಷ್ಯಕ್ಕೆ ಕಾರಣವಾಗುತ್ತದೆ. ಮನೆ ಖರೀದಿಸುವ ವಿಷಯದ ಬಗ್ಗೆ ಮನೆಯವರಿಂದ ಮಾಹಿತಿಯನ್ನು ಕೇಳಬೇಕಾಗುತ್ತದೆ.

ಕನ್ಯಾ: ಇಷ್ಟು ದಿನ ಇದ್ದಂತಹ ಕೆಲವು ಜವಾಬ್ದಾರಿಗಳ ಭಾರ ಕಡಿಮೆ ಆಗಿ ನಿರಾಳದ ಜೀವನವನ್ನು ನಡೆಸುವಿರಿ. ಕಣ್ಣಿನ ದೃಷ್ಟಿಯಲ್ಲಿ ಬದಲಾವಣೆಗಳು ಅನುಭವಕ್ಕೆ ಬಂದಲ್ಲಿ ತಡಮಾಡದೆ ವೈದ್ಯರನ್ನು ಭೇಟಿ ಮಾಡಿ.

ತುಲಾ: ಉರಿಯುವಂಥ ಬೆಂಕಿಗೆ ತುಪ್ಪ ಸುರಿಯುವಂಥ ಮಾತುಗಳನ್ನಾಡಿ ಸಂಗಾತಿಯೊಂದಿಗಿನ ಸಂಬಂಧವನ್ನು ಕೆಡಿಸಿಕೊಳ್ಳಬೇಡಿ. ಆರೋಗ್ಯವನ್ನು ಕಾಪಾಡಿಕೊಳ್ಳುವಲ್ಲಿ ಉದಾಸೀನತೆ ತೋರಬೇಡಿ.

ವೃಶ್ಚಿಕ: ಯಾವುದೇ ಪರಿಸ್ಥಿತಿಯಲ್ಲಿಯೂ ಮನಸ್ಸಿನ ಭಾವನೆಗಳಿಗೆ ಮಾನ್ಯತೆ ನೀಡದಿರುವ ತೀರ್ಮಾನವನ್ನು ಮಾಡದಿರಿ. ತಂದೆಯವರ ವ್ಯವಹಾರದ ವಿಷಯಗಳನ್ನು ತಿಳಿದು ಮುಂದುವರಿಯುವಿರಿ.

ಧನು: ಸ್ವಪ್ರಯತ್ನದಿಂದಾಗಿ ತಲುಪಿದ ಸ್ಥಾನವು ಇತರರ ಸಹಾಯದಿಂದ ಪಡೆದದ್ದು ಎನ್ನುವ ಮಾತು ಜನರ ಬಾಯಲ್ಲಿ ಕೇಳಿ ನಿಮ್ಮ ಅಸಮಾಧಾನಕ್ಕೆ ಕಾರಣವಾಗುತ್ತದೆ. ರಾಜಕೀಯ ವಿದ್ಯಮಾನಗಳಿಂದ ವಿಶ್ರಾಂತಿ ಪಡೆಯಿರಿ.

ಮಕರ: ಆಪ್ತರ ಕಷ್ಟಗಳ ಕಡೆಗೆ ನೆರವಾಗುವ ತೀರ್ಮಾನಕ್ಕೆ ಬನ್ನಿ. ಅದರಿಂದಾಗಿ ನಿಮ್ಮ ಸ್ನೇಹಕ್ಕೆ ಅರ್ಥ ಇರುವುದು ಹಾಗೂ ಪುಣ್ಯ ಸಂಪಾದನೆಯಾಗುವುದು. ಅತಿ ಹಟವು ಹೆತ್ತವರನ್ನು ಕಂಗಾಲು ಪಡಿಸುತ್ತದೆ.

ಕುಂಭ: ಒಂದೇ ಸಮಯದಲ್ಲಿ ಹೆಚ್ಚಿನ ವಿಷಯಗಳ ಮೇಲೆ ಗಮನ ಹರಿಸುವುದು ಕಲೆ ಎಂದು ಭಾವಿಸಿದ್ದರೂ ಇತರರು ಚಂಚಲತೆ ಎಂದು ದೂಷಿಸುವ ಸಾಧ್ಯತೆ ಇದೆ. ಅವಿವಾಹಿತರಿಗೆ ಕಂಕಣ ಭಾಗ್ಯ ಕೂಡಿಬರಲಿದೆ.

ಮೀನ: ಮಗನು ಅನಿವಾರ್ಯ ಕಾರಣಗಳಿಂದ ಪರ ಊರಿಗೆ ತೆರಳುವುದು ದುಃಖಕರ ಸಂಗತಿಯಾಗಬಹುದು. ಎದುರಾಳಿಗೆ ಪರಿಣಾಮಕಾರಿಯಾಗುವ ನಿರ್ಧಾರಗಳನ್ನು ಅಗತ್ಯವಾಗಿ ತೆಗೆದುಕೊಳ್ಳಿ. ಬಿಳಿ ಬಣ್ಣ ಶುಭವನ್ನು ತರಲಿದೆ.

ಪದಬಂಧ 5688

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಜರಿಯದೇ ವಹಿಸಿಕೊಂಡಿರುವ ಹೊಣೆಗಾರಿಕೆ (4)
3.ತೊಡಕು ಹೀಗೆ ಬಂದಿದೆ (3)
4.ವೇದೋಕ್ತ ವಿಧಿಗಳನ್ನು ಮಾಡಿಸುವವನು (4)
6.ಒಲುಮೆಯಿಂದ ಮಾಡಿದ ಒತ್ತಾಯ (3)
8.ನಿರಾಕಾರಣದಲ್ಲಿರುವ ಉದ್ದೇಶ ಗೊತ್ತಾಯಿತೇ? (3)
9.ಬೆಂದಕ್ಕಿ ಕಾಳು (3)
10.ಬೆಳ್ಳುಳ್ಳಿಯನ್ನು ಹೀಗೂ ಹೇಳುತ್ತಾರೆ (3)
12.ನಡುವೆ ಸರ ಧರಿಸಿ ಮಾಡಿದ ವ್ಯಾಯಾಮ (4)
14.ಆಳವಾದ ಗುಂಡಿ (3)
15.ಸೂಕ್ಷ್ಮವಾದ ಎಳೆಯಿದು (4)

ಮೇಲಿಂದ ಕೆಳಕ್ಕೆ

1.ಜಟಿಲತೆಯಿಂದ ಸಂಗ್ರಹಿಸಿದ ನೀರು (2)
2.ಪುರಿಯೊಳಗಡಗಿರುವ ಶತ್ರು (2)
3.ಹಡಗು ಇಲ್ಲಿ ಕಾಣುತ್ತಿದೆ (3)
5.ತಾರುಣ್ಯವನ್ನು ಹೊಂದಿದವನು (3)
7.ಮಡಿಕೆಗಳನ್ನೊಳಗೊಂಡಿರುವ ಮಸ್ತಿಷ್ಕ (3)
8.ಸ್ವಲ್ಪ ಕಾದ ನಂತರವೇ ಇನಿಯ ಕಾಣುತ್ತಾನೆ! (3)
9.ಸಡಿಲವಾದುದನ್ನು ಹೀಗೆನ್ನಿ (3)
11.ನರಿಯಲ್ಲಿ ಉತ್ತಮ ಜಾತಿಯ ಜೇನುತುಪ್ಪ ಸಿಕ್ಕೀತೆ? (3)
13. ಮೂಗಿನ ಆಭರಣವು ಉಲ್ಟಾ ಆಗಿಬಿಟ್ಟಿದೆ (2)
14.ಮುಖ್ಯ ಬೆಳೆಯ ನಡುವೆ ಬೆಳೆಯುವ ಹುಲ್ಲು (2)

■	■	1			2	■	■	■
3			■	■	4			5
	■	■	■	■	■	■	■	
6		7	■	■	■	8		
■	■		■	■	■		■	■
9			■	■	■	10		11
	■	■	■	■	■	■	■	
12			13	■	■	14		
■	■	■	15				■	■

5687ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಕರ್ಣಧಾರ 2.ಮಹಿಷ 4.ಸುದಾಮ 6.ಉಯಿಲು 7.ವಿರಹತಾಪ 10.ಸಾರಣೆ 11.ಧಿಮಾಕು 13.ನಗರ 14.ಪರಭಾರೆ

ಮೇಲಿಂದ ಕೆಳಕ್ಕೆ:
1.ಕಡಸು 2.ಮಡಿಲು 3.ಷರಬತ್ತು 5ಮನವಿ 6.ಉದಾಹರಣೆ 8.ಪರಿಧಿ 9.ಪ್ರಹಸನ 10.ಸಾವಿರ 12.ಕುದುರೆ

ಸುಡೊಕು 6073

	7			4				9
			6		9			2
2		4		7		3		
7	8						5	
			4			6		7
6		5		8			2	
		7	2				9	
				1	7		3	6
9		1		5		2		4

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6072 ಸುಡೊಕು

2	3	9	8	5	7	1	6	4
8	6	4	1	3	2	7	5	9
5	1	7	4	9	6	2	8	3
7	9	8	2	4	5	6	3	1
4	5	1	6	8	3	9	2	7
3	2	6	9	7	1	5	4	8
6	7	2	3	1	4	8	9	5
9	4	5	7	6	8	3	1	2
1	8	3	5	2	9	4	7	6





ಚುಟುಕು

20 ವರ್ಷಗಳ ಹಿಂದಿನ ಫಲಿತಾಂಶ ಪುನರಾವರ್ತನೆ: ಜೈರಾಮ್

ನವದೆಹಲಿ (ಪಿಟಿಐ): ಲೋಕಸಭಾ ಚುನಾವಣೆಯಲ್ಲಿ 'ಇಂಡಿಯಾ' ಕೂಟವು ಸ್ಪಷ್ಟ ಬಹುಮತ ಪಡೆಯುವುದರೊಂದಿಗೆ ಜೂನ್ ನಾಲ್ಕರಂದು 2004ರ ಫಲಿತಾಂಶ ಪುನರಾವರ್ತನೆಯಾಗಲಿದೆ ಎಂದು ಕಾಂಗ್ರೆಸ್ ನಾಯಕ ಜೈರಾಮ್ ರಮೇಶ್ ಮಂಗಳವಾರ ಅಭಿಪ್ರಾಯಪಟ್ಟರು.



'ನಮ್ಮದು ಅಮೆರಿಕದ ವ್ಯವಸ್ಥೆಯಂತೆ ಅಲ್ಲ, ಪಕ್ಷ ಕೇಂದ್ರಿತ ಪ್ರಜಾಪ್ರಭುತ್ವ. ಇದು ವ್ಯಕ್ತಿಗಳ ನಡುವಿನ ಸೌಂದರ್ಯ ಸ್ಪರ್ಧೆಯಂತೆ ಅಲ್ಲ, ಪಕ್ಷಗಳ ನಡುವಿನ ಆಯ್ಕೆ. ಈ ಬಾರಿ, 20 ವರ್ಷಗಳ ನಂತರ (ಬೀಸ್ ಸಾಲ್ ಬಾದ್) 2004ರ ಫಲಿತಾಂಶ ಪುನರಾವರ್ತನೆ ಆಗಲಿದೆ' ಎಂದು ಹೇಳಿದರು.

'ನಾವು ದೆಹಲಿ ತಲುಪುವುದು ಲಖನೌ ಮೂಲಕ. ಉತ್ತರ ಪ್ರದೇಶದಲ್ಲಿ 80 ಸ್ಥಾನಗಳಿವೆ. ರಾಹುಲ್ ಗಾಂಧಿ ನೇತೃತ್ವದ 'ನ್ಯಾಯ ಯಾತ್ರೆ'ಗೆ ಪ್ರಯಾಗ್‌ರಾಜ್, ವಾರಾಣಸಿ, ಪ್ರತಾಪ್‌ಗಢ, ಲಖನೌ, ಅಮೇಠಿ, ರಾಯ್‌ಬರೇಲಿ, ಅಲೀಗಢ, ಮೊರಾದಾಬಾದ್, ಅಮ್ರೋಹಾ ಮತ್ತು ಸಂಭಲ್‌ನಲ್ಲಿ ಅದ್ಭುತ ಪ್ರತಿಕ್ರಿಯೆ ಸಿಕ್ಕಿತ್ತು' ಎಂದು ಹೇಳಿದರು.

'ಉತ್ತರ ಪ್ರದೇಶದಲ್ಲಿ ಯುವಜನತೆ, ಮಹಿಳೆಯರು, ಎಸ್‌ಸಿ, ಎಸ್‌ಟಿ, ಒಬಿಸಿ ಸಮುದಾಯದವರು ನ್ಯಾಯ ಯಾತ್ರೆಗೆ ಬೆಂಬಲ ಸೂಚಿಸಿದ್ದರು. ಈ ಬಾರಿ ಪ್ರಧಾನಿಗೆ ಸಂಪೂರ್ಣ ಭ್ರಮನಿರಸನ ಕಾದಿದೆ. ಜನ ಅವರ ಬಗ್ಗೆ ನಿರಾಸೆಗೊಂಡಿದ್ದಾರೆ. ಜೂನ್ ನಾಲ್ಕರ ನಮ್ಮ ಫಲಿತಾಂಶದಲ್ಲಿ ದೊಡ್ಡ ಪಾಲು ಉತ್ತರ ಪ್ರದೇಶದಿಂದ ಬರಲಿದೆ. ಅಲ್ಲಿ ಈ ಬಾರಿ ಸಂಪೂರ್ಣ ಬದಲಾವಣೆ ಆಗಲಿದೆ' ಎಂದು ತಿಳಿಸಿದರು.

ಎಎಪಿ ಮುಖಂಡ ಬ್ರಾರ್ ಬಿಜೆಪಿಗೆ



ನವದೆಹಲಿ (ಪಿಟಿಐ): ಆಮ್ ಆದ್ಮಿ ಪಕ್ಷದ (ಎಎಪಿ) ಮುಖಂಡ, ಮಾಜಿ ಶಾಸಕ ಜಗ್ಬೀರ್ ಸಿಂಗ್ ಬ್ರಾರ್ ಅವರು ಮಂಗಳವಾರ ಬಿಜೆಪಿ ಸೇರ್ಪಡೆಯಾದರು.

ಬ್ರಾರ್ ಅವರು 2007 ರಲ್ಲಿ ಪಂಜಾಬ್‌ನ ಜಲಂಧರ್ ಕಂಟೋನ್ಮೆಂಟ್ ವಿಧಾನಸಭಾ ಕ್ಷೇತ್ರದಿಂದ ಶಿರೋಮಣಿ ಅಕಾಲಿ ದಳ (ಎಸ್‌ಎಡಿ) ಟಿಕೆಟ್‌ನಲ್ಲಿ ಸ್ಪರ್ಧಿಸಿ ಆಯ್ಕೆಯಾಗಿದ್ದರು. ಒಂದು ವರ್ಷದ ಹಿಂದೆ ಅವರು ಎಸ್‌ಎಡಿ ತೊರೆದು ಎಎಪಿ ಸೇರಿದ್ದರು.

ತಮ್ಮ ರಾಜಕೀಯ ಜೀವನದ ಆರಂಭದಲ್ಲಿ ಅವರು ಕಾಂಗ್ರೆಸ್ ಪಕ್ಷದ ಜಲಂಧರ್ ಜಿಲ್ಲಾ ಘಟಕದ ಅಧ್ಯಕ್ಷರಾಗಿಯೂ ಕಾರ್ಯನಿರ್ವಹಿಸಿದ್ದರು.

'ಭೂ ವಿವಾದದ ದಾಳಿಗೆ ಟಿಎಂಸಿ ಹೆಸರು ತಳಕು'

ಅಶೋಕನಗರ (ಪಿಟಿಐ): ಜಲಪೈಗುರಿಯ ರಾಮಕೃಷ್ಣ ಮಿಷನ್‌ನ ಮೇಲೆ ನಡೆದ ದಾಳಿಯಲ್ಲಿ ಟಿಎಂಸಿಯ ಪಾತ್ರವಿದೆ ಎಂದು ಬಿಜೆಪಿ ಆರೋಪಿಸಿರುವುದಕ್ಕೆ ತೀವ್ರ ವಿರೋಧ ವ್ಯಕ್ತಪಡಿಸಿರುವ ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ, 'ಭೂ ವಿವಾದದ ಸಂಬಂಧ ನಡೆದ ಘಟನೆಯನ್ನು ಕೇಸರಿ ಪಾಳಯವು ನಮ್ಮ ಪಕ್ಷದೊಂದಿಗೆ ತಳಕು ಹಾಕಲು ಪ್ರಯತ್ನಿಸುತ್ತಿದೆ' ಎಂದು ಮಂಗಳವಾರ ಹೇಳಿದ್ದಾರೆ.



ಬರಸಾತ್ ಲೋಕಸಭಾ ಕ್ಷೇತ್ರದಲ್ಲಿ ರ‍್ಯಾಲಿ ನಡೆಸಿದ ಅವರು, 'ನಾನು ಎಂದೂ ಧಾರ್ಮಿಕ ಕೇಂದ್ರಗಳ ನಡುವೆ ತಾರತಮ್ಯ ಮಾಡಿಲ್ಲ. ಎಲ್ಲ ಧರ್ಮಗಳ ಪೂಜಾ ಸ್ಥಳಗಳನ್ನೂ ನಾನು ನವೀಕರಣ ಮಾಡಿಸಿದ್ದೇನೆ. ಸಿಸ್ಟರ್ ನಿವೇದಿತಾ ಅವರ ಮನೆ, ವಿವೇಕಾನಂದರ ಜನ್ಮಸ್ಥಳದ ನವೀಕರಣ ಕಾರ್ಯ ಮಾಡಿದ್ದೇನೆ. ರಾಮಕೃಷ್ಣ ಮಿಷನ್ ಸೇರಿದಂತೆ ಹಲವು ಸಾಮಾಜಿಕ ಧಾರ್ಮಿಕ ಸಂಸ್ಥೆಗಳನ್ನು ಬೆಂಬಲಿಸಿದ್ದೇನೆ' ಎಂದು ಹೇಳಿದರು.

'ಅನೇಕರು ತಮ್ಮ ಆಸ್ತಿಯನ್ನು ಧಾರ್ಮಿಕ ಕಾರಣಗಳಿಗಾಗಿ ದಾನ ಮಾಡುತ್ತಾರೆ ಮತ್ತು ಅದರಿಂದ ಕೆಲವು ವಿವಾದಗಳು ಹುಟ್ಟಿಕೊಂಡಿರಬಹುದು. ಪೊಲೀಸರು ಪ್ರಕರಣದ ಬಗ್ಗೆ ತನಿಖೆ ನಡೆಸುತ್ತಿದ್ದು, ತಪ್ಪಿತಸ್ಥರ ವಿರುದ್ಧ ಕ್ರಮ ಜರುಗಿಸಲಾಗುವುದು. ಆದರೆ, ಘಟನೆಯ ಬಗ್ಗೆ ಸರಿಯಾದ ಮಾಹಿತಿ ತಿಳಿಯದೇ ಒಬ್ಬರನ್ನು ಅದರಲ್ಲಿ ಸಿಕ್ಕಿಸಿ ಹಾಕಲು ನಿಮಗೆ (ಬಿಜೆಪಿ) ಎಷ್ಟು ಧೈರ್ಯ' ಎಂದು ಪ್ರಶ್ನಿಸಿದ್ದಾರೆ.

ಎಂಥಾ ಮಾತು!



ಹೇಮಂತ್ ಸೊರೇನ್ ಪತ್ನಿ ಕಲ್ಪನಾ ಅವರು ಪ್ರಧಾನಿ ನರೇಂದ್ರ ಮೋದಿ ಅವರಿಗೆ 'ಝಾನ್ಸಿ ರಾಣಿ'ಯ ರೀತಿಯಲ್ಲಿ ಸವಾಲು ಹಾಕುತ್ತಿದ್ದಾರೆ. ಹೇಮಂತ್ ಅಥವಾ ನಾನು ತಪ್ಪಿತಸ್ಥ ಎಂದು ಯಾವ ನ್ಯಾಯಾಲಯವೂ ಹೇಳಿಲ್ಲ. ಎಎಪಿ ಮತ್ತು ಜೆಎಂಎಂಅನ್ನು ನಾಶ ಮಾಡಲು ಪ್ರಧಾನಿ ಸಂಚು ರೂಪಿಸಿದ್ದರು. ಆದರೆ ನಾವು ಶಕ್ತಿ ಹೆಚ್ಚಿಸಿಕೊಂಡೆವು. ದೆಹಲಿ, ಪಂಜಾಬ್ ಮತ್ತು ಜಾರ್ಖಂಡ್‌ನಲ್ಲಿ ಸರ್ಕಾರ ಉರುಳಿಸುವ ಬಿಜೆಪಿ ತಂತ್ರ ಫಲಿಸಲಿಲ್ಲ

ಅರವಿಂದ ಕೇಜ್ರಿವಾಲ್, ದೆಹಲಿ ಮುಖ್ಯಮಂತ್ರಿ
(ಜಾರ್ಖಂಡ್‌ನಲ್ಲಿ ಚುನಾವಣಾ ಪ್ರಚಾರದ ವೇಳೆ)



ಪುಲ್ವಾಮಾ ಮತ್ತು ಉರಿಯಲ್ಲಿ ನಡೆದ ಭಯೋತ್ಪಾದಕ ದಾಳಿಯ ಹಿಂದೆ ಪಾಕಿಸ್ತಾನದ ಸಂಘಟನೆಗಳ ಕೈವಾಡವಿದೆ ಎಂದು ಪಾಕ್‌ನ ಮಾಜಿ ಸಚಿವ ಫವಾದ್ ಹುಸೇನ್ ಈ ಹಿಂದೆ ಹೇಳಿದ್ದರು. ಅದೇ ಫವಾದ್ ಹುಸೇನ್ ಪ್ರಧಾನಿ ಮೋದಿ ಅವರನ್ನು ಹೊಗಳುತ್ತಿಲ್ಲ. ಅದರ ಬದಲು ರಾಹುಲ್ ಬಗ್ಗೆ ಮೆಚ್ಚುಗೆಯ ಮಾತನ್ನಾಡುತ್ತಿದ್ದಾರೆ. ನಮ್ಮ ಶತ್ರುಗಳಿಂದ ಹೊಗಳಿಕೆಗೆ ಒಳಗಾಗಿರುವ ನಾಯಕನಿಗೆ ಸರ್ಕಾರ ರಚಿಸಲು ಅವಕಾಶ ನೀಡಬೇಕೇ?

ರಾಜನಾಥ್ ಸಿಂಗ್, ರಕ್ಷಣಾ ಸಚಿವ

ಮಿಥುನ್ ರೋಡ್ ಶೋ: ಕಲ್ಲು ತೂರಾಟ



ಮಿಡ್ನಾಪುರ (ಪಶ್ಚಿಮ ಬಂಗಾಳ) (ಪಿಟಿಐ): ಬಿಜೆಪಿ ಮುಖಂಡ, ನಟ ಮಿಥುನ್ ಚಕ್ರವರ್ತಿ ಅವರು ಪಕ್ಷದ ಅಭ್ಯರ್ಥಿ ಪರ ಮಂಗಳವಾರ ನಡೆಸಿದ ರೋಡ್ ಶೋ ವೇಳೆ ಕೆಲವರು ಕಲ್ಲು ತೂರಾಟ ನಡೆಸಿದ್ದರಿಂದ ಸಂಘರ್ಷಮಯ ಪರಿಸ್ಥಿತಿ ನಿರ್ಮಾಣವಾಯಿತು ಎಂದು ಪೊಲೀಸರು ತಿಳಿಸಿದ್ದಾರೆ.

ಮಿಥುನ್ ಅವರು ಮಿಡ್ನಾಪುರ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಅಗ್ನಿಪುತ್ರ ಪಾಲ್ ಪರ ಪ್ರಚಾರ ಕೈಗೊಂಡಿದ್ದರು. ಅದೃಷ್ಟವಶಾತ್ ಚಕ್ರವರ್ತಿ ಮತ್ತು ಪಾಲ್ ಅವರು ಗಾಯಗೊಳ್ಳದೆ ಪಾರಾಗಿದ್ದಾರೆ.

ಆಮೆಗತಿ ಮತದಾನ: ರಾವುತ್ ಟೀಕೆ

ಮುಂಬೈ (ಪಿಟಿಐ): ಮಹಾರಾಷ್ಟ್ರದ 13 ಲೋಕಸಭಾ ಕ್ಷೇತ್ರಗಳಲ್ಲಿ ನಡೆದ ಮತದಾನವು ನಿಧಾನ ಗತಿಯಲ್ಲಿತ್ತು ಎಂದು ಆರೋಪಿಸಿರುವ ಶಿವಸೇನಾ (ಯುಬಿಟಿ) ಮುಖಂಡ ಸಂಜಯ್ ರಾವುತ್, ಚುನಾವಣಾ ಆಯೋಗವು ಬಿಜೆಪಿಯ ಒಂದು ಘಟಕವಾಗಿದೆ ಎಂದು ಮಂಗಳವಾರ ಟೀಕಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಬಿಜೆಪಿ ಮತ್ತು ಅದರ ಮಿತ್ರ ಪಕ್ಷಗಳು ಹೆಚ್ಚು ಮತಗಳನ್ನು ಪಡೆಯುವ ಕಡೆ ಚುನಾವಣಾ ಆಯೋಗ ಎಲ್ಲವನ್ನೂ ಸರಾಗವಾಗಿ ನಡೆಸುತ್ತದೆ. ಶಿವಸೇನಾ (ಯುಬಿಟಿ) ಅಥವಾ ಮಹಾ ವಿಕಾಸ ಅಘಾಡಿ (ಎಂವಿಎ) ಹೆಚ್ಚು ಮತ ಪಡೆಯುವ ಸಾಧ್ಯತೆ ಇದ್ದ ಕ್ಷೇತ್ರಗಳಲ್ಲಿ ಆಮೆಗತಿಯಲ್ಲಿ ಮತದಾನ ನಡೆದಿದೆ' ಎಂದು ಆರೋಪಿಸಿದರು.

ಇವಿಎಂ ಹಾನಿ: ಕಠಿಣ ಕ್ರಮಕ್ಕೆ ತಾಕೀತು

ಅಮರಾವತಿ (ಪಿಟಿಐ): ಮತಗಟ್ಟೆಯಲ್ಲಿ ಮೇ 13ರಂದು ಇವಿಎಂ ಎಸೆದು, ಜಖಂಗೊಳಿಸಿರುವ ವೈಎಸ್‌ಆರ್‌ಸಿಪಿ ಶಾಸಕ ಪಿ.ರಾಮಕೃಷ್ಣ ರೆಡ್ಡಿ ವಿರುದ್ಧ ಕಟ್ಟುನಿಟ್ಟಿನ ಕ್ರಮ ಜರುಗಿಸಬೇಕು ಎಂದು ಚುನಾವಣಾ ಆಯೋಗವು ಆಂಧ್ರಪ್ರದೇಶದ ಪೊಲೀಸರಿಗೆ ನಿರ್ದೇಶನ ನೀಡಿದೆ.

'ಮೋದಿ ಸಾರ್ವಜನಿಕ ಜೀವನದಿಂದ ನಿರ್ಗಮಿಸಲಿ'

ಪ್ರಧಾನಿ ನುಡಿದಂತೆ ನಡೆಯಲಿ: ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಆಗ್ರಹ

ನವದೆಹಲಿ (ಪಿಟಿಐ): ಪ್ರಧಾನಿ ನರೇಂದ್ರ ಮೋದಿ ಚುನಾವಣಾ ಪ್ರಚಾರದಲ್ಲಿ ಪ್ರತಿದಿನ ಹಿಂದೂ– ಮುಸ್ಲಿಂ ವಿಚಾರ ಪ್ರಸ್ತಾಪಿಸಿ ಸಮಾಜದಲ್ಲಿ ದ್ವೇಷ ಹರಡುತ್ತಿದ್ದು, ಅವರು ಸಾರ್ವಜನಿಕ ಜೀವನದಿಂದ ದೂರ ಸರಿಯಲಿ ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಮಂಗಳವಾರ ಆಗ್ರಹಿಸಿದ್ದಾರೆ.

ಪಿಟಿಐ ಜತೆಗಿನ ಸಂದರ್ಶನದಲ್ಲಿ ಮಾತನಾಡಿದ ಅವರು, 'ಮೋದಿ ಅವರ ಉದ್ದೇಶಗಳು ಸರಿ ಇಲ್ಲ. 'ಕಾಂಗ್ರೆಸ್‌ನವರು ನಿಮ್ಮ ಕೋಣ ತಗೊಂಡು ಹೋಗುತ್ತಾರೆ', ಬಜೆಟ್‌ನಲ್ಲಿ ಶೇ 15 ಮುಸ್ಲಿಮರಿಗೆ ಮೀಸಲಿಡುತ್ತಾರೆ'... ಇಂಥ ವಿಚಾರಗಳನ್ನು ಹೇಳಿ ಸಮಾಜದಲ್ಲಿ ವಿಭಜನೆ ಸೃಷ್ಟಿಸುತ್ತಿದ್ದಾರೆ. ಮತ್ತೊಂದೆಡೆ, ಹಿಂದೂ ಮುಸ್ಲಿಂ ರಾಜಕಾರಣ ಮಾಡಿದರೆ ತಾನು ಸಾರ್ವಜನಿಕ ಜೀವನದಲ್ಲಿರಲು ಅರ್ಹ ಅಲ್ಲ ಎಂದು ಹೇಳುತ್ತಾರೆ. ನೀವು ಪ್ರತಿದಿನ ಅಂಥ ವಿಚಾರಗಳನ್ನು ಪ್ರಸ್ತಾಪಿಸುತ್ತಿರುವುದರಿಂದ ಸಾರ್ವಜನಿಕ ಜೀವನ ತ್ಯಜಿಸಬೇಕು' ಎಂದು ಪ್ರತಿಪಾದಿಸಿದರು.

ಮೋದಿ ಅವರ ಭಾಷಣಗಳನ್ನು ಅವರೇ ಒಮ್ಮೆ ಕೇಳಲಿ ಎಂದು ಸಲಹೆ ನೀಡಿದ ಖರ್ಗೆ, 'ಅವರು ಸುಳ್ಳು ಹೇಳುತ್ತಿದ್ದಾರೆ' ಎಂದರು. 'ಕೊನೇ ಪಕ್ಷ, ತಾವು ಏನು ಹೇಳುತ್ತಾರೋ ಅದಕ್ಕೆ ಬದ್ಧರಾಗಿರಲಿ. ಒಂದು ಕಡೆ ಅವರು ಇಂಥ ವಿಚಾರ ಮಾತನಾಡುತ್ತಾರೆ. ಇನ್ನೊಂದು ಕಡೆ, ಧರ್ಮದ ಆಧಾರದಲ್ಲಿ ದೇಶ ವಿಭಜಿಸಿದರೆ ತಾನು ಸಾರ್ವಜನಿಕ ಜೀವನದಲ್ಲಿರಲು ಅರ್ಹರಲ್ಲ ಎನ್ನುತ್ತಾರೆ' ಎಂದು ಟೀಕಿಸಿದರು.

'ಎಲ್ಲರನ್ನೂ ಜತೆಗೆ ಕರೆದೊಯ್ಯುವ ಬಗ್ಗೆ ಮಾತನಾಡುವ ಅವರು ಮತ ವಿಭಜನೆ ಮಾಡುವುದಕ್ಕಾಗಿ ದ್ವೇಷ ಭಾಷಣ ಮಾಡುವುದನ್ನೂ ಮುಂದುವರೆಸುತ್ತಿದ್ದಾರೆ. ಸಂವಿಧಾನ

ಖರ್ಗೆ ಮಾತು...

- ಸಂವಿಧಾನ, ಪ್ರಜಾಪ್ರಭುತ್ವವನ್ನು ಉಳಿಸಲು ಜನರು ಹೋರಾಟ ನಡೆಸುತ್ತಿದ್ದು, ಅದರ ವಿಸ್ತರಣೆಯಾಗಿ ನಮ್ಮ ಪಕ್ಷಕ್ಕೆ ಬೆಂಬಲ ಸೂಚಿಸುತ್ತಿದ್ದಾರೆ.
- ಬಿಜೆಪಿಯು ನಿರಂತರವಾಗಿ ಜನರನ್ನು ಪ್ರಚೋದಿಸುತ್ತಿದ್ದು, ರಾಮ ಮಂದಿರ, ಹಿಂದೂ–ಮುಸ್ಲಿಂ, ಭಾರತ–ಪಾಕಿಸ್ತಾನದ ಹೆಸರಿನಲ್ಲಿ 'ಭಾವನಾತ್ಮಕವಾಗಿ ಲೂಟಿ' ಮಾಡುತ್ತಿದೆ. ಆದರೆ, ಜನ ಈಗ ಅದರ ನಿಜಬಣ್ಣವನ್ನು ಅರ್ಥ ಮಾಡಿಕೊಂಡಿದ್ದಾರೆ.
- ನಿರುದ್ಯೋಗ ಮತ್ತು ಬೆಲೆ ಏರಿಕೆ ಈ ಚುನಾವಣೆಯ ಎರಡು ಪ್ರಮುಖ ವಿಚಾರಗಳಾಗಿವೆ. ಬಿಜೆಪಿ ಹಿಂದೆ ಜನರಿಗೆ ಭರವಸೆ ನೀಡಿದಂತೆ, ಎರಡು ಕೋಟಿ ಉದ್ಯೋಗ ಸೃಷ್ಟಿಸುವಲ್ಲಿ, ಕಪ್ಪು ಹಣ ವಾಪಸ್ ತರುವಲ್ಲಿ ಮತ್ತು ರೈತರ ಆದಾಯ ದ್ವಿಗುಣಗೊಳಿಸುವಲ್ಲಿ ವಿಫಲವಾಗಿದೆ.


ಅಥವಾ ಮುಸ್ಲಿಮರ ವಿರುದ್ಧ ಮಾತನಾಡುವುದನ್ನು, ಮಹಿಳೆಯರ ಮೇಲಿನ ದೌರ್ಜನ್ಯ ಮತ್ತು ಆದಿವಾಸಿಗಳ ಮೇಲೆ ಮೂತ್ರ ಮಾಡಿದ ಘಟನೆಯನ್ನು ಅವರು ಎಂದಾದರೂ ಖಂಡಿಸಿದ್ದರೇ' ಎಂದು ಪ್ರಶ್ನಿಸಿದರು.

'ಚುನಾವಣೆಗಾಗಿ ಅವರು ಕೋಟಿಗಟ್ಟಲೆ ಹಣ ಖರ್ಚು ಮಾಡುತ್ತಿದ್ದಾರೆ. ಬಿಜೆಪಿಯು ಸಮಾಜದಲ್ಲಿ ದ್ವೇಷ ಹರಡುತ್ತಿದ್ದರೆ, ಕಾಂಗ್ರೆಸ್ 'ಮೊಹಬ್ಬತ್ ಕಿ ದುಕಾನ್' (ಪ್ರೀತಿಯ ಅಂಗಡಿ) ತೆರೆದು, ಎಲ್ಲರನ್ನೂ ಜತೆಗೆ ಕರೆದೊಯ್ಯುತ್ತದೆ' ಎಂದು ಪ್ರತಿಪಾದಿಸಿದರು.

'ಮೋದಿ 'ಒನ್ ಮ್ಯಾನ್ ಶೋ' ನೀಡಲು ಬಯಸುತ್ತಾರೆ. ಒಬ್ಬನೇ ವ್ಯಕ್ತಿ ಎಲ್ಲವನ್ನೂ, ಇಡೀ ದೇಶವನ್ನು ಮುನ್ನಡೆಸಬಹುದು ಎನ್ನುವುದು ಅವರ ಚಿಂತನೆ' ಎಂದು ಅಭಿಪ್ರಾಯಪಟ್ಟರು.

'ಯಾವುದೇ ಸಮುದಾಯದ ಮೇಲಿನ ಅನ್ಯಾಯವನ್ನು ತಡೆಯುವುದು ಓಲೈಕೆ ಅಲ್ಲ. ನಾವು ಏನು ಮಾಡಿದರೂ ಅದನ್ನು ಓಲೈಕೆ ಎಂದು ಬಿಂಬಿಸುತ್ತಾರೆ. ಬಡವರಿಗೆ ಸಹಾಯ ಮಾಡುವುದು ಅಥವಾ ವಿದ್ಯಾರ್ಥಿ ವೇತನ ಕೊಡುವುದು, ಮುಸ್ಲಿಮರಿಗೆ ವಿಶೇಷ ಶಾಲೆಗಳ ಮೂಲಕ ವಿದ್ಯಾಭ್ಯಾಸ ನೀಡುವುದು ಇವನ್ನೆಲ್ಲ ಓಲೈಕೆ ಎಂದು ಕರೆಯಬಾರದು. ಬಿಜೆಪಿ ಓಲೈಕೆ ರಾಜಕಾರಣ ಮಾಡುತ್ತಿದೆ ಎಂದು ಮಾತ್ರ ನಾನು ಹೇಳಲು ಬಯಸುತ್ತೇನೆ' ಎಂದು ತಿಳಿಸಿದರು.

'ನಾವು ಯಾವುದೇ ವ್ಯಕ್ತಿ ಅಥವಾ ಮೋದಿ ಅವರ ವಿರೋಧಿಗಳಲ್ಲ. ನಾವು ಅವರ ತಾತ್ವಿಕತೆಯ ವಿರೋಧಿಗಳು. ಅವರ ತಾತ್ವಿಕತೆಯು ಸಮಾಜವನ್ನು ವಿಭಜನೆ ಮಾಡಲು ಮತ್ತು ದಲಿತರು, ಹಿಂದುಳಿದವರನ್ನು ಯಥಾಸ್ಥಿತಿಯಲ್ಲಿಡಲು ಬಯಸುತ್ತಿದ್ದು, ಅವೆಲ್ಲ ನಿಲ್ಲಬೇಕಾಗಿದೆ' ಎಂದು ಹೇಳಿದರು.



ಮಲ್ಲಿಕಾರ್ಜುನ ಖರ್ಗೆ

'ಭ್ರಷ್ಟರನ್ನು ಮುಖ್ಯಮಂತ್ರಿಗಳನ್ನಾಗಿ ಮಾಡಿದರು'

ಭ್ರಷ್ಟರನ್ನು ಶಾಶ್ವತವಾಗಿ ಜೈಲಿನಲ್ಲಿಡುವುದಾಗಿ ಪ್ರಧಾನಿ ಹೇಳಿರುವ ಬಗ್ಗೆ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರ ಗಮನ ಸೆಳೆದಾಗ, 'ಪ್ರಧಾನಿಗೆ ಅಂಥ ಆಸೆ ಇರಬಹುದು. ಆದರೆ, ಅದಕ್ಕೆ ನ್ಯಾಯಾಲಯ ಒಪ್ಪಬೇಕಲ್ಲ' ಎಂದು ಹೇಳಿದರು.

'ಬಿಜೆಪಿಯು ಈ ಹಿಂದೆ ಭ್ರಷ್ಟರು ಎಂದು ಕರೆದಿದ್ದ ಕೆಲವರನ್ನು ಪಕ್ಷದೊಳಗೆ ಬರಮಾಡಿಕೊಂಡಿತು. ನಂತರ ಅದೇ ಮಂದಿ ಅವರ ತೊಡೆ ಮೇಲೆ ಕೂತರು. ಅವರಲ್ಲಿ ಕೆಲವರನ್ನು ಸಂಸದ, ಕೆಲವರನ್ನು ಮುಖ್ಯಮಂತ್ರಿ, ಮತ್ತೆ ಕೆಲವರನ್ನು ಸಚಿವರನ್ನಾಗಿ ಮಾಡಲಾಯಿತು' ಎಂದು ಟೀಕಿಸಿದರು.

'ಸಂವಿಧಾನದಲ್ಲಿ ಬರೆದಿರುವುದನ್ನು ಅವರು ತೆಗೆದು ಹಾಕಲು ಸಾಧ್ಯವಿಲ್ಲ. ಆದರೆ, ಅದನ್ನು ಜಾರಿ ಮಾಡುವುದಿಲ್ಲ. ಪ್ರಜಾಪ್ರಭುತ್ವವನ್ನು ಕೂಡ ಅವರು ಒಪ್ಪಿಕೊಳ್ಳುವುದಿಲ್ಲ. ಪ್ರಜಾತಾಂತ್ರಿಕವಾಗಿ ಆಯ್ಕೆಯಾದ ಮಧ್ಯಪ್ರದೇಶ, ಕರ್ನಾಟಕ, ತೆಲಂಗಾಣ, ಮಣಿಪುರ, ಉತ್ತರಾಖಂಡ, ಗೋವಾ ರಾಜ್ಯ ಸರ್ಕಾರಗಳನ್ನು ಉರುಳಿಸಿದರು. ಹೀಗಾಗಿಯೇ ನಾವು ಸಂವಿಧಾನ, ಪ್ರಜಾಪ್ರಭುತ್ವನ್ನು ಉಳಿಸಬೇಕಿದೆ ಎಂದು ಹೇಳುತ್ತಿರುವುದು' ಎಂದು ಹೇಳಿದರು.

ಮೀಸಲಾತಿ ವಿರೋಧಿಸಿದ್ದ ನೆಹರೂ: ಮೋದಿ

ಮಹಾರಾಜ್‌ಗಂಜ್/ ಮೋತಿಹಾರಿ (ಪಿಟಿಐ): ಮೊದಲ ಪ್ರಧಾನಿ ಜವಾಹರಲಾಲ್ ನೆಹರೂ ಸೇರಿದಂತೆ ಕಾಂಗ್ರೆಸ್‌ನ ಉನ್ನತ ನಾಯಕರು ಶೋಷಿತ ವರ್ಗಗಳಿಗೆ ಮೀಸಲಾತಿ ನೀಡುವುದನ್ನು ವಿರೋಧಿಸಿದ್ದರು ಎಂಬ ಹೊಸ ಆರೋಪದ ಮೂಲಕ ಪ್ರಧಾನಿ ನರೇಂದ್ರ ಮೋದಿ ಅವರು ವಿಪಕ್ಷಗಳ ವಿರುದ್ಧ ವಾಗ್ದಾಳಿ ಮುಂದುವರಿಸಿದ್ದಾರೆ.

ಬಿಹಾರದ ಪೂರ್ವ ಚಂಪಾರಣ್ ಲೋಕಸಭಾ ಕ್ಷೇತ್ರ ವ್ಯಾಪ್ತಿಯ ಮೋತಿಹಾರಿಯಲ್ಲಿ ಮಂಗಳವಾರ ಚುನಾವಣಾ ರ‍್ಯಾಲಿಯಲ್ಲಿ ಮಾತನಾಡಿದ ಅವರು, 'ಬಾಬಾ ಸಾಹೇಬ್ ಅಂಬೇಡ್ಕರ್ ಇಲ್ಲದೇ ಇರುತ್ತಿದ್ದರೆ ನೆಹರೂ ಅವರು ಎಂದಿಗೂ ಎಸ್‌ಸಿ, ಎಸ್‌ಟಿ ಮತ್ತು ಒಬಿಸಿಗಳಿಗೆ ಮೀಸಲಾತಿ ನೀಡುವುದನ್ನು ಒಪ್ಪುತ್ತಿರಲಿಲ್ಲ. ನೆಹರೂ ಅವರು ದೇಶದ ಅಂದಿನ ಮುಖ್ಯಮಂತ್ರಿಗಳಿಗೆ ಬರೆದ ಪತ್ರದಲ್ಲಿ ಈ ವಿಷಯದ ಕುರಿತ ತಮ್ಮ ಅಭಿಪ್ರಾಯವನ್ನು ಸ್ಪಷ್ಟಪಡಿಸಿದ್ದರು' ಎಂದು ಹೇಳಿದ್ದಾರೆ.

'ನೆಹರೂ ಬಳಿಕ ದೇಶದಲ್ಲಿ ಆಡಳಿತ ನಡೆಸಿದ್ದ ಕಾಂಗ್ರೆಸ್‌ನ ಎಲ್ಲ ಪ್ರಧಾನಿಗಳ ಅಭಿಪ್ರಾಯವೂ ಇದೇ ಆಗಿತ್ತು. ಇಂದಿರಾ ಗಾಂಧಿ ಮತ್ತು ರಾಜೀವ್



ಪ್ರಧಾನಿ ನರೇಂದ್ರ ಮೋದಿ ಅವರು ವಾರಾಣಸಿಯಲ್ಲಿ ನಾರಿ ಶಕ್ತಿ ಸಂವಾದ ಕಾರ್ಯಕ್ರಮದಲ್ಲಿ ಪಾಲ್ಗೊಂಡರು –ಪಿಟಿಐ ಚಿತ್ರ

ಗಾಂಧಿ ಸೇರಿದಂತೆ ಎಲ್ಲರೂ ಮೀಸಲಾತಿಯನ್ನು ವಿರೋಧಿಸಿದ್ದರು. ಎಸ್‌ಸಿ, ಎಸ್‌ಟಿ ಮತ್ತು ಒಬಿಸಿಗಳು ಕಾಂಗ್ರೆಸ್‌ನಿಂದ ಎಂದಿಗೂ ಗೌರವ ಪಡೆದಿಲ್ಲ' ಎಂದಿದ್ದಾರೆ.

'ಇಂಡಿಯಾ' ಕೂಟ ಕೋಮುವಾದಿ: 'ಇಂಡಿಯಾ' ಮೈತ್ರಿಕೂಟವು ಕೋಮುವಾದಿ ಮತ್ತು ಜಾತಿವಾದಿ ಆಗಿದ್ದು, ಕುಟುಂಬ ರಾಜಕಾರಣವನ್ನು ಪ್ರೋತ್ಸಾಹಿಸುತ್ತಿದೆ. ಭ್ರಷ್ಟಾಚಾರ, ಓಲೈಕೆ ರಾಜಕಾರಣ ಮತ್ತು 'ಸನಾತನ ವಿರೋಧಿಯಂತಹ ವಿಕೃತ ಮನಃಸ್ಥಿತಿ' ಹೊಂದಿರುವ ವಿಪಕ್ಷಗಳು ಈ ಚುನಾವಣೆಯಲ್ಲಿ ಹೀನಾಯ ಸೋಲು ಅನುಭವಿಸಲಿದೆ ಎಂದು ವಾಗ್ದಾಳಿ ನಡೆಸಿದರು.

'ಕಾಂಗ್ರೆಸ್‌ಗೆ ಕುಂಭ ಮೇಳ ಬೇಡ'

ಪ್ರಯಾಗ್‌ರಾಜ್ (ಪಿಟಿಐ): 'ಕಾಂಗ್ರೆಸ್ ಮತ್ತು ಸಮಾಜವಾದಿ ಪಕ್ಷ ಓಲೈಕೆ ರಾಜಕಾರಣ ಮಾಡುತ್ತಿದ್ದು, ಎರಡೂ ಪಕ್ಷಗಳು ಅಭಿವೃದ್ಧಿಯ ವಿರೋಧಿಗಳು' ಎಂದು ಪ್ರಧಾನಿ ಟೀಕಿಸಿದರು.

ಪ್ರಯಾಗ್‌ರಾಜ್‌ನಲ್ಲಿ ಪ್ರಚಾರ ನಡೆಸಿದ ಅವರು, 'ಕಾಂಗ್ರೆಸ್ ಮತ್ತು ಎಸ್‌ಪಿಗೆ ಕುಂಭ ಮೇಳಕ್ಕಿಂತಲೂ ತಮ್ಮ ವೋಟ್ ಬ್ಯಾಂಕ್ ಮುಖ್ಯವೆನಿಸುತ್ತದೆ' ಎಂದು ಆರೋಪಿಸಿದರು.

ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ, ಎಸ್‌ಪಿ ಮುಖ್ಯಸ್ಥ ಅಖಿಲೇಶ್ ಯಾದವ್ ಮತ್ತು ಆರ್‌ಜೆಡಿ ನಾಯಕ ತೇಜಸ್ವಿ ಯಾದವ್ ಅವರ ಹೆಸರು ಪ್ರಸ್ತಾಪಿಸದೆಯೇ ಪ್ರಧಾನಿ ದೂರಿದರು.

'ಲೋಕಸಭಾ ಚುನಾವಣೆ ಬಳಿಕ ನಾನು ಮನೆಯಲ್ಲೇ ವಿಶ್ರಾಂತಿ ಪಡೆಯಲಿದ್ದೇನೆ ಎಂದು 'ಜಂಗಲ್ ರಾಜ್‌ನ ವಾರಸುದಾರ' (ತೇಜಸ್ವಿ ಯಾದವ್) ಹೇಳುತ್ತಾರೆ. ಜೂನ್ 4ರ ಫಲಿತಾಂಶದ ಬಳಿಕ ನಾನು ಕಣ್ಣೀರು ಸುರಿಸುವುದನ್ನು ನೋಡಬೇಕು ಎಂದು ಕಾಂಗ್ರೆಸ್‌ನ ಶಹಜಾದ (ರಾಹುಲ್ ಗಾಂಧಿ) ಹೇಳುವರು. ಮೋದಿ ಅವರ ಸಮಾಧಿಯನ್ನು ಅಗೆಯಲಾಗುವುದು ಎಂಬ ಘೋಷಣೆಯನ್ನು ಅವರ ಪಕ್ಷದವರು ಬಹಿರಂಗವಾಗಿ ಕೂಗುತ್ತಿದ್ದಾರೆ' ಎಂದು ಟೀಕಿಸಿದರು.

'ಈ ವ್ಯಕ್ತಿಗಳ ಪ್ರತಿರೂಪವೊಂದು (ಅಖಿಲೇಶ್ ಯಾದವ್) ಉತ್ತರ ಪ್ರದೇಶದಲ್ಲಿದೆ. ನನ್ನ ಜೀವನದ ಅಂತ್ಯ ಸಮೀಪಿಸಿರುವ ಕಾರಣ ವಾರಾಣಸಿಯಿಂದ ಸ್ಪರ್ಧಿಸಿದ್ದಾರೆ ಎಂಬ ಹೇಳಿಕೆಯನ್ನು ಅವರು ಕೊಟ್ಟಿದ್ದಾರೆ. ಶ್ರೀಮಂತ ಕುಟುಂಬದಲ್ಲಿ ಹುಟ್ಟಿದ ವ್ಯಕ್ತಿಗಳ ವಿವೇಕದ ಕೊರತೆಯನ್ನು ಈ ಹೇಳಿಕೆಗಳು ಸೂಚಿಸುತ್ತವೆ' ಎಂದು ಕಿಡಿಕಾರಿದರು.

'ಇಂಡಿಯಾ ಕೂಟದ ಪಾಪಕೃತ್ಯಗಳೊಂದಿಗೆ ಈ ದೇಶ ಮುನ್ನಡೆಯಲು ಸಾಧ್ಯವಿಲ್ಲ. ಮೊದಲ ಹಂತದ ಮತದಾನದಲ್ಲೇ ವಿಪಕ್ಷಗಳ ಕೂಟ ದಿಕ್ಕೆಟ್ಟಿತ್ತು. ಬಳಿಕದ ಹಂತಗಳಲ್ಲಿ ತನ್ನ ಎಲ್ಲ ಶಕ್ತಿ ಕಳೆದುಕೊಂಡಿವೆ. ಇನ್ನುಳಿದ ಎರಡು ಹಂತಗಳಲ್ಲೂ ಈ ಪ್ರವೃತ್ತಿ ಮುಂದುವರಿಯಲಿದೆ' ಎಂದರು.

5 ಹಂತಗಳ ಮತದಾನದ ನಂತರ ಎನ್‌ಡಿಎಗೆ 310 ಸ್ಥಾನ: ಶಾ

ಸಂಬಲ್‌ಪುರ/ಕಿಯೋಂಝರ್ (ಒಡಿಶಾ) (ಪಿಟಿಐ): ಲೋಕಸಭಾ ಚುನಾವಣೆಯ ಐದು ಹಂತದ ಮತದಾನದ ನಂತರ ಎನ್‌ಡಿಎ ಕೂಟವು 310 ಸ್ಥಾನಗಳನ್ನು ಗಳಿಸಿದೆ. ಆರು ಮತ್ತು ಏಳನೇ ಹಂತದ ಮತದಾನದ ನಂತರ 400 ಕ್ಕೂ ಹೆಚ್ಚು ಸ್ಥಾನಗಳನ್ನು ಗಳಿಸಲಿದೆ ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಮಂಗಳವಾರ ಅಭಿಪ್ರಾಯಪಟ್ಟರು.

ಕೇಂದ್ರ ಸಚಿವ ಧರ್ಮೇಂದ್ರ ಪ್ರಧಾನ್ ಪಕ್ಷದ ಅಭ್ಯರ್ಥಿಯಾಗಿರುವ ಸಂಬಲ್‌ಪುರದಲ್ಲಿ ಚುನಾವಣಾ ರ‍್ಯಾಲಿ ನಡೆಸಿದ ಅವರು, 'ಬಾಬು ರಾಜ್'ನಿಂದ ಒಡಿಶಾವನ್ನು ಬಿಡುಗಡೆಗೊಳಿಸಿ, ರಾಜ್ಯದಲ್ಲಿ ಹಾಗೂ ಕೇಂದ್ರದಲ್ಲಿ ಬಿಜೆಪಿ ಸರ್ಕಾರ ರಚನೆಗೆ ಅವಕಾಶ ಮಾಡಿಕೊಡಬೇಕೆಂದು ಮಂಗಳವಾರ ಒತ್ತಾಯಿಸಿದರು.

'ಒಡಿಶಾದ ಆಡಳಿತಾರೂಢ ಬಿಜೆಡಿ ಸರ್ಕಾರವು



ಒಡಿಶಾದಲ್ಲಿ ಬಿಜೆಪಿ ಅಧಿಕಾರಕ್ಕೆ ಬಂದರೆ ಪರಿಶ್ರಮದಿಂದ ಕೆಲಸ ಮಾಡುವಂತಹ ಒಡಿಯಾದ 'ಮಣ್ಣಿನ ಮಗ'ನನ್ನು ಮುಖ್ಯಮಂತ್ರಿಯಾಗಿ ಮಾಡಲಿದೆ

ಅಮಿತ್ ಶಾ, ಕೇಂದ್ರ ಗೃಹ ಸಚಿವ

ಜಗನ್ನಾಥ ದೇವಾಲಯವನ್ನು ವಾಣಿಜ್ಯ ಕೇಂದ್ರವನ್ನಾಗಿ ಮಾಡಲು ಬಯಸಿದ್ದು, ದೇವಾಲಯದ ನಾಲ್ಕು ಬಾಗಿಲುಗಳನ್ನು ಇನ್ನೂ ಸಾರ್ವಜನಿಕರಿಗೆ ಮುಕ್ತಗೊಳಿಸಿಲ್ಲ. ಪುರಿಯ ಎಲ್ಲ ಮಠ ಹಾಗೂ ದೇವಾಲಯಗಳನ್ನು ನಾಶಪಡಿಸಲಾಗಿದೆ. ಜಗತ್‌ಪ್ರಸಿದ್ಧ ಜಗನ್ನಾಥ ರಥ ಯಾತ್ರೆಯನ್ನು ನಿಲ್ಲಿಸಲು ಕುತಂತ್ರ ಹೆಣೆಯಲಾಗಿತ್ತು' ಎಂದು ಆರೋಪಿಸಿದರು.

ಹಿಂದಿನ ಕಾಂಗ್ರೆಸ್ ಸರ್ಕಾರವು ಆದಿವಾಸಿಗಳಿಗಾಗಿ ಏನೂ ಮಾಡಿಲ್ಲ ಎಂದು ಆರೋಪಿಸಿದ ಅವರು, 'ಅಟಲ್ ಬಿಹಾರಿ ವಾಜಪೇಯಿ ಅವರು ಬುಡಕಟ್ಟು ವ್ಯವಹಾರಗಳ ಸಚಿವಾಲಯ ಸ್ಥಾಪಿಸಿದರೆ, ನರೇಂದ್ರ ಮೋದಿ ಅವರು ಒಡಿಶಾ, ಆಂಧ್ರಪ್ರದೇಶ ಹಾಗೂ ತೆಲಂಗಾಣದಲ್ಲಿ ನಕ್ಸಲಿಸಂ ಅನ್ನು ನಿರ್ಮೂಲನೆ ಮಾಡಿದರು' ಎಂದು ಪ್ರತಿಪಾದಿಸಿದರು.



ಪುಣ್ಯಸ್ಮರಣೆ

ರಾಜೀವ್ ಗಾಂಧಿ ಅವರ ಪುಣ್ಯತಿಥಿ ಅಂಗವಾಗಿ ನವದೆಹಲಿಯ ವೀರಭೂಮಿಯಲ್ಲಿ ಮಂಗಳವಾರ ಏರ್ಪಡಿಸಿದ್ದ ಪುಣ್ಯಸ್ಮರಣೆ ಕಾರ್ಯಕ್ರಮದಲ್ಲಿ ಪಾಲ್ಗೊಂಡ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರನ್ನು ಪಕ್ಷದ ಮುಖಂಡರು ಬರಮಾಡಿಕೊಂಡರು –ಪಿಟಿಐ ಚಿತ್ರ

ಬಾಯಿ ತಪ್ಪಿ ಹೇಳಿದೆ: ಸಂಬಿತ್ ಸ್ಪಷ್ಟನೆ • ರಾಮ, ವಿಷ್ಣುವಿಗೂ ಹೋಲಿಸಿದ್ದರು: ಕಾಂಗ್ರೆಸ್ ಟೀಕೆ

'ಪ್ರಾಯಶ್ಚಿತ್ತವಾಗಿ 3 ದಿನ ಉಪವಾಸ ಮಾಡುವೆ'

ಭುವನೇಶ್ವರ/ನವದೆಹಲಿ (ಪಿಟಿಐ): 'ಜಗನ್ನಾಥ ದೇವರು ಮೋದಿ ಅವರ ಭಕ್ತ' ಎಂಬ ಹೇಳಿಕೆ ವಿವಾದದ ರೂಪ ಪಡೆಯುತ್ತಿದ್ದಂತೆಯೇ ಪುರಿ ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಸಂಬಿತ್ ಪಾತ್ರಾ ಕ್ಷಮೆಯಾಚಿಸಿದ್ದು, ಪ್ರಾಯಶ್ಚಿತ್ತವಾಗಿ ಮಂಗಳವಾರದಿಂದ ಮೂರು ದಿನ ಉಪವಾಸ ಮಾಡುವುದಾಗಿ ಹೇಳಿದ್ದಾರೆ.

ಒಡಿಯಾ ಭಾಷೆಯಲ್ಲಿ ಚುನಾವಣಾ ಪ್ರಚಾರದಲ್ಲಿ ಮಾತನಾಡುತ್ತಾ ಸಂಬಿತ್ ಈ ರೀತಿ ಹೇಳಿರುವ ವಿಡಿಯೊ ಸಾಮಾಜಿಕ ಮಾಧ್ಯಮದಲ್ಲಿ ಹರಿದಾಡಿತ್ತು. ಹೇಳಿಕೆಯನ್ನು ಟೀಕಿಸಿದ್ದ ಕಾಂಗ್ರೆಸ್, ಬಿಜೆಡಿ, ಎಎಪಿ ಪಕ್ಷಗಳು ಪ್ರಧಾನಿ ನರೇಂದ್ರ ಮೋದಿ ಇದಕ್ಕೆ ಕ್ಷಮೆ ಯಾಚಿಸಬೇಕು ಎಂದು ಆಗ್ರಹಿಸಿದ್ದವು.

ಪುರಿ ಜಗನ್ನಾಥ ಮಂದಿರದ ಮುಂಭಾಗದಲ್ಲಿ ಮಾಧ್ಯಮದವರೊಂದಿಗೆ ಮಾತನಾಡಿದ್ದ ಕಾಂಗ್ರೆಸ್ ವಕ್ತಾರ ಪವನ್ ಖೇರಾ, 'ಸಂಬಿತ್ ಕಾಂಗ್ರೆಸ್‌ನಲ್ಲಿ ಇದ್ದಿದ್ದರೆ, ತಕ್ಷಣವೇ ಅವರನ್ನು ಪಕ್ಷದಿಂದ ಉಚ್ಚಾಟಿಸುತ್ತಿದ್ದೆವು. ಜಗನ್ನಾಥನ ಕೋಟ್ಯಂತರ ಭಕ್ತರ ಭಾವನೆಯೊಂದಿಗೆ ಆಟ ಆಡಿದ ಸಂಬಿತ್ ಅವರನ್ನು ಪ್ರಧಾನಿ, ಪಕ್ಷದಿಂದ ಉಚ್ಚಾಟಿಸಬೇಕು' ಎಂದು ಹೇಳಿದ್ದರು.

'ಬಿಜೆಪಿ ವಕ್ತಾರರಾದ ಸಂಬಿತ್ ಹೇಳಿಕೆಗಾಗಿ ಪ್ರಧಾನಿ ಮೋದಿ ಅವರು 24 ಗಂಟೆಗಳ ಒಳಗೆ ಜಗನ್ನಾಥನ ಕೋಟ್ಯಂತರ ಭಕ್ತರ ಕ್ಷಮೆ ಕೇಳಬೇಕು' ಎಂದು ಆಗ್ರಹಿಸಿದ್ದರು.

ಅದಕ್ಕೆ ಪ್ರತಿಕ್ರಿಯಿಸಿದ್ದ ಸಂಬಿತ್, ತಾನು ಬಾಯಿ ತಪ್ಪಿ ಹಾಗೆ ಹೇಳಿದ್ದಾಗಿ ತಿಳಿಸಿದ್ದರು. ಮೋದಿ ಜಗನ್ನಾಥ ದೇವರ ಭಕ್ತ ಎಂದು ಹೇಳಲು ಹೋಗಿ ಅದಲುಬದಲು ಹೇಳಿಕೆ ನೀಡಿದ್ದೆ ಎಂದಿದ್ದರು.

ಈ ಬಗ್ಗೆ 'ಎಕ್ಸ್'ನಲ್ಲಿ ಪೋಸ್ಟ್ ಮಾಡಿರುವ ಸಂಬಿತ್, 'ಈ ತಪ್ಪಿಗಾಗಿ ನಾನು ಜಗನ್ನಾಥನ ಪಾದದಡಿ ಕ್ಷಮೆ ಕೇಳುತ್ತೇನೆ' ಎಂದಿದ್ದಾರೆ.

ಏತನ್ಮಧ್ಯೆ, ಪುರಿ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಜಯನಾರಾಯಣ ಪಟ್ನಾಯಕ್ ಅವರು ಪುರಿ ಪಟ್ಟಣ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ.

ರಾಮ, ವಿಷ್ಣುವಿಗೂ ಹೋಲಿಸಿದ್ದರು: ವಿವಾದದ ಬಗ್ಗೆ ಎಐಸಿಸಿ ಕೇಂದ್ರ ಕಚೇರಿಯಲ್ಲಿ ಮಾತನಾಡಿರುವ ಕಾಂಗ್ರೆಸ್ ವಕ್ತಾರರಾದ ಸುಪ್ರಿಯಾ ಶ್ರೀನೇತ್, 'ಇಂಥ ಪ್ರಚಾರಗಳನ್ನು ನಾವು ಚರಿತ್ರೆಯಲ್ಲೂ ಕಾಣಬಹುದು. ಹಿಟ್ಲರ್ ತನ್ನನ್ನು ತಾನು ದೇವರ ಪ್ರತಿರೂಪ ಎಂದು ಕರೆದುಕೊಳ್ಳುತ್ತಿದ್ದರು. ಕಿಮ್ ಜಾಂಗ್ ಉನ್ ಕೂಡ ತನ್ನಲ್ಲಿ 'ದೈವೀ ಶಕ್ತಿ' ಇದೆ ಎನ್ನುತ್ತಿದ್ದರು. ಸಂಬಿತ್ ಪಾತ್ರಾ ಕೂಡ ಜಗನ್ನಾಥ ಮೋದಿ ಅವರ ಭಕ್ತ ಎಂದು ಕರೆದಿದ್ದಾರೆ. ಆದರೆ, ಇದೆಲ್ಲ ವಿವಾದ ಆಗುತ್ತಿದ್ದಂತೆಯೇ ಬಾಯಿ ತಪ್ಪಿ ಹೇಳಿದ್ದೇನೆ ಎನ್ನುತ್ತಿದ್ದಾರೆ' ಎಂದರು.

'ಅಯೋಧ್ಯೆಯಲ್ಲಿ ಬಾಲರಾಮನ ಪ್ರಾಣ ಪ್ರತಿಷ್ಠಾಪನೆ ಸಂದರ್ಭದಲ್ಲಿಯೂ ಇದೇ ರೀತಿ ಮೋದಿ ಅವರನ್ನು ದೇವರಿಗಿಂತ ಮಿಗಿಲು ಎಂಬಂತೆ ಚಿತ್ರಿಸಲಾಗಿತ್ತು. ಮೋದಿ ಅವರು ವಿಷ್ಣುವಿನ ಅವತಾರ ಎಂದು ಚಂಪತ್ ರಾಯ್ ಹೇಳಿದ್ದರು. ಮೋದಿ ಅವರನ್ನು ಶ್ರೀರಾಮ ಎಂದು ಸಾಕ್ಷಿ ಮಹಾರಾಜ್ ಹೇಳಿದ್ದರು' ಎಂದು ಟೀಕಿಸಿದರು.

'ಮತಕ್ಕಾಗಿ ತಮಿಳರ ಹೆಸರು ಕೆಡಿಸುವ ಪ್ರಯತ್ನ'



ಚೆನ್ನೈ (ಪಿಟಿಐ): ಪುರಿ ಜಗನ್ನಾಥನ ರತ್ನ ಭಂಡಾರದ ಕಣ್ಮರೆಯಾಗಿರುವ ಬೀಗದ ಕೈ ತಮಿಳುನಾಡಿನಲ್ಲಿದೆ ಎಂಬ ಪ್ರಧಾನಿ ನರೇಂದ್ರ ಮೋದಿ ಅವರ ಹೇಳಿಕೆಗೆ ತೀವ್ರ ಆಕ್ಷೇಪ ವ್ಯಕ್ತಪಡಿಸಿರುವ ಆಡಳಿತಾರೂಢ ಡಿಎಂಕೆ ಪಕ್ಷದ ಅಧ್ಯಕ್ಷ ಮತ್ತು ತಮಿಳುನಾಡು ಮುಖ್ಯಮಂತ್ರಿ ಎಂ.ಕೆ.ಸ್ಟಾಲಿನ್, 'ಇದು ಮತ ಗಳಿಕೆಗಾಗಿ ತಮಿಳರ ಹೆಸರು ಕೆಡಿಸುವ ಪ್ರಯತ್ನ' ಎಂದು ಮಂಗಳವಾರ ಆರೋಪಿಸಿದ್ದಾರೆ. ಮೋದಿ ಇಂಥ ಪ್ರಯತ್ನಗಳನ್ನು ನಿಲ್ಲಿಸಬೇಕು ಎಂದು ಆಗ್ರಹಿಸಿದ್ದಾರೆ.

ಈ ಕುರಿತು ಹೇಳಿಕೆ ನೀಡಿರುವ ಅವರು, 'ಪ್ರಧಾನಿ ತಮ್ಮ ದ್ವೇಷ ಭಾಷಣಗಳ ಮೂಲಕ ಜನರ ನಡುವೆ ಶತ್ರುತ್ವ ಮತ್ತು ಕೋಪದ ಭಾವನೆ ಬಿತ್ತುತ್ತಿದ್ದಾರೆ. ಈ ಮೂಲಕ ಕೋಟ್ಯಂತರ ಜನರಿಂದ ಪೂಜಿಸಲ್ಪಡುವ ಜಗನ್ನಾಥನಿಗೆ ಅವಮಾನ ಮಾಡಲಾಗಿದೆ ಮತ್ತು ಪರಸ್ಪರ ಉತ್ತಮ ಸಂಬಂಧ ಮತ್ತು ಸ್ನೇಹ ಹೊಂದಿರುವ ತಮಿಳುನಾಡು ಹಾಗೂ ಒಡಿಶಾ ರಾಜ್ಯಗಳ ಜನರನ್ನು ಗಾಸಿಗೊಳಿಸಲಾಗಿದೆ' ಎಂದು ತಿಳಿಸಿದರು.

'ಇಂಡಿಯಾ' ಕೂಟಕ್ಕೆ ಬೆಂಬಲ: ಮೆಹಬೂಬಾ

ರಜೌರಿ/ ಜಮ್ಮು (ಪಿಟಿಐ): ಸೈದ್ಧಾಂತಿಕವಾಗಿ ನಮ್ಮ ಪಕ್ಷವು 'ಇಂಡಿಯಾ' ಕೂಟವನ್ನು ಬೆಂಬಲಿಸುತ್ತದೆ ಎಂದು ಪಿಡಿಪಿ ಅಧ್ಯಕ್ಷೆ ಮೆಹಬೂಬಾ ಮುಫ್ತಿ ಹೇಳಿದ್ದಾರೆ.

ಕಾಶ್ಮೀರದಲ್ಲಿ ನ್ಯಾಷನಲ್ ಕಾನ್ಫರೆನ್ಸ್ (ಎನ್‌ಸಿ) ಪಕ್ಷವು 'ಇಂಡಿಯಾ' ಕೂಟದ ಜತೆಗಿದೆ. ಮೈತ್ರಿ ಸೂತ್ರದಂತೆ ಎನ್‌ಸಿ ಪಕ್ಷವು ಶ್ರೀನಗರ, ಬಾರಾಮುಲ್ಲಾ ಮತ್ತು ಅನಂತನಾಗ್–ರಜೌರಿ ಕ್ಷೇತ್ರಗಳಲ್ಲಿ ತನ್ನ ಅಭ್ಯರ್ಥಿಯನ್ನು ಕಣಕ್ಕಿಳಿಸಿತ್ತು. ಪಿಡಿಪಿಗೆ ಯಾವುದೇ ಕ್ಷೇತ್ರ ಬಿಟ್ಟುಕೊಟ್ಟಿರಲಿಲ್ಲ. ಇದರಿಂದ ಮುಫ್ತಿ ಅವರು ಮೂರೂ ಕ್ಷೇತ್ರಗಳಲ್ಲಿ ಎನ್‌ಸಿ ವಿರುದ್ಧ ತನ್ನ ಅಭ್ಯರ್ಥಿಯನ್ನು ಕಣಕ್ಕಿಳಿಸಿದ್ದರು. ಆದರೆ ಜಮ್ಮು ವಲಯದಲ್ಲಿ ಕಾಂಗ್ರೆಸ್‌ಗೆ ಬೆಂಬಲ ಘೋಷಿಸಿದ್ದರು.

'ಬಿಜೆಪಿಯ ಸಂವಿಧಾನವನ್ನು ಬದಲಿಸಲು ಮತ್ತು ಮೀಸಲಾತಿ ರದ್ದುಗೊಳಿಸಲು ಪ್ರಯತ್ನಿಸುತ್ತಿದೆ. ರಾಹುಲ್ ಗಾಂಧಿ ಅವರು ಸಂವಿಧಾನ ರಕ್ಷಣೆಗಾಗಿ ಹೋರಾಡುತ್ತಿದ್ದಾರೆ. ಆದ್ದರಿಂದ ನಾವು ಸೈದ್ಧಾಂತಿಕವಾಗಿ ಅವರ ಜತೆ ಇದ್ದೇವೆ' ಎಂದು ಮುಫ್ತಿ ಸುದ್ದಿಗಾರರಿಗೆ ತಿಳಿಸಿದರು.

300 ಯುವಕರ ವಾಪಸಾತಿಗೆ ಯತ್ನ

ಕಾಂಬೋಡಿಯಾಕ್ಕೆ ಭಾರತೀಯರ ಕಳ್ಳಸಾಗಣೆ– ಜಾಲ ಭೇದಿಸಿದ ಆಂಧ್ರಪ್ರದೇಶ ಪೊಲೀಸರು

ಪ್ರಜಾವಾಣಿ ವಾರ್ತೆ/ಪಿಟಿಐ



ಹೈದರಾಬಾದ್: ಕಳ್ಳಸಾಗಣೆಗೆ ಒಳಗಾಗಿ, ಕಾಂಬೋಡಿಯಾದಲ್ಲಿ ಬಂಡಾಯವೆದ್ದು ಜೈಲುಪಾಲಾಗಿರುವ ಸುಮಾರು 300 ಭಾರತೀಯ ಯುವಕರನ್ನು ದೇಶಕ್ಕೆ ಮರಳಿ ಕರೆತರಲು ವಿಶಾಖಪಟ್ಟಣದ ಪೊಲೀಸರು ಪ್ರಯತ್ನಗಳನ್ನು ನಡೆಸುತ್ತಿದ್ದಾರೆ.

ಸ್ಥಳೀಯ ವ್ಯಕ್ತಿಯ ದೂರಿನ ಮೇರೆಗೆ ವಿಶಾಖಪಟ್ಟಣದ ಪೊಲೀಸರು, ಮಾನವ ಕಳ್ಳಸಾಗಣೆ ಮಾಡಿ ಸೈಬರ್ ಅಪರಾಧ ಚಟುವಟಿಕೆಯಲ್ಲಿ ತೊಡಗಿಸುತ್ತಿರುವ ಜಾಲವನ್ನು ಭೇದಿಸಲು ಏಳು ವಿಶೇಷ ತಂಡಗಳನ್ನು ರಚಿಸಿದ್ದಾರೆ.

ಈ ಪ್ರಕರಣ ಸಂಬಂಧ ಮೇ 18ರಂದು, ಸ್ಥಳೀಯ ಏಜೆಂಟ್‌ರಾದ ಚುಕ್ಕಾ ರಾಜೇಶ್ ವಿಜಯ್ ಕುಮಾರ್, ಮಣ್ಣೇನಾ ಜ್ಞಾನೇಶ್ವರ ರಾವ್, ಸುಬ್ಬವಾರಪು ಕೊಂಡಾಲ ರಾವ್ ಎಂಬುವರನ್ನು ಬಂಧಿಸಲಾಗಿದೆ.

ಈ ಆರೋಪಿಗಳು, ಸಿಂಗಪುರದಲ್ಲಿ ಡಾಟಾ ಎಂಟ್ರಿ ಉದ್ಯೋಗ ಕೊಡಿಸುವುದಾಗಿ ಭಾರತದ ಯುವಕರನ್ನು ನಂಬಿಸಿ, ಅವರನ್ನು ಸೈಬರ್ ಅಪರಾಧದಲ್ಲಿ ತೊಡಗಿಸಲು ಸಿಂಗಪುರ ಮತ್ತು ಬ್ಯಾಂಕಾಕ್ ಮೂಲಕ ಕಾಂಬೋಡಿಯಾಕ್ಕೆ ಕಳುಹಿಸಿಕೊಡುತ್ತಿದ್ದರು. ಕಳ್ಳಸಾಗಣೆಗೆ ಒಳಗಾಗಿರುವ ಯುವಕರ ಹೆಸರು ಮತ್ತು ವಿವರಗಳನ್ನು ಆರೋಪಿಗಳು ವಿಚಾರಣೆ ವೇಳೆ ಒದಗಿಸಿದ್ದಾರೆ ಎಂದು ಪೊಲೀಸರು ಹೇಳಿದ್ದಾರೆ.

ಕಳ್ಳಸಾಗಣೆ ಮಾಡಲಾದ ಯುವಕರನ್ನು ಕಾಂಬೋಡಿಯಾದಲ್ಲಿ ಸೆರೆಯಲ್ಲಿ ಇರಿಸಿ, ಚಿತ್ರಹಿಂಸೆ ನೀಡಲಾಗುತ್ತಿದೆ. ಅಲ್ಲದೆ, ಇವರಿಂದ ಭಾರತೀಯರ ಮೇಲೆ ಸೈಬರ್ ಅಪರಾಧಗಳನ್ನು ಮಾಡುವಂತೆ ಒತ್ತಡ ಹೇರಲಾಗುತ್ತಿದೆ. ಎಲ್ಲರ ಪಾಸ್‌ಪೋರ್ಟ್‌ಗಳನ್ನು ಕಸಿದುಕೊಳ್ಳಲಾಗಿದೆ. ಕುಟುಂಬಗಳ ಸದಸ್ಯರೊಂದಿಗೂ ಮಾತನಾಡಲು ಅವಕಾಶ ನೀಡುತ್ತಿಲ್ಲ ಎನ್ನುವುದು ತನಿಖೆಯಲ್ಲಿ ಗೊತ್ತಾಗಿದೆ ಎಂದು ಹೇಳಿದ್ದಾರೆ.

ಕಳ್ಳಸಾಗಣೆಗೆ ಒಳಗಾಗಿರುವ ಭಾರತೀಯ ಯುವಕರು, ಸೈಬರ್ ಅಪರಾಧದ ಕೇಂದ್ರವೆಂದು ಹೇಳಲಾದ ಕಾಂಬೋಡಿಯಾದ ಜಿನ್‌ಬೆ ಮತ್ತು ಕಾಂಪೌಂಡ್, ಸಿಹಾನೌಕ್ವಿಲೆಯಲ್ಲಿ ದೊಡ್ಡ ಗಲಭೆಗಳನ್ನು ನಡೆಸಿದ್ದಾರೆ. ಸುಮಾರು 300 ಭಾರತೀಯರು ತಮ್ಮನ್ನು ನಿಯಂತ್ರಿಸುತ್ತಿರುವ ವ್ಯಕ್ತಿಗಳ ವಿರುದ್ಧ ಸೋಮವಾರ 'ದಂಗೆ' ಎದ್ದಿದ್ದಾರೆ'. ದಂಗೆಯ ವಿಡಿಯೊಗಳನ್ನು ವಿಶಾಖ ನಗರ ಪೊಲೀಸರ ವಾಟ್ಸ್ ಆ್ಯಪ್ ಸಂಖ್ಯೆಗಳಿಗೆ ಕಳುಹಿಸಿದ್ದಾರೆ ಎಂದು ವಿಶಾಖಪಟ್ಟಣ ನಗರ ಪೊಲೀಸ್ ಆಯುಕ್ತ ಡಾ. ಎ. ರವಿಶಂಕರ್ ಅಯ್ಯನರ್ ಅವರು ತಿಳಿಸಿದರು.

'ಈ ಯುವಕರು ತಮ್ಮನ್ನು ಭಾರತಕ್ಕೆ ಮರಳಿ ಕರೆಸಿಕೊಳ್ಳುವಂತೆ ಮನವಿ ಮಾಡಿದ್ದಾರೆ. ಯುವಕರನ್ನು ದೇಶಕ್ಕೆ ಕರೆತರಲು ವಲಸೆ ವಿಭಾಗ, ವಿದೇಶಾಂಗ ವ್ಯವಹಾರಗಳ ಸಚಿವಾಲಯವನ್ನು ನಾವು ಸಂಪರ್ಕಿಸುತ್ತಿದ್ದೇವೆ' ಎಂದು ಅವರು ತಿಳಿಸಿದರು.

'5 ಸಾವಿರ ಭಾರತೀಯರ ಕಳ್ಳಸಾಗಣೆ'

ಬಂಧಿತ ಮೂವರು ಏಜೆಂಟರು ನೀಡಿರುವ ಮಾಹಿತಿ ಆಧರಿಸಿ, ವಿಶಾಖಪಟ್ಟಣ ಮತ್ತು ಅದರ ಸುತ್ತ-ಮುತ್ತಲಿನ ಸ್ಥಳಗಳಿಗೆ ಸೇರಿದ 150 ಯುವಕರನ್ನು ಕಾಂಬೋಡಿಯಾದಲ್ಲಿ ಪತ್ತೆಹಚ್ಚಲಾಗಿದೆ. ವಿವಿಧ ಏಜೆಂಟರ ಮೂಲಕ ದೇಶದಾದ್ಯಂತ ಸುಮಾರು 5,000 ಭಾರತೀಯರನ್ನು ಕಾಂಬೋಡಿಯಾಕ್ಕೆ ಕಳ್ಳಸಾಗಣೆ ಮಾಡಿರುವ ಮಾಹಿತಿ ಲಭಿಸಿದೆ ಎಂದು ವಿಶೇಷ ತನಿಖಾ ತಂಡಗಳ ನೇತೃತ್ವ ವಹಿಸಿರುವ ಜಂಟಿ ಪೊಲೀಸ್ ಆಯುಕ್ತ ಡಾ.ಫಕ್ಕೀರಪ್ಪ ಕಾಗಿನೆಲ್ಲಿ ಪಿಟಿಐ' ಸುದ್ದಿಸಂಸ್ಥೆಗೆ ತಿಳಿಸಿದ್ದಾರೆ.

'ಕಳ್ಳಸಾಗಣೆಗೆ ತುತ್ತಾಗಿರುವ ಈ ಯುವಕರಿಗೆ ಕಾಂಬೋಡಿಯಾದಲ್ಲಿ ಹ್ಯಾಂಡ್ಲರ್‌ಗಳು, ಫೆಡೆಕ್ಸ್ ಹಗರಣಗಳು, ಸ್ಟಾಕ್ ಮಾರ್ಕೆಟ್ ವಂಚನೆಗಳು, ಟಾಸ್ಕ್ ಗೇಮ್ ವಂಚನೆಗಳು ಮತ್ತು ಭಾರತೀಯ ನಾಗರಿಕರ ಮೇಲೆ ವಿವಿಧ ರೀತಿಯ ಸೈಬರ್ ವಂಚನೆಗಳಂತಹ ವಿಶೇಷ ಸೈಬರ್ ಅಪರಾಧಗಳನ್ನು ನಡೆಸಲು ತರಬೇತಿಗೊಳಿಸಿರುವುದು ಗೊತ್ತಾಗಿದೆ' ಎಂದು ಅವರು ಮಾಹಿತಿ ನೀಡಿದರು.

ಟರ್ಬುಲೆನ್ಸ್‌ಗೆ ಸಿಲುಕಿದ ಸಿಂಗಪುರ ವಿಮಾನ

ಬ್ರಿಟನ್ ಪ್ರಯಾಣಿಕ ಸಾವು

ಬ್ಯಾಂಕಾಕ್ (ಎಪಿ/ಪಿಟಿಐ): ಸಿಂಗಪುರ ಏರ್‌ಲೈನ್ಸ್ ಕಂಪನಿಯ ವಿಮಾನವೊಂದು ಹಿಂದೂ ಮಹಾಸಾಗರದ ಮೇಲೆ ಸಾಗುತ್ತಿದ್ದಾಗ ತೀವ್ರ ಟರ್ಬುಲೆನ್ಸ್‌ಗೆ (ಗಾಳಿಯ ಏರುಪೇರಿನಿಂದ ಉಂಟಾಗುವ ಕ್ಷೋಭೆ) ಸಿಲುಕಿ, ಮೂರೇ ನಿಮಿಷಗಳ ಅವಧಿಯಲ್ಲಿ ಆರು ಸಾವಿರ ಅಡಿಗಳಷ್ಟು ಕೆಳಕ್ಕೆ ಕುಸಿಯಿತು. ಇದರ ಪರಿಣಾಮವಾಗಿ ವಿಮಾನದಲ್ಲಿ ಪ್ರಯಾಣಿಸುತ್ತಿದ್ದ ಬ್ರಿಟನ್ ಪ್ರಜೆಯೊಬ್ಬರು ಮೃತಪಟ್ಟಿದ್ದಾರೆ, ಎರಡು ಡಜನ್‌ಗೂ ಹೆಚ್ಚಿನ ಪ್ರಯಾಣಿಕರಿಗೆ ಗಾಯಗಳಾಗಿವೆ. ಈ ವಿಮಾನದಲ್ಲಿ ಭಾರತದ ಮೂವರು ಪ್ರಯಾಣಿಕರೂ ಇದ್ದರು.

ಈ ವಿಮಾನವನ್ನು ಬ್ಯಾಂಕಾಕ್‌ಗೆ ಒಯ್ದು, ಅಲ್ಲಿನ ಸುವರ್ಣಭೂಮಿ ವಿಮಾನ ನಿಲ್ದಾಣದಲ್ಲಿ ಇಳಿಸಲಾಯಿತು ಎಂದು ಕಂಪನಿಯು ಮಂಗಳವಾರ ತಿಳಿಸಿದೆ. ಬ್ರಿಟನ್ ಪ್ರಜೆ 73 ವರ್ಷ ವಯಸ್ಸಾಗಿತ್ತು, ಅವರು ಹೃದಯಾಘಾತದಿಂದ ಮೃತಪಟ್ಟಿರಬಹುದು ಎಂದು ಅಧಿಕಾರಿಗಳು ಹೇಳಿದ್ದಾರೆ. ಆದರೆ ಸಾವಿಗೆ ಕಾರಣ ಖಚಿತವಾಗಿಲ್ಲ. ಮೃತರ ಹೆಸರನ್ನು ತಕ್ಷಣಕ್ಕೆ ಬಹಿರಂಗಪಡಿಸಿಲ್ಲ.

ಮುಖ್ಯಾಂಶಗಳು

- ಆರು ಸಾವಿರ ಅಡಿಗಳಷ್ಟು ಕೆಳಕ್ಕೆ ಕುಸಿದ ವಿಮಾನ
- 20ಕ್ಕೂ ಅಧಿಕ ಮಂದಿಗೆ ಗಾಯ
- ವಿಮಾನದಲ್ಲಿದ್ದ ಮೂವರು ಭಾರತೀಯರು

ವಿಮಾನವು (ಬೋಯಿಂಗ್ 777 ಮಾದರಿ) ಲಂಡನ್‌ನ ಹೀತ್ರೂ ನಿಲ್ದಾಣದಿಂದ ಸಿಂಗಪುರಕ್ಕೆ ಪ್ರಯಾಣಿಸುತ್ತಿತ್ತು, ಇದರಲ್ಲಿ 211 ಮಂದಿ ಪ್ರಯಾಣಿಕರು ಹಾಗೂ 18 ಮಂದಿ ಸಿಬ್ಬಂದಿ ಇದ್ದರು.

ವಿಮಾನವು ಬ್ಯಾಂಕಾಕ್‌ನಲ್ಲಿ ಇಳಿಯುತ್ತಿದ್ದಂತೆಯೇ ವೈದ್ಯಕೀಯ ಸಿಬ್ಬಂದಿ ಪ್ರಯಾಣಿಕರ ನೆರವಿಗೆ ಧಾವಿಸಿದರು. 18 ಮಂದಿ ಪ್ರಯಾಣಿಕರನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ, 12 ಮಂದಿ ಹೊರರೋಗಿಗಳಾಗಿ ಚಿಕಿತ್ಸೆ ಪಡೆದಿದ್ದಾರೆ. ಗಾಯಗೊಂಡಿರುವ ಹಾಗೂ ಗಾಯಗಳು ಇಲ್ಲದ ಪ್ರಯಾಣಿಕರನ್ನು ಸುವರ್ಣಭೂಮಿ ವಿಮಾನ ನಿಲ್ದಾಣದಲ್ಲಿ ಆರೈಕೆ ಮಾಡಲಾಗುತ್ತಿದೆ.

ಸುದ್ದಿಸಂಸ್ಥೆಯ ವಿಶ್ಲೇಷಣೆ ಪ್ರಕಾರ ಈ ವಿಮಾನವು 37 ಸಾವಿರ ಅಡಿ ಎತ್ತರದಲ್ಲಿ ಹಾರಾಟ ನಡೆಸುತ್ತಿತ್ತು. ಒಂದು ಹಂತದಲ್ಲಿ ಇದು 31 ಸಾವಿರ ಅಡಿಗಳಿಗೆ ಕುಸಿಯಿತು. ಆ ಎತ್ತರದಲ್ಲಿ 10 ನಿಮಿಷಗಳಿಗೂ ಕಡಿಮೆ ಅವಧಿಗೆ ಹಾರಾಟ ನಡೆಸಿದ ವಿಮಾನವು ನಂತರ ಪಥ ಬದಲಿಸಿತು. ಕುಸಿತ ಕಂಡ ಸಂದರ್ಭದಲ್ಲಿ ವಿಮಾನವು ಮ್ಯಾನ್ಮಾರ್ ಸಮೀಪ ಅಂಡಮಾನ್ ಸಮುದ್ರದ ಮೇಲೆ ಹಾರುತ್ತಿತ್ತು.

ಸೀಟ್‌ಬೆಲ್ಟ್ ಧರಿಸಿದ್ದ ಯಾವ ಪ್ರಯಾಣಿಕರಿಗೂ ಗಾಯಗಳಾಗಿಲ್ಲ ಎಂದು ವಿಮಾನದಲ್ಲಿ ಇದ್ದ ಪ್ರಯಾಣಿಕ ಆಂಡ್ರೂ ಡೇವಿಸ್ ಸುದ್ದಿಸಂಸ್ಥೆಯೊಂದಕ್ಕೆ ತಿಳಿಸಿದ್ದಾರೆ.

ಪ್ರಯಾಣಿಕರಿಗೆ ಆಹಾರ ನೀಡುತ್ತಿದ್ದ ಹೊತ್ತಿನಲ್ಲಿ ವಿಮಾನವು ಇದ್ದಕ್ಕಿದ್ದಂತೆ ಕೆಳಕ್ಕೆ ಇಳಿಯಲಾರಂಭಿಸಿತು ಎಂದು ಸುವರ್ಣಭೂಮಿ ವಿಮಾನ ನಿಲ್ದಾಣದ ಪ್ರಧಾನ ವ್ಯವಸ್ಥಾಪಕ ಕಿಟ್ಟಿಪಾಂಗ್ ಕಿಟ್ಟಿಕಚೊರ್ನ್ ತಿಳಿಸಿದ್ದಾರೆ.

ಸಾರಣ್‌ನಲ್ಲಿ ಸಂಘರ್ಷ ಒಬ್ಬ ಬಲಿ

ಪ್ರಜಾವಾಣಿ ವಾರ್ತೆ

ಪಟ್ನಾ: ಮತದಾನ ನಡೆದ ನಂತರದಲ್ಲಿ ಸಾರಣ್‌ನಲ್ಲಿ ನಡೆದ ಸಂಘರ್ಷದಲ್ಲಿ ಒಬ್ಬ ವ್ಯಕ್ತಿ ಮೃತಪಟ್ಟಿದ್ದು, ಇಬ್ಬರಿಗೆ ಗುಂಡೇಟು ತಗುಲಿ ಗಾಯಗಳಾಗಿವೆ.

ಅಲ್ಲಿ ಈಗ ಇಂಟರ್ನೆಟ್ ಸೇವೆಗಳನ್ನು ಸ್ಥಗಿತಗೊಳಿಸಲಾಗಿದ್ದು, ಜಿಲ್ಲಾ ಕೇಂದ್ರ ಛಪರಾದಲ್ಲಿ ಪೊಲೀಸ್ ಬಂದೋಬಸ್ತ್ ಏರ್ಪಡಿಸಲಾಗಿದೆ. ಸಾರಣ್‌ನಲ್ಲಿ ಸೋಮವಾರ ಮತದಾನ ನಡೆದಿದ್ದು, ಶೇಕಡ 52ರಷ್ಟು ಮತದಾನ ಆಗಿದೆ.

ಮತದಾನ ಪ್ರಕ್ರಿಯೆ ಪೂರ್ಣಗೊಳ್ಳಬೇಕಿದ್ದ ಸಮಯದಲ್ಲಿ ಛಪರಾದಲ್ಲಿ ಗಲಾಟೆ ಶುರುವಾಯಿತು. ಇಲ್ಲಿನ ಆರ್‌ಜೆಡಿ ಅಭ್ಯರ್ಥಿ, ಲಾಲು ಪ್ರಸಾದ್ ಅವರ ಪುತ್ರಿ ರೋಹಿಣಿ ಆಚಾರ್ಯ ಅವರು ಇಲ್ಲಿನ ಮತಗಟ್ಟೆಯೊಂದಕ್ಕೆ ಭೇಟಿ ನೀಡಿ, ಅಲ್ಲಿ ಕೆಲವರು ನಿಂತಿದ್ದ ಕುರಿತು ಆಕ್ಷೇಪ ವ್ಯಕ್ತಪಡಿಸಿದರು. ನಂತರ ಎದುರಾಳಿ ಬಿಜೆಪಿಯ ಬೆಂಬಲಿಗರಲ್ಲಿ ಕೆಲವರು ರೋಹಿಣಿ ಅವರ ಬಗ್ಗೆ ಕೆಟ್ಟ ಮಾತು ಆಡಿದರು ಎನ್ನಲಾಗಿದೆ.

ಪರಿಸ್ಥಿತಿ ವಿಷಮಗೊಳ್ಳುವ ಮೊದಲೇ ರೋಹಿಣಿ ಅವರು ಅಲ್ಲಿಂದ ನಡೆದರು. ಆಗ ಪರಿಸ್ಥಿತಿ ಶಾಂತಗೊಂಡಿತ್ತು. ಆದರೆ ಮಂಗಳವಾರ ಬೆಳಿಗ್ಗೆ ಮತ್ತೆ ಗಲಾಟೆ ಶುರುವಾಯಿತು. ಆರಂಭದಲ್ಲಿ ಮಾತಿಗೆ ಸೀಮಿತವಾಗಿದ್ದ ಗಲಾಟೆಯು, ನಂತರ ಮುಷ್ಟಿ ಕಾಳಗಕ್ಕೆ ತಿರುಗಿತು. ಒಂದು ಗುಂಪಿನ ಕಡೆಯವರು ಗುಂಡು ಹಾರಿಸಿದರು. ಗುಂಡೇಟು ತಗುಲಿ ಗಂಭೀರ ಗಾಯಗಳಾಗಿದ್ದ ಚಂದನ್ ಕುಮಾರ್ (26) ಎನ್ನುವವರು ಮೃತಪಟ್ಟರು. ಗಂಭೀರ ಗಾಯಗಳಾಗಿರುವ ಇನ್ನಿಬ್ಬರನ್ನು ಸಮೀಪದ ಆಸ್ಪತ್ರೆಗೆ ಸಾಗಿಸಲಾಯಿತು.

ನಂತರ ಅವರನ್ನು ಹೆಚ್ಚಿನ ಚಿಕಿತ್ಸೆಗೆ ಪಟ್ನಾ ಆಸ್ಪತ್ರೆಗೆ ಕರೆದೊಯ್ಯಲಾಯಿತು. 'ಪರಿಸ್ಥಿತಿಯನ್ನು ನಿಯಂತ್ರಣಕ್ಕೆ ತರುವ ಉದ್ದೇಶದಿಂದ ಇಂಟರ್ನೆಟ್ ಸೇವೆಗಳನ್ನು ಎರಡು ದಿನಗಳಮಟ್ಟಿಗೆ ಸ್ಥಗಿತಗೊಳಿಸಲಾಗಿದೆ' ಎಂದು ಸಾರಣ್‌ನ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಗೌರವ್ ಮಂಗಲಾ ತಿಳಿಸಿದ್ದಾರೆ. ಘಟನೆಗೆ ಸಂಬಂಧಿಸಿದಂತೆ ಬಿಜೆಪಿಯ ಇಬ್ಬರು ಮುಖಂಡರನ್ನು ವಶಕ್ಕೆ ಪಡೆಯಲಾಗಿದೆ ಎಂದು ಹೇಳಿದ್ದಾರೆ.

ಸಾರಣ್ ಲೋಕಸಭಾ ಕ್ಷೇತ್ರದಲ್ಲಿ ರೋಹಿಣಿ ಅವರು ಬಿಜೆಪಿಯ ರಾಜೀವ್ ಪ್ರತಾಪ್ ರೂಢಿ ಅವರ ವಿರುದ್ಧ ಕಣಕ್ಕೆ ಇಳಿದಿದ್ದಾರೆ. ಮೋತಿಹಾರಿ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ರಾಧಾಮೋಹನ್ ಸಿಂಗ್ ಅವರ ಪರವಾಗಿ ಪ್ರಚಾರ ನಡೆಸಲು ಪ್ರಧಾನಿ ನರೇಂದ್ರ ಮೋದಿ ಅವರು ಬಿಹಾರಕ್ಕೆ ಭೇಟಿ ನೀಡಿದ ದಿನವೇ ಈ ಘಟನೆ ನಡೆದಿದೆ.

ಸಿಸೋಡಿಯಾ ನ್ಯಾಯಾಂಗ ಬಂಧನ ಅವಧಿ ವಿಸ್ತರಣೆ

ನವದೆಹಲಿ (ಪಿಟಿಐ): ಎಎಪಿ ನಾಯಕ ಮನೀಶ್ ಸಿಸೋಡಿಯಾ ಅವರ ನ್ಯಾಯಾಂಗ ಬಂಧನ ಅವಧಿಯನ್ನು ಮೇ 31ರವರೆಗೆ ವಿಸ್ತರಿಸಿ ದೆಹಲಿ ಕೋರ್ಟ್ ಮಂಗಳವಾರ ಆದೇಶ ಪ್ರಕಟಿಸಿದೆ.

ವಿಶೇಷ ನ್ಯಾಯಾಧೀಶೆ ಕಾವೇರಿ ಬಾವೇಜಾ ಅವರು ನ್ಯಾಯಾಂಗ ಬಂಧನ ಅವಧಿ ವಿಸ್ತರಿಸಿ ಆದೇಶಿಸಿದರು.

ಅಬಕಾರಿ ನೀತಿಗೆ ಸಂಬಂಧಿಸಿದ ಹಣ ಅಕ್ರಮ ವರ್ಗಾವಣೆ ಪ್ರಕರಣದಲ್ಲಿ ಮನೀಶ್ ಸಿಸೋಡಿಯಾ ಅವರನ್ನು ಕಳೆದ ವರ್ಷ ಮಾರ್ಚ್ 9ರಂದು ಜಾರಿ ನಿರ್ದೇಶನಾಲಯ ಬಂಧಿಸಿತ್ತು.

ಉನ್ನತ ಮಟ್ಟದ ತನಿಖೆ ನಡೆಸುವಂತೆ ಡಿಜಿಸಿಐಗೆ ಒತ್ತಾಯ

ವಿಮಾನ ಡಿಕ್ಕಿ: 40 ರಾಜಹಂಸಗಳ ಸಾವು

ಪ್ರಜಾವಾಣಿ ವಾರ್ತೆ



ರಾಜಹಂಸಗಳ ಕಳೇಬರವನ್ನು ಕಾರ್ಮಿಕರು ತೆರವುಗೊಳಿಸಿದರು. –ಪಿಟಿಐ ಚಿತ್ರ

ಮುಂಬೈ: ಛತ್ರಪತಿ ಶಿವಾಜಿ ಮಹಾರಾಜ್ ವಿಮಾನ ನಿಲ್ದಾಣದಲ್ಲಿ ಸೋಮವಾರ ರಾತ್ರಿ ಇಳಿಯುತ್ತಿದ್ದ ಪ್ರಯಾಣಿಕ ವಿಮಾನವೊಂದು ಬಡಿದ ಪರಿಣಾಮವಾಗಿ ಘಾಟ್‌ಕೊಪರ್ ಪ್ರದೇಶದಲ್ಲಿ ಸುಮಾರು 40 ರಾಜಹಂಸಗಳು ಸಾವಿಗೀಡಾಗಿವೆ. ಹಿಂದೆಂದೂ ಇಂತಹ ಘಟನೆ ನಡೆದಿರಲಿಲ್ಲ.

ಈ ವಿಮಾನದಲ್ಲಿ 300ಕ್ಕೂ ಹೆಚ್ಚು ಪ್ರಯಾಣಿಕರು ಇದ್ದರು ಎಂದು ವರದಿಗಳು ಹೇಳಿವೆ. ರಾಜಹಂಸಗಳು ಸಾವಿಗೀಡಾಗಿರುವುದನ್ನು ಮಹಾರಾಷ್ಟ್ರ ಅರಣ್ಯ ಇಲಾಖೆ ಮತ್ತು ಬಾಂಬೆ ನ್ಯಾಚುರಲ್ ಹಿಸ್ಟರಿ ಸೊಸೈಟಿ (ಬಿಎನ್‌ಎಚ್‌ಎಸ್) ಖಚಿತಪಡಿಸಿವೆ.

ವಿಮಾನವು ಪಕ್ಷಿಗಳಿಗೆ ಡಿಕ್ಕಿಹೊಡೆದಿದ್ದು ಹೇಗೆ, ವಿಮಾನದ ಪೈಲಟ್‌ಗೆ ಹಕ್ಕಿಗಳ ಗುಂಪನ್ನು ರೇಡಾರ್‌ನಲ್ಲಿ ಗುರುತಿಸಲು ಸಾಧ್ಯವಾಗಲಿಲ್ಲವೇ ಎಂಬ ಬಗ್ಗೆ ಉನ್ನತ ಮಟ್ಟದ ತನಿಖೆ ನಡೆಸುವಂತೆ ನಾಗರಿಕ ವಿಮಾನಯಾನ ಮಹಾನಿರ್ದೇಶನಾಲಯಕ್ಕೆ (ಡಿಜಿಸಿಐ) ನವಿ ಮುಂಬೈನ ನ್ಯಾಟ್‌ಕನೆಕ್ಟ್ ಫೌಂಡೇಷನ್ ಒತ್ತಾಯಿಸಿದೆ.

'ಘಟನೆಯ ಬಗ್ಗೆ ತನಿಖೆ ನಡೆಯುತ್ತಿದೆ' ಎಂದು ಹೆಚ್ಚುವರಿ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಎಸ್.ವಿ. ರಾಮರಾವ್ ತಿಳಿಸಿದ್ದಾರೆ. ಘಟನೆಯ ಬಗ್ಗೆ ತಿಳಿದ ನಂತರ ಅರಣ್ಯ ಇಲಾಖೆಯ ಹಿರಿಯ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿದ್ದರು.

ರಾಜಹಂಸಗಳ ಕಳೇಬರ ಬಿದ್ದಿದ್ದ ಸ್ಥಳವನ್ನು ಗಮನಿಸಿದರೆ, ವಿಮಾನ ಡಿಕ್ಕಿಹೊಡೆದ ಪರಿಣಾಮವಾಗಿ ಈ ರೀತಿ ಆಗಿದೆ ಎಂದು ಅನ್ನಿಸುತ್ತದೆ ಎಂದು ಬಿಎನ್‌ಎಚ್‌ಎಸ್ ನಿರ್ದೇಶಕ ಕಿಶೋರ್ ರಿತೆ ತಿಳಿಸಿದ್ದಾರೆ.

ಸಿಗದ ಪ್ರೋತ್ಸಾಹ ಧನ: ಹೈನುಗಾರಿಕೆಗೆ ಹಿನ್ನಡೆ

ಒಂದನೇ ಪುಟದಿಂದ...

ಹಾಲಿನ ಬೇಡಿಕೆ ಹೆಚ್ಚಳ: 'ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆ ಒಳಗೊಂಡ ದಕ್ಷಿಣ ಕನ್ನಡ ಸಹಕಾರಿ ಹಾಲು ಉತ್ಪಾದಕರ ಒಕ್ಕೂಟದಡಿ 740 ಹಾಲು ಸಹಕಾರ ಸಂಘಗಳು ಇವೆ. ಪ್ರತಿನಿತ್ಯ ಸರಾಸರಿ 7.70 ಲಕ್ಷ ಲೀಟರ್ ಹಾಲು ಸಂಗ್ರಹ ಆಗುತ್ತದೆ. ಹಾಲು, ಮೊಸರು, ಹಾಲಿನ ವಿವಿಧ ಉತ್ಪನ್ನಗಳ ತಯಾರಿಕೆಗೆ ದಿನಕ್ಕೆ 6 ಲಕ್ಷ ಲೀಟರ್ ಹಾಲು ಬೇಕು. ಹಾಲಿನ ಬೇಡಿಕೆ ಶೇ 25ರಷ್ಟು ಹೆಚ್ಚಳವಾಗಿದೆ. ಕೊರತೆಯಾಗುವ ಹಾಲನ್ನು ಮಂಡ್ಯ, ಹಾಸನ ಜಿಲ್ಲೆಗಳಿಂದ ತರಿಸಿಕೊಳ್ಳುತ್ತೇವೆ' ಎಂದು ದಕ್ಷಿಣ ಕನ್ನಡ ಸಹಕಾರಿ ಹಾಲು ಉತ್ಪಾದಕರ ಒಕ್ಕೂಟದ ಅಧ್ಯಕ್ಷ ಸುಚರಿತ್ ಶೆಟ್ಟಿ ತಿಳಿಸಿದರು.

'ಒಕ್ಕೂಟದಡಿ 52 ಸಾವಿರ ಹೈನುಗಾರರು ಇದ್ದು, ಅವರೆಲ್ಲ ಪ್ರತಿದಿನ ಡೇರಿಗೆ ಹಾಲು ನೀಡುತ್ತಾರೆ. ಅವರಿಗೆ 8 ತಿಂಗಳಿನಿಂದ ಹಾಲಿನ ಪ್ರೋತ್ಸಾಹ ಧನ ಬಂದಿಲ್ಲ' ಎಂದು ಅವರು ವಿವರಿಸಿದರು.

'ಗ್ಯಾರಂಟಿ ವೆಚ್ಚ, ಚುನಾವಣೆ ನೀತಿ ಸಂಹಿತೆಯ ನೆಪವೊಡ್ಡಿ ಪ್ರೋತ್ಸಾಹ ಧನ ಬಿಡುಗಡೆ ಮುಂದೂಡಲಾಗುತ್ತಿದೆ. ನಿಯಮಿತವಾಗಿ ಬಿಡುಗಡೆ ಮಾಡುತ್ತಿಲ್ಲ. ಮುಂದಿನ ದಿನಗಳಲ್ಲಿ ಇದೇ ಪರಿಸ್ಥಿತಿ ಮುಂದುವರಿದರೆ, ಹೈನುಗಾರಿಕೆಯಿಂದ ನಾವು ವಿಮುಖರಾಗುವ ದಿನಗಳು ದೂರವಿಲ್ಲ' ಎಂದು ರೈತರು ಹೇಳುತ್ತಾರೆ.

> **ಪ್ರೋತ್ಸಾಹ ಧನವನ್ನು ಕೂಡಲೇ ಬಿಡುಗಡೆ ಮಾಡಬೇಕು ಎಂದು ಕೆಎಂಎಫ್ ಮೂಲಕ ಸರ್ಕಾರಕ್ಕೆ ಕೋರಲಾಗಿದೆ. ಸಿ.ಎಂ ಭೇಟಿಯಾಗಿ, ಮನವಿಪತ್ರ ಸಲ್ಲಿಸಲಾಗಿದೆ**
>
> **ಸುಚರಿತ್ ಶೆಟ್ಟಿ.,** ಅಧ್ಯಕ್ಷ, ದಕ್ಷಿಣ ಕನ್ನಡ ಸಹಕಾರಿ ಹಾಲು ಉತ್ಪಾದಕರ ಒಕ್ಕೂಟ

> **ಪಶು ಆಹಾರದ ದರ ಹೆಚ್ಚಳವಾಗಿದೆ. ಪ್ರೋತ್ಸಾಹಧನವನ್ನೂ ಬಿಡುಗಡೆ ಮಾಡಿಲ್ಲ. ಮುಂದಿನ ದಿನಗಳಲ್ಲಿ ಹೈನುಗಾರಿಕೆ ನಡೆಸುವುದೇ ಕಷ್ಟವಾಗಲಿದೆ.**
>
> **ನಾಗಾನಂದ,** ರೈತ, ಪಿರಿಯಾಪಟ್ಟಣ

ಲಂಚ ಪಡೆದು ಸಿಕ್ಕಿಬಿದ್ದ ಸಿಬಿಐ ಅಧಿಕಾರಿಗಳು

ನವದೆಹಲಿ (ಪಿಟಿಐ): ಮಧ್ಯಪ್ರದೇಶದ ನರ್ಸಿಂಗ್ ಕಾಲೇಜು ಹಗರಣದ ತನಿಖೆಯಲ್ಲಿ ಸಿಬಿಐ ಅಧಿಕಾರಿಗಳೇ ಲಂಚ ಪಡೆದಿರುವುದು ಬಯಲಾಗಿದೆ.

ಕಾಲೇಜುಗಳ ಪರಿಶೀಲನೆ ವೇಳೆ ಅನರ್ಹ ನರ್ಸಿಂಗ್ ಕಾಲೇಜುಗಳಿಗೆ ಅನುಕೂಲವಾಗುವಂತೆ ವರದಿ ನೀಡಲು ಸಿಬಿಐ ಅಧಿಕಾರಿಗಳು ಪ್ರತಿ ಸಂಸ್ಥೆಯಿಂದ ₹2 ಲಕ್ಷದಿಂದ ₹10 ಲಕ್ಷ ಲಂಚ ಪಡೆದಿರುವುದು ಬಹಿರಂಗಗೊಂಡಿದೆ ಎಂದು ಕೇಂದ್ರ ತನಿಖಾ ಸಂಸ್ಥೆ ತಿಳಿಸಿದೆ.

ಸಿಬಿಐ ಡಿಎಸ್‌ಪಿ ಅನೀಶ್ ಪ್ರಸಾದ್, ಮಧ್ಯಪ್ರದೇಶ ಪೊಲೀಸ್ ಇಲಾಖೆಯಿಂದ ಸಿಬಿಐಗೆ ನಿಯೋಜಿತರಾಗಿದ್ದ ಇನ್‌ಸ್ಪೆಕ್ಟರ್‌ಗಳಾದ ರಾಹುಲ್ ರಾಜ್ ಮತ್ತು ಸುಶೀಲ್ ಕುಮಾರ್ ಮಜೋಕಾ ಮತ್ತು ರಿಷಿ ಕಾಂತ್ ಅಸಾಥೆ ಸೇರಿ 22 ಮಂದಿ ವಿರುದ್ಧ ಈ ಪ್ರಕರಣದಲ್ಲಿ ಸಿಬಿಐ ಪ್ರಕರಣ ದಾಖಲಿಸಿದ್ದು, ರಾಹುಲ್ ರಾಜ್ ಅವರನ್ನು ಭಾನುವಾರ ಬಂಧಿಸಿದೆ.

ಬ್ರಿಜ್‌ಭೂಷಣ್ ವಿರುದ್ಧ ದೆಹಲಿ ನ್ಯಾಯಾಲಯದ ದೋಷಾರೋಪ

ನವದೆಹಲಿ (ಪಿಟಿಐ): ಮಹಿಳಾ ಕುಸ್ತಿಪಟುಗಳು ಹೂಡಿದ ಕ್ರಿಮಿನಲ್ ಪ್ರಕರಣದಲ್ಲಿ ಭಾರತ ಕುಸ್ತಿ ಫೆಡರೇಷನ್‌ನ ಮಾಜಿ ಅಧ್ಯಕ್ಷ ಬ್ರಿಜ್ ಭೂಷಣ್ ಶರಣ್ ಸಿಂಗ್ ವಿರುದ್ಧ ದೆಹಲಿಯ ನ್ಯಾಯಾಲಯವು ಲೈಂಗಿಕ ದೌರ್ಜನ್ಯ, ಬೆದರಿಕೆ, ಮಹಿಳೆಯ ಘನತೆಗೆ ಕುಂದು ಉಂಟುಮಾಡಿದ ದೋಷಾರೋಪವನ್ನು ಮಂಗಳವಾರ ಹೊರಿಸಿದೆ.

ನ್ಯಾಯಾಲಯವು, ಪ್ರಕರಣದಲ್ಲಿ ಸಹ ಆರೋಪಿ ವಿನೋದ್ ತೋಮಾರ್ ವಿರುದ್ಧ ಕ್ರಿಮಿನಲ್ ಬೆದರಿಕೆಯ ದೋಷಾರೋಪ ಹೊರಿಸಿದೆ.

ನಿರಾಕರಿಸಿದ ಸಿಂಗ್: ಮಹಿಳಾ ಕುಸ್ತಿಪಟುಗಳಿಗೆ ಲೈಂಗಿಕ ಕಿರುಕುಳ ನೀಡಿರುವ ಆರೋಪವನ್ನು ಬ್ರಿಜ್ ಭೂಷಣ್ ಶರಣ್ ಸಿಂಗ್ ನಿರಾಕರಿಸಿದ್ದಾರೆ. 'ನಾನು ಯಾವುದೇ ತಪ್ಪು ಮಾಡದಿದ್ದಾಗ, ಅದನ್ನು ಏಕೆ ಒಪ್ಪಿಕೊಳ್ಳಬೇಕು?' ಎಂದು ಸಿಂಗ್ ಮಂಗಳವಾರ ನ್ಯಾಯಾಲಯಕ್ಕೆ ತಿಳಿಸಿದರು ಎಂದು ಎನ್‌ಡಿಟಿವಿ ವರದಿ ಮಾಡಿದೆ.

'ಉದ್ಭವ್' ಯೋಜನೆಯಡಿ ಸೇನೆ ಪರಂಪರೆಯ ಅಭಿವ್ಯಕ್ತಿ

ನವದೆಹಲಿ (ಪಿಟಿಐ): ರಕ್ಷಣಾ ಕ್ಷೇತ್ರದಲ್ಲಿ ದೇಶದ ಒಟ್ಟು ಚಿತ್ರಣ ಹಾಗೂ ಭಾರತೀಯ ಸೇನೆಯ ಶ್ರೀಮಂತ ಪರಂಪರೆ, ಮಹಾಭಾರತ ಮಹಾಕಾವ್ಯದ ಯುದ್ಧದ ಸನ್ನಿವೇಶಗಳನ್ನು 'ಉದ್ಭವ್' ಯೋಜನೆಯಡಿ ಭಾರತೀಯ ಸೇನೆಯು ಪ್ರದರ್ಶಿಸಲಿದೆ.

'ಭಾರತದ ಭಿನ್ನ ಸಂಸ್ಕೃತಿಯ ಐತಿಹಾಸಿಕ ಸ್ವರೂಪ' ವಿಷಯ ಕುರಿತು ಮಂಗಳವಾರ ಇಲ್ಲಿ ನಡೆದ ಸಮ್ಮೇಳನದಲ್ಲಿ ಮಾತನಾಡಿದ ಸೇನೆ ಮುಖ್ಯಸ್ಥ ಜನರಲ್ ಮನೋಜ್ ಪಾಂಡೆ ತಿಳಿಸಿದರು. 'ಉದ್ಭವ್ ಯೋಜನೆಗೆ ಕಳೆದ ವರ್ಷ ಚಾಲನೆ ನೀಡಲಾಗಿತ್ತು. ಯೋಜನೆಯಡಿ ವೇದ, ಪುರಾಣ, ಉಪನಿಷದ್, ಅರ್ಥಶಾಸ್ತ್ರಗಳ ಆಳವಾದ ಅಧ್ಯಯನ ನಡೆಸಲಿದ್ದು, ಭಾರತೀಯ ಮತ್ತು ಪಾಶ್ಚಿಮಾತ್ಯ ವಿದ್ವಾಂಸರ ನಡುವಿನ ಬೌದ್ಧಿಕ ಸಮಾನಾಂಶಗಳನ್ನು ದಾಖಲಿಸಲಾಗುವುದು' ಎಂದರು.

'9999' ನೋಂದಣಿ ಸಂಖ್ಯೆ– ಭರ್ಜರಿ ₹25 ಲಕ್ಷಕ್ಕೆ ಬಿಕರಿ

ಹೈದರಾಬಾದ್ (ಪಿಟಿಐ): ತೆಲಂಗಾಣ ಮೂಲದ ಕಾರು ಮಾಲೀಕರೊಬ್ಬರು ₹25.50 ಲಕ್ಷ ಪಾವತಿಸಿ ತಮ್ಮ ಅಚ್ಚುಮೆಚ್ಚಿನ '9999' ನೋಂದಣಿ ಸಂಖ್ಯೆಯನ್ನು ತಮ್ಮದಾಗಿಸಿಕೊಂಡಿದ್ದಾರೆ.

ತೆಲಂಗಾಣ ರಾಜ್ಯ ರಸ್ತೆ ಸಾರಿಗೆ ಪ್ರಾಧಿಕಾರವು '9999' ನೋಂದಣಿ ಸಂಖ್ಯೆಯ ಮಾರಾಟಕ್ಕಾಗಿ ಸೋಮವಾರ ಆನ್‌ಲೈನ್ ಮೂಲಕ ಬಿಡ್ಡಿಂಗ್ ನಡೆಸಿತು. ಈ ಪ್ರಕ್ರಿಯೆಯಲ್ಲಿ 11 ಮಂದಿ ಪಾಲ್ಗೊಂಡಿದ್ದರು. ಕೊನೆಯದಾಗಿ ಈ ಸಂಖ್ಯೆಯು ಭರ್ಜರಿ ₹25.5 ಲಕ್ಷಕ್ಕೆ ಬಿಕರಿಯಾಯಿತು. ಈ ಮೂಲಕ '9999' ಅತಿಹೆಚ್ಚು ಮೊತ್ತಕ್ಕೆ ಮಾರಾಟವಾದ ಸಂಖ್ಯೆಯಾಗಿದೆ ಎಂದು ಹೈದರಾಬಾದ್ ಸಾರಿಗೆ ಇಲಾಖೆಯ ಜಂಟಿ ಆಯುಕ್ತ ಸಿ. ರಮೇಶ್ ತಿಳಿಸಿದ್ದಾರೆ.

ಕಳೆದ ವರ್ಷದ ಆಗಸ್ಟ್‌ನಲ್ಲಿ ನಡೆದ ಆನ್‌ಲೈನ್ ಹರಾಜು ಪ್ರಕ್ರಿಯೆಯಲ್ಲಿ '9999' ಸಂಖ್ಯೆಯು ₹21.6 ಲಕ್ಷಕ್ಕೆ ಮಾರಾಟವಾಗಿತ್ತು.

ಇಷ್ಟದ ನೋಂದಣಿ ಸಂಖ್ಯೆ ಪಡೆಯಲು ಇಚ್ಛಿಸುವವರು ₹50 ಸಾವಿರ ಮುಂಗಡವಾಗಿ ಪಾವತಿಸಿ, ತಮ್ಮ ಇಷ್ಟದ ಸಂಖ್ಯೆಯನ್ನು ಕಾಯ್ದಿರಿಸಿಕೊಳ್ಳಬಹುದು. ಆ ಮೂಲಕ ಆನ್‌ಲೈನ್ ಹರಾಜು ಪ್ರಕ್ರಿಯೆಯಲ್ಲಿ ಭಾಗವಹಿಸಬಹುದು ಎಂದು ಅಧಿಕಾರಿ ತಿಳಿಸಿದ್ದಾರೆ.

ಐ.ಎಸ್. ಸಂಪರ್ಕ: ಬಂಧಿತರ ಬಗ್ಗೆ ಮಾಹಿತಿ ಕಲೆಹಾಕುತ್ತಿರುವ ಶ್ರೀಲಂಕಾ

ಕೊಲಂಬೊ (ಪಿಟಿಐ): ನಿಷೇಧಿತ ಇಸ್ಲಾಮಿಕ್ ಸ್ಟೇಟ್ (ಐ.ಎಸ್) ಭಯೋತ್ಪಾದಕ ಸಂಘಟನೆಯ ಜೊತೆ ನಂಟು ಇರುವ ಆರೋಪದ ಅಡಿಯಲ್ಲಿ ಶ್ರೀಲಂಕಾದ ನಾಲ್ವರನ್ನು ಗುಜರಾತ್ ಭಯೋತ್ಪಾದನಾ ನಿಗ್ರಹ ದಳವು (ಎಟಿಎಸ್) ಬಂಧಿಸಿರುವ ಬೆನ್ನಲ್ಲೇ, ಆ ವ್ಯಕ್ತಿಗಳ ಬಗ್ಗೆ ಮಾಹಿತಿ ಕಲೆಹಾಕಲು ಶ್ರೀಲಂಕಾ ಮುಂದಾಗಿದೆ ಎಂದು ಮಾಧ್ಯಮ ವರದಿಯೊಂದು ಹೇಳಿದೆ.

ಖಚಿತ ಸುಳಿವು ಆಧರಿಸಿ ಗುಜರಾತ್‌ನ ಎಟಿಎಸ್ ಅಧಿಕಾರಿಗಳು 4 ಮಂದಿಯನ್ನು ಅಹಮದಾಬಾದ್‌ನ ವಿಮಾನ ನಿಲ್ದಾಣದಲ್ಲಿ ಭಾನುವಾರ ಬಂಧಿಸಿದ್ದಾರೆ. ಈ ನಾಲ್ಕು ಮಂದಿ ಕೊಲಂಬೊದಿಂದ ಚೆನ್ನೈ ಮೂಲಕ ಅಹಮದಾಬಾದ್‌ಗೆ ಬಂದಿದ್ದರು.

ಐ.ಎಸ್ ಸಂಘಟನೆಯ ಪರವಾಗಿ ಭಯೋತ್ಪಾದಕ ಕೃತ್ಯಗಳನ್ನು ಎಸಗಲು ಈ ನಾಲ್ಕು ಮಂದಿ ಭಾರತಕ್ಕೆ ಬಂದಿದ್ದರು, ಇವರು ಐ.ಎಸ್ ಸದಸ್ಯರು, ಪಾಕಿಸ್ತಾನದಲ್ಲಿ ವಾಸಿಸುತ್ತಿರುವ ಶ್ರೀಲಂಕಾ ಮೂಲದ ವ್ಯಕ್ತಿಯೊಬ್ಬ ಇವರಲ್ಲಿ ಉಗ್ರ ಸಂಘಟನೆಯ ಪರ ವಿಚಾರಗಳನ್ನು ತುಂಬಿದ್ದಾನೆ ಎಂದು ಪೊಲೀಸರು ಆರೋಪಿಸಿದ್ದಾರೆ.

ಶ್ರೀಲಂಕಾದ ಗುಪ್ತಚರ ವಿಭಾಗದ ಅಧಿಕಾರಿಗಳು ಶಂಕಿತರ ಹಿನ್ನೆಲೆಯನ್ನು ಪರಿಶೀಲಿಸಲು, ಅವರು ಐ.ಎಸ್ ಜೊತೆ ನಂಟು ಹೊಂದಿರುವ ಬಗ್ಗೆ ತನಿಖೆ ನಡೆಸಲು ಭಾರತದ ಗುಪ್ತಚರ ಅಧಿಕಾರಿಗಳಿಂದ ಹೆಚ್ಚಿನ ಮಾಹಿತಿ ಕೋರಿದ್ದಾರೆ ಎಂದು ಡೈಲಿ ಮಿರರ್ ಪತ್ರಿಕೆ ವರದಿ ಮಾಡಿದೆ.

ಬೆಳವಣಿಗೆಗಳನ್ನು ತಾವು ಸೂಕ್ಷ್ಮವಾಗಿ ಅವಲೋಕಿಸುತ್ತಿರುವುದಾಗಿ ಶ್ರೀಲಂಕಾದ ಸಾರ್ವಜನಿಕ ಭದ್ರತಾ ಸಚಿವ ತಿರನ್ ಅಲ್ಲೆಸ್ ಮತ್ತು ಐಜಿಪಿ ದೇಶಬಂಧು ತೆನ್ನಕೂನ್ ಹೇಳಿದ್ದಾರೆ.

ಶಂಕಿತರಾದ ಮೊಹಮ್ಮದ್ ನುಸ್ರತ್, ಮೊಹಮ್ಮದ್ ಫಾರೂಕ್, ಮೊಹಮ್ಮದ್ ನಫ್ರನ್ ಮತ್ತು ಮೊಹಮ್ಮದ್ ರಸ್ದೀನ್ ಅವರು ಈ ಮೊದಲು ಶ್ರೀಲಂಕಾದ ನಿಷೇಧಿತ ಉಗ್ರಗಾಮಿ ಸಂಘಟನೆ ನ್ಯಾಷನಲ್ ತೌಹೀದ್ ಜಮಾತ್‌ನ ಸದಸ್ಯರಾಗಿದ್ದರು. ನಂತರ ಅವರು ಪಾಕಿಸ್ತಾನದ ಅಬು ಬಕರ್ ಅಲ್ ಬಗ್ದಾದಿ ಸಂಪರ್ಕಕ್ಕೆ ಬಂದು ಐ.ಎಸ್ ಸೇರಿದ್ದಾರೆ ಎಂದು ಗುಜರಾತ್ ಡಿಜಿಪಿ ವಿಕಾಸ್ ಸಹಾಯ್ ಹೇಳಿದ್ದಾರೆ.



ಹೆದ್ದೆರೆಗಳ ಆಟ ಕೇರಳದ ತಿರುವನಂತಪುರದ ವಲಿಯತುರ ಕರಾವಳಿ ತೀರಕ್ಕೆ ಹೆದ್ದೆರೆಗಳು ಬಂದಪ್ಪಳಿಸುತ್ತಿದ್ದು, ಸಮುದ್ರಕ್ಕೆ ಇಳಿಯದಂತೆ ಮೀನುಗಾರರಿಗೆ ಎಚ್ಚರಿಕೆ ನೀಡಲಾಗಿದೆ –ಪಿಟಿಐ ಚಿತ್ರ

ಗುಂಡಿನ ದಾಳಿ: 40 ಮಂದಿ ಸಾವು

ಲಾಗೋಸ್ (ಎಎಫ್‌ಪಿ): ನೈಜೀರಿಯಾದಲ್ಲಿ ಬಂದೂಕುಧಾರಿ ವ್ಯಕ್ತಿಯೊಬ್ಬ ನಿವಾಸಿಗಳ ಮೇಲೆ ಗುಂಡು ಹಾರಿಸಿ, ಮನೆಗಳಿಗೆ ಬೆಂಕಿ ಇಟ್ಟು ಸುಮಾರು 40 ಮಂದಿಯನ್ನು ಹತ್ಯೆ ಮಾಡಿದ್ದಾನೆ ಎಂದು ಸ್ಥಳೀಯ ಸರ್ಕಾರ ಮಂಗಳವಾರ ತಿಳಿಸಿದೆ.

ಸಂಪನ್ಮೂಲಗಳು ಮತ್ತು ಅಂತರಕೋಮು ವಿಷಯವಾಗಿ ವೇಸ್ ಜಿಲ್ಲೆಯು ಸುದೀರ್ಘ ಕಾಲದಿಂದ ಸಂಘರ್ಷದ ಕೇಂದ್ರವಾಗಿತ್ತು. ಇಲ್ಲಿ ಸೋಮವಾರ ಮತ್ತೆ ಹಿಂಸಾಚಾರ ನಡೆದಿದೆ.

ಝುರಕ್ ಸಮುದಾಯದ ಬಂದೂಕುದಾರಿ ವ್ಯಕ್ತಿ ಏಕಾಏಕಿ ಗುಂಡಿನ ದಾಳಿ ನಡೆಸಿದ್ದಾನೆ ಮತ್ತು ಮನೆಗಳಿಗೆ ಬೆಂಕಿ ಇಟ್ಟಿದ್ದಾನೆ. ಇದರಿಂದಾಗಿ ಈವರೆಗೆ 40 ಮಂದಿ ಮೃತಪಟ್ಟಿರುವ ವರದಿ ಲಭ್ಯವಾಗಿದೆ ಎಂದು ಪ್ಲಟೆಯು ರಾಜ್ಯದ ಮಾಹಿತಿ ಇಲಾಖೆಯ ಆಯುಕ್ತ ಮುಸಾ ಇಬ್ರಾಹಿಂ ಅಶೋಮ್ಸ್ ಮಾಹಿತಿ ನೀಡಿದರು.

ಪೋಶೆ ಕಾರು ಡಿಕ್ಕಿಹೊಡೆಸಿ ಇಬ್ಬರ ಸಾವಿಗೆ ಕಾರಣವಾದ ಪ್ರಕರಣ

ಬಾಲಕನ ತಂದೆ ಸೇರಿ ಐವರ ಬಂಧನ

ಪುಣೆ (ಪಿಟಿಐ): 17 ವರ್ಷದ ಬಾಲಕನೊಬ್ಬ ಮದ್ಯದ ನಶೆಯಲ್ಲಿ ವಿಲಾಸಿ ಕಾರು 'ಪೋಶೆ' ಚಾಲನೆ ಮಾಡಿ ಇಬ್ಬರು ಟೆಕಿಗಳ ಸಾವಿಗೆ ಕಾರಣವಾದ ಪ್ರಕರಣದಲ್ಲಿ ಬಾಲಕನ ತಂದೆ ಮತ್ತು ಈ ಬಾಲಕನಿಗೆ ಮದ್ಯ ಪೂರೈಸಿದ್ದ ಎರಡು ಹೋಟೆಲ್‌ಗಳ ಪ್ರಮುಖ ಮೂವರನ್ನು ಮಹಾರಾಷ್ಟ್ರದ ಪುಣೆ ಪೊಲೀಸರು ಮಂಗಳವಾರ ಬಂಧಿಸಿದ್ದಾರೆ.

'ಅಪ್ರಾಪ್ತ ವಯಸ್ಸಿನ ಪುತ್ರನಿಗೆ, ಚಾಲನಾ ಪರವಾನಗಿ ಇಲ್ಲದೆ ಕಾರು ಚಾಲನೆ ಮಾಡಲು ಅನುಮತಿಸಿರುವ ಬಾಲಕನ ತಂದೆಯ ವಿರುದ್ಧವೂ ಪ್ರಕರಣ ದಾಖಲಾಗಿದೆ. ಬಾಲಕನ ತಂದೆ ರಿಯಲ್ ಎಸ್ಟೇಟ್ ಉದ್ಯಮಿ ವಿಶಾಲ್ ಅಗರ್‌ವಾಲ್ ಅವರನ್ನು ಛತ್ರಪತಿ ಸಂಭಾಜಿ ನಗರದಿಂದ ಬಂಧಿಸಿ ಪುಣೆಗೆ ಕರೆತರಲಾಯಿತು' ಎಂದು ಪೊಲೀಸ್ ಆಯುಕ್ತ ಅಮಿತೇಶ್ ಕುಮಾರ್ ತಿಳಿಸಿದರು.

ಅಲ್ಲದೆ, ಬಾಲಕನಿಗೆ ಮದ್ಯ ಪೂರೈಸಿದ ಆರೋಪದ ಮೇಲೆ ಕೋಸಿ ರೆಸ್ಟೋರೆಂಟ್ ಮಾಲೀಕ ಪ್ರಲ್ಹಾದ್ ಭುಟ್ಡಾ ಮತ್ತು ಮ್ಯಾನೇಜರ್ ಸಚಿನ್ ಕಾಟ್ಕರ್ ಮತ್ತು ಹೋಟೆಲ್ ಬ್ಲಾಕ್ ಕ್ಲಬ್‌ನ ಮ್ಯಾನೇಜರ್ ಸಂದೀಪ್ ಸಾಂಗ್ಲೆ ಹಾಗೂ ಇದೇ ಹೋಟೆಲ್‌ನ ಸಿಬ್ಬಂದಿ ಜಯೇಶ್ ಬೊಂಕರ್ ಅವರನ್ನು ಪುಣೆ ಪೊಲೀಸರು ಬಂಧಿಸಿದರು ಎಂದು ಹೆಚ್ಚುವರಿ ಪೊಲೀಸ್ ಆಯುಕ್ತ (ಅಪರಾಧ) ಶೈಲೇಶ್ ಬಾಲ್ಕವಾಡೆ ಮಾಹಿತಿ ನೀಡಿದರು.

ಬಂಧಿತರೆಲ್ಲರನ್ನೂ ನ್ಯಾಯಾಲಯಕ್ಕೆ ಹಾಜರುಪಡಿಸಿದ್ದು, ನ್ಯಾಯಾಲಯವು ಮೇ 24ರವರೆಗೆ ಇವರನ್ನು ಪೊಲೀಸ್ ಕಸ್ಟಡಿಗೆ ನೀಡಿದೆ ಎಂದು ಅಮಿತೇಶ್ ಕುಮಾರ್ ತಿಳಿಸಿದರು.

ಕಾನೂನು ಸಂಘರ್ಷಕ್ಕೆ ಸಿಲುಕಿರುವ ಈ ಬಾಲಕ ಶನಿವಾರ ಮತ್ತು ಭಾನುವಾರದ ಮಧ್ಯರಾತ್ರಿ ತನ್ನ ಸ್ನೇಹಿತರೊಂದಿಗೆ ರಾತ್ರಿ 9.30 ರಿಂದ 1 ಗಂಟೆಯ ನಡುವೆ ಈ ಎರಡು ಹೋಟೆಲ್‌ಗಳಿಗೆ ಹೋಗಿ ಮದ್ಯ ಸೇವಿಸಿರುವ ಸಿ.ಸಿ.ಟಿ.ವಿ ದೃಶ್ಯಾವಳಿಗಳು ಪೊಲೀಸರಿಗೆ ಲಭಿಸಿವೆ.

'ಕಾನೂನು ಸಂಘರ್ಷಕ್ಕೆ ಒಳಗಾಗಿರುವ ಬಾಲಕ ಮದ್ಯ ಸೇವಿಸಿರುವುದು ಬಾರ್‌ಗಳ ಸಿ.ಸಿ. ಟಿ.ವಿ ದೃಶ್ಯಾವಳಿಗಳಲ್ಲಿ ಸ್ಪಷ್ಟವಾಗಿ ಕಾಣಿಸಿದೆ. ಈ ಬಾಲಕ ಮದ್ಯ ಸೇವಿಸಿ ಕಾರು ಚಲಾಯಿಸಿರುವುದರಲ್ಲಿ ಯಾವುದೇ ಸಂದೇಹವಿಲ್ಲ. ಬಾಲಕನ ರಕ್ತ ಪರೀಕ್ಷೆಯ ವರದಿ ಬಂದ ತಕ್ಷಣ ಈ ಎಲ್ಲ ಸಂಗತಿಗಳನ್ನು ನಾವು ನ್ಯಾಯಾಲಯಕ್ಕೆ ಸಲ್ಲಿಸುತ್ತೇವೆ' ಎಂದು ಅಮಿತೇಶ್ ಕುಮಾರ್ ಹೇಳಿದ್ದಾರೆ.

ಪುಣೆ ನಗರದ ಕಲ್ಯಾಣಿನಗರ ಪ್ರದೇಶದಲ್ಲಿ ಭಾನುವಾರ ನಸುಕಿನಲ್ಲಿ ಪಾನಮತ್ತ 17ರ ಹರೆಯದ ಬಾಲಕ ಪೋಶೆ ಕಾರು ಚಲಾಯಿಸುತ್ತಿದ್ದಾಗ ಅದು ಬೈಕಿಗೆ ಡಿಕ್ಕಿ ಹೊಡೆದಿತ್ತು. ಬೈಕಿನಲ್ಲಿ ಪ್ರಯಾಣಿಸುತ್ತಿದ್ದ ಮಧ್ಯಪ್ರದೇಶದ ಸಾಫ್ಟ್‌ವೇರ್ ತಂತ್ರಜ್ಞರಾದ 24 ವರ್ಷ ವಯಸ್ಸಿನ ಅನಿಸ್ ಅವಾಧಿಯ, ಅಶ್ವಿನಿ ಕಾಸ್ಟಾ ಮೃತಪಟ್ಟಿದ್ದರು.

ಘಟನೆ ನಡೆದ ತಕ್ಷಣ ಪೊಲೀಸರು ಬಾಲಕನನ್ನು ವಶಕ್ಕೆ ಪಡೆದು ಬಾಲ ನ್ಯಾಯಮಂಡಳಿ ಎದುರು ಹಾಜರುಪಡಿಸಿದ್ದರು. ಅಲ್ಲಿ ಗಂಟೆಯೊಳಗೆ ಜಾಮೀನು ದೊರೆತಿತ್ತು. ಜಾಮೀನು ನೀಡಿದ ನ್ಯಾಯಮಂಡಳಿಯು, 'ಕಾನೂನು ಸಂಘರ್ಷ ಎದುರಿಸುತ್ತಿರುವ ಬಾಲಕನು ಪ್ರಾದೇಶಿಕ ಸಾರಿಗೆ ಕಚೇರಿಗೆ ಭೇಟಿ ನೀಡಿ ರಸ್ತೆ ಸಂಚಾರ ನಿಯಮಗಳನ್ನು ಅರಿಯಬೇಕು ಮತ್ತು 'ರಸ್ತೆ ಸುರಕ್ಷತೆ ಹಾಗೂ ಅದರ ಪರಿಹಾರೋಪಾಯಗಳು' ಕುರಿತು 15 ದಿನದಲ್ಲಿ 300 ಪದಗಳ ಪ್ರಬಂಧ ಸಲ್ಲಿಸಬೇಕು' ಎಂದು ಆದೇಶಿಸಿತ್ತು.

ಜೆಜೆಬಿ ಆದೇಶ ಆಘಾತಕಾರಿ: ಫಡಣವೀಸ್

ಪುಣೆ (ಪಿಟಿಐ): ಪಾನಮತ್ತ 17ರ ಹರೆಯದ ಬಾಲಕ 'ಪೋಶೆ' ಕಾರನ್ನು ಅತಿವೇಗದಿಂದ ಚಲಾಯಿಸಿ ಬೈಕಿಗೆ ಡಿಕ್ಕಿಹೊಡೆಸಿ ಇಬ್ಬರು ಟೆಕಿಗಳ ಸಾವಿಗೆ ಕಾರಣವಾದ ಪ್ರಕರಣವನ್ನು ಬಾಲಾಪರಾಧಿ ನ್ಯಾಯ ಮಂಡಳಿಯು (ಜೆಜೆಬಿ) ಗಂಭೀರವಾಗಿ ಪರಿಗಣಿಸದಿರುವುದಕ್ಕೆ ಮಹಾರಾಷ್ಟ್ರ ಗೃಹಸಚಿವರೂ ಆದ ಉಪಮುಖ್ಯಮಂತ್ರಿ ದೇವೇಂದ್ರ ಫಡಣವೀಸ್ ಮಂಗಳವಾರ ಆಘಾತ ಮತ್ತು ಆಶ್ಚರ್ಯ ವ್ಯಕ್ತಪಡಿಸಿದ್ದಾರೆ.

ಪುಣೆ ಪೊಲೀಸ್ ಕಮಿಷನರೇಟ್ ಕಚೇರಿಗೆ ದಿಢೀರ್ ಭೇಟಿ ನೀಡಿ, ಪ್ರಕರಣದ ಬಗ್ಗೆ ಅಧಿಕಾರಿಗಳಿಂದ ಮಾಹಿತಿ ಪಡೆದ ನಂತರ ಮಾಧ್ಯಮಗಳನ್ನು ಉದ್ದೇಶಿಸಿ ಮಾತನಾಡಿದರು.

'ಬಾಲಾಪರಾಧಿ ನ್ಯಾಯ ಮಂಡಳಿಯು ಈ ಪ್ರಕರಣದಲ್ಲಿ ನೀಡಿರುವ ಆದೇಶವು ಆಘಾತಕಾರಿ ಮತ್ತು ಆಶ್ಚರ್ಯಕರವಾಗಿದೆ. ಘೋರ ಅಪರಾಧವನ್ನು ಇಷ್ಟೊಂದು ಮೃದುವಾದ ದೃಷ್ಟಿಕೋನದಲ್ಲಿ ಪರಿಗಣಿಸಿದೆ. ಪುಣೆ ಪೊಲೀಸರು ಹದಿಹರೆಯದವನಿಗೆ 17 ವರ್ಷವಾಗಿರುವುದರಿಂದ ಆತನನ್ನು ವಯಸ್ಕನಾಗಿ ಪರಿಗಣಿಸಿ ವಿಚಾರಣೆ ನಡೆಸಲು ಅವಕಾಶ ನೀಡುವಂತೆ ಮಂಡಳಿಗೆ ಮನವಿ ಮಾಡಿದ್ದರು. ಆದರೆ, ಮಂಡಳಿಯು ಈ ಅರ್ಜಿಯನ್ನು 'ನೋಡಿದೆ ಮತ್ತು ಸಲ್ಲಿಸಿದೆ' ಎಂದು ವರ್ಗೀಕರಿಸುವ ಮೂಲಕ ಪಕ್ಕಕ್ಕೆ ಇರಿಸಿ ಜಾಮೀನಿನ ಮೇಲೆ ಬಿಡುಗಡೆ ಮಾಡಿತು. ಇದು ಸಾರ್ವಜನಿಕರ ಆಕ್ರೋಶಕ್ಕೆ ಕಾರಣವಾಯಿತು' ಫಡಣವೀಸ್ ಹೇಳಿದರು.

'ಆದೇಶ ಮರುಪರಿಶೀಲನೆಗೆ ಬಾಲಾಪರಾಧಿ ನ್ಯಾಯ ಮಂಡಳಿಯನ್ನು ಮತ್ತೊಮ್ಮೆ ಸಂಪರ್ಕಿಸಲು ಪೊಲೀಸರಿಗೆ ಮೇಲಿನ ಹಂತದ ನ್ಯಾಯಾಲಯವು ಸೂಚಿಸಿದೆ. ಪೊಲೀಸರು ಮರುಪರಿಶೀಲನಾ ಅರ್ಜಿ ಸಲ್ಲಿಸಿದ್ದಾರೆ. ಆದೇಶವನ್ನು ನ್ಯಾಯಮಂಡಳಿಯು ಮರು ಪರಿಶೀಲಿಸದಿದ್ದರೆ, ಪೊಲೀಸರು ಮೇಲಿನ ಹಂತದ ನ್ಯಾಯಾಲಯದ ಮೊರೆಹೋಗಲಿದ್ದಾರೆ' ಎಂದು ಅವರು ಹೇಳಿದರು.

ಸಂಕ್ಷಿಪ್ತ ಸುದ್ದಿ

'ಅಮೆರಿಕದ ಮತ್ತೊಂದು ಡ್ರೋನ್ ನಾಶ'

ಕೈರೊ (ಎಪಿ): ಅಮೆರಿಕದ ಮತ್ತೊಂದು ಡ್ರೋನ್ ಅನ್ನು ಹೊಡೆದುರುಳಿಸಿರುವುದಾಗಿ ಯೆಮನ್‌ನಲ್ಲಿರುವ ಇರಾನ್ ಬೆಂಬಲಿತ ಹೂಥಿ ಬಂಡುಕೋರರು ಮಂಗಳವಾರ ಹೇಳಿದ್ದಾರೆ. ಆದರೆ, ಅಮೆರಿಕದ ಸೇನಾ ಪಡೆಯು ಇದನ್ನು ನಿರಾಕರಿಸಿದೆ.

ಸ್ಥಳೀಯವಾಗಿ ಅಭಿವೃದ್ಧಿಪಡಿಸಲಾದ ಕ್ಷಿಪಣಿಯೊಂದರ ಮೂಲಕ ಅಮೆರಿಕದ ಡ್ರೋನ್ ಅನ್ನು ನಾಶಪಡಿಸಲಾಗಿದೆ. ಆದರೆ, ಈ ದಾಳಿಯನ್ನು ಯಾವಾಗ ನಡೆಸಲಾಗಿದೆ ಎಂಬ ಮಾಹಿತಿಯನ್ನು ಹೂಥಿ ಸೇನೆಯ ವಕ್ತಾರರು ಬಹಿರಂಗಪಡಿಸಿಲ್ಲ.

ಕಳೆದ ಶುಕ್ರವಾರ ಅಮೆರಿಕದ ಎಂಕ್ಯೂ–9 ರೀಪರ್ ಡ್ರೋನ್ ಅನ್ನು ಮಾರಿಬ್ ಪ್ರಾಂತ್ಯದಲ್ಲಿ ಹೊಡೆದುರುಳಿಸಿರುವುದಾಗಿ ಹೂಥಿ ಹೇಳಿಕೊಂಡಿತ್ತು.

ಗಾಜಾ ಮೇಲಿನ ದಾಳಿಯನ್ನು ಇಸ್ರೇಲ್ ನಿಲ್ಲಿಸಬೇಕು ಎಂದು ಒತ್ತಾಯಿಸುತ್ತಿರುವ ಹೂಥಿ ಬಂಡುಕೋರರು, ಕೆಂಪು ಸಮುದ್ರ ಮತ್ತು ಗಲ್ಫ್ ಆಫ್ ಆ್ಯಡನ್‌ನಲ್ಲಿ ಹಡಗುಗಳ ಮೇಲೆ ದಾಳಿಗಳನ್ನು ನಡೆಸುತ್ತಿದ್ದಾರೆ. ಈವರೆಗೆ 50ಕ್ಕೂ ಹೆಚ್ಚು ಹಡಗುಗಳ ಮೇಲೆ ದಾಳಿ ನಡೆಸಿದ್ದು, ಒಂದು ಹಡಗನ್ನು ಜಪ್ತಿ ಮಾಡಿದೆ ಎಂದು ಅಮೆರಿಕದ ಕಡಲ ಆಡಳಿತ ತಿಳಿಸಿದೆ.

ಹೂಥಿ ಬಂಡುಕೋರರ ದಾಳಿಯ ಬೆದರಿಕೆಯಿಂದಾಗಿ ಕೆಂಪು ಸಮುದ್ರ ಮತ್ತು ಗಲ್ಫ್ ಆಫ್ ಆ್ಯಡನ್‌ನಲ್ಲಿ ಹಡಗುಗಳ ಯಾನ ಗಣನೀಯವಾಗಿ ತಗ್ಗಿದೆ ಎನ್ನಲಾಗಿದೆ.

ಭಾರತದಲ್ಲಿ ಧಾರ್ಮಿಕ ಸ್ವಾತಂತ್ರ್ಯ: ಅಮೆರಿಕದಿಂದ ಬದ್ಧತೆ


ವಾಷಿಂಗ್ಟನ್ (ಪಿಟಿಐ): ಧಾರ್ಮಿಕ ಸ್ವಾತಂತ್ರ್ಯದ ರಕ್ಷಣೆಯ ವಿಚಾರವಾಗಿ ಜೋ ಬೈಡನ್ ಆಡಳಿತವು ಅಪಾರವಾದ ಬದ್ಧತೆಯನ್ನು ಹೊಂದಿದೆ, ಎಲ್ಲ ಧರ್ಮಗಳಿಗೆ ಸೇರಿದ ಜನರನ್ನು ಸಮಾನವಾಗಿ ಕಾಣುವ ವಿಚಾರವಾಗಿ ಭಾರತ ಸೇರಿದಂತೆ ಹಲವು ದೇಶಗಳ ಜೊತೆ ತೊಡಗಿಸಿಕೊಂಡಿದೆ ಎಂದು ಅಮೆರಿಕದ ವಿದೇಶಾಂಗ ಸಚಿವಾಲಯದ ವಕ್ತಾರ ಮ್ಯಾಥ್ಯೂ ಮಿಲ್ಲರ್ ಸೋಮವಾರ ತಿಳಿಸಿದ್ದಾರೆ.

ಭಾರತದಲ್ಲಿ ಮುಸ್ಲಿಂ ಸಮುದಾಯದವರು ತಮ್ಮ ಕುಟುಂಬದವರನ್ನು, ಮಕ್ಕಳನ್ನು ಭೀತಿ ಮತ್ತು ಅನಿಶ್ಚಿತ ಪರಿಸ್ಥಿತಿಯಲ್ಲಿ ಬೆಳೆಸುತ್ತಿದ್ದಾರೆ ಎಂಬ ಆರೋಪ ಇರುವ ಬರಹವೊಂದು ನ್ಯೂಯಾರ್ಕ್ ಟೈಮ್ಸ್ ಪತ್ರಿಕೆಯಲ್ಲಿ ಪ್ರಕಟವಾಗಿದ್ದು, ಈ ಬರಹಕ್ಕೆ ಸಂಬಂಧಿಸಿದ ಪ್ರಶ್ನೆಗೆ ಅವರು ಪ್ರತಿಕ್ರಿಯೆಯಾಗಿ ಈ ಮಾತು ಆಡಿದ್ದಾರೆ. 'ಈ ವಿಚಾರವಾಗಿ ನೀವು ಭಾರತದ ಅಧಿಕಾರಿಗಳ ಜೊತೆ ಮಾತನಾಡಿದ್ದೀರಾ' ಎಂದು ಮಿಲ್ಲರ್ ಅವರನ್ನು ಪ್ರಶ್ನಿಸಲಾಗಿತ್ತು.

ಇಸ್ರೇಲ್ ದಾಳಿ: ಪ್ಯಾಲೆಸ್ಟೀನ್‌ನ ಏಳು ಮಂದಿ ಹತ್ಯೆ

ಜೆನಿನ್ (ವೆಸ್ಟ್ ಬ್ಯಾಂಕ್) (ಎಪಿ): ಆಕ್ರಮಿತ ವೆಸ್ಟ್ ಬ್ಯಾಂಕ್ ಪ್ರದೇಶದ ಮೇಲೆ ಮಂಗಳವಾರ ದಾಳಿ ನಡೆಸಿರುವ ಇಸ್ರೇಲ್ ಪಡೆಗಳು, ಒಬ್ಬ ವೈದ್ಯ ಸೇರಿದಂತೆ ಪ್ಯಾಲೆಸ್ಟೀನ್‌ನ ಏಳು ಮಂದಿಯನ್ನು ಹತ್ಯೆ ಮಾಡಿವೆ ಎಂದು ಸ್ಥಳೀಯ ಅಧಿಕಾರಿಗಳು ತಿಳಿಸಿದ್ದಾರೆ.

ಹಮಾಸ್ ಬಂಡುಕೋರರನ್ನು ಸದೆಬಡಿಯುವ ಸಲುವಾಗಿ ಗಾಜಾಪಟ್ಟಿ ಮೇಲೆ ಇಸ್ರೇಲ್ ಯುದ್ಧ ಆರಂಭಿಸಿದ ಏಳು ತಿಂಗಳಿನಲ್ಲಿ ನಡೆದ ಭೀಕರ ಹಿಂಸಾಚಾರ ಘಟನೆಗಳಲ್ಲಿ ಇದೂ ಒಂದು ಎಂದು ಅಧಿಕಾರಿಗಳು ಅಭಿಪ್ರಾಯಪಟ್ಟಿದ್ದಾರೆ.



ಷೇರುಪೇಟೆ ವಹಿವಾಟು	
ಹಿಂದಿನ ಅಂತ್ಯ	74,005
ಇಂದಿನ ಅಂತ್ಯ	73,953
ಇಳಿಕೆ	52

ಎನ್‌ಎಸ್‌ಇ ನಿಫ್ಟಿ	
ಹಿಂದಿನ ಅಂತ್ಯ	22,502
ಇಂದಿನ ಅಂತ್ಯ	22,529
▲	27
ದಿನದ ಗರಿಷ್ಠ	22,591

ವಿನಿಮಯ ದರ	
$ ಡಾಲರ್	83.31
£ ಪೌಂಡ್	106.00
€ ಯುರೊ	90.59
¥ ಯೆನ್ (100ಕ್ಕೆ)	53



ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ	
ಬೆಂಗಳೂರು	
100ಕ್ಕೆ	₹625
12 ಕ್ಕೆ	₹82
ಮೈಸೂರು	
100ಕ್ಕೆ	₹625

ಖಾದ್ಯ ತೈಲ ಮುಂಬೈ (10 ಕೆಜಿಗೆ) (ಆವರಣದಲ್ಲಿ ಹಿಂದಿನ ದಿನದ ದರ)

ಶೇಂಗಾ (ರಿಫೈನ್ಡ್)	₹1505 (1520)
ಸೋಯಾ (ರಿಫೈನ್ಡ್)	₹930 (935)
ಸೂರ್ಯಕಾಂತಿ (ರಿಫೈನ್ಡ್)	₹927 (925)
ಪಾಮೋಲಿನ್	₹896 (898)

‘ಜಿಡಿಪಿ ಶೇ 6.7ರಷ್ಟು ಪ್ರಗತಿ’



ನವದೆಹಲಿ (ಪಿಟಿಐ): ಭಾರತದ ಜಿಡಿಪಿ ಬೆಳವಣಿಗೆಯು 2023–24ನೇ ಆರ್ಥಿಕ ವರ್ಷದ ಮಾರ್ಚ್ ತ್ರೈಮಾಸಿಕದಲ್ಲಿ ಶೇ 6.7 ರಷ್ಟು ಪ್ರಗತಿ ಕಾಣಲಿದೆ ಎಂದು ಕ್ರೆಡಿಟ್ ರೇಟಿಂಗ್ ಸಂಸ್ಥೆ ಐಸಿಆರ್‌ಎ ಅಂದಾಜಿಸಿದೆ.

ದೇಶದ ಜಿಡಿಪಿಯು ಜೂನ್ ತ್ರೈಮಾಸಿಕದಲ್ಲಿಶೇ8.2ರಷ್ಟು,ಸೆಪ್ಟೆಂಬರ್‌ನಲ್ಲಿ ಶೇ 8.1ರಷ್ಟು ಹಾಗೂ ಡಿಸೆಂಬರ್ ತ್ರೈಮಾಸಿಕದಲ್ಲಿ ಶೇ 8.4ರಷ್ಟು ದಾಖಲಾಗಿತ್ತು. 2023–24ನೇ ಪೂರ್ಣ ಆರ್ಥಿಕ ವರ್ಷದಲ್ಲಿ ಶೇ 7.8ರಷ್ಟು ಪ್ರಗತಿ ಕಾಣಲಿದೆ ಎಂದು ಹೇಳಿದೆ.

‘ಕೆಲವು ಕೈಗಾರಿಕಾ ವಲಯಗಳಲ್ಲಿ ಸರಕುಗಳ ಬೆಲೆ ಇಳಿಕೆಯಾಗಿದ್ದು, ಲಾಭದ ಮೇಲೆ ಪರಿಣಾಮ ಬೀರಿದೆ. ಇದು ನಾಲ್ಕನೇ ತ್ರೈಮಾಸಿಕದ ಆಂತರಿಕ ಉತ್ಪನ್ನದಲ್ಲಿನ ಒಟ್ಟು ಮೌಲ್ಯ ವರ್ಧನೆಯ (ಜಿವಿಎ) ವೇಗವನ್ನು ಮಂದಗೊಳಿಸಿದೆ’ ಎಂದು ಐಸಿಆರ್‌ಎ ಮುಖ್ಯ ಅರ್ಥಶಾಸ್ತ್ರಜ್ಞೆ ಅದಿತಿ ನಾಯರ್ ಹೇಳಿದ್ದಾರೆ.

2022–23ನೇ ಆರ್ಥಿಕ ವರ್ಷದ ಮಾರ್ಚ್ ತ್ರೈಮಾಸಿಕದಲ್ಲಿ ಜಿಡಿಪಿಯು ಶೇ 6.1ರಷ್ಟು ಬೆಳವಣಿಗೆ ದಾಖಲಿಸಿತ್ತು. ಪೂರ್ಣ ಆರ್ಥಿಕ ವರ್ಷದಲ್ಲಿ ಶೇ 7ರಷ್ಟು ಪ್ರಗತಿ ಕಂಡಿತ್ತು. 2023–24ನೇ ಆರ್ಥಿಕ ವರ್ಷದ ಜಿಡಿಪಿ ವರದಿಯು ಇದೇ 31ರಂದು ಬಿಡುಗಡೆ ಆಗಲಿದೆ.

ಮೊದಲ ತ್ರೈಮಾಸಿಕ: ಶೇ 7.5ರಷ್ಟು ಬೆಳವಣಿಗೆ ನಿರೀಕ್ಷೆ– ಆರ್‌ಬಿಐ

ಮುಂಬೈ (ಪಿಟಿಐ): 2024–25ನೇ ಆರ್ಥಿಕ ವರ್ಷದ ಮೊದಲ ತ್ರೈಮಾಸಿಕದಲ್ಲಿ ದೇಶದ ಜಿಡಿಪಿ ಬೆಳವಣಿಗೆಯು ಶೇ 7.5ರಷ್ಟು ಪ್ರಗತಿ ಕಾಣಲಿದೆ ಎಂದು ಭಾರತೀಯ ರಿಸರ್ವ್ ಬ್ಯಾಂಕ್‌ನ ಮಾಸಿಕ ವರದಿಯು ಅಂದಾಜಿಸಿದೆ.

ಗ್ರಾಮೀಣ ಪ್ರದೇಶದಲ್ಲಿನ ಬೇಡಿಕೆ ಹೆಚ್ಚಳದ ಜೊತೆಗೆ, ಆಹಾರೇತರ ಖರ್ಚಿನ ಏರಿಕೆಯಿಂದಾಗಿ ಈ ಪ್ರಗತಿ ಸಾಧ್ಯವಾಗಲಿದೆ ಎಂದು ಮಂಗಳವಾರ ಬಿಡುಗಡೆಯಾಗಿರುವ ವರದಿ ತಿಳಿಸಿದೆ. ಜಾಗತಿಕ ಬಿಕ್ಕಟ್ಟಿನಿಂದಾಗಿ ಪೂರೈಕೆ ಸರಪಳಿಯು ಅಸ್ತವ್ಯಸ್ತಗೊಂಡಿದೆ. ಇದರ ನಡುವೆಯೂ ಭಾರತದ ಆರ್ಥಿಕತೆಯು ಚೇತರಿಕೆ ಕಂಡಿದೆ ಎಂದು ಹೇಳಿದೆ. ಆರ್ಥಿಕ ಚಟುವಟಿಕೆ ಸೂಚ್ಯಂಕದ ಪ್ರಕಾರ ಏಪ್ರಿಲ್‌ನಲ್ಲಿ ಆರ್ಥಿಕ ಚಟುವಟಿಕೆಗಳು ಸರಿಯಾದ ದಿಕ್ಕಿಗೆ ಮರಳಿವೆ. ದೇಶೀಯ ಬೇಡಿಕೆಯು ವೇಗ ಪಡೆದಿದೆ. ಇದು ಜಿಡಿಪಿ ಬೆಳವಣಿಗೆಗೆ ಸಹಕಾರಿಯಾಗಲಿದೆ ಎಂದು ಹೇಳಿದೆ.

ಕಳೆದ ವರ್ಷಕ್ಕೆ ಹೋಲಿಸಿದರೆ ಪ್ರಸಕ್ತ ಸಾಲಿನ ಏಪ್ರಿಲ್‌ನಲ್ಲಿ ಟೋಲ್ ಸಂಗ್ರಹದಲ್ಲಿ ಶೇ 8.6ರಷ್ಟು ಏರಿಕೆಯಾಗಿದೆ. ವಾಹನಗಳ ಮಾರಾಟದಲ್ಲಿ ಶೇ 25.4ರಷ್ಟು ಹೆಚ್ಚಳವಾಗಿದೆ. ಆಹಾರೇತರ ಖರ್ಚಿನ ಏರಿಕೆಯು ಗ್ರಾಮೀಣ ಪ್ರದೇಶದ ಚೇತರಿಕೆಗೆ ನೆರವಾಗಲಿದೆ ಎಂದು ಹೇಳಿದೆ.

ಅಲ್ಲದೆ, ಏಪ್ರಿಲ್‌ನಲ್ಲಿ ಚಿಲ್ಲರೆ ಹಣದುಬ್ಬರವು ಇಳಿಕೆಯಾಗಿದೆ. ಹಣದುಬ್ಬರವನ್ನು ಶೇ 4ರ ಮಿತಿಯಲ್ಲಿ ಕಾಯ್ದುಕೊಳ್ಳುವ ಆರ್‌ಬಿಐನ ಗುರಿಯತ್ತ ಸಾಗಿದೆ ಎಂದು ತಿಳಿಸಿದೆ.

ಅಡಿಕೆ ಧಾರಣೆ

ಮಾರುಕಟ್ಟೆ	ವಿಧ	ಧಾರಣೆ
ಬಂಟ್ವಾಳ	ಕೋಕ	18000-28500
	ಹೊಸತು	28500-38000
	ಹಳತು	38000-46500
ಚಿತ್ರದುರ್ಗ	ಅಪಿ	52719-53129
	ಬೆಟ್ಟೆ	37110-37599
	ಕೆಂಪುಗೋಟು	29609-30059
	ರಾಶಿ	52239-52669
ಸಾಗರ	ಬಿಳಿಗೋಟು	27699-29599
	ಚಾಲಿ	34819-36119
	ಕೆಂಪುಗೋಟು	30199-38819
	ರಾಶಿ	28989-52219
	ಸಿಪ್ಪೆಗೋಟು	17111-20199
ಶಿವಮೊಗ್ಗ	ಬೆಟ್ಟೆ	45069-55319
	ಗೊರಬಲು	17980-38869
	ರಾಶಿ	30008-53009
	ಸರಕು	54069-79896
ಸಿದ್ದಾಪುರ	ಬಿಳಿಗೋಟು	27319-31009
	ಚಾಲಿ	35109-38009
	ಕೋಕ	26289-30009
	ಹಳೆಚಾಲಿ	35299-36699
	ಕೆಂಪುಗೋಟು	27899-29699
	ರಾಶಿ	44099-49799
	ತಟ್ಟಿಬೆಟ್ಟೆ	34699-37699
ಶಿರಸಿ	ಬೆಟ್ಟೆ	35090-47299
	ಬಿಳಿಗೋಟು	23099-31622
	ಚಾಲಿ	34099-39098
	ಕೆಂಪುಗೋಟು	25699-30290
	ರಾಶಿ	44099-49589

ರಾಮನಗರ ರೇಷ್ಮೆಗೂಡು



ಮಿಶ್ರತಳಿ (ಸಿ.ಬಿ) ₹263-488

ದ್ವಿತಳಿ (ಬಿ.ವಿ) ₹355-620

ಎನ್.ಆರ್.ಪುರ ರಬ್ಬರ್



ಆರ್‌ಎಸ್‌ಎಸ್-4 ₹179

ಆರ್‌ಎಸ್‌ಎಸ್-5 ₹172

ಗುಡ್ ಲಾಟ್ (ಪ್ರತಿ ಕೆ.ಜಿಗೆ) ₹162

ಮುಂಬೈ ಧಾರಣೆ (ಶೇಂಗಾ)

21-5-2024

ಜಾವಾ 70/80(ಹೊಸ)	11200-11300
ಜಾವಾ 80/90(ಹೊಸ)	10800-10900
ದಪ್ಪ ಮಧ್ಯಪ್ರದೇಶ(ಹೊಸ)	9800-9900
ದಪ್ಪ ಗುಜರಾತ್(ಹೊಸ)	10600-10700

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1515 (1530)
ಒಂದು ವಾರದ ಡೆಲಿವರಿ	1510 (1525)
ಸೋಯಾ ಕಚ್ಚಾ	895 (890)
ಪಾಮ್ ವಾರದ ಡೆಲಿವರಿ	894 (896)
ಸೂರ್ಯಕಾಂತಿ ಎಣ್ಣೆ ಕಚ್ಚಾ	870 (865)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ ₹74,000 (74,500)

ಬೆಳ್ಳಿ ಕೆ.ಜಿ ₹92,900 (91,300)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಪ್ರವಾಸೋದ್ಯಮ ಅಭಿವೃದ್ಧಿ ಸೂಚ್ಯಂಕ ಬಿಡುಗಡೆ

ಭಾರತಕ್ಕೆ 39ನೇ ಸ್ಥಾನ

ನವದೆಹಲಿ (ಪಿಟಿಐ): ವಿಶ್ವ ಆರ್ಥಿಕ ವೇದಿಕೆಯ (ಡಬ್ಲ್ಯುಇಎಫ್) 2024ರ ಪ್ರಯಾಣ ಮತ್ತು ಪ್ರವಾಸೋದ್ಯಮ ಅಭಿವೃದ್ಧಿ ಸೂಚ್ಯಂಕದಲ್ಲಿ ಭಾರತವು 39ನೇ ಸ್ಥಾನಕ್ಕೆ ಜಿಗಿದಿದೆ.

2021ರಲ್ಲಿ ಭಾರತವು 54ನೇ ಸ್ಥಾನದಲ್ಲಿತ್ತು.

ಮಂಗಳವಾರ ಬಿಡುಗಡೆಯಾಗಿರುವ ಡಬ್ಲ್ಯುಇಎಫ್ ವರದಿ ಪ್ರಕಾರ ಅಮೆರಿಕವು ಮೊದಲ ಸ್ಥಾನದಲ್ಲಿದೆ. ದಕ್ಷಿಣ ಏಷ್ಯಾ ರಾಷ್ಟ್ರಗಳು ಹಾಗೂ ಕೆಳ ಮಧ್ಯಮ ಆದಾಯದ ಆರ್ಥಿಕ ವ್ಯವಸ್ಥೆ ಹೊಂದಿರುವ ರಾಷ್ಟ್ರಗಳ ಪಟ್ಟಿಯಲ್ಲಿ ಭಾರತವು ಮುಂಚೂಣಿ ಸ್ಥಾನ ಕಾಯ್ದುಕೊಂಡಿದೆ ಎಂದು ವರದಿ ತಿಳಿಸಿದೆ.

ಡಬ್ಲ್ಯುಇಎಫ್ ಹಾಗೂ ಸರ್ರೆ ವಿಶ್ವವಿದ್ಯಾಲಯವು ಜಂಟಿಯಾಗಿ ಈ ವರದಿ ಸಿದ್ಧಪಡಿಸಿವೆ. ಸದ್ಯ ಜಾಗತಿಕ ಮಟ್ಟದಲ್ಲಿ ಪ್ರವಾಸೋದ್ಯಮ ಚಟುವಟಿಕೆಗಳು ಕೋವಿಡ್ ಸಾಂಕ್ರಾಮಿಕದ ಪೂರ್ವದ ಸ್ಥಿತಿಗೆ ಮರಳಿವೆ ಎಂದು ಹೇಳಿದೆ.

ಪ್ರವಾಸೋದ್ಯಮದ ನಿಟ್ಟಿನಲ್ಲಿ ಸ್ಪರ್ಧಾತ್ಮಕ ಬೆಲೆ (18ನೇ ಸ್ಥಾನ), ಸ್ಪರ್ಧಾತ್ಮಕ ವಿಮಾನ ಸಾರಿಗೆ (26ನೇ ಸ್ಥಾನ) ಹಾಗೂ ಬಂದರು ಮೂಲ ಸೌಕರ್ಯದಲ್ಲಿ (25ನೇ ಸ್ಥಾನ) ಭಾರತದ ಸಾಧನೆ ಅತ್ಯುತ್ತಮವಾಗಿದೆ.

ಭಾರತವು ನೈಸರ್ಗಿಕ (6ನೇ ಸ್ಥಾನ) ಹಾಗೂ ಸಾಂಸ್ಕೃತಿಕವಾಗಿ (9ನೇ ಸ್ಥಾನ) ಸಂಪದ್ಭರಿತವಾಗಿದೆ. ಪ್ರವಾಸಿಗರು ವಿರಾಮದ ಅವಧಿಯಲ್ಲಿ ಅಡುಗೆ ತಯಾರಿಕೆ, ಸ್ವಚ್ಛತೆ, ಸ್ನಾನ, ವಾಹನ ಚಾಲನೆಗೂ ಅವಕಾಶ ಸಿಗಲಿದೆ. ಇದು ಪ್ರವಾಸೋದ್ಯಮ ಚಟುವಟಿಕೆಗಳ ಹೆಚ್ಚಳಕ್ಕೆ ಸಹಕಾರಿಯಾಗಿದೆ ಎಂದು ತಿಳಿಸಿದೆ.

2019ರಲ್ಲಿ ಭಾರತದ ಸೂಚ್ಯಂಕವು ಕುಸಿತಗೊಂಡಿತ್ತು. ಸದ್ಯ ಸುಸ್ಥಿರತೆ ಕಾಯ್ದುಕೊಂಡಿದೆ. ಭಾರತಕ್ಕೆ ಭೇಟಿ ನೀಡುವ ವಿದೇಶಿ ಪ್ರವಾಸಿಗರ ಸಂಖ್ಯೆಯಲ್ಲೂ ಹೆಚ್ಚಳವಾಗಿದೆ. ಆದರೆ, ದೇಶದ ಒಟ್ಟಾರೆ ಸೂಚ್ಯಂಕವು ಶೇ2.1ರಷ್ಟಿದ್ದು, 2019ಕ್ಕಿಂತಲೂ ಕಡಿಮೆ ಇದೆ. ಯುರೋಪ್ ಹಾಗೂ ಏಷ್ಯಾ–ಪೆಸಿಫಿಕ್ ಪ್ರದೇಶದ ರಾಷ್ಟ್ರಗಳು ಸೂಚ್ಯಂಕದಲ್ಲಿ ಮುಂದಿವೆ.

‘ಕೋವಿಡ್ ಸಾಂಕ್ರಾಮಿಕದ ವೇಳೆ ಜಾಗತಿಕ ಮಟ್ಟದಲ್ಲಿ ಪ್ರವಾಸೋದ್ಯಮ ಚಟುವಟಿಕೆಗಳು ಸೊರಗಿ ಹೋಗಿದ್ದವು. ಪ್ರವಾಸಿಗರ ಆಗಮನದ ಸಂಖ್ಯೆಯೂ ಕುಗ್ಗಿತ್ತು. ಸದ್ಯ ನಿರ್ಬಂಧಗಳನ್ನು ತೆರವುಗೊಳಿಸಲಾಗಿದೆ. ಹಾಗಾಗಿ, ಪ್ರಸಕ್ತ ವರ್ಷದಲ್ಲಿ ಜಾಗತಿಕ ಜಿಡಿಪಿ ಹೆಚ್ಚಳಕ್ಕೆ ಪ್ರವಾಸೋದ್ಯಮ ಚಟುವಟಿಕೆಗಳು ನೆರವಾಗಲಿವೆ’ ಎಂದು ವರದಿ ತಿಳಿಸಿದೆ. ವಿಶ್ವದ 119 ದೇಶಗಳಲ್ಲಿರುವ ನೀತಿಗಳ ಅನುಸಾರ ಅಲ್ಲಿನ ಪ್ರಯಾಣ ಮತ್ತು ಪ್ರವಾಸೋದ್ಯಮ ವಲಯವನ್ನು ವಿಶ್ಲೇಷಿಸಿ, ದ್ವೈವಾರ್ಷಿಕವಾಗಿ ಈ ವರದಿಯನ್ನು ಸಿದ್ಧಪಡಿಸಲಾಗುತ್ತದೆ.



10 ಅತ್ಯುತ್ತಮ ಪ್ರವಾಸೋದ್ಯಮ ರಾಷ್ಟ್ರಗಳು

ಅಮೆರಿಕ	ಜರ್ಮನಿ
ಸ್ಪೇನ್	ಯು.ಕೆ
ಜಪಾನ್	ಚೀನಾ
ಫ್ರಾನ್ಸ್	ಇಟಲಿ
ಆಸ್ಟ್ರೇಲಿಯಾ	ಸ್ವಿಟ್ಜರ್ಲೆಂಡ್



ಹಜ್ ಯಾತ್ರೆ
ಹಜ್ ಯಾತ್ರೆಗೆ ವಿಮಾನದಲ್ಲಿ ತೆರಳಿದ ಯಾತ್ರಿಕರಿಗೆ ಅವರ ಕುಟುಂಬದ ಸದಸ್ಯರು ಬಸ್‌ಗಳ ಮೇಲೆ ನಿಂತು ಜೈಪುರದಲ್ಲಿ ಮಂಗಳವಾರ ಶುಭ ಕೋರಿದರು –ಪಿಟಿಐ ಚಿತ್ರ

ಬಿಎಸ್‌ಇ ಎಂ–ಕ್ಯಾಪ್: 5 ಟ್ರಿಲಿಯನ್ ಡಾಲರ್

ನವದೆಹಲಿ (ಪಿಟಿಐ): ದೇಶದ ಷೇರುಪೇಟೆಗಳ ಇತಿಹಾಸದಲ್ಲಿ ಮೊದಲ ಬಾರಿಗೆ ಮುಂಬೈ ಷೇರುಪೇಟೆಯಲ್ಲಿ (ಬಿಎಸ್‌ಇ) ನೋಂದಾಯಿತ ಕಂಪನಿಗಳ ಸಂಯೋಜಿತ ಮಾರುಕಟ್ಟೆ ಮೌಲ್ಯವು ಮಂಗಳವಾರ 5 ಟ್ರಿಲಿಯನ್ ಡಾಲರ್‌ಗೆ (₹414 ಲಕ್ಷ ಕೋಟಿ) ತಲುಪಿದೆ.

ಅಮೆರಿಕ, ಚೀನಾ, ಜಪಾನ್ ಮತ್ತು ಹಾಂಗ್‌ಕಾಂಗ್ ಷೇರುಪೇಟೆಯ ನಂತರ ಬಿಎಸ್‌ಇ ವಿಶ್ವದ ಐದನೇ ಅತಿದೊಡ್ಡ ಮಾರುಕಟ್ಟೆಯಾಗಿದೆ ಎಂದು ಎಚ್‌ಡಿಎಫ್‌ಸಿ ಸೆಕ್ಯುರಿಟೀಸ್‌ನ ದೀಪಕ್ ಜಸಾನಿ ಹೇಳಿದ್ದಾರೆ.

2007ರ ಮೇ 28ರಂದು ಕಂಪನಿಗಳ ಮಾರುಕಟ್ಟೆ ಮೌಲ್ಯವು 1 ಟ್ರಿಲಿಯನ್ ಡಾಲರ್‌ಗೆ ಮುಟ್ಟಿತ್ತು. 2017ರ ಜುಲೈ 10ರಂದು 2 ಟ್ರಿಲಿಯನ್ ಡಾಲರ್ ಹಾಗೂ 2021ರ ಮೇ 24ರಂದು 3 ಟ್ರಿಲಿಯನ್ ಡಾಲರ್‌ಗೆ ತಲುಪಿತ್ತು. ಕಳೆದ ವರ್ಷದ ನವೆಂಬರ್ 29ರಂದು 4 ಟ್ರಿಲಿಯನ್ ಡಾಲರ್‌ಗೆ ತಲುಪಿತ್ತು. ಮಾರುಕಟ್ಟೆ ಮೌಲ್ಯವು 1 ಟ್ರಿಲಿಯನ್ ಡಾಲರ್‌ನಿಂದ 2 ಟ್ರಿಲಿಯನ್ ಡಾಲರ್‌ಗೆ ಏರಿಕೆಯಾಗಲು 10 ವರ್ಷ ತೆಗೆದುಕೊಂಡಿದೆ. 2.5 ಟ್ರಿಲಿಯನ್‌ಗೆ ಮುಟ್ಟಲು 1,255 ದಿನಗಳನ್ನು ತೆಗೆದುಕೊಂಡಿದೆ.

ಪ್ರಶ್ನೋತ್ತರ



ಪ್ರಮೋದ ಶ್ರೀಕಾಂತ ದೈತೋಟ
ತೆರಿಗೆ ಮತ್ತು ವೈಯಕ್ತಿಕ ಹಣಕಾಸು ತಜ್ಞ

ಶಂಕರ್ ಪಾಟೀಲ, ಬೆಂಗಳೂರು.

• ಪ್ರಶ್ನೆ: ನಾನು ಖಾಸಗಿ ಕಂಪನಿಯ ಉದ್ಯೋಗಿ. ನನ್ನ ಪತ್ನಿಯೂ ಉದ್ಯೋಗಿಯಾಗಿದ್ದಾಳೆ. ನಾವಿಬ್ಬರೂ ನಮ್ಮೂರಿನ ಒಂದು ಆಸ್ತಿಯನ್ನು ಮಾರಾಟ ಮಾಡಿ ಬೆಂಗಳೂರಿನಲ್ಲೊಂದು ಫ್ಲ್ಯಾಟ್ ಕೊಂಡುಕೊಳ್ಳಲು ಕರಾರು ಮಾಡಿದ್ದೇವೆ. ನಾವು ನಮ್ಮೂರ ಮನೆ ಮಾರಾಟ ಮಾಡಿದಾಗ ಬಂದ ಸಂಪೂರ್ಣ ಹಣವಲ್ಲದೆ ಹೆಚ್ಚುವರಿ ಮೊತ್ತವನ್ನು ಹೊಸ ಮನೆಗಾಗಿ ಪಾವತಿಸುತ್ತಿದ್ದೇವೆ. ಅಲ್ಲದೆ, ಒಂದಿಷ್ಟು ಬ್ಯಾಂಕ್ ಸಾಲವನ್ನೂ ಪಡೆದಿದ್ದೇವೆ.

ನಮ್ಮ ಪ್ರಶ್ನೆ ಏನೆಂದರೆ, ನಮ್ಮ ಹಳೆಯ ಮನೆ ಮಾರಾಟ ಮಾಡಿ ಬಂದ ಲಾಭಕ್ಕೆ ತೆರಿಗೆ ವಿನಾಯಿತಿ ಪಡೆಯಲು ನಾವು ಈಗ ಬೆಂಗಳೂರಿನ ಮನೆಗೆ ಹಣ ವಿನಿಯೋಗಿಸಿದ್ದೇವೆ. ಆದರೆ, ಹೊಸ ಮನೆಯ ನಿರ್ಮಾಣ ಮೂರು ವರ್ಷದ ಅವಧಿಯಲ್ಲಿ ಪೂರ್ಣಗೊಂಡಿರಬೇಕೆನ್ನುವ ನಿಯಮ ಇದೆ. ಅದು ಈ ಅವಧಿಯೊಳಗೆ ಮುಗಿದು ನಮ್ಮ ಕೈ ಸೇರುವುದು ಅಸಾಧ್ಯ. ಇನ್ನೂ ಕೆಲವು ತಿಂಗಳು ತಡವಾಗುವ ಸಾಧ್ಯತೆ ಇದೆ ಎಂಬುದು ಮನೆ ಕಟ್ಟಿಸುವ ಸಂಸ್ಥೆಯಿಂದ ತಿಳಿದು ಬಂದಿದೆ. ಇದಕ್ಕೆ ಕೆಲವು ತಾಂತ್ರಿಕ ಅಡಚಣೆ ಹಾಗೂ ಸರ್ಕಾರದ ಪರವಾನಗಿ ಬಾಕಿ ಇದೆ ಎನ್ನುವ ಮೌಖಿಕ ಕಾರಣ ನೀಡಿದ್ದಾರೆ. ಇದರಿಂದ ನಮಗೆ ಸಿಗುವ ತೆರಿಗೆ ಲಾಭಕ್ಕೆ ತೊಂದರೆ ಇದೆಯೇ. ನಾವು ಅದಕ್ಕೆ ಸಂಬಂಧಿಸಿದಂತೆ ಏನಾದರೂ ಮುಂಜಾಗ್ರತೆ ವಹಿಸಬೇಕಿದೆಯೇ?

ಉತ್ತರ: ಆದಾಯ ತೆರಿಗೆಯ ಸಹಜ ನಿಯಮಗಳಡಿ ಯಾವುದೇ ತೆರಿಗೆ ಲಾಭ ಪಡೆಯಲು ಕೆಲವು ಷರತ್ತುಗಳನ್ನು ಪಾಲಿಸಬೇಕಾಗುತ್ತದೆ. ಸೆಕ್ಷನ್ 54ರ ಪ್ರಕಾರ ಈಗಾಗಲೇ ನೀವು ಒಂದು ಮನೆಯನ್ನು ಮಾರಾಟ ಮಾಡಿ ಅದರ ಮೇಲೆ ಬರುವ ಲಾಭಕ್ಕೆ ಆದಾಯ ತೆರಿಗೆ ವಿನಾಯಿತಿ ಪಡೆಯಲು ಇನ್ನೊಂದು ಮನೆಯನ್ನು ಕಟ್ಟಿಸುವುದಿದ್ದರೆ, ಅದರ ನಿರ್ಮಾಣ ಮೂರು ವರ್ಷದೊಳಗೆ ಪೂರ್ಣಗೊಂಡಿರಬೇಕು. ಆದರೆ, ಕೆಲವು ವಿಶೇಷ ಸಂದರ್ಭಗಳಲ್ಲಿ ಸಂಪೂರ್ಣ ನಿರ್ಮಾಣ ಸಾಧ್ಯವಾಗದೆ ಇರಬಹುದು.

ಅನೇಕ ತೆರಿಗೆ ವ್ಯಾಜ್ಯಗಳನ್ನು ವಿಲೇವಾರಿ ಮಾಡುವ ಸಂದರ್ಭದಲ್ಲಿ ವಿನಾಯಿತಿ ಅಮಾನ್ಯ ಮಾಡದೆ ಪ್ರತಿ ಸನ್ನಿವೇಶದ ಆಧಾರದ ಮೇಲೆ ರಿಯಾಯಿತಿ ನೀಡಿದ ಸಂದರ್ಭಗಳಿವೆ. ಇಂತಹ ಸನ್ನಿವೇಶಗಳಲ್ಲಿ ಮನೆ ನಿರ್ಮಾಣಕ್ಕೆ ತೆಗೆದುಕೊಂಡ ಅವಧಿಗಿಂತ ಬಂದ ಹಣದ ಸರಿಯಾದ ಉಪಯೋಗ ಮಾಡಲಾಗಿದೆಯೇ ಹಾಗೂ ತೆರಿಗೆದಾರನ ಕಡೆಯಿಂದ ಯಾವುದೇ ವ್ಯತ್ಯಯ ಆಗಿಲ್ಲವೆಂಬುದನ್ನು ವಿಶೇಷವಾಗಿ ಪರಿಗಣಿಸಲಾಗಿದೆ.

ನಿಮ್ಮ ವಿಚಾರದಲ್ಲೂ ಬಹುಶಃ ಅದೇ ರೀತಿಯ ಸನ್ನಿವೇಶ ಎದುರಾದಂತಿದೆ. ಇಲ್ಲಿ ನಿಮ್ಮ ಸಂಪೂರ್ಣ ಹಣ ನೀವು ವಿನಿಯೋಗಿಸಿದ್ದೀರಿ ಹಾಗೂ ನಿಮ್ಮ ಮನೆ ನಿರ್ಮಾಣ ಸಂಸ್ಥೆಯೇ ಹೇಳುವಂತೆ ಪರವಾನಗಿ ಹಾಗೂ ಕೆಲವು ತಾಂತ್ರಿಕ ತೊಂದರೆಗಳಿರುವ ಕಾರಣ ನೀಡುವ ಉತ್ತರ ಮುಂದೆ ಸಮಸ್ಯೆಗೆ ಕಾರಣ ಆಗಲಾರದು. ಇದಕ್ಕಾಗಿ ನಿರ್ಮಾಣ ಸಂಸ್ಥೆಯಿಂದ ಲಿಖಿತ ಕಾರಣಗಳನ್ನು ದಾಖಲಿಸಿಟ್ಟುಕೊಳ್ಳಿ. ಅಗತ್ಯ ಬಿದ್ದರೆ ಇಂತಹ ದಾಖಲೆಗಳು ಮುಂದೆ ಯಾವುದೇ ಸವಾಲುಗಳು ಬಂದಾಗ ನೆರವಿಗೆ ಬರುತ್ತವೆ.

ಕೆ.ಸಿ. ವೆಂಕಟೇಶಮೂರ್ತಿ, ಊರು ತಿಳಿಸಿಲ್ಲ.

• ಪ್ರಶ್ನೆ: ನನ್ನ ತಂದೆಗೆ ಸುಮಾರು 89 ವರ್ಷ. ಅವರು 29 ವರ್ಷದ ಹಿಂದೆ ಸಾರ್ವಜನಿಕ ವಲಯದ ಸಂಸ್ಥೆಯಿಂದ ನಿವೃತ್ತರಾಗಿದ್ದಾರೆ. ಆದಾಯ ತೆರಿಗೆ ಮಿತಿಗಿಂತ ಅವರ ಆದಾಯ ಕಡಿಮೆ ಇರುವ ಕಾರಣ ಅವರು ನಿವೃತ್ತಿ ನಂತರ ತಮ್ಮ ಆದಾಯ ತೆರಿಗೆ ರಿಟರ್ನ್ಸ್ ಸಲ್ಲಿಸುತ್ತಿಲ್ಲ. ಇತ್ತೀಚೆಗೆ ಒಂದು ನಿವೇಶನ ಮಾರಾಟ ಮಾಡಿ ಸುಮಾರು ₹60 ಲಕ್ಷ ಬಂದಿದೆ. ಖರೀದಿದಾರರು ಸುಮಾರು ₹90,000 ಮೊತ್ತದ ತೆರಿಗೆಯನ್ನು ಕಡಿತಗೊಳಿಸಿದ್ದಾರೆ. ರಾಜಿ ಸಂಧಾನದ ಅಡಿಯಲ್ಲಿ ಮಾರಾಟವಾದ ಕಾರಣ ಅವರು ಯಾವುದೇ ಬಂಡವಾಳ ಲಾಭವನ್ನು ಗಳಿಸಿಲ್ಲ.

ಈಗ, ನನ್ನ ತಂದೆ ಟಿಡಿಎಸ್ ಅನ್ನು ಹಿಂಪಡೆಯಲು ರಿಟರ್ನ್ಸ್ ಸಲ್ಲಿಸಲು ಬಯಸುತ್ತಾರೆ. ಅವರು ಯಾವ ಫಾರ್ಮ್/ ರಿಟರ್ನ್ಸ್ ಅನ್ನು ಬಳಸಬೇಕೆಂದು ದಯವಿಟ್ಟು ತಿಳಿಸಿ. ಅವರ ಪ್ರಸ್ತುತ ಆದಾಯವು ಐ.ಟಿ ಕನಿಷ್ಠ ಸ್ಲ್ಯಾಬ್‌ಗಿಂತ ಕಡಿಮೆಯಾಗಿದೆ. ಟಿಡಿಎಸ್ ಅನ್ನು ಕ್ಲೈಮ್ ಮಾಡಲು ಮಾತ್ರ ಅವರು ರಿಟರ್ನ್ಸ್ ಸಲ್ಲಿಸಬೇಕಾಗುತ್ತದೆ. ಐಟಿಆರ್ 1 ಅಥವಾ ಐಟಿಆರ್ 2 ಇತ್ಯಾದಿ ಬಗ್ಗೆ ದಯವಿಟ್ಟು ತಿಳಿಸಿ.

ಉತ್ತರ: ಆದಾಯ ತೆರಿಗೆಯ ಸೆಕ್ಷನ್ 194ಐಎ ಇದರಡಿ, ₹50 ಲಕ್ಷಕ್ಕೂ ಅಧಿಕ ಮೌಲ್ಯದ ಯಾವುದೇ ಸ್ಥಿರಾಸ್ತಿಯನ್ನು ವರ್ಗಾಯಿಸುವಾಗ ಖರೀದಿದಾರರು ಶೇ 1ರ ದರದಲ್ಲಿ ಆ ಮೌಲ್ಯದ ಮೇಲೆ ತೆರಿಗೆ ಕಡಿತಗೊಳಿಸಿ ಮಾರಾಟಗಾರರ ಪ್ಯಾನ್ ಸಂಖ್ಯೆಯಡಿ ತೆರಿಗೆ ಭರಿಸಬೇಕು. ಇದಕ್ಕೆ ಪ್ರತ್ಯೇಕ ವರದಿಯನ್ನು ಕೂಡ ಖರೀದಿದಾರರು ಸಲ್ಲಿಸಬೇಕು. ಈ ಹಂತ ಖರೀದಿದಾರರ ಪರಿಧಿಯಲ್ಲಿದ್ದರೆ, ಮುಂದಿನ ಹಂತವು ಮಾರಾಟ ಮಾಡಿದ ವ್ಯಕ್ತಿಯ ಹಂತದಲ್ಲಿರುತ್ತದೆ.

ನಿಮ್ಮ ರಿಟರ್ನ್ಸ್ ಸಲ್ಲಿಸಬೇಕೇ, ಬೇಡವೇ ಎನ್ನುವ ನಿರ್ಧಾರ ಒಟ್ಟಾರೆ ತೆರಿಗೆಗೊಳಪಡುವ ಆದಾಯದ ಮೇಲೆ ನಿರ್ಧಾರವಾಗುತ್ತದೆ. ನೀವು ಆಸ್ತಿಯನ್ನು ರಾಜಿ ಸೂತ್ರದ ಅಡಿ ಮಾರಾಟ ಮಾಡಲಾಗಿದೆ ಎಂದು ತಿಳಿಸಿದ್ದೀರಿ. ಆದರೆ, ತೆರಿಗೆ ವಿಚಾರಕ್ಕೆ ಸಂಬಂಧಿ ಮಾರಾಟವಾದ ಆಸ್ತಿ ಅವರ ಹೆಸರಿನಲ್ಲಿತ್ತೇ ಹಾಗೂ ಆ ವ್ಯವಹಾರಕ್ಕೆ ಸಂಬಂಧಿಸಿ ಬಂದ ಹಣ ಎಷ್ಟು, ಅದು ವರ್ಗಾವಣೆ ವ್ಯಾಪ್ತಿಯಲ್ಲಿ ಬರುತ್ತದೆಯೇ ಎಂಬಿತ್ಯಾದಿ ವಿಚಾರಗಳ ಆಧಾರದಲ್ಲಿ ತೆರಿಗೆ ನಿರ್ಣಯವಾಗುತ್ತದೆ.

ನೀವು ಈಗಾಗಲೇ ತಂದೆಯವರು ಪಿಂಚಣಿ ಆದಾಯಕ್ಕೆ ತೆರಿಗೆ ತೆರುವ ಅಗತ್ಯ ಇಲ್ಲ ಎಂಬುದಾಗಿ ವಿವರದಲ್ಲಿ ತಿಳಿಸಿದ್ದೀರಿ. ಆದರೆ, ಆದಾಯ ತೆರಿಗೆ ಪಾವತಿ, ಎಲ್ಲಾ ಮೂಲಗಳ ಹಾಗೂ ವರ್ಷದ ಒಟ್ಟಾರೆ ಆದಾಯದ ಆಧಾರದ ಮೇಲೆ ನಿರ್ಣಯವಾಗುತ್ತದೆ. ಅಲ್ಲದೆ, ಯಾವುದೇ ರಿಫಂಡ್ ಸಿಗಬೇಕಾದರೂ ಆದಾಯ ತೆರಿಗೆ ರಿಟರ್ನ್ಸ್ ಕಡ್ಡಾಯವಾಗಿ ಸಲ್ಲಿಸಬೇಕು. ಇದಕ್ಕೆ ಐಟಿಆರ್ 2 ಅನ್ನು ಬಳಸಿಕೊಳ್ಳಿ. ನಿಮ್ಮ ಆಸ್ತಿ ಮಾರಾಟದಿಂದ ಬಂಡವಾಳ ಲಾಭ ಆದಾಯ ಇಲ್ಲ ಎಂಬ ಊಹೆ ನಿಮ್ಮದು. ಆದರೂ, ಒಂದು ಬಾರಿ ಸಂಪೂರ್ಣ ಮಾಹಿತಿಯೊಂದಿಗೆ ತೆರಿಗೆ ಸಲಹೆಗಾರರನ್ನು ಸಂಪರ್ಕಿಸಿ ಪರಾಮರ್ಶೆ ನಡೆಸಿ.

ಕೇವಲ ರಿಫಂಡ್ ಪಡೆಯುವ ಕಾರಣಕ್ಕಲ್ಲದೆ, ಇತರೆ ಸನ್ನಿವೇಶಗಳಲ್ಲೂ ತೆರಿಗೆ ರಿಟರ್ನ್ಸ್‌ನಲ್ಲಿ ಇಂತಹ ಮಾಹಿತಿ ಒಳಗೊಳ್ಳಬೇಕು. ಇಷ್ಟೊಂದು ದೊಡ್ಡ ಮೊತ್ತದ ಆಸ್ತಿ ವರ್ಗಾವಣೆಯಾದ ಸಂದರ್ಭದಲ್ಲಿ, ಹಣದ ಮೂಲದ ಬಗ್ಗೆ ಆದಾಯ ತೆರಿಗೆ ಇಲಾಖೆಯಿಂದ ಯಾವುದೇ ವಿವರಣೆ ನೀಡಲು ಕೋರಿಕೆ ಬಂದಾಗ ರಿಟರ್ನ್ಸ್‌ನಲ್ಲಿ ಅಂತಹ ವ್ಯವಹಾರವಾದ ಮಾಹಿತಿ ಇಲ್ಲದಿದ್ದರೆ, ತೆರಿಗೆದಾರರಿಗೆ ಅದು ಮುಂದೆ ಸಮಸ್ಯೆಗೆ ಕಾರಣವಾದೀತು. ಹೀಗಾಗಿ ಹೆಚ್ಚಿನ ಮುಂಜಾಗ್ರತೆ ಅಗತ್ಯ.

ಹಣಕಾಸು, ತೆರಿಗೆ ಸಮಸ್ಯೆಗೆ ಪರಿಹಾರ

ಹಣಕಾಸಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಪತ್ರದಲ್ಲಿ (ದೂರವಾಣಿ ಸಂಖ್ಯೆ ಸಹಿತ) ಬರೆದು ಕಳುಹಿಸಿ. ವಿಳಾಸ: ಪ್ರಶ್ನೋತ್ತರ, ವಾಣಿಜ್ಯ ವಿಭಾಗ, ಪ್ರಜಾವಾಣಿ, ನಂ.75, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು–560001. ಇ–ಮೇಲ್:businessdesk@prajavani.co.in



|| ಹರಿ ಓಂ ತತ್ಸತ್ ಓಂ ಶ್ರೀ ರಾಮಕೃಷ್ಣಾಯತೇ ನಮಃ || ಶ್ರೀ ರಾಮಕೃಷ್ಣ ವಿದ್ಯಾಶ್ರಮ ಟ್ರಸ್ಟ್ (ರಿ)
ಶ್ರೀ ರಾಮಕೃಷ್ಣ ವಿದ್ಯಾನಿಕೇತನ (ರಿ) ವಸತಿ ಶಾಲೆ, ಗೋಪಾಳ, ಶಿವಮೊಗ್ಗ
SINCE 1992
100% RESULTS
ಸತತವಾಗಿ 18ನೇ ಬಾರಿ 100% ಫಲಿತಾಂಶ ನೀಡಿ, 2023-24 ಸಾಲಿನ ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ಅದ್ವಿತೀಯ ಸಾಧನೆಗೈದ ವಿದ್ಯಾರ್ಥಿಗಳು
7TH STATE RANK
619 625
7TH STATE RANK
619 625
8TH STATE RANK
618 625
616 625
615 625
613 625
610 625
608 625
607 625
607 625
ವಿಷಯವಾರು 100ಕ್ಕೆ 100 ಅಂಕ ಪಡೆದಿರುವ ವಿದ್ಯಾರ್ಥಿಗಳ ಸಂಖ್ಯೆ
ಕನ್ನಡ - 19
ಇಂಗ್ಲೀಷ್ - 06
ಹಿಂದಿ - 07
ಸಂಸ್ಕೃತ - 03
ಗಣಿತ - 06
ವಿಜ್ಞಾನ - 02
ಸಮಾಜ ವಿಜ್ಞಾನ - 01
3 ಬಾರಿ ರಾಜ್ಯಕ್ಕೆ ಪ್ರಥಮ ಸ್ಥಾನ ಪಡೆದಿರುವ ಏಕೈಕ ಶಾಲೆ
ವಸತಿ ವ್ಯವಸ್ಥೆ ಇರುತ್ತದೆ
ಶಾಲಾ ವಾಹನದ ವ್ಯವಸ್ಥೆ ಇರುತ್ತದೆ
|| ಹರಿ ಓಂ ತತ್ಸತ್ ಓಂ ಶ್ರೀ ರಾಮಕೃಷ್ಣಾಯತೇ ನಮಃ || ಶ್ರೀ ರಾಮಕೃಷ್ಣ ವಿದ್ಯಾಶ್ರಮ ಟ್ರಸ್ಟ್ (ರಿ)
ಶ್ರೀ ರಾಮಕೃಷ್ಣ ಗುರುಕುಲ ವಸತಿ ವಿದ್ಯಾಲಯ ಅನುಪಿನಕಟ್ಟೆ, ಶಿವಮೊಗ್ಗ
SINCE 1992
100% RESULTS
2023-24 ಸಾಲಿನ ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ಅದ್ವಿತೀಯ ಸಾಧನೆಗೈದ ವಿದ್ಯಾರ್ಥಿಗಳು
606 625
ಪವನ್ ಎಂ ವಿ
604 625
ಚಿರಂತ್ ಜಿ ಕೆ
96.64%
603 625
ಕಿಶನ್ ಪಟೇಲ್ ಟಿ ಎಸ್
96.48%
595 625
ಆಕಾಶ್ ಪಿ
595 625
ಶರತ್ ಕುಮಾರ್
588 625
ಸಂಜಯ್ ಎಲ್
94.08%
587 625
93.92%
585 625
ಲಿಖಿತ್ ಜೆ ಎಸ್
93.60%
584 625
583 625
ವಿಷಯವಾರು 100ಕ್ಕೆ 100 ಅಂಕ ಪಡೆದಿರುವ ವಿದ್ಯಾರ್ಥಿಗಳ ಸಂಖ್ಯೆ
ಕನ್ನಡ - 01
ಇಂಗ್ಲೀಷ್ - 04
ಹಿಂದಿ - 03
ಗಣಿತ - 01
ವಸತಿ ವ್ಯವಸ್ಥೆ ಇರುತ್ತದೆ



ಶ್ರೀ ರಾಮಕೃಷ್ಣ ಆಂಗ್ಲ ಮಾಧ್ಯಮ ಪ್ರೌಢಶಾಲೆ
ತ್ಯಾಗರಾಜನಗರ, ಶೃಂಗೇರಿ
2023-24ನೇ ಸಾಲಿನ SSLC ಪರೀಕ್ಷೆಯಲ್ಲಿ ಅದ್ವಿತೀಯ ಸಾಧನೆಗೈದ ವಿದ್ಯಾರ್ಥಿಗಳು
100% RESULT
ಒಟ್ಟು ವಿದ್ಯಾರ್ಥಿಗಳು - 26
ಡಿಸ್ಟಿಂಕ್ಷನ್ - 14
ಪ್ರಥಮ ದರ್ಜೆ - 11
ದ್ವಿತೀಯ ದರ್ಜೆ - 01
ಶಾಲಾ ವಾಹನದ ವ್ಯವಸ್ಥೆ ಇರುತ್ತದೆ
8722636866, 9845560531, 8073900563
ಪ್ರವೇಶ ಪ್ರಾರಂಭವಾಗಿದೆ
9845560531, 9480109422, 9035937423
www.srirar



|| ಹರಿ ಓಂ ತತ್ಸತ್ ಓಂ ಶ್ರೀ ರಾಮಕೃಷ್ಣಾಯತೇ ನಮಃ ||
Since 1992
ಶ್ರೀ ರಾಮಕೃಷ್ಣ ವಿದ್ಯಾಶ್ರಮ ಟ್ರಸ್ಟ್ (ರಿ.)
ಶ್ರೀ ರಾಮಕೃಷ್ಣ ಗುರುಕುಲ ಆಂಗ್ಲ ಮಾಧ್ಯಮ ಶಾಲೆ ಚೋರಡಿ.
ಶಾಲಾ ವಾಹನದ ವ್ಯವಸ್ಥೆ ಇರುತ್ತದೆ
2023 - 24ನೇ ಸಾಲಿನ ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ಅದ್ವಿತೀಯ ಸಾಧನೆಗೈದ ವಿದ್ಯಾರ್ಥಿಗಳು
ಎಂ ಎಂ ಧನ್ಯ
576/625 - 92.16%
ರಮ್ಯಶ್ರೀ ಯು
567/625 - 90.72%
ಈಶಾಂತ್ ಕೆ ಹೆಚ್
531/625 - 84.96%
523/625 - 83.68%
ನೂತನ್ ಎಂ
518/625 - 82.88%
ಆಯಿಷಾ ಸಿದ್ದಿಕ
517/625 - 82.72%
ಅತ್ಯದ್ಭುತ ಫಲಿತಾಂಶ ಪಡೆದ ವಿದ್ಯಾರ್ಥಿಗಳಿಗೂ, ಶಿಕ್ಷಕರಿಗೂ ಮತ್ತು ಪೋಷಕರಿಗೂ ತುಂಬು ಹೃದಯದ ಅಭಿನಂದನೆಗಳು
- ಆಡಳಿತ ಮಂಡಳಿ
8970879298, 9880384073, 9845560531, 8073900563

ಎಲಿಮಿನೇಟರ್ ಪಂದ್ಯ ಇಂದು • ಫಫ್ ಡುಪ್ಲೆಸಿ ಬಳಗಕ್ಕೆ ಸಂಜು ಸ್ಯಾಮ್ಸನ್ ಪಡೆ ಸವಾಲು

ಬೆಂಗಳೂರಿಗೆ 'ರಾಯಲ್ ಚಾಲೆಂಜ್'



ಪಂದ್ಯ ಆರಂಭ: ರಾತ್ರಿ 7.30
ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್, ಜಿಯೊ ಸಿನಿಮಾ ಆ್ಯಪ್

ಫಫ್ ಡುಪ್ಲೆಸಿ ಹಾಗೂ ವಿರಾಟ್ ಕೊಹ್ಲಿ

ಪ್ರಜಾವಾಣಿ ವಾರ್ತೆ

ಅಹಮದಾಬಾದ್ : ಫಫ್ ಡುಪ್ಲೆಸಿ ನಾಯಕತ್ವದ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡವು ತನ್ನ ಉತ್ಕಟ ಅಭಿಮಾನಿ ಬಳಗದ ನಿರೀಕ್ಷೆಗಳ ಮೂಟೆಯನ್ನು ಹೊತ್ತು ಇಲ್ಲಿಗೆ ಬಂದಿಳಿದಿದೆ.

ಟೂರ್ನಿಯ ಪ್ರಥಮಾರ್ಧದದಲ್ಲಿ ಸತತ ಸೋಲುಗಳ ಹತಾಶೆಯಿಂದ ಪುಟಿದೆದ್ದು ನಿರಂತರ ಗೆಲುವುಗಳನ್ನು ಸಾಧಿಸಿ ಪ್ಲೇ ಆಫ್ ಪ್ರವೇಶಿಸಿರುವ ಬೆಂಗಳೂರು ಬಳಗದಲ್ಲಿ ಈಗ ಚೊಚ್ಚಲ ಪ್ರಶಸ್ತಿ ಜಯದ ಕನಸು ಚಿಗುರೊಡೆದಿದೆ. ಅದಕ್ಕಾಗಿ ಅತಿ ಕಠಿಣವಾದ ಹಾದಿಯನ್ನು ಕ್ರಮಿಸಬೇಕಿದೆ. ಈ ದಾರಿಯ ಮೊದಲ ಸವಾಲು ಬುಧವಾರ ನಡೆಯಲಿರುವ ಎಲಿಮಿನೇಟರ್ ಪಂದ್ಯ. ಈ ಹಣಾಹಣಿಯಲ್ಲಿ ಸಂಜು ಸ್ಯಾಮ್ಸನ್ ನಾಯಕತ್ವದ ರಾಜಸ್ಥಾನ ರಾಯಲ್ಸ್ ತಂಡವನ್ನು ಎದುರಿಸಲಿದೆ.

ಸಂಜು ಬಳಗವು ಟೂರ್ನಿಯ ಆರಂಭದಲ್ಲಿ ಸತತ ಗೆಲುವುಗಳನ್ನು ಸಾಧಿಸಿತ್ತು. ಅಗ್ರಸ್ಥಾನ ಪಡೆಯುವ ಭರವಸೆ ಮೂಡಿಸಿತ್ತು. ಆದರೆ, ಲೀಗ್ ಹಂತದ ತನ್ನ ಕೊನೆಯ ಐದು ಪಂದ್ಯಗಳಲ್ಲಿ ನಾಲ್ಕರಲ್ಲಿ ಸೋತಿತು.

ಬಲಾಬಲ

31	ಪಂದ್ಯ
15	ಆರ್‌ಸಿಬಿ ಜಯ
13	ರಾಜಸ್ಥಾನ ಜಯ
3	ಫಲಿತಾಂಶವಿಲ್ಲ

ಪ್ಲೇ ಆಫ್ ಪ್ರವೇಶ–ಸಾಧನೆ

ಬೆಂಗಳೂರು	8 (ರನ್ನರ್ಸ್ ಅಪ್: 3)
ರಾಜಸ್ಥಾನ	5 (ಚಾಂಪಿಯನ್: 1, ರನ್ನರ್ಸ್ ಅಪ್: 1)

ನಾಯಕರ ಬಲಾಬಲ (2024)

	ಪಂದ್ಯ	ರನ್	ಸ್ಟ್ರೈಕ್‌ರೇಟ್	ಬೌಂಡರಿ	ಸಿಕ್ಸರ್	ಅರ್ಧಶತಕ	ಶ್ರೇಷ್ಠ
ಸಂಜು ಸ್ಯಾಮ್ಸನ್ (ರಾಜಸ್ಥಾನ ರಾಯಲ್ಸ್)	13	504	156.52	47	23	5	86
ಫಫ್ ಡುಪ್ಲೆಸಿ (ರಾಯಲ್ ಚಾಲೆಂಜರ್ಸ್ ಬೆಂಗಳೂರು)	14	421	163.81	45	20	4	64

ಮುಖ್ಯಾಂಶಗಳು

- ವಿರಾಟ್ ಕೊಹ್ಲಿ, ಮೊಹಮ್ಮದ್ ಸಿರಾಜ್ ಮೇಲೆ ನಿರೀಕ್ಷೆ
- ರಾಜಸ್ಥಾನ ತಂಡದಲ್ಲಿ ಬಲಿಷ್ಠ ಬೌಲಿಂಗ್ ಪಡೆ
- ಈ ಪಂದ್ಯದಲ್ಲಿ ಜಯಿಸಿದ ತಂಡವು ಎರಡನೇ ಕ್ವಾಲಿಫೈಯರ್ ಪ್ರವೇಶಿಸುವುದು



ಸಂಜು ಸ್ಯಾಮ್ಸನ್

ಒಂದು ಪಂದ್ಯ ಮಳೆಗಾಹುತಿ ಆಯಿತು.

ಆದರೆ ಆರ್‌ಸಿಬಿಯದ್ದು ಇದಕ್ಕೆ ತದ್ವಿರುದ್ಧ. ತನ್ನ ಮೊದಲ ಎಂಟು ಪಂದ್ಯಗಳಲ್ಲಿ ಏಳರಲ್ಲಿ ಪರಾಭವಗೊಂಡಿತ್ತು. ಅದರಲ್ಲಿ ಒಂದು ರಾಜಸ್ಥಾನ ಎದುರಿನ ಪಂದ್ಯವೂ ಆಗಿತ್ತು. ಆ ಹಣಾಹಣಿಯಲ್ಲಿ ಆರ್‌ಸಿಬಿಯ ವಿರಾಟ್ ಕೊಹ್ಲಿ ಮತ್ತು ರಾಜಸ್ಥಾನ ತಂಡದ ಜೋಸ್ ಬಟ್ಲರ್ ಶತಕ ದಾಖಲಿಸಿದ್ದರು. ಆದರೆ ತನ್ನ ಕೊನೆಯ ಆರು ಪಂದ್ಯಗಳಲ್ಲಿ ಸತತ ಗೆಲುವು ಸಾಧಿಸಿ ನಾಲ್ಕರ ಘಟ್ಟಕ್ಕೆ ಆರ್‌ಸಿಬಿ ಬಂದು ನಿಂತಿದೆ.

ಅದರಲ್ಲೂ ಕೊನೆಯ ಪಂದ್ಯದಲ್ಲಿ 'ಹಾಲಿ ಚಾಂಪಿಯನ್' ಚೆನ್ನೈ ಸೂಪರ್ ಕಿಂಗ್ಸ್ ಎದುರು ಸಾಧಿಸಿದ ರೋಚಕ ಜಯದಿಂದಾಗಿ ಆತ್ಮವಿಶ್ವಾಸ ಉತ್ತುಂಗದಲ್ಲಿದೆ.

'ಆರೆಂಜ್ ಕ್ಯಾಪ್' ಧರಿಸಿರುವ ವಿರಾಟ್, ನಾಯಕ ಫಫ್, ರಜತ್ ಪಾಟೀದಾರ್, ದಿನೇಶ್ ಕಾರ್ತಿಕ್, ಕ್ಯಾಮರಾನ್ ಗ್ರೀನ್ ಹಾಗೂ ಗ್ಲೆನ್ ಮ್ಯಾಕ್ಸ್‌ವೆಲ್ ಅವರು ಉತ್ತಮ ಲಯದಲ್ಲಿದ್ದಾರೆ. ರಾಜಸ್ಥಾನ ಬಳಗದಲ್ಲಿರುವ ಅನುಭವಿ ವೇಗಿ ಟ್ರೆಂಟ್ ಬೌಲ್ಟ್, ಆವೇಶ್ ಖಾನ್ ಮತ್ತು ಸ್ಪಿನ್ನರ್ ಯಜುವೇಂದ್ರ ಚಾಹಲ್ ಅವರನ್ನು ಎದುರಿಸಿ ನಿಲ್ಲುವ ಸವಾಲು ಆರ್‌ಸಿಬಿ ಮುಂದಿದೆ.

ಬಟ್ಲರ್ ಇಲ್ಲದ್ದರಿಂದ ರಾಯಲ್ಸ್ ಬ್ಯಾಟಿಂಗ್ ತುಸು ಮಂಕಾಗಿದೆ. ನಾಯಕ ಸಂಜು, ರಿಯಾನ್ ಪರಾಗ್, ಯಶಸ್ವಿ ಜೈಸ್ವಾಲ್ ಹಾಗೂ ಧ್ರುವ ಜುರೇಲ್ ಅವರ ಮೇಲೆ ಹೆಚ್ಚು ಒತ್ತಡವಿದೆ. ಪವರ್‌ಪ್ಲೇ ಅವಧಿಯಲ್ಲಿ ಅಮೋಘವಾಗಿ ಬೌಲಿಂಗ್ ಮಾಡುತ್ತಿರುವ ಮೊಹಮ್ಮದ್ ಸಿರಾಜ್, ಗ್ಲೆನ್ ಮ್ಯಾಕ್ಸ್‌ವೆಲ್, ಸ್ವಪ್ನಿಲ್ ಸಿಂಗ್ ಹಾಗೂ ಯಶ್ ದಯಾಳ್ ಅವರನ್ನು ಎದುರಿಸಿ ನಿಲ್ಲುವ ಸವಾಲೂ ಇವರಿಗೆ ಇದೆ.

ಮಳೆ ಸುರಿದರೆ ಹೇಗೆ?

ಪ್ಲೇ ಆಫ್ ಹಾಗೂ ಫೈನಲ್ ಪಂದ್ಯಗಳ ಸಂದರ್ಭದಲ್ಲಿ ಮಳೆ ಸುರಿದರೆ ಆಟಕ್ಕೆ ಅಡ್ಡಿಯಾಗದಂತೆ ನಿಯಮಗಳನ್ನು ಐಪಿಎಲ್ ಆಡಳಿತ ಸಮಿತಿ ರೂಪಿಸಿದೆ. ಈ ಪಂದ್ಯಗಳಲ್ಲಿ ಮಳೆ ಬಂದು ಸಮಯ ನಷ್ಟವಾದರೂ ಸಂಪೂರ್ಣ ಓವರ್‌ಗಳನ್ನು ಆಡಿಸಲು 120 ನಿಮಿಷಗಳ ಹೆಚ್ಚುವರಿ ಸಮಯ ನೀಡಲಾಗಿದೆ.

ಪಂದ್ಯ ನಡೆಯದೇ ಹೋದರೆ ಅಥವಾ ಅರ್ಧವಾದರೆ ಮೀಸಲು ದಿನವನ್ನೂ ಇಡಲಾಗಿದೆ. ಅಕಸ್ಮಾತ್ ಆ ಮೀಸಲು ದಿನವೂ ಪಂದ್ಯವಾಗದೇ ಹೋದರೆ, ಸೂಪರ್ ಓವರ್ ಆಡಿಸಿ ಫಲಿತಾಂಶ ನಿರ್ಧರಿಸಬಹುದು. ಅದೂ ಸಾಧ್ಯವಾಗದಿದ್ದರೆ ಲೀಗ್ ಹಂತದಲ್ಲಿ ಪಡೆದ ಅಂಕ ಹಾಗೂ ನೆಟ್‌ರನ್ ರೇಟ್ ಆಧಾರದಲ್ಲಿ ವಿಜೇತರನ್ನು ನಿರ್ಣಯಿಸಬಹುದು ಎಂದು ಐಪಿಎಲ್ ಮೂಲಗಳು ತಿಳಿಸಿವೆ. ಅಹಮದಾಬಾದಿನಲ್ಲಿ ಮೇ 13ರಂದು ನಡೆಯಬೇಕಿದ್ದ ಗುಜರಾತ್ ಟೈಟನ್ಸ್–ಕೋಲ್ಕತ್ತ ನೈಟ್ ರೈಡರ್ಸ್ ನಡುವಣ ಲೀಗ್ ಪಂದ್ಯವು ಮಳೆಯಿಂದಾಗಿ ರದ್ದಾಗಿತ್ತು.



ಆರ್‌ಸಿಬಿ ಅಭಿಮಾನಿಗಳು

ಮೊಟೇರಾಗೆ ಹೊರಟ 'ಆರ್‌ಸಿಬಿ ಅಭಿಮಾನಿಗಳು'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಐಪಿಎಲ್ ಟೂರ್ನಿಯ ಇತಿಹಾಸದಲ್ಲಿಯೇ ಅತ್ಯಂತ 'ನಿಷ್ಠಾವಂತ ಅಭಿಮಾನಿ ಬಳಗ'ವನ್ನು ಹೊಂದಿರುವ ತಂಡವೆಂಬ ಶ್ರೇಯ ರಾಯಲ್ ಚಾಲೆಂಜರ್ಸ್ ಬೆಂಗಳೂರಿಗೆ ಇದೆ.

ಸತತ 17 ವರ್ಷಗಳಿಂದ ಆಡುತ್ತಿರುವ ತಂಡವು ಒಂದು ಬಾರಿಯೂ ಚಾಂಪಿಯನ್ ಆಗಿಲ್ಲ. ಆದರೆ ಈ ಅಭಿಮಾನಿ ಬಳಗದ ಪ್ರೀತಿ ಮಾತ್ರ ಹೆಚ್ಚಾಗುತ್ತಲೇ ಇರುವುದು ವಿಶೇಷ. ಇವರೆಲ್ಲರ 'ಆರ್‌ಸಿಬಿ ಫ್ಯಾನ್ ಕ್ಲಬ್' ರೂಪುಗೊಂಡು ಈಗ 13 ವರ್ಷಗಳು ಕಳೆದಿವೆ. ಅಹಮದಾಬಾದಿನಲ್ಲಿ ನಡೆಯಲಿರುವ ಎಲಿಮಿನೇಟರ್ ಪಂದ್ಯಕ್ಕೂ ಈ ಕ್ಲಬ್‌ನ ಸದಸ್ಯರು ಬೆಂಗಳೂರಿನಿಂದ ಹೊರಟಿದ್ದಾರೆ.

'ಈ ಪಂದ್ಯಕ್ಕೆ ಹತ್ತು ಜನ ಬೆಂಗಳೂರಿನಿಂದ ಹೋಗುತ್ತಿದ್ದೇವೆ. ಅಹಮದಾಬಾದ್‌ನಲ್ಲಿರುವ ಹಾಗೂ ಬೇರೆ ಬೇರೆ ಊರುಗಳಿಂದಲೂ ಬರುತ್ತಿದ್ದಾರೆ. ಸೂಪರ್ ಫ್ಯಾನ್ ಸುಗುಮಾರ್ ಕೂಡ ಇದ್ದಾರೆ' ಎಂದು ಈ ಕ್ಲಬ್ ಸಂಸ್ಥಾಪಕರಲ್ಲಿ ಒಬ್ಬರಾದ ಪ್ರೀತಂ ಕರಿಗಾರ್ ಹೇಳಿದ್ದಾರೆ.

'2011ರಲ್ಲಿ ನಾನು ಮತ್ತು ಸ್ನೇಹಿತ ವಿಕಾಸ್ ಜೈನ್ ಸೇರಿಕೊಂಡು ಒಂದು ಆರ್‌ಸಿಬಿ ಫ್ಯಾನ್ಸ್ ಫೇಸ್‌ಬುಕ್ ಪೇಜ್ ಆರಂಭಿಸಿದ್ದೆವು. ಈಗ ನಮಗೆ ಫೇಸ್‌ಬುಕ್‌ನಲ್ಲಿ 5.52 ಲಕ್ಷ ಫಾಲೋವರ್ಸ್ ಇದ್ದಾರೆ. ಇನ್‌ಸ್ಟಾಗ್ರಾಮ್‌ನಲ್ಲಿ 58 ಸಾವಿರ ಹಾಗೂ ಟ್ವಿಟರ್ (ಎಕ್ಸ್) 10 ಸಾವಿರ ಜನ ಫಾಲೋವರ್ಸ್ ಇದ್ದಾರೆ. ನಮ್ಮ ವಾಟ್ಸ್‌ಅಪ್ ಗ್ರೂಪ್‌ನಲ್ಲಿ ಎರಡು ಸಾವಿರ ಸದಸ್ಯರು ಇದ್ದೇವೆ' ಎಂದು ಪ್ರೀತಂ ವಿವರಿಸಿದರು.

'2017ರಲ್ಲಿ ಆರ್‌ಸಿಬಿಯ ಅಧಿಕೃತ ಫ್ಯಾನ್ ಕ್ಲಬ್ ಮಾನ್ಯತೆ ನಮಗೆ ಸಿಕ್ಕಿದೆ. ಅದೇ ವರ್ಷ ಬೆಸ್ಟ್ ಫ್ಯಾನ್ಸ್ ಎಂಬ ಗೌರವವೂ ನಮ್ಮದಾಗಿತ್ತು. ನಾವೆಲ್ಲರೂ ಬೇರೆ ಬೇರೆ ವೃತ್ತಿಗಳಲ್ಲಿದ್ದೇವೆ. ಬೆಂಗಳೂರಿನಲ್ಲಿ ಪಂದ್ಯ ನಡೆದಾಗ ಫ್ರ್ಯಾಂಚೈಸಿಯವರು 50 ಟಿಕೆಟ್‌ಗಳನ್ನು ಕಾಯ್ದಿರಿಸುತ್ತಾರೆ. ನಾವು ಖರೀದಿಸುತ್ತೇವೆ. ಸದಸ್ಯರೆಲ್ಲ ಸೇರಿ ಹಣ ಸಂಗ್ರಹಿಸಿಕೊಳ್ಳುತ್ತೇವೆ. ಬೇರೆ ಊರುಗಳಲ್ಲಿ ಪಂದ್ಯಗಳಿದ್ದಾಗ ನಮ್ಮದೇ ಖರ್ಚಿನಲ್ಲಿ ಹೋಗಿ ಬರುತ್ತೇವೆ. ಆರ್‌ಸಿಬಿ ಅಷ್ಟೇ ಅಲ್ಲ, ಬೆಂಗಳೂರು ಫುಟ್‌ಬಾಲ್ ಕ್ಲಬ್, ಬೆಂಗಳೂರು ಬುಲ್ಸ್ ಕಬಡ್ಡಿ ತಂಡಗಳನ್ನೂ ನಾವು ಬೆಂಬಲಿಸುತ್ತೇವೆ' ಎಂದು ಪ್ರೀತಂ ಹೇಳುತ್ತಾರೆ.

ಮಿಚೆಲ್ ಸ್ಟಾರ್ಕ್‌ಗೆ ಮೂರು ವಿಕೆಟ್ • ಶ್ರೇಯಸ್, ವೆಂಕಟೇಶ್ ಅರ್ಧಶತಕ

ಫೈನಲ್‌ಗೆ ಕೋಲ್ಕತ್ತ ನೈಟ್‌ರೈಡರ್ಸ್ ಲಗ್ಗೆ

ಪ್ರಜಾವಾಣಿ ವಾರ್ತೆ

ಅಹಮದಾಬಾದ್: ಶ್ರೇಯಸ್ ಅಯ್ಯರ್ ನಾಯಕತ್ವದ ಕೋಲ್ಕತ್ತ ನೈಟ್ ರೈಡರ್ಸ್ ತಂಡವು ಈ ಬಾರಿಯ ಐಪಿಎಲ್ ಫೈನಲ್‌ಗೆ ಲಗ್ಗೆ ಇಟ್ಟಿತು.

ಮೊಟೇರಾದ ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ಮಂಗಳವಾರ ನಡೆದ ಮೊದಲ ಕ್ವಾಲಿಫೈಯರ್‌ನಲ್ಲಿ ಕೋಲ್ಕತ್ತ ತಂಡವು 8 ವಿಕೆಟ್‌ಗಳಿಂದ ಸನ್‌ರೈಸರ್ಸ್ ಹೈದರಾಬಾದ್ ಎದುರು ಸುಲಭ ಜಯಸಾಧಿಸಿತು. ಇದರೊಂದಿಗೆ ತಂಡವು ಐಪಿಎಲ್‌ನಲ್ಲಿ ನಾಲ್ಕನೇ ಬಾರಿ ಪ್ರಶಸ್ತಿ ಸುತ್ತು ಪ್ರವೇಶಿಸಿತು.

ಇಲ್ಲಿ ಸೋತ ಪ್ಯಾಟ್ ಕಮಿನ್ಸ್ ಬಳಗಕ್ಕೆ ಫೈನಲ್ ಪ್ರವೇಶಿಸಲು ಇನ್ನೂ ಒಂದು ಅವಕಾಶವಿದೆ. ಶುಕ್ರವಾರ ನಡೆಯಲಿರುವ ಕ್ವಾಲಿಫೈಯರ್ (2) ಪಂದ್ಯದಲ್ಲಿ ಆಡಲಿದೆ. ಎಲಿಮಿನೇಟರ್ ಪಂದ್ಯದಲ್ಲಿ ಜಯಿಸಿದ ತಂಡವನ್ನು ಎದುರಿಸಲಿದೆ.

ಟಾಸ್ ಗೆದ್ದ ಸನ್‌ರೈಸರ್ಸ್ ಹೈದರಾಬಾದ್ ತಂಡವು ಬ್ಯಾಟಿಂಗ್ ಆಯ್ಕೆ ಮಾಡಿಕೊಂಡಿತು. ಕೋಲ್ಕತ್ತ ತಂಡದ ಎಡಗೈ ವೇಗಿ ಮಿಚೆಲ್ ಸ್ಟಾರ್ಕ್ (4–0–34–3) ದಾಳಿಯಿಂದಾಗಿ ಸನ್‌ರೈಸರ್ಸ್ ತಂಡವು 19.3 ಓವರ್‌ಗಳಲ್ಲಿ 159 ರನ್ ಗಳಿಸಿ ಕುಸಿಯಿತು. ಇದಕ್ಕುತ್ತರವಾಗಿ ಕೋಲ್ಕತ್ತ ತಂಡವು 13.4 ಓವರ್‌ಗಳಲ್ಲಿ 2 ವಿಕೆಟ್‌ಗಳಿಗೆ 164 ರನ್ ಗಳಿಸಿತು. ಮುರಿಯದ ಮೂರನೇ ವಿಕೆಟ್ ಜೊತೆಯಾಟದಲ್ಲಿ ವೆಂಕಟೇಶ್ ಅಯ್ಯರ್ (ಅಜೇಯ 51) ಹಾಗೂ ಶ್ರೇಯಸ್ ಅಯ್ಯರ್ (ಔಟಾಗದೆ 58) 97 ರನ್ ಸೇರಿಸಿದರು.

ಸ್ಟಾರ್ಕ್ ಮಿಂಚು: ಸನ್‌ರೈಸರ್ಸ್ ತಂಡವು ಪವರ್‌ಪ್ಲೇ ಮುಗಿಯುವ ಮುನ್ನವೇ 39 ರನ್‌ಗಳಿಗೆ 4 ವಿಕೆಟ್ ಕಳೆದುಕೊಂಡಿತು. ಅದಕ್ಕೆ ಕಾರಣರಾದವರು ಆಸ್ಟ್ರೇಲಿಯಾದ ಬೌಲರ್ ಸ್ಟಾರ್ಕ್. ಈ ಬಾರಿಯ ಐಪಿಎಲ್ ಹರಾಜು ಪ್ರಕ್ರಿಯೆಯಲ್ಲಿ ಅತಿ ಹೆಚ್ಚು ಮೌಲ್ಯ ಪಡೆದ ಆಟಗಾರ ಕೂಡ ಅವರಾಗಿದ್ದಾರೆ.


ಟೂರ್ನಿಯುದ್ದಕ್ಕೂ ಅಬ್ಬರಿಸಿದ್ದ ಆರಂಭಿಕ ಬ್ಯಾಟರ್ ಟ್ರಾವಿಸ್ ಹೆಡ್, ನಿತೀಶ್ ರೆಡ್ಡಿ ಹಾಗೂ ಶಾಬಾಜ್ ಅಹಮದ್ ವಿಕೆಟ್‌ಗಳನ್ನು ಸ್ಟಾರ್ಕ್ ಕಬಳಿಸಿದರು. ಹೆಡ್ ಮತ್ತು ಶಾಬಾಜ್ ಖಾತೆಯನ್ನೇ ತೆರೆಯಲಿಲ್ಲ.

ಇನಿಂಗ್ಸ್‌ನ ಎರಡನೇ ಓವರ್‌ನಲ್ಲಿ ವೈಭವ್ ಅರೋರಾ ಎಸೆತದಲ್ಲಿ ಅಭಿಷೇಕ್ ಶರ್ಮಾ (3) ಅವರು ಆ್ಯಂಡ್ರೆ ರಸೆಲ್ ಪಡೆದ ಕ್ಯಾಚ್‌ಗೆ ನಿರ್ಗಮಿಸಿದರು.

ಸನ್ ತಂಡದ ರಾಹುಲ್ ತ್ರಿಪಾಠಿ (44; 35ಎ, 4X7, 6X1), ಹೆನ್ರಿಚ್ ಕ್ಲಾಸೆನ್ (32; 21ಎ) ಹಾಗೂ ನಾಯಕ ಪ್ಯಾಟ್ ಕಮಿನ್ಸ್ (30; 24ಎ) ಬಿಟ್ಟರೆ ಉಳಿದ ಬ್ಯಾಟರ್‌ಗಳು ತಮ್ಮ ಸಾಮರ್ಥ್ಯಕ್ಕೆ ತಕ್ಕಂತೆ ಆಡಲಿಲ್ಲ.

ಆದರೆ, ಸ್ಪಿನ್ನರ್ ವರುಣ್ ಚಕ್ರವರ್ತಿ ಅವರು ಕ್ಲಾಸೆನ್ ವಿಕೆಟ್ ಗಳಿಸಿದ್ದು ಕೂಡ ಸನ್ ತಂಡಕ್ಕೆ ಹಿನ್ನಡೆಯಾಯಿತು.

ಉಳಿದ ಬೌಲರ್‌ಗಳೂ ಈ ಹಂತದಲ್ಲಿ ವಿಜೃಂಭಿಸಿದರು. ರಸೆಲ್ ಮತ್ತು ಗುರ್ಬಾಜ್ ಅವರ ಚುರುಕಾದ ಫೀಲ್ಡಿಂಗ್‌ನಿಂದಾಗಿ ತ್ರಿಪಾಠಿ ರನ್‌ಔಟ್ ಆದರು. ಕೊನೆಯ ಹಂತದ ಓವರ್‌ಗಳಲ್ಲಿ ರನ್ ಗಳಿಸಲು ಪ್ರಯತ್ನಿಸಿದ ನಾಯಕ ಕಮಿನ್ಸ್ ಅವರ ವಿಕೆಟ್ ರಸೆಲ್ ಪಾಲಾಯಿತು.



ಕೋಲ್ಕತ್ತ ನೈಟ್ ರೈಡರ್ಸ್ ತಂಡದ ಬೌಲರ್ ಮಿಚೆಲ್ ಸ್ಟಾರ್ಕ್. –ಪಿಟಿಐ ಚಿತ್ರ

ಸ್ಕೋರ್ ಕಾರ್ಡ್

ಸನ್‌ರೈಸರ್ಸ್ ಹೈದರಾಬಾದ್: 159 (19.3 ಓವರುಗಳಲ್ಲಿ)
ಹೆಡ್ ಬಿ ಸ್ಟಾರ್ಕ್ 0 (2ಎ)
ಅಭಿಷೇಕ್ ಸಿ ರಸೆಲ್ ಬಿ ಆರೋರಾ 3 (4ಎ)
ತ್ರಿಪಾಠಿ ರನ್‌ಔಟ್ (ರಸೆಲ್/ಗುರ್ಬಾಜ್) 55 (35ಎ, 4x7, 6x1)
ನಿತೀಶ್ ರೆಡ್ಡಿ ಸಿ ಗುರ್ಬಾಜ್ ಬಿ ಸ್ಟಾರ್ಕ್ 9 (10ಎ, 4x1)
ಶಾಬಾಜ್ ಬಿ ಸ್ಟಾರ್ಕ್ 0 (1ಎ)
ಕ್ಲಾಸೆನ್ ಸಿ ಸಿಂಗ್ ಬಿ ವರುಣ್ 32 (21, 4x3, 6x1)
ಸಮದ್ ಸಿ ಶ್ರೇಯಸ್ ಬಿ ಹರ್ಷಿತ್ ರಾಣಾ 16 (12, 6x2)
ಸನ್ವೀರ್ ಬಿ ಸುನಿಲ್ 0 (1ಎ)
ಕಮಿನ್ಸ್ ಸಿ ಗುರ್ಬಾಜ್ ಬಿ ರಸೆಲ್ 30 (24, 4x2, 6x2)
ಭುನವೇಶ್ವರ್ ಎಲ್‌ಬಿಡಬ್ಲ್ಯು ಬಿ ವರುಣ್ 0 (4ಎ)
ವಿಜಯಕಾಂತ್ ಔಟಾಗದೇ 7 (5ಎ)
ಇತರೆ: 7 (ನೋಬಾಲ್ 2, ವೈಡ್ 5)
ವಿಕೆಟ್ ಪತನ: 1–0 (ಟ್ರಾವಿಸ್ ಹೆಡ್, 0.2), 2–13 (ಅಭಿಷೇಕ್ ಶರ್ಮಾ, 1.5), 3–39 (ನಿತೀಶ್ ಕುಮಾರ್ ರೆಡ್ಡಿ, 4.5), 4–39 (ಶಾಬಾಜ್ ಅಹ್ಮದ್, 4.6), 5–101 (ಹೆನ್ರಿಚ್ ಕ್ಲಾಸೆನ್, 10.6), 6–121 (ರಾಹುಲ್ ತ್ರಿಪಾಠಿ, 13.2), 7–121 (ಸನ್ವೀರ್ ಸಿಂಗ್, 13.3), 8–125 (ಅಬ್ದುಲ್ ಸಮದ್, 14.4), 9–126 (ಭುವನೇಶ್ವರ್ ಕುಮಾರ್, 15.6), 10–159 (ಪ್ಯಾಟ್ ಕಮಿನ್ಸ್, 19.3)
ಬೌಲಿಂಗ್: ಮಿಚೆಲ್ ಸ್ಟಾರ್ಕ್ 4–0–34–3; ವೈಭವ್ ಅರೋರ 2–0–17–1; ಹರ್ಷಿತ್ ರಾಣಾ 4–0–27–1; ಸುನಿಲ್ ನಾರಾಯಣ್ 4–0–40–1; ಆಂಡ್ರೆ ರಸೆಲ್ 1.3–0–15–1; ವರುಣ್ ಚಕ್ರವರ್ತಿ 4–0–26–2.

ಕೋಲ್ಕತ್ತ ನೈಟ್ ರೈಡರ್ಸ್: 2ಕ್ಕೆ164 (13.4 ಓವರುಗಳಲ್ಲಿ)
ಗುರ್ಬಾಜ್ ಸಿ ವಿಜಯಕಾಂತ್ ಬಿ ನಟರಾಜನ್ 23 (14ಎ, 4x2, 6x2)
ಸುನಿಲ್ ಸಿ ವಿಜಯಕಾಂತ್ ಬಿ ಕಮಿನ್ಸ್ 21 (16ಎ, 4x4)
ವೆಂಕಟೇಶ್ ಔಟಾಗದೇ 51 (28ಎ, 4x5, 6x4)
ಶ್ರೇಯಸ್ ಔಟಾಗದೇ 58 (24ಎ, 4x5, 6x4)
ಇತರೆ: 11 (ಲೆಗ್‌ಬೈ 9, ವೈಡ್ 2)
ವಿಕೆಟ್ ಪತನ: 1–44 (ರಹಮಾನುಲ್ಲಾ ಗುರ್ಬಾಜ್, 3.2), 2–67 (ಸುನಿಲ್ ನಾರಾಯಣ್, 6.2)
ಬೌಲಿಂಗ್: ಭುವನೇಶ್ವರ ಕುಮಾರ್ 3–0–28–0; ಪ್ಯಾಟ್ ಕಮಿನ್ಸ್ 3–0–38–1; ಟಿ.ನಟರಾಜನ್ 3–0–22–1; ವಿಜಯಕಾಂತ್ ವಿಯಸ್ಕಾಂತ್ 2–0–22–0; ಟ್ರಾವಿಸ್ ಹೆಡ್ 1.4–0–32–0; ನಿತೀಶ್ ಕುಮಾರ್ ರೆಡ್ಡಿ 1–0–13–0.
ಪಂದ್ಯ ಶ್ರೇಷ್ಠ: ಮಿಚೆಲ್ ಸ್ಟಾರ್ಕ್

ಸುಮಿತ್, ಮರಿಯಪ್ಪನ್, ಏಕ್ತಾಗೆ ಚಿನ್ನ

ಪ್ಯಾರಾ ಅಥ್ಲೆಟಿಕ್ಸ್: ಪದಕ ಪಟ್ಟಿಯಲ್ಲಿ ಭಾರತಕ್ಕೆ 3ನೇ ಸ್ಥಾನ

ಕೊಬೆ, ಜಪಾನ್ (ಪಿಟಿಐ): ಪ್ಯಾರಾಲಿಂಪಿಕ್ಸ್ ಚಾಂಪಿಯನ್ ಸುಮಿತ್ ಅಂತಿಲ್ ಅವರು ಇಲ್ಲಿ ನಡೆಯುತ್ತಿರುವ ವಿಶ್ವ ಪ್ಯಾರಾ ಅಥ್ಲೆಟಿಕ್ಸ್ ಚಾಂಪಿಯನ್‌ಷಿಪ್‌ನ ಪುರುಷರ ಜಾವೆಲಿನ್ ಥ್ರೋ (ಎಫ್ 64) ಸ್ಪರ್ಧೆಯಲ್ಲಿ ಚಿನ್ನ ಗೆದ್ದರು.

ಭಾರತದ ತಂಗವೇಲು ಮರಿಯಪ್ಪನ್ ಮತ್ತು ಏಕ್ತಾ ಭಯಾನ್ ಅವರೂ ತಮ್ಮ ವಿಭಾಗದ ಸ್ಪರ್ಧೆಯಲ್ಲಿ ಚಿನ್ನದ ಪದಕಗಳನ್ನು ಗೆದ್ದುಕೊಂಡರು. ಈ ಮೂಲಕ ಭಾರತವು ಪದಕ ಪಟ್ಟಿಯಲ್ಲಿ ಮೂರನೇ ಸ್ಥಾನಕ್ಕೆ ಜಿಗಿದಿದೆ.

ಕೂಟದ ಐದನೇ ದಿನವಾದ ಮಂಗಳವಾರ ಐದು ಪದಕಗಳು ಭಾರತದ ಪಾಲಾದವು. ನಾಲ್ಕು ಚಿನ್ನ, ನಾಲ್ಕು ಬೆಳ್ಳಿ ಮತ್ತು ಎರಡು ಕಂಚು ಸೇರಿದಂತೆ ಒಟ್ಟು 10 ಪದಕಗಳನ್ನು ಭಾರತ ಗೆದ್ದುಕೊಂಡಿದೆ. ಚೀನಾ (15 ಚಿನ್ನ, 13 ಬೆಳ್ಳಿ, 13 ಕಂಚು) ಮತ್ತು ಬ್ರೆಜಿಲ್ (14 ಚಿನ್ನ, 6 ಬೆಳ್ಳಿ, 5 ಕಂಚು) ಕ್ರಮವಾಗಿ ಮೊದಲ ಎರಡು ಸ್ಥಾನದಲ್ಲಿವೆ.

ಟೋಕಿಯೊ ಪ್ಯಾರಾಲಿಂಪಿಕ್ಸ್ ಮತ್ತು 2023ರ ವಿಶ್ವ ಪ್ಯಾರಾ ಅಥ್ಲೆಟಿಕ್ಸ್ ಚಾಂಪಿಯನ್‌ಷಿಪ್‌ನಲ್ಲಿ ಚಿನ್ನ ಗೆದ್ದಿದ್ದ ಸುಮಿತ್ ಈ ಬಾರಿ 69.50 ಮೀಟರ್ ದೂರ ಜಾವೆಲಿನ್ ಎಸೆದು ಮತ್ತೆ ಅಗ್ರಸ್ಥಾನಿಯಾದರು. ಇದೇ ಸ್ಪರ್ಧೆಯಲ್ಲಿ ಭಾರತದ ಸಂದೀಪ್ 60.41 ಮೀಟರ್ ದೂರ ಎಸೆದು ಕಂಚು ಗೆದ್ದರು. ಶ್ರೀಲಂಕಾದ ದುಲಾನ್ ಕೊಡಿತುವಕ್ಕು (66.49 ಮೀ) ಬೆಳ್ಳಿ ಪಡೆದರು.

ಟೋಕಿಯೊ ಪ್ಯಾರಾಲಿಂಪಿಕ್ಸ್ ಬೆಳ್ಳಿ ವಿಜೇತ ಮರಿಯಪ್ಪನ್ ಅವರು ಪುರುಷರ ಟಿ63 ಹೈಜಂಪ್‌ನಲ್ಲಿ 1.88 ಮೀ ಸಾಧನೆಯೊಂದಿಗೆ ಚಿನ್ನ ಗೆದ್ದರು. ಎಂಟು ವರ್ಷಗಳ ನಂತರ ಪ್ರಮುಖ ಕೂಟವೊಂದರಲ್ಲಿ ದೊರೆತ ಮೊದಲ ಚಿನ್ನ ಇದಾಗಿದೆ.



ಭಾರತದ ಪ್ಯಾರಾ ಜಾವೆಲಿನ್ ಥ್ರೋಪಟು ಸುಮಿತ್ ಅಂತಿಲ್ –ಪಿಟಿಐ ಚಿತ್ರ

ಅಮೆರಿಕದ ಎಜ್ರಾ ಫ್ರೆಚ್ ಮತ್ತು ಸ್ಯಾಮ್ ಗ್ರೂವ್ ಕ್ರಮವಾಗಿ ಬೆಳ್ಳಿ ಮತ್ತು ಕಂಚು ಗೆದ್ದರು. ಇದಕ್ಕೂ ಮೊದಲು ಏಕ್ತಾ ಅವರು ಮಹಿಳೆಯರ ಎಫ್51 ಕ್ಲಬ್ ಥ್ರೋ ಸ್ಪರ್ಧೆಯಲ್ಲಿ 20.12 ಮೀಟರ್ ಸಾಧನೆಯೊಂದಿಗೆ ಚಿನ್ನ ಗೆದ್ದರು. ಸ್ವದೇಶದ ಕಾಶಿಶ್ ಲಾಕ್ರಾ (14.56 ಮೀಟರ್) ಬೆಳ್ಳಿ ಪದಕ ಜಯಿಸಿದರು.

ಒಲಿಂಪಿಕ್ ಕೋಟಾ: ಟ್ರಯಲ್ಸ್‌ನಿಂದ ವಿನಾಯ್ತಿ

ನವದೆಹಲಿ (ಪಿಟಿಐ): ಆರು ಒಲಿಂಪಿಕ್ ಕೋಟಾ ವಿಜೇತರಿಗೆ ಆಯ್ಕೆ ಟ್ರಯಲ್ಸ್‌ನಿಂದ ವಿನಾಯಿತಿ ನೀಡಲು ಭಾರತ ಕುಸ್ತಿ ಫೆಡರೇಷನ್ (ಡಬ್ಲ್ಯುಎಫ್ಐ) ಮಂಗಳವಾರ ನಿರ್ಧರಿಸಿದೆ. ಆದರೆ, ಅವರ ಫಾರ್ಮ್ ಮತ್ತು ಫಿಟ್ನೆಸ್ ಅನ್ನು ಮುಂಬರುವ ರ್‍ಯಾಂಕಿಂಗ್ ಕೂಟ ಮತ್ತು ಹಂಗೇರಿಯಲ್ಲಿ ತರಬೇತಿ ಶಿಬಿರದಲ್ಲಿ ಮೌಲ್ಯಮಾಪನ ಮಾಡಲಾಗುತ್ತದೆ.

ಟ್ರಯಲ್ಸ್‌ಗಳನ್ನು ನಡೆಸದಿರುವ ನಿರ್ಧಾರವನ್ನು ವಿಶಿಷ್ಟ ಸಂದರ್ಭಗಳಲ್ಲಿ ತೆಗೆದುಕೊಳ್ಳಲಾಗಿದೆ ಮತ್ತು ಭವಿಷ್ಯದಲ್ಲಿ ಇದನ್ನು ಪೂರ್ವನಿದರ್ಶನವಾಗಿ ಬಳಸಬಾರದು ಎಂದು ಡಬ್ಲ್ಯುಎಫ್ಐ ಹೇಳಿದೆ.




ವಿನೇಶಾ ಫೋಗಾಟ್

ಯಾವುದೇ ಕುಸ್ತಿಪಟು ಫಿಟ್ನೆಸ್ ಕೊರತೆ ಕಂಡುಬಂದರೆ, ಪ್ರವೇಶಗಳನ್ನು ಕಳುಹಿಸುವ ಗಡುವಾದ ಜುಲೈ 8 ರೊಳಗೆ ಟ್ರಯಲ್ಸ್ ಮೂಲಕ ಬದಲಿ ಕುಸ್ತಿಪಟುವನ್ನು ಪರಿಗಣಿಸಲಾಗುವುದು ಎಂದು ಡಬ್ಲ್ಯುಎಫ್ಐ ಸ್ಪಷ್ಟಪಡಿಸಿದೆ.

ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ ಭಾರತಕ್ಕೆ ಆರು ಕೋಟಾಗಳು ದೊರೆತಿದ್ದು, ಅಮನ್ ಸೆಹ್ರಾವತ್ (57 ಕೆಜಿ) ದೇಶದ ಏಕೈಕ ಪುರುಷ ಕುಸ್ತಿಪಟು ಆಗಿದ್ದಾರೆ.

ವಿನೇಶಾ ಫೋಗಾಟ್ (50 ಕೆಜಿ), ಅಂತಿಮ್ ಪಂಘಲ್ (53 ಕೆಜಿ), ಅಂಶು ಮಲಿಕ್ (57 ಕೆಜಿ), ನಿಶಾ ದಹಿಯಾ (68 ಕೆಜಿ) ಮತ್ತು ರೀತಿಕಾ ಹೂಡಾ (76 ಕೆಜಿ) ಅರ್ಹತೆ ಪಡೆದ ಮಹಿಳಾ ಕುಸ್ತಿಪಟುಗಳು.

'ಟ್ರಯಲ್ಸ್‌ನಿಂದ ಗಾಯಗಳಿಗೆ ಕಾರಣವಾಗಬಹುದು ಮತ್ತು ಭಾರತದ ಪದಕದ ಅವಕಾಶಗಳ ಮೇಲೆ ಪರಿಣಾಮ ಬೀರಬಹುದು ಎಂದು ಇಬ್ಬರೂ ಮುಖ್ಯ ತರಬೇತುದಾರರು ಅಭಿಪ್ರಾಯಪಟ್ಟಿದ್ದಾರೆ. ಆದ್ದರಿಂದ ನಾವು ಟ್ರಯಲ್ಸ್ ನಡೆಸದಿರಲು ನಿರ್ಧರಿಸಿದ್ದೇವೆ' ಎಂದು ಡಬ್ಲ್ಯುಎಫ್ಐ ಅಧ್ಯಕ್ಷ ಸಂಜಯ್ ಸಿಂಗ್ ಪಿಟಿಐಗೆ ತಿಳಿಸಿದರು.



ಬೆಳ್ಳಿ ಪದಕ ಗೆದ್ದ ಭಾರತ ಪುರುಷರ 4x400 ಮೀ ರಿಲೇ ತಂಡ (ಎಡದಿಂದ) ಮುಹಮ್ಮದ್ ಆನಾಸ್ ಯಾಹ್ಯಾ, ಸಂತೋಷ್ ಕುಮಾರ್, ಮಿಜೋ ಚಾಕೊ ಕುರಿಯನ್ ಮತ್ತು ಆರೋಕ್ಯ ರಾಜೀವ್ –ಎಕ್ಸ್ ಚಿತ್ರ

ಏಷ್ಯನ್ ರಿಲೆ ಚಾಂಪಿಯನ್‌ಷಿಪ್ ಪುರುಷ, ಮಹಿಳಾ ತಂಡಕ್ಕೆ ಬೆಳ್ಳಿ

ಬ್ಯಾಂಕಾಕ್ (ಪಿಟಿಐ): ಪ್ಯಾರಿಸ್ ಒಲಿಂಪಿಕ್ಸ್‌ಗೆ ಅರ್ಹತೆ ಪಡೆದಿರುವ ಭಾರತ ಪುರುಷರ ಮತ್ತು ಮಹಿಳೆಯರ 4x400 ಮೀ. ರಿಲೆ ತಂಡಗಳು ಮಂಗಳವಾರ ಏಷ್ಯನ್ ರಿಲೆ ಚಾಂಪಿಯನ್‌ಷಿಪ್‌ನಲ್ಲಿ ಬೆಳ್ಳಿ ಪದಕ ಗೆದ್ದವು.

ಸುಫಾಚಲಸಾಯ್ ರಾಷ್ಟ್ರೀಯ ಕ್ರೀಡಾಂಗಣದಲ್ಲಿ ಮಳೆಯ ನಡುವೆ ನಡೆದ ಮಹಿಳೆಯರ ಫೈನಲ್‌ನಲ್ಲಿ ವಿದ್ಯಾ ರಾಮರಾಜ್, ಕರ್ನಾಟಕದ ಎಂ.ಆರ್. ಪೂವಮ್ಮ, ಪ್ರಾಚಿ ಚೌಧರಿ ಮತ್ತು ರೂಪಲ್ ಚೌಧರಿ ಅವರನ್ನು ಒಳಗೊಂಡ ತಂಡವು 3 ನಿಮಿಷ 33.55 ಸೆಕೆಂಡ್‌ಗಳಲ್ಲಿ ಗುರಿ ತಲುಪಿತು.

ವಿಯೆಟ್ನಾಂ (3 ನಿ.30.81 ಸೆ) ಮತ್ತು ಜಪಾನ್ (3 ನಿ.35.45ಸೆ) ಕ್ರಮವಾಗಿ ಚಿನ್ನ ಮತ್ತು ಕಂಚಿನ ಪದಕವನ್ನು ಗೆದ್ದುಕೊಂಡಿತು.

ಮುಹಮ್ಮದ್ ಅನಾಸ್ ಯಾಹ್ಯಾ, ಸಂತೋಷ್ ಕುಮಾರ್, ಮಿಜೋ ಚಾಕೊ ಕುರಿಯನ್ ಮತ್ತು ಅರೋಕ್ಯ ರಾಜೀವ್ ಅವರನ್ನು ಒಳಗೊಂಡ ಪುರುಷರ ತಂಡವು ಕೂದಲೆಳೆಯ ಅಂತರದಲ್ಲಿ ಚಿನ್ನವನ್ನು ತಪ್ಪಿಸಿಕೊಂಡಿತು.

ಭಾರತ ತಂಡವು 3 ನಿಮಿಷ 5.76 ಸೆಕೆಂಡ್‌ನಲ್ಲಿ ಗುರಿ ತಲುಪಿದರೆ, ಶ್ರೀಲಂಕಾ (3 ನಿ. 4.48ಸೆ) ಚಿನ್ನವನ್ನು ತನ್ನದಾಗಿಸಿಕೊಂಡಿತು.

ವಿಯೆಟ್ನಾಂ ತಂಡ (3 ನಿ. 7.37ಸೆ) ಕಂಚು ಗೆದ್ದಿತು.

ಕೆಎಸ್‌ಸಿಎ ಕ್ಯೂರೇಟರ್ ಪ್ರಶಾಂತ್ ರಾವ್ ಎನ್‌ಸಿಎಗೆ ನೇಮಕ

ಬೆಂಗಳೂರು: ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆ ಮುಖ್ಯ ಕ್ಯೂರೇಟರ್ ಎಲ್. ಪ್ರಶಾಂತ್ ರಾವ್ ಅವರನ್ನು ರಾಷ್ಟ್ರೀಯ ಕ್ರಿಕೆಟ್ ಅಕಾಡೆಮಿ ಗೆ(ಎನ್‌ಸಿಎ) ನೇಮಕ ಮಾಡಲಾಗಿದೆ.



ಪ್ರಶಾಂತ್ ರಾವ್

ರಾವ್ ಅವರಿಗೆ ಕ್ಯೂmರೇಟರ್ ಆಗಿ 11 ವರ್ಷಗಳಿಂದ ಕಾರ್ಯನಿರ್ವಹಿಸಿದ ಅನುಭವ ಇದೆ.

ಅಲ್ಲದೇ 2019ರಿಂದ ಬಿಸಿಸಿಐ ಎಲೀಟ್ ಪ್ಯಾನೆಲ್ ಕ್ಯೂರೇಟರ್ ಆಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಈಗ ಅವರು ಎನ್‌ಸಿಎನಲ್ಲಿ ಮುಖ್ಯ ಕ್ಯೂರೇಟರ್ ಆಗಿ ಕಾರ್ಯನಿರ್ವಹಿಸುವರು.

'ಬಹಳ ಸಂತಸವಾಗಿದೆ. ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಕ್ಯೂರೇಟರ್ ಆಗಿ ಕಾರ್ಯನಿರ್ವಹಿಸಿದ್ದು ಒಳ್ಳೆಯ ಅನುಭವ. ಹೊಸ ಜವಾಬ್ದಾರಿ ನಿಭಾಯಿಸಲು ಉತ್ಸುಕನಾಗಿರುವೆ' ಎಂದು ರಾವ್ 'ಪ್ರಜಾವಾಣಿ'ಗೆ ಹೇಳಿದ್ದಾರೆ.

ಹಾಕಿ: ಜೂನಿಯರ್ ತಂಡದ ಶುಭಾರಂಭ

ಆ್ಯಂಟ್‌ವರ್ಪ್ (ಪಿಟಿಐ): ಭಾರತ ಜೂನಿಯರ್ ಪುರುಷರ ಹಾಕಿ ತಂಡ, ಯುರೋಪ್ ಪ್ರವಾಸದ ತನ್ನ ಮೊದಲ ಪಂದ್ಯದಲ್ಲಿ ಆತಿಥೇಯ ಬೆಲ್ಜಿಯಂ ತಂಡವನ್ನು ಪೆನಾಲ್ಟಿ ಶೂಟೌಟ್‌ನಲ್ಲಿ 4–2 ಗೋಲುಗಳಿಂದ ಸೋಲಿಸಿ ಶುಭಾರಂಭ ಮಾಡಿತು. ಈ ರೋಚಕ ಪಂದ್ಯದ ನಿಗದಿ ಅವಧಿಯ ಆಟ 2–2 ಗೋಲುಗಳಿಂದ ಸಮನಾಗಿತ್ತು.

ಸೋಮವಾರ ನಡೆದ ಪಂದ್ಯದಲ್ಲಿ ಭಾರತ ತಂಡದ ಎರಡೂ ಗೋಲುಗಳನ್ನು ಉಪ ನಾಯಕ ಶಾರ್ದಾನಂದ ತಿವಾರಿ 3 ಮತ್ತು 27ನೇ ನಿಮಿಷ ಗಳಿಸಿದರು. ಪೆನಾಲ್ಟಿ ಸ್ಟ್ರೋಕ್ ಮೂಲಕ ಭಾರತ ತಂಡ ಪಂದ್ಯದ ಆರಂಭದಲ್ಲೇ ಮುನ್ನಡೆ ಸಾಧಿಸಿತಲ್ಲದೇ ಮೊದಲ ಕ್ವಾರ್ಟರ್‌ವರೆಗೆ ಆ ಲೀಡ್ ಉಳಿಸಿಕೊಂಡಿತು. ಎರಡನೇ ಕ್ವಾರ್ಟರ್‌ನಲ್ಲಿ ತಿವಾರಿ ಭಾರತದ ಮುನ್ನಡೆಯನ್ನು ಹೆಚ್ಚಿಸಿದರು.

ಬೆಲ್ಜಿಯಂ ಮೂರನೇ ಕ್ವಾರ್ಟರ್‌ನ ಆರಂಭದಲ್ಲಿ ಪೆನಾಲ್ಟಿ ಕಾರ್ನರ್ ಮೂಲಕ ಗೋಲು ಗಳಿಸಿ ಹಿನ್ನಡೆಯನ್ನು (1–2) ತಗ್ಗಿಸಿತು.

ನಾಲ್ಕನೇ ಕ್ವಾರ್ಟರ್‌ನಲ್ಲಿ ಆತಿಥೇಯರು ಭಾರತ ತಂಡದ ಮೇಲೆ ಒತ್ತಡ ಮುಂದುವರಿಸಿದರು.

ಟ್ರಿಸಾ– ಗಾಯತ್ರಿ ಜೋಡಿಗೆ ಜಯ

ಕೌಲಾಲಂಪುರ (ಪಿಟಿಐ): ಭಾರತದ ಟ್ರಿಸಾ ಜೋಲಿ ಮತ್ತು ಗಾಯತ್ರಿ ಗೋಪಿಚಂದ್ ಅವರು ಇಲ್ಲಿ ನಡೆಯುತ್ತಿರುವ ಮಲೇಷ್ಯಾ ಮಾಸ್ಟರ್ಸ್ ಸೂಪರ್ 500 ಬ್ಯಾಡ್ಮಿಂಟನ್ ಟೂರ್ನಿಯ ಮಹಿಳೆಯರ ಡಬಲ್ಸ್‌ನಲ್ಲಿ ಶುಭಾರಂಭ ಮಾಡಿದರು.

ಏಳನೇ ಶ್ರೇಯಾಂಕದ ಟ್ರಿಸಾ– ಗಾಯತ್ರಿ ಜೋಡಿಯು ಮಂಗಳವಾರ ನಡೆದ ಆರಂಭಿಕ ಸುತ್ತಿನಲ್ಲಿ 21-14, 21-10 ಅಂತರದಲ್ಲಿ ನೇರ ಗೇಮ್‌ಗಳಲ್ಲಿ ಚೀನಾ ತೈಪೆಯ ಹುವಾಂಗ್ ಯು ಹ್ಸುನ್ ಮತ್ತು ಲಿಯಾಂಗ್ ಟಿಂಗ್ ಯು ಅವರನ್ನು ಹಿಮ್ಮೆಟ್ಟಿಸಿತು.

ಪುರುಷರ ಸಿಂಗಲ್ಸ್ ಕ್ವಾಲಿಫೈಯರ್ ಸುತ್ತಿನಲ್ಲಿ ಕಣದಲ್ಲಿದ್ದ ಭಾರತದ ನಾಲ್ವರೂ ನಿರಾಸೆ ಮೂಡಿಸಿದರು. ಯಾರಿಗೂ ಮುಖ್ಯ ಸುತ್ತು ಪ್ರವೇಶಿಸಲು ಸಾಧ್ಯವಾಗಿಲ್ಲ.

ಕಳೆದ ಡಿಸೆಂಬರ್‌ನಲ್ಲಿ ಒಡಿಶಾ ಮಾಸ್ಟರ್ಸ್‌ನಲ್ಲಿ ಚೊಚ್ಚಲ ಪ್ರಶಸ್ತಿಯನ್ನು ಗೆದ್ದಿದ್ದ ಸತೀಶ್ ಕುಮಾರ್ ಕರುಣಾಕರನ್ ಅವರು ಕ್ವಾಲಿಫೈಯರ್‌ನ ಮೊದಲ ಪಂದ್ಯದಲ್ಲಿ 21-15, 21-19 ರಿಂದ ಆತಿಥೇಯ ಮಲೇಷ್ಯಾದ ಚೀಮ್ ಜೂನ್ ವೀ ಅವರನ್ನು ಸೋಲಿಸಿದರು. ಆದರೆ, ಎರಡನೇ ಪಂದ್ಯದಲ್ಲಿ ಅವರು 21-13, 20-22, 13-21 ರಿಂದ ಇಂಡೊನೇಷ್ಯಾದ ಶೇಸರ್ ಹಿರೆನ್ ರುಸ್ತಾವಿಟೊ ಅವರಿಗೆ ಮಣಿದರು.

ಕರ್ನಾಟಕದ ಆಯುಷ್ ಶೆಟ್ಟಿ ಅವರು ಮೊದಲ ಪಂದ್ಯದಲ್ಲಿ 21-7, 21-14 ರಿಂದ ಸ್ವದೇಶದ ಕಾರ್ತಿಕೇಯ ಗುಲ್ಶನ್ ಕುಮಾರ್ ವಿರುದ್ಧ ಸುಲಭ ಗೆಲುವು ಸಾಧಿಸಿದರು. ಆದರೆ, ನಂತರದ ಪಂದ್ಯದಲ್ಲಿ 21-23, 21-16, 17-21 ರಿಂದ ಥಾಯ್ಲೆಂಡ್‌ನ ಪಾನಿಚ್ಞಾಫೋನ್ ತೀರರತ್ಸಕುಲ್ ಅವರಿಗೆ ಶರಣಾದರು.

ರಾಜ್ಯ ರ‍್ಯಾಂಕಿಂಗ್ ಸಬ್ ಜೂನಿಯರ್ ಬ್ಯಾಡ್ಮಿಂಟನ್ ಟೂರ್ನಿ

ಕುಶಾಲ್ ಎದುರು ಗೆದ್ದ ನಿಕೇತನ್

ಪ್ರಜಾವಾಣಿ ವಾರ್ತೆ

ದಾವಣಗೆರೆ: ದಕ್ಷಿಣ ಕನ್ನಡ ಜಿಲ್ಲೆಯ ನಿಕೇತನ್ ಅಮಿನ್ ಇಲ್ಲಿ ನಡೆಯುತ್ತಿರುವ ರಾಜ್ಯ ರ‍್ಯಾಂಕಿಂಗ್ ಸಬ್ ಜೂನಿಯರ್ ಬ್ಯಾಡ್ಮಿಂಟನ್ ಟೂರ್ನಿಯ ಅರ್ಹತಾ ಸುತ್ತಿನ ಪಂದ್ಯದಲ್ಲಿ 8ನೇ ಶ್ರೇಯಾಂಕದ ಕುಶಾಲ್ ಆತ್ರೇಯ ಎದುರು ಗೆದ್ದರು.

ಮಂಗಳವಾರ ನಡೆದ 17 ವರ್ಷದೊಳಗಿನ ಬಾಲಕರ ವಿಭಾಗದ ಪಂದ್ಯದಲ್ಲಿ ನಿಕೇತನ್ 13-15, 15-11, 15-12 ರಿಂದ ಜಯಿಸಿದರು. ಬೆಂಗಳೂರಿನ ಎಸ್.ಹಿತೇಶ್ 6-15, 15-10, 17-15 ರಿಂದ ನಮನ್ ಅಣ್ವೇಕರ್ ಅವರನ್ನು ಸೋಲಿಸಿದರು.

ಇತರ ಪ್ರಮುಖ ಪಂದ್ಯಗಳಲ್ಲಿ ಬೆಂಗಳೂರಿನ ಸಾಕೇತ್ ಕೌಶಿಕ್ 15-11, 13-15, 15-12 ರಿಂದ ಶಿವೇಶ್ ಅರುಣಾಚಲಂ ಎದುರು, ಹಾಸನದ ಚಿನ್ಮಯ್ ಕೆ.ಗೌಡ 15-9, 15-4 ರಿಂದ ಅನಿರುದ್ಧ್ ಕಶ್ಯಪ್ ವಿರುದ್ಧ, ಚಾಮರಾಜನಗರದ ನೀಲೇಶ್ ಜಯರಾಜ್ 15-7, 15-11 ರಿಂದ ಉದ್ಧವ್ ಕೃಷ್ಣನ್ ಎದುರು ಗೆಲುವು ಕಂಡರು.

ಬಾಲಕಿಯರ ವಿಭಾಗದ ಪಂದ್ಯದಲ್ಲಿ ಬೆಂಗಳೂರಿನ ಲಕ್ಷ್ಯ ರಾಜೇಶ್ 15-8, 15-13 ರಿಂದ ಎಸ್.ಸ್ಮೃತಿ ಅವರನ್ನು ಸೋಲಿಸಿದರು. 15 ವರ್ಷದೊಳಗಿನ ಬಾಲಕರ ವಿಭಾಗದ ಪ್ರಮುಖ ಪಂದ್ಯಗಳಲ್ಲಿ ಮೈಸೂರಿನ ಶ್ಯಾಮ್ ಬಿಂಡಿಗನವಿಲೆ 15-1, 15-4 ರಿಂದ ತೇಜ್ ಯಶ್ವಂತ್ ಎಸ್.ಎಂ ಎದುರು, ದಕ್ಷಿಣ ಕನ್ನಡದ ಸಾತ್ವಿಕ್ ಎಸ್.ಪ್ರಭು 15-10, 15-11 ರಿಂದ ಮಾಧವ್ ಸತೀಶ್ ವಿರುದ್ಧ, ಬೀದರ್‌ನ ಮಹಮ್ಮದ್ ರಿಯಾನ್- ಉಲ್- ಹಕ್ 12-15, 16-14, 15-10ರಿಂದ ಹೇಮಂತ್ ಶಾನ್‌ಭಾಗ್ ಎದುರು, ಶಿವಮೊಗ್ಗದ ಆಧ್ಯಾನ್ ಎ.ಎಸ್ 15-10, 15-8 ರಿಂದ ಅಮೋಘ್ ಪೊಲೀಸ್‌ಪಾಟೀಲ ವಿರುದ್ಧ ಗೆದ್ದರು.

15 ವರ್ಷದೊಳಗಿನ ಬಾಲಕಿಯರ ವಿಭಾಗದ ಪಂದ್ಯಗಳಲ್ಲಿ ಬೆಂಗಳೂರಿನ ಐಕ್ಯಾ ಶೆಟ್ಟಿ 15-4, 15-4ರಿಂದ ಎಂ.ಮಾನ್ಯಾ ಎದುರು, ದಕ್ಷಿಣ ಕನ್ನಡದ ಅನಿಯಾ ಮಸ್ಕರೆನ್ಹಾಸ್ 15-6, 15-4 ರಿಂದ ಜೆಸ್ಸಿ ವಿರುದ್ಧ, ಬಳ್ಳಾರಿಯ ಸಮುಧ್ಯುತಾ ಟಿ. 15-9, 15-5ರಿಂದ ಅಕ್ಷಿತಾ ಎದುರು ಜಯಗಳಿಸಿದರು.



ನಮನ್ ಅಣ್ವೇಕರ್ ಎದುರಿನ ಪಂದ್ಯದಲ್ಲಿ ಎಸ್. ಹಿತೇಶ್ ಷಟಲ್ ಹಿಂತಿರುಗಿಸಲು ಮುಂದಾದರು –ಪ್ರಜಾವಾಣಿ ಚಿತ್ರ/ಸತೀಶ್ ಬಡಿಗೇರ್